**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಕರ್ನಾಟಕ ವಿಧಾನ ಪರಿಷತ್ತು**

**ದಿನಾಂಕ: 08ನೇ ಜೂನ್, 2017**
**ಗುರುವಾರ**

**ವಿಷಯಾನುಕ್ರಮಣಿಕೆ**

1. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ**

ರಾಜ್ಯದಲ್ಲಿ ಸತತ ಬರಗಾಲದಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ.

ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)
ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)
ಡಾ: ಜಿ.ಪರಮೇಶ್ವರ್ (ಸಭಾನಾಯಕರು)

(ನಿಯಮ 68ಕ್ಕೆ ಪರಿವರ್ತಿಸಲಾಯಿತು)

2. **ಪ್ರಶ್ನೋತ್ತರಗಳು**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

2443– ಎಸ್.ಟಿ.ಪಿ. ನಿರ್ಮಾಣದ ಬಗ್ಗೆ –ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ
2369– ಸುರಂಗ ರಸ್ತೆ ನಿರ್ಮಾಣ – ಶ್ರೀ ಕೆ.ಸಿ.ಕೊಂಡಯ್ಯ
2338– ಸೈಬರ್ ಅಪರಾಧ ತನಿಖೆ ಮತ್ತು ಕೈಗೊಂಡ ಕ್ರಮದ ಬಗ್ಗೆ.
– ವಿ.ಸೋಮಣ್ಣ
2396– ಜಾಹೀರಾತು ವಲಯದಿಂದ ಸಂಗ್ರಹವಾದ ತೆರಿಗೆ ಹಣದ ಕುರಿತು
– ಶ್ರೀ ಪ್ರದೀಪ್ ಶೆಟ್ಟರ್
2317– ಕಾರ್ಖಾನೆಗಳಿಂದ ರೈತರುಗಳಿಗೆ ಬರಬೇಕಾದ ಬಾಕಿ ಹಣ
– ಶ್ರೀ ರಘುನಾಥ ರಾವ್ ಮಲ್ಕಾಪುರೆ
2341– ತುಮಕೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜು ಬಗ್ಗೆ.
– ಶ್ರೀ ಕಾಂತರಾಜು (ಬಿಎಂಎಲ್)
2393– ಕುಡಿಯುವ ನೀರಿಗಾಗಿ ಕೆರೆ ನಿರ್ಮಾಣದ ಬಗ್ಗೆ – ಎನ್.ಎಸ್.ಬೋಸ್‌ರಾಜು
2357– ಅನುದಾನಿತ ಐ.ಟಿ.ಐ. ಸಂಸ್ಥೆಗಳ ನೌಕರರ ಸಮಸ್ಯೆಗಳ ಬಗ್ಗೆ – ಶ್ರೀ ಪುಟ್ಟಣ್ಣ
2331– ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗವನ್ನು ರಚಿಸುವ ಬಗ್ಗೆ
– ಶ್ರೀ ಕೆ.ಟಿ.ಶ್ರೀಕಂಠೇಗೌಡ
2398+
2425 – ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಪಕ್ಕದಲ್ಲಿರುವ ಮದ್ಯದಂಗಡಿಗಳನ್ನು ತೆರವುಗೊಳಿಸುವ ಬಗ್ಗೆ.
ಶ್ರೀ ಎಂ.ಕೆ.ಪ್ರಾಣೇಶ್
ಶ್ರೀ ಭಾನುಪ್ರಕಾಶ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

2373– ವಿಜಯಪುರ ಮಹಾನಗರ ಪಾಲಿಕೆ ಮಾಸ್ಟರ್ ಪ್ಲಾನ್
– ಶ್ರೀ ಬಸನಗೌಡ ಆರ್.ಪಾಟೀಲ್

2367– ಪರಿಶಿಷ್ಟ ಪಂಗಡ ವರ್ಗದವರಿಗೆ ವಿತರಿಸಲಾಗುವ ಸಾಲ ಸೌಲಭ್ಯದ ಬಗ್ಗೆ
– ಶ್ರೀಮತಿ ಮೋಟಮ್ಮ

**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**3. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) ಉತ್ತರ ಕರ್ನಾಟಕ ಭಾಗದಲ್ಲಿನ ಮಳೆಯ ಆರ್ಭಟಕ್ಕೆ ಮೃತರಾಗಿರುವ ಕುಟುಂಬಕ್ಕೆ ಪರಿಹಾರ
ಶ್ರೀ ಹನುಮಂತಪ್ಪ ಆರ್.ನಿರಾಣಿ
ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು)

ಆ) ಶಿವಾಜಿ ಮಹಾರಾಜನ ಸ್ಮರಣಾರ್ಥ ಭವ್ಯ ಸಮಾಧಿ ನಿರ್ಮಾಣ ಮಾಡುವ ಬಗ್ಗೆ
ಶ್ರೀ ಕೆ.ಬಿ.ಶಾಣಪ್ಪ
ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು)

ಇ) ಖಾಸಗಿ ಸಂಸ್ಥೆಗಳ ಶೋಷಣೆ ನಿಲ್ಲಿಸುವ ಬಗ್ಗೆ
ಶ್ರೀ ರಮೇಶ್ ಬಾಬು
ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢಶಕ್ಷಣ ಸಚಿವರು)

ಈ) ಬೆಳ್ಳಂದೂರು ಮತ್ತು ವರ್ತೂರು ಕೆರೆಗಳನ್ನು ಪುನರುಜ್ಜೀವನ ಮತ್ತು ಶುದ್ಧೀಕರಿಸುವ ಬಗ್ಗೆ.
ಶ್ರೀ ಪಿ.ಆರ್.ರಮೇಶ್
ಶ್ರೀ ಕೆ.ಜೆ.ಜಾರ್ಜ್(ಬೆಂಗಳೂರು ನಗರಾಭಿವೃದ್ಧಿ ಸಚಿವರು)

ಉ) ರಮೇಶ್ ಮರಾಠಿ ಭಾಷಾ ಉಪನ್ಯಾಸಕರು, ಜನತಾ ಪದವಿಪೂರ್ವ ಕಾಲೇಜು, ಬೀದರ್ ಇವರ ವೇತನ ತಡೆಹಿಡಿದಿರುವ ಬಗ್ಗೆ.

ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಅಮರನಾಥ ಪಾಟೀಲ್
ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**5. ಸಚಿವರ ಹೇಳಿಕೆಗಳು**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅ) ಸರ್ಕಾರದ ಯೋಜನೆ ಸಕಾಲ ದುರ್ಬಲಗೊಳ್ಳುತ್ತಿರುವ ಬಗ್ಗೆ.
ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಸಚಿವರು)

ಆ) ಆರ್ಯವೈಶ್ಯ ಸಮುದಾಯದ ಅವಶ್ಯಕ ವಿದ್ಯಾರ್ಥಿಗಳಿಗೆ ಜಾತಿ ಪ್ರಮಾಣ ಪತ್ರ ನೀಡುವ ವ್ಯವಸ್ಥೆ ಮಾಡಬೇಕೆಂಬ ಬಗ್ಗೆ.

ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಸಚಿವರು)

ಇ) ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ "ಡಿ" ವರ್ಗದ ನೌಕರರನ್ನು ಮಾನವೀಯ ನೆಲೆಯಲ್ಲಿ ಅವರು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸಂಸ್ಥೆಯಲ್ಲಿಯೇ ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ.

ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಅಲ್ಪ ಅಲ್ಪಸಂಖ್ಯಾತ ಕಲ್ಯಾಣ ಮತ್ತು ವಕ್ಫ್ ಸಚಿವರು)

**6. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ ಮತ್ತು ಸರ್ಕಾರದಿಂದ ಉತ್ತರ**

ಆಲಮಟ್ಟಿ ಕೃಷ್ಣಾ ಮೇಲ್ದಂಡೆ ಯೋಜನೆಯ ಕುರಿತು

ಶ್ರೀಮತಿ ತಾರಾಅನೂರಾಧ
ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು)
ಶ್ರೀಮತಿ ಜಯಮ್ಮ
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
ಶ್ರೀ ಕೆ.ಟಿ.ಶ್ರೀಕಂಠೇಗೌಡ

**7. ಸಚಿವರ ಹೇಳಿಕೆ**

ಬೆಂಗಳೂರು ನಗರದ ನಮ್ಮ ಮೆಟ್ರೋ ಒಂದನೇ ಹಂತದ ಲೋಕಾರ್ಪಣೆ ಕುರಿತು.

ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಸಚಿವರು)

**8. ನಿಯಮ 68ರ ಮೇರೆಗೆ**

ರಾಜ್ಯದಲ್ಲಿ ಸತತ ಬರಗಾಲದಿಂದ ಉಂಟಾಗಿರುವ ಪರಿಸ್ಥಿತಿಯ ಮೇಲಿನ ಮುಂದುವರೆದ ಚರ್ಚೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸೋಮಣ್ಣ ಮ.ಬೇವಿನಮರದ
ಶ್ರೀ ವಿ.ಸೋಮಣ್ಣ
ಡಾ: ಜಿ.ಪರಮೇಶ್ವರ್(ಸಭಾನಾಯಕರು)
ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
ಶ್ರೀ ರಮೇಶ್ ಬಾಬು
ಶ್ರೀ ಪಿ.ಆರ್.ರಮೇಶ್

- - -

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

603/8-6-2017/11-00/kh-ks(sp)

**ಕರ್ನಾಟಕ ವಿಧಾನ ಪರಿಷತ್ತು**

***ಗುರುವಾರ, ದಿನಾಂಕ: 8ನೇ ಜೂನ್ 2017***

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 11 ಗಂಟೆ 01 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಯವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 01. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ.

### ರಾಜ್ಯದಲ್ಲಿ ಸತತ ಬರಗಾಲದಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ

* * * *

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದ ಬರಗಾಲದ ಬಗ್ಗೆ ನಾನು, ಶ್ರೀ ಬಸವರಾಜ ಹೊರಟ್ಟಿಯವರು ಮತ್ತು ನನ್ನ ಸ್ನೇಹಿತರೆಲ್ಲ ಸೇರಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಮಳೆಯಾಗಿ ಸತತ6 ವರ್ಷವಾಗಿದೆ.

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೆ, ಸಾಮಾನ್ಯವಾಗಿ ನಿಯಮ 59 ರಡಿಯಲ್ಲಿ ನಿಲುವಳಿ ಸೂಚನೆಯನ್ನು ತೆಗೆದುಕೊಂಡಾಗ ನಮ್ಮಲ್ಲಿರುವ ಪದ್ಧತಿ ಏನೆಂದು ತಮಗೆ ಮತ್ತೊಮ್ಮೆ ಹೇಳುತ್ತೇನೆ. ದಯಮಾಡಿ ಕೇಳಿ. ನಿಲುವಳಿ ಸೂಚನೆನೀಡಿದವರಲ್ಲಿ ಯಾರಾದರೊಬ್ಬರು 5 ರಿಂದ 8 ನಿಮಿಷಗಳ ಕಾಲ ಮಾತನಾಡಬಹುದು.ನಿಲುವಳಿ ಸೂಚನೆಯನ್ನು ಏಕೆ ಮೊದಲು ತೆಗೆದುಕೊಳ್ಳಬೇಕೆಂದು ತಾವು ಮೊದಲು ಹೇಳಿದರೆ ನಂತರ ನಿಲುವಳಿ ಸೂಚನೆ ಬಗ್ಗೆ ನಿರ್ಣಯ ಮಾಡಿ ಏನು ಮಾಡಬೇಕೆಂದು ನಾನು ತೀರ್ಮಾನ ಮಾಡಬಹುದು. ಆದಾದ ನಂತರ ಪ್ರಶ್ನೋತ್ತರ ಅವಧಿಯನ್ನು ಯಾವಾಗ ತೆಗೆದುಕೊಳ್ಳಬೇಕೆಂದು ನಾನು ನಿರ್ಣಯ ಮಾಡಬೇಕಾಗುತ್ತದೆ. ಆದರೆ ನಮ್ಮಲ್ಲಿ ನಡೆದುಕೊಂಡು ಬಂದಿರುವ ಪದ್ಧತಿ ಪ್ರಕಾರ, 5 ರಿಂದ 8 ನಿಮಿಷಗಳ ಕಾಲ ಯಾರಾದರೊಬ್ಬರು ಮಾತನಾಡಬಹುದು ಅಥವಾ ಇಬ್ಬರು ವಿಷಯವನ್ನು ಹಂಚಿಕೊಂಡು ಈ ನಿಲುವಳಿ ಸೂಚನೆಯನ್ನು ಏಕೆ ಕೊಟ್ಟಿದ್ದೀರಿ ಎಂಬುದನ್ನು ದಯವಿಟ್ಟು ಮೊದಲು ಹೇಳಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದಲ್ಲಿ 6 ವರ್ಷಗಳಿಂದ ಸತತವಾಗಿ ಭೀಕರ ಬರಗಾಲ ಬಂದಿದೆ. ಎಷ್ಟರ ಮಟ್ಟಿಗೆ ಬರಗಾಲ ಬಂದಿದೆ ಎಂದರೆ ಕುಡಿಯುವುದಕ್ಕೆ ನೀರು ಇಲ್ಲದೆ ಇರುವಷ್ಟು ಹಾಹಾಕಾರ ರಾಜ್ಯದಲ್ಲಿ ಸೃಷ್ಟಿಯಾಗಿದೆ. ಜಾನುವಾರುಗಳಿಗೆ ಮೇವು ಕೂಡ ಇಲ್ಲ. ಇದರಿಂದ ರೈತ ತತ್ತರಿಸಿ ಹೋಗಿದ್ದಾನೆ. ರೈತನು ಬೆಳೆದಂತಹ ಬೆಳೆ ಸಂಪೂರ್ಣವಾಗಿ ವಿಫಲವಾಗಿದೆ. ರಾಜ್ಯ ಸರ್ಕಾರವು ಬೆಳೆ ಪರಿಹಾರವನ್ನು ಕೊಡುವುದಕ್ಕೂ ಸಹ ಹಿಂದೆ–ಮುಂದೆ ನೋಡುತ್ತಿದೆ. ಕೇಂದ್ರ ಸರ್ಕಾರದಿಂದ ಬಂದಿರುವಂತಹ ಹಣ ಪೂರ್ಣವಾಗಿ ರೈತನ ಬ್ಯಾಂಕ್ ಖಾತೆಗೆ ಇನ್ನು ತಲುಪಿರುವುದಿಲ್ಲ. ರೈತನ Aadhar Cardಗೂ, Bank Accountಗೂ ಹೊಂದಿಕೆಯಾಗುತ್ತಿಲ್ಲವೆಂದು ಕಾರಣವನ್ನು ನೀಡುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಇಂತಹ ಒಂದು ವಿಚಿತ್ರವಾದಂತಹ ಪರಿಸ್ಥಿತಿ ಇತ್ತೀಚಿನ 6 ವರ್ಷಗಳಲ್ಲಿ ಎಂದಿಗೂ ಸಹ ಬಂದಿರಲಿಲ್ಲ. ಆದರೆ ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡೆಯಿಂದ ಬೆಳೆ ವಿಮೆಯಾಗಬೇಕಾಗಿದೆ.ರಾಜ್ಯದಲ್ಲಿ ಬೆಳೆ ವಿಮೆ ಮಾಡುವುದರಲ್ಲೂ ಕೂಡ ಅನೇಕ ಜಿಲ್ಲೆಗಳು ಸಂಪೂರ್ಣವಾಗಿ ವಿಫಲವಾಗಿವೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಕಂದಾಯ ಸಚಿವರು ಈ ಸದನದಲ್ಲಿರುವುದರಿಂದ ನಾನು ಮೊದಲು ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಅಭಿನಂದನೆಯನ್ನು ಸಲ್ಲಿಸ ಬಯಸುತ್ತೇನೆ. ಏಕೆಂದರೆ ನಾನು ರಾಯಚೂರು ಜಿಲ್ಲೆಗೆ ಹೋದಾಗ ರೈತರಿಗೆ ಅತಿ ಹೆಚ್ಚು ಬೆಳೆ ವಿಮೆಯನ್ನು ಮಾಡಿಸಿರುವ ವಿಚಾರ ತಿಳಿಯಿತು. ರೈತರನ್ನು ಕರೆಯಿಸಿ, ಬ್ಯಾಂಕ್ ಸಿಬ್ಬಂದಿಯವರನ್ನು ಕರೆಯಿಸಿ ಅತಿ ಹೆಚ್ಚು ಬೆಳೆ ವಿಮೆಯನ್ನು ಮಾಡಿಸಿರುವುದರಿಂದ, ನಿಜಕ್ಕೂ ಕೂಡ ಆ ಜಿಲ್ಲೆಯ ರೈತರು ಬದುಕುವಂತಾಗಿದೆ. ಎರಡನೆಯದು ಅನೇಕ ಭಾಗದಲ್ಲಿ ಮೇವು ಆಗಬೇಕೆಂದು ಬಿತ್ತನೆ ಬೀಜವನ್ನು ಕೊಟ್ಟಿದ್ದಾರೆ. ಅದರಲ್ಲಿ ಸುಮಾರು ಅರವತ್ತೇಳು ಕೋಟಿ ರೂಪಾಯಿಗಳಷ್ಟು ಭ್ರಷ್ಟಾಚಾರವಾಗಿದೆ ಎಂಬ ಅಂಶ ತಮ್ಮ ಗಮನಕ್ಕೆ ಬಂದಿರಬಹುದು. ಮಳೆಯಿಲ್ಲದೆ ಅಡಿಕೆ ಮತ್ತು ತೆಂಗು ಒಂದು ರೀತಿಯಲ್ಲಿ ಗೂಟ ನೆಡುವ ಹಾಗಾಗಿದೆ. ಅಡಿಕೆ ಮತ್ತು ತೆಂಗುಗಳ ಜೀವನವೇ ಮುಗಿಯಿತು. ಅಡಿಕೆ ಮತ್ತು ತೆಂಗು ಮರಗಳನ್ನು ಕಿತ್ತು ಬಿಸಾಕಬೇಕು. ಹೊಸದಾಗಿ ರೈತ ಅಡಿಕೆ ಮತ್ತು ತೆಂಗು ಮರಗಳನ್ನು ಬೆಳೆಸುವಂತಹ ಪ್ರಯತ್ನ ಮಾಡಬೇಕು. ಇದನ್ನು ಬೆಳೆಯುವುದಕ್ಕೆ 8 ರಿಂದ 10 ವರ್ಷಗಳು ತೆಗೆದುಕೊಳ್ಳುತ್ತದೆ. ರೈತ ಹೇಗೆ ಜೀವನ ಮಾಡಬೇಕೆಂಬ ಅಂಶವನ್ನು ಗಮನಿಸಬೇಕಾಗುತ್ತದೆ. ಅಂತರ್ಜಲ ಸಂಪೂರ್ಣವಾಗಿ ಕುಸಿದು ಹೋಗಿದೆ. ಅಲ್ಲಲ್ಲಿ ಸ್ವಲ್ಪ ಮಳೆಯಾಗಿರುವುದರಿಂದ ಅಂತರ್ಜಲದಲ್ಲಿ ನೀರು ಉತ್ಪತ್ತಿಯಾಗುವುದಕ್ಕೆ ಕನಿಷ್ಟ 3 ತಿಂಗಳು ಬೇಕಾಗುತ್ತದೆ. ಕುಡಿಯುವ ನೀರಿನ ಹಾಹಾಕಾರ ಎಷ್ಟರ ಮಟ್ಟಿಗೆ ಆಗಿದೆ ಎಂದರೆ ಮೊನ್ನೆಯ ದಿವಸ ನಾನು ಮತ್ತು ಕಂದಾಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರು ಶಿವಮೊಗ್ಗ ಜಿಲ್ಲಾ ಪಂಚಾಯಿತಿಯಲ್ಲಿ ಸರ್ವ ಪಕ್ಷಗಳ ಒಂದು ನಿರ್ಣಯವನ್ನು ಮಾಡಿಕೊಂಡು ಕುಡಿಯುವ ನೀರಿಗೆ ನೂರು ಕೋಟಿ ರೂಪಾಯಿಗಳ ಹಣವನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಬಂದಿದ್ದೆವು. ನೆನ್ನೆಯ ದಿವಸ ನಮ್ಮ ಪಕ್ಷದ ಶಾಸಕಾಂಗ ಸಭೆ ನಡೆಯಿತು. ಈ ವಿಷಯದ ಬಗ್ಗೆನಮ್ಮೆಲ್ಲ ಶಾಸಕರು ಹೇಳಿರುವುದೇನೆಂದರೆ ನಮ್ಮ ನಮ್ಮ ಕ್ಷೇತ್ರದಲ್ಲಿ bore well ಗಳನ್ನು ತೆಗೆದಿದ್ದಾರೆ. ಈಗ ತೆಗೆದಿರುವಂತಹ bore wellಗಳಿಗೆ payment ಮಾಡಿಲ್ಲ. ಹಾಗಾಗಿ contractor ಗಳು ಯಾರು ಮುಂದೆ ಬರುತ್ತಿಲ್ಲ. Bore wellಗಳಲ್ಲೂ ನೀರು ಇಲ್ಲದೆ ಇರುವಂತಹ ಪರಿಸ್ಥಿತಿ ಉಂಟಾಗಿದೆ. ಈ ರೀತಿಯ ದೊಡ್ಡ ಸಮಸ್ಯೆಗಳು ಉದ್ಭವಿಸುತ್ತಿದೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-**ಮಾನ್ಯ ಸಭಾಪತಿಯವರೆ, ವಿರೋಧಪಕ್ಷದ ನಾಯಕರು ಮೊದಲುPreliminary Submissionಮಾಡಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು Preliminary Submissionಅನ್ನೇ ಮಾಡುತ್ತಿರುವುದು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾವು ಚರ್ಚೆಗೆ ಸಿದ್ಧರಿದ್ದೇವೆ as we are ready for the discussion. Please convert it. ನಂತರ ಅವರು ಮಾತನಾಡಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಬದಲಾವಣೆ ಏಕೆ ಮಾಡಬೇಕು? ನಾನು ಇವತ್ತಿನ ದಿವಸ ನಿಲುವಳಿ ಸೂಚನೆಯ ಪ್ರಕಾರ ತೆಗೆದುಕೊಳ್ಳಬೇಕೆಂದು ವಿಷಯ ಮಂಡನೆ ಮಾಡುತ್ತಿದ್ದೇನೆ. ಇದನ್ನು ಏಕೆ ಬದಲಾವಣೆ ಮಾಡುತ್ತೀರಿ?

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಯಾವ ಕಾಲದಲ್ಲೂ ಕೂಡ ಬರಗಾಲದ ಚರ್ಚೆ ಮೇಲೆ ನಿಲುವಳಿ ಸೂಚನೆಯನ್ನು ತಂದಿರುವುದು ಹಾಗೂ ಕಾರ್ಯಕಲಾಪಗಳನ್ನು ಬದಿಗೊತ್ತಿ ಚರ್ಚೆ ಮಾಡಿರುವಂತಹ ನಿದರ್ಶನಗಳಿಲ್ಲ. ಆದ್ದರಿಂದ ಇದನ್ನು ನಿಯಮ 68ಕ್ಕೆ convert ಮಾಡುವುದರಿಂದ ಎಲ್ಲರಿಗೂ ಮಾತನಾಡುವಂತಹ ಅವಕಾಶ ಸಿಗುತ್ತದೆ. ಇಲ್ಲದಿದ್ದರೆ ಯಾರು ಈ ವಿಷಯಕ್ಕೆ ಸಹಿ ಮಾಡಿದ್ದಾರೋ, ಅವರಿಗೆ ಮಾತ್ರ ಅವಕಾಶ ಸಿಗುತ್ತದೆ.

**ಸಭಾಪತಿಯವರು:–** ಇದರ ಬಗ್ಗೆ ಮಾತನಾಡಲು ಎಲ್ಲರಿಗೂ ಅವಕಾಶವನ್ನು ಕೊಡಬೇಕೆಂದು ತಾವು ಹೇಳುತ್ತಿದ್ದೀರಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಎಲ್ಲರಿಗೂ ಅವಕಾಶವನ್ನು ಕೊಡಿ. Detailed discussionಆಗಲಿ, ಸಂಪೂರ್ಣವಾದ ವಿವರವನ್ನು ಹೇಳಲಿ. ನಿಮ್ಮ ಸಲಹೆ ಸೂಚನೆಗಳನ್ನು ಸಹ ಕೊಡಿ. ಅದನ್ನು ಸಹ ನಾವು ತೆಗೆದುಕೊಳ್ಳುತ್ತೇವೆ. ಆದ್ದರಿಂದ detailed discussion ಗೆ ಅವಕಾಶವನ್ನು ಮಾಡಿಕೊಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, detailed discussion ಗೆ ಅವಕಾಶವನ್ನು ಕೊಡಿ. ನಾನು ಬೇಡವೆಂದು ಹೇಳಲಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಿದ್ದಾರೆ. ಆದ್ದರಿಂದ ನಾನು ಕೆಲವೊಂದು ವಿಚಾರಗಳನ್ನು ಹೇಳಬೇಕಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾನು ವಿರೋಧ ಮಾಡುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನೀವು ವಿರೋಧ ಮಾಡುತ್ತಿಲ್ಲ ಸರಿ. ಆದರೆ ನಿಲುವಳಿ ಸೂಚನೆಯನ್ನು ಏಕೆ ಮಂಡನೆ ಮಾಡಿದ್ದೇವೆಂದಾದರು ನಾವು ಹೇಳಬೇಕಲ್ಲವೇ? ಅದಕ್ಕಾಗಿ ನಾನು ವಿಷಯ ಮಂಡನೆ ಮಾಡುತ್ತಿರುವುದು. ಮಾನ್ಯ ಮುಖ್ಯಮಂತ್ರಿಯವರು video conference ಮಾಡುತ್ತಾರೆ. ಅವರು video conference ಮಾಡುವುದರಿಂದ ಅಧಿಕಾರಿಗಳನ್ನು ಎಚ್ಚರಿಸಬಹುದು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅಷ್ಟೇ ಅಲ್ಲ ನಾನು ಜಿಲ್ಲೆಗಳಿಗೂ ಸಹ ಭೇಟಿ ಕೊಟ್ಟಿದ್ದೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಕೆಲವು ಜಿಲ್ಲೆಗಳಿಗೆ ಮಾತ್ರ ಭೇಟಿ ಕೊಟ್ಟಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ,ನಾನು ಕೆಲವು ಜಿಲ್ಲೆಗಳು ಮಾತ್ರವಲ್ಲ. ಬಹಳಷ್ಟು ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದೇನೆ. ಯಾವ ಯಾವ ಜಿಲ್ಲೆಗಳಿಗೆ ಹೋಗುತ್ತೇನೆ. ಆ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಬರಗಾಲ review ಮಾಡಿಯೇ ವಾಪಸ್ಸು ಬರುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಯವರು ಭೇಟಿ ಕೊಟ್ಟಂತಹ ಜಿಲ್ಲೆಗಳ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ನೋಡಿ. ಮಾನ್ಯ ಮುಖ್ಯಮಂತ್ರಿಗಳು ಇಂತಹ ಜಿಲ್ಲೆಗಳಿಗೆ ಭೇಟಿಕೊಟ್ಟು, ಎರಡು ನಿಮಿಷ ನೋಡಿಕೊಂಡು ಹಾಗೆ ವಾಪಸ್ಸು ಹೋದರು ಎಂದು ಮಾರನೇ ದಿನ ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದ್ದೇವೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಜಿಲ್ಲೆಯಲ್ಲಿ ಏನಾಗಿದೆಯೆಂಬುದನ್ನು ಎರಡು ನಿಮಿಷಗಳಲ್ಲಿ ಯಾರಾದರೂ ನೋಡುವುದಕ್ಕೆ ಆಗುತ್ತದೆಯೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಹೇಳುತ್ತಿರುವುದು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಪತ್ರಿಕೆಯಲ್ಲಿ ಬಂದಿರುವ ವಿಷಯದ ಮೇಲೆ ಮಾತನಾಡಿದರೆ ಹೇಗೆ? ಯಾರಾದರೂ Review Meeting ಅನ್ನು ಎರಡು ನಿಮಿಷದಲ್ಲಿ ಮಾಡುವುದಕ್ಕೆ ಆಗುತ್ತದೆಯೇ? Meetingಗೆ ಹೋಗಿ ಕುಳಿತುಕೊಳ್ಳುವುದಕ್ಕೆ ಎರಡು ನಿಮಿಷ ಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಯವರಿಗೆ ಸಮರ್ಥನೆ ಮಾಡಿಕೊಳ್ಳುವಂತಹ ಶಕ್ತಿ ಇದೆ. ನಿಮ್ಮ ಸಹಾಯದ ಅವಶ್ಯಕತೆ ಅವರಿಗೆ ಇಲ್ಲ. ಮುಖ್ಯಮಂತ್ರಿಯವರೆ ತಮಗೆ ಸಮರ್ಥನೆ ಮಾಡಿಕೊಳ್ಳುವುದಕ್ಕಾಗುವುದಿಲ್ಲವೇ? ಮಾನ್ಯ ಸದಸ್ಯರು ಯಾವ ರೀತಿ ಹೇಳುತ್ತಾರೆಂಬುದನ್ನು ನೋಡಿ. ಮುಖ್ಯಮಂತ್ರಿಗಳು ಅಷ್ಟು ಸಮರ್ಥರಿಲ್ಲವೇ? (ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಏನೇನು ಚರ್ಚೆ ಮಾಡುತ್ತೀರೋ ಅದನ್ನು ಮಾಡಿ. ಅದಕ್ಕೆಲ್ಲಾ ಉತ್ತರ ಕೊಡೋಣ.

**ಶ್ರೀ ಕೆ.ಅಬ್ದುಲ್ ಜಬ್ಬಾರ್ (ನಾಮ ನಿರ್ದೇಶಿತರು):–**ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಯವರಿಗೆ ಶಕ್ತಿಯಿದೆ. ಆದರೆ ನಾವು ಕೂಡ ಕೆಲವೊಂದು ವಿಚಾರಗಳ ಬಗ್ಗೆ ಹೇಳಬೇಕಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಶಕ್ತಿಯಿಲ್ಲವೇ? ರೈತರಿಗೆ ಏನೋ ಶಕ್ತಿಯಿಲ್ಲ. ಮಾನ್ಯ ಮುಖ್ಯಮಂತ್ರಿಯವರಿಗೂ ಶಕ್ತಿಯಿಲ್ಲವೇ? ನಾನು ಹೇಳುವುದೇನೆಂದರೆ . . .

**ಶ್ರೀ ಕೆ.ಅಬ್ದುಲ್ ಜಬ್ಬಾರ್:–**ಮಾನ್ಯ ಸಭಾಪತಿಯವರೆ, ವಿರೋಧಪಕ್ಷದ ನಾಯಕರು ಅವರ ಪಕ್ಷದ MLA ಗಳು ಬೋರ್‌ವೆಲ್‌ಗಳ ಬಗ್ಗೆ ಮಾತನಾಡಿದರೆಂದು ಹೇಳಿದರು. ಆದರೆ ಅವರ ಪಕ್ಷದ ಎಷ್ಟು ಜನ ಪಾರ್ಲಿಮೆಂಟ್ ಸದಸ್ಯರುಗಳು ಸಂಸತ್ತಿನಲ್ಲಿ ಈ ವಿಚಾರದ ಬಗ್ಗೆ ಮಾತನಾಡಿದ್ದಾರೆಂದು ಕೂಡ ಹೇಳಬೇಕಲ್ಲ. ಅವರು ಕೂಡ ಕರ್ನಾಟಕ ಪ್ರತಿನಿಧಿಸುತ್ತಾರೆಂದು ತಿಳಿದುಕೊಳ್ಳಬೇಕಲ್ಲ. ಕರ್ನಾಟಕ ರಾಜ್ಯದಲ್ಲಿ ಈ ರೀತಿ ಪರಿಸ್ಥಿತಿ ಇದೆ ಎಂದು ಅಲ್ಲಿ ಹೇಳಬೇಕಲ್ಲ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಪಾರ್ಲಿಮೆಂಟ್ ಅಲ್ಲಿ ಇದೆ. ಇದರ ಬಗ್ಗೆ ಅವರು ಪಾರ್ಲಿಮೆಂಟ್‌ನಲ್ಲಿ ಮಾತನಾಡಲಿ. ಆದರೆ ನಾವು ಕರ್ನಾಟಕ ರಾಜ್ಯದಲ್ಲಿನ ಬರಗಾಲದ ಬಗ್ಗೆ ನಿಲುವಳಿ ಸೂಚನೆಯನ್ನು ಸದನಕ್ಕೆ ಕೊಟ್ಟಿದ್ದೇವೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಅಬ್ದುಲ್ ಜಬ್ಬಾರ್:-**ಮಾನ್ಯ ಸಭಾಪತಿಯವರೆ, ಇಲ್ಲಿ ನಮ್ಮದು ಮಾತ್ರ ತಪ್ಪಾಗಿದೆಯೇ? ಪಾರ್ಲಿಮೆಂಟ್‌ನಲ್ಲಿ ಕೂಡ ಅವರು ಬರಗಾಲದ ಬಗ್ಗೆ ಮಾತನಾಡಬೇಕಲ್ಲ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಬರಗಾಲದ ವಿಷಯವನ್ನು ನಿಯಮ 68 ಗೆ convert ಮಾಡಿ ಚರ್ಚೆ ಮಾಡೋಣ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರು ಮಾತನಾಡಲಿ ಬಿಡಿ. ಇನ್ನು ಮೂರ್‍ನಾಲ್ಕು ನಿಮಿಷ ಕಾಲಾವಕಾಶವನ್ನು ಕೊಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮುಖ್ಯ ಸಚೇತಕರು ಹಿರಿಯರು, ಈ ರೀತಿ ಮಾಡಿದರೆ ಹೇಗೆ? ಇದು ಪದ್ಧತಿ. ದಯವಿಟ್ಟು ಮಾತನಾಡಲು ಬಿಡಿ.

**ಸಭಾಪತಿಯವರು:-** ಈಶ್ವರಪ್ಪನವರು ಇನ್ನು ಮೂರ್‍ನಾಲ್ಕು ನಿಮಿಷ ಮಾತನಾಡುತ್ತಾರೆ. ಸರ್ಕಾರದಿಂದ ಉತ್ತರವನ್ನು ಕೇಳುತ್ತೇನೆ. ಸರ್ಕಾರ ಯಾವ ರೀತಿ ಉತ್ತರವನ್ನು ಹೇಳುತ್ತದೆಯೋ, ಆ ರೀತಿ ಮಾಡುತ್ತೇನೆ. Convert ಮಾಡಿ ಎಂದರೆ ಮಾಡುತ್ತೇನೆ. ಈಗಲೇ ಚರ್ಚೆಗೆ ತೆಗೆದುಕೊಳ್ಳಬೇಕೆಂದರೆ ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಈಶ್ವರಪ್ಪನವರಿಗೆ 5 ರಿಂದ 8 ನಿಮಿಷಗಳ ಕಾಲಾವಕಾಶವನ್ನು ನೀಡಿದ್ದೇನೆ. ಈಗಾಗಲೇ 4 ನಿಮಿಷಗಳ ಕಾಲ ಮಾತನಾಡಿದ್ದಾರೆ. ಇನ್ನು 4 ನಿಮಿಷಗಳ ಕಾಲ ಮಾತನಾಡಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಅನೇಕ ಜಿಲ್ಲೆಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರುಗಳೇ ಹೋಗಿಲ್ಲ. ಇವರು ಜಿಲ್ಲೆಗಳಿಗೆ ಹೋದರೆ ಅಧಿಕಾರಿಗಳು ಜೊತೆಯಲ್ಲಿ ಹೋಗುತ್ತಾರೆ. ಅಧಿಕಾರಿಗಳು ಈಗ ಆರಾಮವಾಗಿ ಇದ್ದಾರೆ. ಮಾನ್ಯ ಮುಖ್ಯಮಂತ್ರಿಯವರು video conference ಮಾಡುತ್ತಿರುವುದನ್ನು ನಾನು ಗಮನಿಸಿದ್ದೇನೆ. Video conference ನಲ್ಲಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಂಬ ಎಚ್ಚರಿಕೆಯನ್ನು ಕೊಡುತ್ತಿದ್ದಾರೆ. ಅದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಎಷ್ಟು ಜನರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೀರಿ. ಅಧಿಕಾರಿಗಳಿಗೆ ಯಾವುದೇ ರೀತಿಯಲ್ಲೂ ಭಯವಿಲ್ಲ. ಕುಡಿಯುವುದಕ್ಕೆ ನೀರಿಲ್ಲದೆ ರೈತ ಸಾಯುತ್ತಿದ್ದಾನೆ. ಜಾನುವಾರುಗಳಿಗೆ ನೀರಿಲ್ಲ. ರೈತನು ಬಿತ್ತಿರುವಂತಹ ಬೀಜಗಳು ಹಾಳಾಗಿವೆ. ಅಡಿಕೆ, ತೆಂಗು ಎಲ್ಲವೂ ನಾಶವಾಗಿವೆ. ಬಿಜಾಪುರ ಭಾಗದಲ್ಲಿ ದ್ರಾಕ್ಷಿ, ನಿಂಬೆ ಇನ್ನಿತರ ಬೆಳೆಗಳು ಹಾಳಾಗಿವೆ.ಈ ರೀತಿ ಜೀವನವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಾಗಿಸುವುದಕ್ಕೆ ತುಂಬಾ ಕಷ್ಟವಾಗಿರುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಸಾಲ ಮನ್ನಾ ಮಾಡಿದ್ದಾರೆ.

(ಮುಂದು)

604/8-6-2017/11-10/bkp-ks(sp)

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು. . )**

ಮದ್ಯಪ್ರದೇಶದಲ್ಲಿ ಗೋಲಿಬಾರ್ ಆಯಿತು ಎಂದು ಹೇಳುತ್ತಿದ್ದಾರೆ. ಗೋಲಿಬಾರ್ ಆದ ಮೇಲೆ ಅಲ್ಲಿನ ಸರ್ಕಾರ ಎಚ್ಚೆತ್ತುಕೊಂಡಿದೆ. ಮತ್ತೆ, ಅಲ್ಲಿಯೂ ಕೂಡ ಸಾಲ ಮನ್ನಾ ಮಾಡಿದ್ದಾರೆ. ಅಲ್ಲಿನ ಮುಖ್ಯಮಂತ್ರಿಗಳು ಸಾಲ ಮನ್ನಾ ಮಾಡುತ್ತೇನೆಂದು ಈಗಾಗಲೇ ಘೋಷಣೆ ಮಾಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ನಿಮ್ಮ Reserve Bank ನವರು ಏನು ಹೇಳಿದ್ದಾರೆಂದು ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮೊದಲ ಬಾರಿ ಅರ್ಥ ಮಂತ್ರಿಯಾದಾಗಿನಿಂದಲೂ ಇದೇ ರೀತಿ ಹೇಳುತ್ತಾ ಬಂದಿದ್ದಾರೆ. ಆರ್‌ಬಿಐ ನವರು ನೀವು ಸಾಲ ಮನ್ನಾ ಮಾಡಿ ಎಂದು ಹೇಳುತ್ತಾರೆಯೇ, ಸಾಲ ಮನ್ನಾ ಮಾಡಲು ಎಂದಾದರೂ ಒಪ್ಪಿಗೆಯನ್ನು ಕೊಟ್ಟಿದ್ದಾರೆಯೇ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, Reserve Bank ಸರ್ಕಾರದ ಅಧೀನದಲ್ಲಿ ಇಲ್ಲವೇ? ಪ್ರಧಾನ ಮಂತ್ರಿಗಳ ಮಾತನ್ನು Reserve Bank ನವರು ಕೇಳುವುದಿಲ್ಲವೇ? ಪ್ರಧಾನ ಮಂತ್ರಿಗಳು ಸಾಲ ಮನ್ನಾ ಮಾಡಲು ಕೇಳುತ್ತಾರೋ ಇಲ್ಲವೋ ಎಂದು ತಾವು ಮೊದಲು ಹೇಳಬೇಕು. ಹಿಂದಿನ ಸರ್ಕಾರ ಸಾಲ ಮನ್ನಾ ಮಾಡಿಲ್ಲವೇ? ಮನಮೋಹನ್‌ಸಿಂಗ್‌ರವರ ನೇತೃತ್ವದ ಸರ್ಕಾರ 72 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಲಿಲ್ಲವೇ? ನಾವು 23% Co-operative institutions ಗ್ರಿ. ಕೊಟ್ಟಿದ್ದೇವೆ. ಉಳಿದ 77%ಗೆ ಇವರು ಕೊಟ್ಟಿದ್ದಾರೆ. ಇಡೀ ರಾಜ್ಯದಲ್ಲಿ 52 ಸಾವಿರ ಕೋಟಿ ರೂಪಾಯಿಗಳ ಸಾಲ ರೈತರದ್ದು ಇದೆ. 42 ಸಾವಿರ ಕೋಟಿ ರೂಪಾಯಿಗಳನ್ನು Commercial Bank ಗಳಿಂದ Nationalized Bank ಗಳಿಂದ ಕೊಟ್ಟಿದ್ದಾರೆ. ನಾವು ಕೊಟ್ಟಿರುವುದು 10.5 ರಿಂದ 11 ಸಾವಿರ ಕೋಟಿ ರೂಪಾಯಿಗಳು. ಎಲ್ಲಾ ರೈತರಿಗೂ ಅನುಕೂಲವಾಗಬೇಕಲ್ಲವೆ? ನಮ್ಮ ಉದ್ದೇಶ ಇಡೀ ರಾಜ್ಯ ಜನರಿಗೆ ಅನುಕೂಲವಾಗಬೇಕು. ಎಲ್ಲಾ ರೈತರಿಗೆ ಅನುಕೂಲವಾಗಬೇಕೆಂದು ಹೇಳಿ, ನೀವು ಪ್ರಯತ್ನ ಮಾಡಿ, ಕೇವಲ ನಾನು ಪ್ರಯತ್ನ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡುತ್ತೇನೆಂದು ಹೇಳಿದರೆ ಸಾಲುವುದಿಲ್ಲ. ನೀವುಗಳ್ಯಾರೂ ಸಹ ಕೇಂದ್ರಕ್ಕೆ ಹೋಗಿ ಹೇಳುವುದಿಲ್ಲ. ಇಲ್ಲಿ ರೈತರ ಸಾಲ ಮನ್ನಾ ಬಗ್ಗೆ ಚರ್ಚೆಯಾದಾಗ ಅಲ್ಲಿಗೆ ನಿಯೋಗ ಕರೆದುಕೊಂಡು ಹೋಗಿ ಮಾತನಾಡೋವೆಂದು ಹೇಳುತ್ತಾರೆ. ಅಲ್ಲಿಗೆ ನಿಯೋಗ ಕರೆದುಕೊಂಡು ಹೋದಾಗ ಅಲ್ಲಿ ಯಾರೂ ಮಾತನಾಡುವುದೇ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಈ ಅಪಾದನೆ ಬೇಡ. ಇದು ರಾಜಕಾರಣದ ಅಪಾದನೆ.

**ಶ್ರೀ ಸಿದ್ದರಾಮಯ್ಯ:-** ನಾವು ಸಾಲ ಮನ್ನಾ ಮಾಡುವುದಕ್ಕೆ ವಿರೋಧವಿಲ್ಲ. ಕೇಂದ್ರ ಸರ್ಕಾರವೂ ಸಾಲ ಮನ್ನಾ ಮಾಡಿದರೆ ಎಲ್ಲಾ ರೈತರಿಗೂ ಅನುಕೂಲವಾಗುತ್ತದೆ. ನಾವು ಸಹ ಸಾಲ ಮನ್ನಾ ಮಾಡುತ್ತೇವೆಂದು ಹೇಳುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಈಗ ಒಂದು ಗಾದೆ ಇದೆ. ಕುಂಟ "ಎದ್ದರೆ ನೋಡು ಈಗ" ಎಂದು ಹೇಳುತ್ತಾನಂತೆ. ಅವನಿಗೆ ಎದ್ದೇಳುವುದಕ್ಕೆ ತಾಕತ್ತು ಇರುವುದಿಲ್ಲ, ಹಾಗಾಗಿ, ಎದ್ದು ಏನೂ ಮಾಡುವುದಿಲ್ಲ. ನಿಮಗೆ ಎಷ್ಟು ತಾಕತ್ತು ಇದೆ, ಅದನ್ನು ಮಾಡಿ. ಕೇಂದ್ರಕ್ಕೆ ಏತಕ್ಕೆ ತೋರಿಸುತ್ತೀರಿ?

**ಶ್ರೀ ಸಿದ್ದರಾಮಯ್ಯ:-** ಶ್ರೀಯುತ ಈಶ್ವರಪ್ಪನವರೆ, ನೀವು ಸಹ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಶ್ರೀಯುತ ಜಗದೀಶ್ ಶೆಟ್ಟರ್‌ರವರು 3500 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುತ್ತೇವೆಂದು ಹೇಳಿ 25000 ಸಾವಿರ ರೂಪಾಯಿಗಳ ವರೆಗೆ ಸಾಲ ಮನ್ನಾ ಮಾಡಿದ್ದರಲ್ಲಾ, ಅದನ್ನು ಯಾರು ತೀರಿಸಿದರು?

**ಶ್ರೀ ಕೆ.ಎಸ್.ಈಶ್ವರಪ್ಪ:-** ನೀವು ಸಾಲ ಮನ್ನಾ ಮಾಡಿ, ನಾವು ಅದನ್ನು ತೀರಿಸುತ್ತೇವೆ. ಈಗ ನೀವು ಈ ಕೆಲಸ ಮಾಡಿ, ನಾವು ಮುಂದಿನ ಬಾರಿ ಅಲ್ಲಿ ಬಂದು ತೀರಿಸುತ್ತೇವೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ನೀವು ತಿಪ್ಪರ್‌ಲಾಗ ಹಾಕಿದರೂ ಸಹ ಜನ ನಿಮ್ಮನ್ನು ನಂಬುವುದಿಲ್ಲ, ನೀವು ಮತ್ತೆ ಅಧಿಕಾರಕ್ಕೆ ಬರುವುದಿಲ್ಲ. ನಾವೇ ಮತ್ತೇ ಅಧಿಕಾರಕ್ಕೆ ಬರುತ್ತೇವೆ. ನೀವು ಎಲ್ಲಿ ಅಧಿಕಾರಕ್ಕೆ ಬರುತ್ತೀರಿ?

ಗುಂಡ್ಲುಪೇಟೆ ಮತ್ತು ನಂಜನಗೂಡು ಮರುಚುನಾವಣೆ ಫಲಿತಾಂಶ ದಿಕ್ಸೂಚಿ ಅಲ್ಲವೇ?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀವು ಹೇಳಿದ್ದನ್ನೇ ಹೇಳಬೇಡಿ. ಇದು ದಿಕ್ಸೂಚಿ. ನಿಮ್ಮ ಪ್ರಕಾರ ದಿಕ್ಸೂಚಿ ಏನಾಯಿತು? We won Nanjangud By-election by twenty one thousand votes.

**ಶ್ರೀ ಕೆ.ಎಸ್.ಈಶ್ವರಪ್ಪ:–** ಹೆಬ್ಬಾಳ ಏನಾಯಿತು? ದೇವದುರ್ಗ ಏನಾಯಿತು?

**ಶ್ರೀ ಸಿದ್ದರಾಮಯ್ಯ:–** 'ದಿಕ್ಸೂಚಿ' ಎಂದು ಹೇಳಿದ್ದು ಏನಾಯಿತು? 'ದಿಕ್ಸೂಚಿ' ಆ ಚುನಾವಣೆ ಎಂದು ಹೇಳುತ್ತಿದ್ದೀರಿ ಅಲ್ಲವೇ? ಎಲ್ಲಿ ನಿಮ್ಮ ದಿಕ್ಸೂಚಿ? ಗುಂಡ್ಲುಪೇಟೆ ಮತ್ತು ನಂಜನಗೂಡು ದಿಕ್ಸೂಚಿಯೇ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಹೆಬ್ಬಾಳ ಏನಾಯಿತು? ದೇವದುರ್ಗ ಏನು?

**ಶ್ರೀ ಸಿದ್ದರಾಮಯ್ಯ:–** ದಿಕ್ಸೂಚಿ ಎನ್ನುವುದು ನಿಮ್ಮ ಪದವೇ. ನೀವೇ ಹೇಳಿದ ಹೇಳಿಕೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಲೋಕಸಭೆ ಚುನಾವಣೆ ಫಲಿತಾಂಶ ಮರೆತರು, ಲೋಕಸಭೆಯಲ್ಲಿ 28 ಸೀಟ್‌ಗಳಲ್ಲಿ ನಾವು 17 ಸೀಟ್‌ಗಳನ್ನು ಗೆದ್ದಿದ್ದೇವೆ. ಮತ್ತೆ, ಹೆಬ್ಬಾಳ ಮತ್ತು ದೇವದುರ್ಗ ಚುನಾವಣೆ ಫಲಿತಾಂಶವನ್ನು ಮರೆತರು. ಈಗ ಇವರಿಗೆ ದಿಕ್ಸೂಚಿ ನೆನಪಾಯಿತು.

**ಶ್ರೀ ಸಿದ್ದರಾಮಯ್ಯ:–** ನೀವು ಹೇಳಿದಂತಹ ದಿಕ್ಸೂಚಿ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಲೋಕಸಭೆ ಚುನಾವಣೆ ಫಲಿತಾಂಶ ಮರೆತರು, ಹೆಬ್ಬಾಳ ಮತ್ತು ದೇವದುರ್ಗ ಫಲಿತಾಂಶವನ್ನು ಮರೆತರು. ಈಗ ಇವರಿಗೆ ದಿಕ್ಸೂಚಿ ನೆನಪಾಯಿತು.

**ಶ್ರೀ ಸಿದ್ದರಾಮಯ್ಯ:–** ಇವರು ದಿಕ್ಸೂಚಿ ಹೇಳಿ, ಹೇಳಿ ದಿಕ್ಕು ತಪ್ಪಿ ಹೋಗಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಪಾರ್ಲಿಮೆಂಟ್‌ನಲ್ಲಿ ನೀವು ಎಲ್ಲಿದ್ದೀರಿ ಎಂದು ಹುಡುಕಿ. ಲೋಕಸಭೆಯಲ್ಲಿ 28 ಸೀಟ್‌ಗಳಲ್ಲಿ ನಾವು 17 ಸೀಟ್‌ಗಳನ್ನು ಗೆದ್ದಿದ್ದೇವೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಶ್ರೀಯುತ ಈಶ್ವರಪ್ಪನವರೆ, ನಿಮ್ಮ ಮೇಲೆ ನಾನು ಆರೋಪ ಮಾಡುತ್ತಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾಡಿ ಪರವಾಗಿಲ್ಲ. ಅದರಲ್ಲಿ ತಪ್ಪೇನಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಇಲ್ಲ, ನಾವು ಸುಮ್ಮ-ಸುಮ್ಮನೆ ಆರೋಪ ಮಾಡುವುದಿಲ್ಲ. ಇಲ್ಲಿ ನೀವು ಕೇಳಿ. ನಿಮ್ಮ 17 ಜನ ಪಾರ್ಲಿಮೆಂಟ್ ಸದಸ್ಯರುಗಳು ಒಂದು ಬಾರಿ ಪಾರ್ಲಿಮೆಂಟ್‌ನಲ್ಲಿ ಕರ್ನಾಟಕದಲ್ಲಿ 6 ವರ್ಷಗಳಿಂದ ಬರಗಾಲ ಇದೆ, ಎರಡು ವರ್ಷಗಳಿಂದ ಬರಗಾಲ ಭೀಕರವಾಗಿದೆ, ಸಾಲ ಮನ್ನಾ ಮಾಡಿ ಎಂದು ಒಂದು ಬಾರಿಯಾದರೂ ಪಾರ್ಲಿಮೆಂಟ್‌ನಲ್ಲಿ ಹೇಳಲಿ. ಅದನ್ನು ಹೇಳಲಿಕ್ಕೆ ಏನು ಕಷ್ಟ ಇದೆ? ಇವತ್ತಿನವರೆಗೂ ಹೇಳಿದ್ದೀರಾ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಈಗ ಇವರದ್ದು ಹೇಗೆ ಆಗಿದೆ ಎಂದರೆ ಉತ್ತರನ ಪೌರುಷ, ಅದು ಆಗುವುದು ಬೇಡ.

(ಗೊಂದಲ)

**ಸಭಾಪತಿಯವರು:-** ಒಂದು ನಿಮಿಷ ಕುಳಿತುಕೊಳ್ಳಿ. ಈಗ ಬರಪರಿಹಾರದ ಬಗ್ಗೆ ಚರ್ಚೆ. 6 ವರ್ಷಗಳಿಂದ ಗಂಭೀರವಾದ ಬರಗಾಲ ನಮ್ಮ ರಾಜ್ಯದಲ್ಲಿ ಇದೆ. ಈ ವಿಷಯದ ಮೇಲೆ ಚರ್ಚೆ ಮಾಡಬೇಕು. ಈ ನಿಟ್ಟಿನಲ್ಲಿ ನಮಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ ಎಂದು ವಿರೋಧ ಪಕ್ಷದ ನಾಯಕರು ಸೇರಿದಂತೆ ಗೌರವಾನ್ವಿತ ಸದಸ್ಯರುಗಳು ಸಹಿ ಮಾಡಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಐವನ್ ಡಿ'ಸೋಜಾ ರವರು ಮಾತನಾಡುತ್ತಾ, ಈಗ ಜನರು ಗದ್ದೆಯಲ್ಲಿದ್ದಾರೆ. ಈಗ ಶ್ರೀಯುತ ಯಡಿಯೂರಪ್ಪನವರು ಬರದ ವೀಕ್ಷಣೆಗೆ ಹೋಗುತ್ತಿದ್ದಾರೆಂದು ಹೇಳಿದರು. ಮೊನ್ನೆ ನೀರಾವರಿ ಮಂತ್ರಿಗಳು ಮಳೆಗಾಗಿ ಏತಕ್ಕೆ ಪೂಜೆ ಮಾಡಿದಿರಿ? ಅದಕ್ಕೆ ನಾನು ಏನು ಹೇಳಲಿಕ್ಕೆ ಹೊರಟಿದ್ದೇನೆಂದರೆ. . .

(ಗೊಂದಲ)

**ಶ್ರೀ ಐವನ್ ಡಿ'ಸೋಜಾ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ,

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾನು ಮಾತನಾಡುವಾಗ ಮಧ್ಯೆ ಮಧ್ಯೆ ಎದ್ದು ನಿಂತು ಈ ರೀತಿ ಮಾತನಾಡಿದರೆ ಸರಿ ಹೋಗುವುದಿಲ್ಲ. ಈಗ ನಾನು ಹೇಳುವುದಿಷ್ಟೆ.

**ಸಭಾಪತಿಯವರು:-** ಶ್ರೀಯುತ ಡಿ'ಸೋಜಾ ರವರೆ ಕುಳಿತುಕೊಳ್ಳಿ. ಈಗ ಸರ್ಕಾರದಿಂದ ನಿಲುವಳಿ ಸೂಚನೆಯ ಮುಖಾಂತರ ಇದರ ಚರ್ಚೆಯನ್ನು ಏತಕ್ಕೆ ತೆಗೆದುಕೊಳ್ಳಬೇಕೆಂದು ಅವರು ಕೇಳಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಎರಡೇ ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಭೀಕರ ಬರಗಾಲದ ಬಗ್ಗೆ ಗೊತ್ತಿದೆ. ಗೊತ್ತಿಲ್ಲವೆಂದು ನಾನು ಹೇಳಲಿಲ್ಲ. ಗೊತ್ತಿರುವಂತಹ ಸಂದರ್ಭದಲ್ಲಿ ಸರ್ಕಾರ ಎಲ್ಲೆಲ್ಲಿ ವಿಫಲವಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ಇಡೀ ಕರ್ನಾಟಕ ಜನ ನೀರಿಗೋಸ್ಕರ ಒದ್ದಾಡುತ್ತಿದ್ದಾರೆ. ಅದಕ್ಕೆ ನೀವು ಏನು ಹೇಳುತ್ತೀರಿ ಎಂದರೆ ಕುಡಿಯುವ ನೀರಿಗೋಸ್ಕರ ದುಡ್ಡಿನ ಸಮಸ್ಯೆ ಇಲ್ಲ. ಎಷ್ಟು ಬೇಕಾದರೂ ದುಡ್ಡನ್ನು ಕೊಡುತ್ತೇವೆಂದು ಹೇಳುತ್ತೀರಿ. ನಿಮ್ಮ ಹತ್ತಿರ ನೇರವಾಗಿ ಶಿವಮೊಗ್ಗ ಕಾರ್ಪೋರೇಷನ್‌ನವರು, ಜಿಲ್ಲಾ ಪಂಚಾಯಿತಿಯವರು ಬಂದಿದ್ದಾರೆ. ಅವರ ಜೊತೆಗೆ ಕುಡಿಯುವ ನೀರಿಗಾಗಿ ದುಡ್ಡನ್ನು ಇಡೀ ರಾಜ್ಯಕ್ಕೆ ಬಿಡುಗಡೆ ಮಾಡಿ.

**ಶ್ರೀ ಸಿದ್ದರಾಮಯ್ಯ:-** ಅವರು ಶಾಶ್ವತ ಕುಡಿಯುವ ನೀರಿಗೋಸ್ಕರ ಬಂದಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಇಲ್ಲ, ಇಲ್ಲ. ಜಿಲ್ಲಾ ಪಂಚಾಯತ್ ಸದಸ್ಯರುಗಳು ಜಿಲ್ಲಾ ಪರಿಷತ್ತಿನಲ್ಲಿ ಚರ್ಚೆ ಮಾಡುವಾಗ ನಾನು ಕೂಡ ಆ ಒಂದು ಸಭೆಯಲ್ಲಿ ಇದ್ದೆ. ಯಾವುದೋ ಕಾರಣಕ್ಕೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಬರಲಿಕ್ಕೆ ಆಗಲಿಲ್ಲ. ನಾವು ಗೆದ್ದು ಇಷ್ಟು ದಿವಸ ಆಗಿದೆ, ಹಳ್ಳಿಗಳಿಗೆ ಹೋದರೆ ನೀರು ಕುಡಿಯಲಿಕ್ಕೆ ಆಗುತ್ತಿಲ್ಲ. Tanker ಗಳಿಗೂ ಕೂಡ ನೀರನ್ನು ಕೊಡಲಿಕ್ಕೆ ಆಗುತ್ತಿಲ್ಲ. Tanker ಗಳಿಗಾದರೂ ನೀರು ಕೊಡಿಸಿ ಎನ್ನುವ ಮಾತನ್ನು ಹೇಳಿದರು. ಕೊನೆಗೆ ಮುಖ್ಯಮಂತ್ರಿಗಳು, ರಾಜ್ಯದ ಧಣಿಗಳ ಹತ್ತಿರ ನಾವು ಹೋದರೆ ಒಂದಿಷ್ಟು ಲಾಭ ಸಿಗಬಹುದು, ನೀರು ಸಿಗಬಹುದು ಎನ್ನುವ ವಿಶ್ವಾಸದಲ್ಲಿ ಅವರು ನಿಮ್ಮ ಹತ್ತಿರ ಬಂದಿದ್ದಾರೆ. ಇಡೀ ಕರ್ನಾಟಕ ರಾಜ್ಯದಲ್ಲಿ ನೀರಿನ ಸಮಸ್ಯೆ ಇದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, . . .

**ಶ್ರೀ ಕೆ.ಎಸ್.ಈಶ್ವರಪ್ಪ:-** ತಾವು ಕುಳಿತುಕೊಳ್ಳಿ. ಎರಡನೆಯದಾಗಿ, ನಾನು ಕೇಳುವುದೇನೆಂದರೆ, ಅನೇಕ ಕಡೆ ಏನು ಸಮಸ್ಯೆಗಳಾಗಿವೆ ಅವುಗಳನ್ನು ತಿಳಿದುಕೊಳ್ಳಲು ಅಧಿಕಾರಿಗಳು ಹೋಗುತ್ತಿಲ್ಲ. ಏಕೆಂದರೆ, ಅಧಿಕಾರಿಗಳಿಗೆ ಭಯ ಇಲ್ಲ. ದಯವಿಟ್ಟು ಅಧಿಕಾರಿಗಳಿಗೆ ಕ್ಷೇತ್ರಗಳಿಗೆ ಹೋಗುವಂತೆ ಹೇಳಿ. ಕ್ಷೇತ್ರಗಳಿಗೆ ಅಧಿಕಾರಿಗಳು ಹೋದರೆ ಅಲ್ಲಿನ ಸಮಸ್ಯೆ ಏನು ಎಂದು ಗೊತ್ತಾಗುತ್ತದೆ.

**ಶ್ರೀ ಆರ್.ಪ್ರಸನ್ನ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕುಡಿಯುವ ನೀರಿಗೋಸ್ಕರ 28 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದನ್ನು ನಾವು ನೋಡಿದ್ದೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೆ.ಎಸ್.ಈಶ್ವರಪ್ಪ:-** ಈ ನಿಟ್ಟಿನಲ್ಲಿ ಈಗಾಗಲೇ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಉತ್ತರವನ್ನು ಕೊಟ್ಟಿದ್ದು ನಾನು ಕೇಳಿದ್ದೇನೆ. ಕೇಂದ್ರದಿಂದ ಬಂದಿರುವಂತಹ ದುಡ್ಡಿನಲ್ಲಿ 1400 ಚಿಲ್ಲರೆ ಕೋಟಿ ರೂಪಾಯಿಗಳಷ್ಟು ರೈತರಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇನ್ನು 200-250 ಕೋಟಿ ರೂಪಾಯಿಗಳನ್ನು ನಮ್ಮ ಹತ್ತಿರ ಇಟ್ಟುಕೊಂಡು ಕುಳಿತಿದ್ದೇವೆಂದು ಕೂಡ ಹೇಳಿದ್ದಾರೆ. ಕೇಂದ್ರದಿಂದ ಬಂದಂತಹ ದುಡ್ಡನ್ನಾದರೂ ಕೊಡುವಂತಹ ಕೆಲಸವನ್ನು ತಕ್ಷಣ ಮಾಡಬೇಕು.

**ಶ್ರೀ ಸಿದ್ದರಾಮಯ್ಯ :-** ಇನ್ನು ಹಿಂಗಾರದ್ದು ಬಂದಿಲ್ಲ. ಅದನ್ನು ಕೊಡಿಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಹಿಂಗಾರಿನ ಪರಿಹಾರವಷ್ಟೇ ಅಲ್ಲ, ಮುಂಗಾರಿನ ಪರಿಹಾರವನ್ನೂ ಕೂಡ ಕೊಡಿಸುತ್ತೇವೆಂದು ಇಬ್ಬರು ಒಟ್ಟಿಗೆ ಅಲ್ಲಿಗೆ ಹೋಗೋಣ ಬನ್ನಿ.

**ಶ್ರೀ ಸಿದ್ದರಾಮಯ್ಯ:-** ಹಿಂಗಾರಿನ ಪರಿಹಾರವನ್ನು ಕೊಡಿಸಿಲ್ಲ. ಅದನ್ನು ಮೊದಲು ಕೊಡಿಸಿ. 3,310 ಕೋಟಿ ರೂಪಾಯಿಗಳ ಪರಿಹಾರವನ್ನು ಕೇಳಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಧ್ಯಪ್ರದೇಶದ ರೀತಿಯಲ್ಲಿ ಮಾಡುತ್ತೇವೆಂದು ಹೇಳುವುದಿಲ್ಲ. ಮಾತು ಎತ್ತಿದ ತಕ್ಷಣ ಕೇಂದ್ರ ಸರ್ಕಾರ ಎಂದು ಹೇಳುತ್ತೀರಿ. ಏಕೆ, ರಾಜ್ಯ ಸರ್ಕಾರ ಬದುಕಿಲ್ಲವೇ?

**ಶ್ರೀ ಸಿದ್ದರಾಮಯ್ಯ:-** ನಾನು ನಮ್ಮ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೂ ತೆರಿಗೆಯನ್ನು ಕೊಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಎಲ್ಲರೂ ತೆರಿಗೆಯನ್ನು ಕೇಂದ್ರಕ್ಕೆ ಕೊಡುತ್ತಾರೆ. ಉತ್ತರ ಪ್ರದೇಶದವರು ಕೊಡುತ್ತಾರೆ, ಮಹಾರಾಷ್ಟ್ರದವರು ಕೊಡುತ್ತಾರೆ, ಮಧ್ಯಪ್ರದೇಶದವರು ಕೊಡುತ್ತಾರೆ. ನೀವು ಒಬ್ಬರೇ ಕೊಟ್ಟಿದ್ದಲ್ಲ. ಕೇಂದ್ರ ಸರ್ಕಾರ ಹಿಂದೆ ಯಾರೂ ಕೊಡದಷ್ಟು ಬರ ಪರಿಹಾರವನ್ನು ಕೊಟ್ಟಿದೆ. ಹಿಂದೆ ಯಾವ ಕೇಂದ್ರ ಸರ್ಕಾರವೂ ಸಹ ಇಷ್ಟೊಂದು ಪರಿಹಾರವನ್ನು ಕೊಟ್ಟಿರಲಿಲ್ಲ. 1688 ಕೋಟಿ ರೂಪಾಯಿಗಳನ್ನು ಕೊಟ್ಟಿದೆ.

**ಶ್ರೀ ಸಿದ್ದರಾಮಯ್ಯ:-** ಕೆಲವು ಜಿಲ್ಲೆಗಳಲ್ಲಿ ಪ್ರವಾಹ ಬಂದಾಗ, ಈ ಹಿಂದೆ ಶ್ರೀಮಾನ್ ಮನಮೋಹನ್ ಸಿಂಗ್‌ರವರು ಬಂದು 1500 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿ ಹೋದರು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಬರಿ ಘೋಷಣೆ ಮಾಡಿ ಹೋದರು. ಬಂದ ಹಣವೆಷ್ಟು ಕೇಳಿ.

**ಶ್ರೀ ಸಿದ್ದರಾಮಯ್ಯ:-** 1500 ಕೋಟಿ ರೂಪಾಯಿಗಳನ್ನು ಅವರು ಕೊಟ್ಟರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಇಂತಹ ಸಂದರ್ಭದಲ್ಲಿ ಅಂಕಿ-ಅಂಶಗಳನ್ನು ತಮ್ಮ ಮುಂದೆ ಇಡುತ್ತೇನೆ. ಬರ ಪರಿಹಾರದ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟಿರುವಂತಹ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ದಯವಿಟ್ಟು ಈ ವಿಷಯವಾಗಿ ಚರ್ಚೆಗೆ ನೀವು ಇರಬೇಕು. ಅದಕ್ಕೆ ಉತ್ತರವನ್ನು ಸಹ ಕೊಡಬೇಕು. ಆಗ ಏನಾಗುತ್ತದೆ ಎಂದರೆ

**Sri SIDDARAMAIAH:-** Our Senior-most Minister Sri Kagodu Thimmappa will reply to this. ಇದಕ್ಕೆ ಉತ್ತರವನ್ನು ಅವರೇ ಕೊಡುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಶ್ರೀಯುತ ಕಾಗೋಡು ತಿಮ್ಮಪ್ಪನವರು ಬರಗಾಲದ ವಿಚಾರದಲ್ಲಿ ಮಾತನಾಡುವಾಗ ಸಭಾಧ್ಯಕ್ಷರ ಸ್ಥಾನದಲ್ಲಿ ಕುಳಿತಿದ್ದರೆ ಈ ಸರ್ಕಾರವನ್ನು ತೊಳೆದು ಬಿಡುತ್ತಾರೆಂದು ಅವರನ್ನು ನೀವು ಮಂತ್ರಿ ಮಾಡಿದಿರಿ. ನಿಮ್ಮನ್ನು ಅವರು ಬಿಡುತ್ತಿರಲಿಲ್ಲ. ಅವರು ತೊಳೆದು ಬಿಡುತ್ತಿದ್ದರು. ಅದು ನನಗೆ ಗೊತ್ತು.

(ಗೊಂದಲ)

ನಾನು ನಿಮಗಿಂತ ಜಾಸ್ತಿ ಶ್ರೀ ಕಾಗೋಡು ತಿಮ್ಮಪ್ಪನವರನ್ನು ಅರ್ಥ ಮಾಡಿಕೊಂಡಿದ್ದೇನೆ. ನೀವು ಬಹಳ ಬುದ್ಧಿವಂತಿಕೆಯನ್ನು ಮಾಡಿ ಅವರನ್ನು ಮಂತ್ರಿ ಮಾಡಿದ್ದೀರಿ. ಶ್ರೀ ರಮೇಶ್ ಕುಮಾರ್ ರವರನ್ನೂ ಕೂಡ ಮಂತ್ರಿ ಮಾಡಿದ್ದೀರಿ. ಇದನ್ನು ಕೇಳಿದ್ದಕ್ಕೆ ನನ್ನನ್ನು ಬಯ್ಯುತ್ತೀರಾ, ಯಾವ ರೀತಿ ಬಯ್ಯುತ್ತೀರಿ ನೋಡೋಣ? ಶ್ರೀ ಕಾಗೋಡು ತಿಮ್ಮಪ್ಪನವರೆ, ನೀವು ಸಭಾಧ್ಯಕ್ಷರ ಸ್ಥಾನದಲ್ಲಿ ಕುಳಿತಿದ್ದಾಗ ಸರ್ಕಾರವನ್ನು ಮಾಡುತ್ತಿದ್ದೀರಿ. ಈಗ ಟೀಕೆ ಮಾಡುತ್ತೀರಾ?

**ಶ್ರೀ ಸಿದ್ದರಾಮಯ್ಯ:-** It is my prerogative. ಯಾರನ್ನು ಮಂತ್ರಿ ಮಾಡಬೇಕು, ಯಾರನ್ನು ತೆಗೆಯಬೇಕು, ಯಾರನ್ನು ಸೇರಿಸಿಕೊಳ್ಳಬೇಕು ಎನ್ನುವುದು ನನ್ನ ವಿಚಾರ. ಅದನ್ನು ಹೇಳುವುದಕ್ಕೆ ಈಶ್ವರಪ್ಪನವರಿಗೆ ಏನು ಅಧಿಕಾರ ಇದೆ? Sri Kagodu Thimmappa is a senior leader; Sri Ramesh Kumar is a senior leader.

**ಶ್ರೀ ಕೆ.ಎಸ್.ಈಶ್ವರಪ್ಪ:** ನಾನು ಇಲ್ಲವೆಂದು ಹೇಳಲಿಲ್ಲ.

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಆದುದರಿಂದ ನಾವು ಅವರನ್ನು ಸಚಿವ ಸಂಪುಟದಲ್ಲಿ ಮಂತ್ರಿಯಾಗಿ induct ಮಾಡಿದ್ದೇವೆ. ಅದರಲ್ಲಿ ವಿಶೇಷ ಏನಿದೆ? ಮೊಸರಿನಲ್ಲಿ ಏತಕ್ಕೆ ಕಲ್ಲನ್ನು ಹುಡಕಲಿಕ್ಕೆ ಹೋಗುತ್ತೀರಿ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಶ್ರೀ ಕಾಗೋಡು ತಿಮ್ಮಪ್ಪನವರು ಮತ್ತು ಶ್ರೀ ರಮೇಶ್‌ಕುಮಾರ್‌ರವರು ಸಭಾಧ್ಯಕ್ಷರ ಸ್ಥಾನದಲ್ಲಿದ್ದಾಗ ಸರ್ಕಾರವನ್ನು ಟೀಕೆ ಮಾಡುತ್ತಾರೆ, ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತಾರೆಂದು ಹೇಳಿ ಅವರುಗಳನ್ನು ಮಂತ್ರಿ ಮಾಡಿದರೆ ನೀವು ನಮ್ಮ ಸುದ್ದಿಗೆ ಬರುವಂತಿಲ್ಲವೆಂದು ಮಂತ್ರಿ ಮಾಡಿ, ಅವರ ಬಾಯಿಗೆ ಒಂದು ರೀತಿಯಲ್ಲಿ ಬೀಗ ಹಾಕಿ ಬಿಟ್ಟಿದ್ದೀರಿ. ದೇವರು ಮೆಚ್ಚುತ್ತಾನೆಯೇ, ಪ್ರಾಮಾಣಿಕವಾಗಿ ಹೇಳಿ ನೋಡೋಣ.

**ಸಭಾಪತಿಯವರು:-** ಈಗ ಆ ಚರ್ಚೆ ಬೇಡ.

**ಶ್ರೀ ಸಿದ್ದರಾಮಯ್ಯ:-** ಈಗ ನೀವು ಚುನಾವಣೆಯಲ್ಲಿ ಸೋತಿದ್ದೀರಿ. ನಿಮಗೆ MLC ಏತಕ್ಕೆ ಮಾಡಿದರು. ವಿರೋಧ ಪಕ್ಷದ ನಾಯಕರು ಎಂದು ಏತಕ್ಕೆ ಮಾಡಿದ್ದಾರೆ?

**ಶ್ರೀ ಕೆ.ಎಸ್.ಈಶ್ವರಪ್ಪ:-** ನಮ್ಮ ಪಕ್ಷದ ವತಿಯಿಂದ ತೀರ್ಮಾನ ಮಾಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ನೀವು ಭಿನ್ನಮತ ಮಾಡುತ್ತೀರೆಂದು ಮಾಡಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಡಾ:ಜಿ.ಪರಮೇಶ್ವರ ಅವರನ್ನು ಮಂತ್ರಿ ಸ್ಥಾನದಿಂದ ಕಿತ್ತು ಹಾಕಿದ್ದೀರಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, he is our Party President.

**(ಮುಂದು)**

(605) 08.06.2017 SPR-GR 11.20

**(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಸಭಾಪತಿಯವರು:-** ಈಗ ರಾಜ್ಯದ ಬರ ಪರಿಸ್ಥಿತಿಯ ಬಗ್ಗೆ ಚರ್ಚೆಯನ್ನು ಮಾಡೋಣ ಹೊರತು ಬೇರೆ ವಿಷಯಗಳ ಪ್ರಸ್ತಾಪ ಬೇಡ. ಆದ್ದರಿಂದ ದಯಮಾಡಿ ಸದಸ್ಯರುಗಳು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಈಗ ಸರ್ಕಾರದ ಪರವಾಗಿ... ನಿಲುವಳಿ ಸೂಚನೆಯ ಪ್ರಕಾರವಾಗಿ ಮಾತನಾಡೋಣವೆಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಯವರನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ನಾನು ರಾಜ್ಯದ ರೈತರುಗಳ ಬಗ್ಗೆ ಮಾತನಾಡುತ್ತಿದ್ದೇನೆ, ನೀವು ಮಧ್ಯದಲ್ಲಿ ಮಾತನಾಡಬೇಡಿ ಹಾಗೂ ನಿಮ್ಮಲ್ಲಿ ಶಕ್ತಿ ಇದ್ದರೆ ನಿಮ್ಮ ಶಾಸಕರನ್ನು ನಿಯಂತ್ರಿಸಿ. ನಾನು ಹೇಳುವುದೇನೆಂದರೆ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಕಳೆದ ಆರು ವರ್ಷಗಳ ಅವಧಿಯಲ್ಲಿ ಇಷ್ಟೊಂದು ಭೀಕರ ಬರಗಾಲದ ಪರಿಸ್ಥಿತಿ ಬಂದಿರಲಿಲ್ಲ. ಈಗ ಕುಡಿಯುವ ನೀರಿಗೂ ಸಹ ಹಾಹಾಕಾರದ ಪರಿಸ್ಥಿತಿಯುಂಟಾಗಿದೆ. ಸರ್ಕಾರದ ಬೊಕ್ಕಸದಲ್ಲಿ ಹಣವಿದೆ ಹೀಗಾಗಿ ಕುಡಿಯುವ ನೀರಿನ ಯೋಜನೆಗಳಿಗೆ ಎಷ್ಟು ಬೇಕಾದರೂ ಹಣವನ್ನು ಕೇಳಿ, ನಾವು ಅದನ್ನು ಬಿಡುಗಡೆ ಮಾಡುತ್ತೇನೆಂದು ಹೇಳುತ್ತಿದ್ದೀರಿ, ಹೀಗಾಗಿ ಕುಡಿಯುವ ನೀರಿನ ಯೋಜನೆಗಳಿಗೆ ಹಣವನ್ನು ಬಿಡುಗಡೆ ಮಾಡಿ. ಇದು ಮೊದಲನೆಯ ವಿಚಾರ. ಇನ್ನು ಎರಡನೆಯ ವಿಚಾರವೇನೆಂದರೆ ಎಲ್ಲಾ ಕ್ಷೇತ್ರಗಳಿಗೂ ಅಧಿಕಾರಿಗಳು ಹೋಗಬೇಕು, ಆಯಾ ಜಿಲ್ಲೆಯ ಉಸ್ತುವಾರಿ ಮಂತ್ರಿಗಳೂ ಸಹ ಹೋಗಬೇಕು . . .

**ಸಭಾಪತಿಯವರು:–** ಈಗ ಬರಗಾಲದ ವಿಷಯದ ಬಗ್ಗೆ ಚರ್ಚೆಯಾಗಬೇಕಲ್ಲವೇ? ಸದರಿ ವಿಷಯವನ್ನು ಯಾವ ರೀತಿಯಾಗಿ ಚರ್ಚಿಸಬೇಕು?

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸರ್ಕಾರದವರು ಸಾಲ ಮನ್ನಾ ಮಾಡಿದರೆ ರಾಜ್ಯದ ರೈತರು ಬದುಕುಳಿಯುತ್ತಾರೆ ಏಕೆಂದರೆ ಅವರು ನಿರ್ಗತಿಕರಾಗಿದ್ದಾರೆ. ದೇಶದ ಉತ್ತರಪ್ರದೇಶ, ಮಹಾರಾಷ್ಟ್ರ ರಾಜ್ಯಗಳಲ್ಲಿ ರೈತರ ಸಾಲ ಮನ್ನಾ ಮಾಡಿದ್ದಾರೆ. ಮಧ್ಯಪ್ರದೇಶ ರಾಜ್ಯದಲ್ಲಿ ಈ ಬಗ್ಗೆ ಗಲಾಟೆಗಳಾಗಿವೆ. ಇದೇ ವಿಚಾರವಾಗಿ ರಾಜ್ಯದಲ್ಲಿ ಗಲಾಟೆಯಾಗಬಾರದು. ಆದಕಾರಣ ಸರ್ಕಾರ ರೈತರ ಸಾಲ ಮನ್ನಾ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಸದಸ್ಯರನ್ನು ನಿಯಂತ್ರಿಸುವ ಶಕ್ತಿ ಇಲ್ಲವೇ? ಸದಸ್ಯರು ತಮಗೆ ಬೇಕಾದ ಹಾಗೆ ಮಾತನಾಡುತ್ತಿದ್ದಾರೆ.

**ಸಭಾಪತಿಯವರು:–** ಬರಗಾಲದ ವಿಷಯವನ್ನು ಚರ್ಚೆ ಮಾಡುವುದಕ್ಕಾಗಿಯೇ ನಿಯಮ 59 ರಡಿ ವಿರೋಧ ಪಕ್ಷದ ನಾಯಕರು ಸಮೇತ ಹಲವಾರು ಸದಸ್ಯರುಗಳು ಸಹಿ ಮಾಡಿ ನಿಲುವಳಿ ಸೂಚನೆಯ ಪ್ರಕಾರ ಚರ್ಚೆಗೆ ಅವಕಾಶವನ್ನು ಕೇಳಿದ್ದಾರೆ. ಈಗ ಸರ್ಕಾರದ ಪರವಾಗಿ ತಾವು ಇದಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮ್ಮತಿಯನ್ನು ಸೂಚಿಸಿದರೆ, ನಾನು ಕಾರ್ಯಕಲಾಪಗಳನ್ನು ಮುಂದುವರೆಸುತ್ತೇನೆ. ಬೇಡ ಎನ್ನುವುದಾದರೆ ಬೇರೆ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ತಾವು ದಯಮಾಡಿ ತಮ್ಮ ಅಭಿಪ್ರಾಯವನ್ನು ಹೇಳಿ.

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ಬರಗಾಲ ಕುರಿತಾದ ಚರ್ಚೆ ಬಹಳ ಪ್ರಮುಖವಾದ ವಿಷಯವಾಗಿದೆ, ಇಲ್ಲವೆಂದು ನಾವು ಹೇಳುತ್ತಿಲ್ಲ. ಆದರೆ ಇದು Adjournment Motion ವ್ಯಾಪ್ತಿಗೆ ಬರುವುದಿಲ್ಲ. ಬೇರೆ ನಿಯಮಾವಳಿಗಳ ರೂಪದಲ್ಲಿ ಚರ್ಚೆಯನ್ನು ಮಾಡೋಣ.

**ಸಭಾಪತಿಯವರು:–** ಬೇರೆ ರೂಪವೆಂದರೆ ನಮ್ಮ ನಿಯಮಾವಳಿಗಳ ಪ್ರಕಾರ ನಿಯಮ 68 ರನ್ವಯ ಚರ್ಚೆಗೆ ಅವಕಾಶವಿದೆ. ಅದನ್ನು ಪರಿವರ್ತನೆಗೊಳಿಸಲು ಸರ್ಕಾರವು ಇಚ್ಛೆ ವ್ಯಕ್ತಪಡಿಸಿದರೆ ಮಾತ್ರವೇ ನಾನು ಮಾಡುತ್ತೇನೆ.

**ಡಾ॥ ಜಿ.ಪರಮೇಶ್ವರ(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಬರಗಾಲ ಬಹಳ ಗಂಭೀರವಾದಂತಹ ವಿಚಾರವಾಗಿದೆ. ಇತ್ತೀಚಿನ ದಿನಗಳಲ್ಲಿ ಅಂದರೆ ಕಳೆದ ಆರು ವರ್ಷಗಳಲ್ಲಿ ನಾವು ಸತತವಾಗಿ ಬರಗಾಲವನ್ನು ಎದುರಿಸುತ್ತಿದ್ದೇವೆ. ಅದರಲ್ಲಿಯೂ ಕಳೆದ ಎರಡು ವರ್ಷಗಳ ಪರಿಸ್ಥಿತಿಯನ್ನು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಅಂತಹ ಭೀಕರ ಬರಗಾಲದ ಪರಿಸ್ಥಿತಿಯು ನಾಡಿನ ಜನರನ್ನು ಬಹಳ ದೊಡ್ಡ ಆತಂಕಕ್ಕೆ ಸಿಲುಕಿಸಿದೆ. ಕಳೆದೆರೆಡು ವರ್ಷಗಳಿಂದಲೂ ಕೂಡ ಸರ್ಕಾರವು ಇಂತಹ ಪರಿಸ್ಥಿತಿಯನ್ನು ಬಹಳ ಸಮರ್ಥವಾಗಿ ನಿಭಾಯಿಸುವಂತಹ ಕೆಲಸಗಳನ್ನು ಮಾಡಿದೆ. ಇದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರ ಸಹಕಾರವೂ ಅವಶ್ಯಕವಾಗಿ ಬೇಕಾಗಿದೆ. ಕೇಂದ್ರ ಸರ್ಕಾರದ ಸಹಕಾರ ನಿಮ್ಮ ಮೂಲಕ ನಮಗೆ ಬಹಳ ಹೆಚ್ಚಿನ ರೀತಿಯಲ್ಲಿ ಆಗಬೇಕಾಗಿದೆ. ಆದರೆ ಈ ರೀತಿಯಾಗಿ ಆಗಲಿಲ್ಲ. ಆದ್ದರಿಂದ ಚರ್ಚೆಯ ಅವಶ್ಯಕತೆ ಇದೆ. ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳ ಬಗ್ಗೆ ಚರ್ಚೆಯನ್ನು ಮಾಡಬೇಕು. ಹೀಗಾಗಿ ಬರಗಾಲದ ಚರ್ಚೆಯನ್ನು ನಿಯಮ 68 ರನ್ವಯ ತೆಗೆದುಕೊಳ್ಳಬಹುದಾಗಿದೆ.

**ಸಭಾಪತಿಯವರು:–** ಸರ್ಕಾರದ ಇಚ್ಛೆಯಂತೆ ನಿಯಮ 68ರಡಿ ಚರ್ಚೆಯನ್ನು ತೆಗೆದುಕೊಳ್ಳುವುದಾದರೆ ನನ್ನ ಮುಂದಿರುವ ನಿಲುವಳಿ ಸೂಚನೆಯನ್ನು ನಿಯಮ 59ರ ಬದಲು ನಿಯಮ 68 ರಡಿ ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಅದನ್ನು ಮಧ್ಯಾಹ್ನದ ಭೋಜನದ ನಂತರ ತೆಗೆದುಕೊಳ್ಳೋಣ. ಏಕೆಂದರೆ ಈಗ ಪ್ರಶ್ನೋತ್ತರ ಅವಧಿ ಇದೆ ಹಾಗೂ ನಿನ್ನೆಯ ದಿವಸ ಉಳಿದಂತಹ ಬೇರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕು. ಹೀಗಾಗಿ ಈಗ ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭಿಸೋಣ. ಮೊದಲನೇ ಪ್ರಶ್ನೆ ಶ್ರೀ ಚೌಡರೆಡ್ಡಿ ತೂಪಲ್ಲಿ ರವರು ಕೇಳಲಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಿನ್ನೆಯ ದಿವಸ ನಾನು ನಿಮ್ಮಲ್ಲಿ ವಿನಂತಿ ಮಾಡಿದಂತೆ ಗಮನ ಸೆಳೆಯುವ ಸೂಚನೆ ...

**ಸಭಾಪತಿಯವರು:-** ನಾನು ನಿಮಗೆ ನನ್ನ ಕೊಠಡಿಗೆ ಬನ್ನಿ, ಮಾತನಾಡೋಣವೆಂದು ಹೇಳಿದ್ದೆ. ನೀವು ಬರುತ್ತೀರೆಂದು ನಾನು ಅಂದುಕೊಂಡಿದ್ದೆ. ಆದರೆ ತಾವು ಬರಲಿಲ್ಲ. ನಿಮಗಾಗಿ ನಾನು ನನ್ನ ಕೊಠಡಿಯಲ್ಲಿ ಕಾಯುತ್ತಿದ್ದೆ. ನಾನು ಸದನವನ್ನು ಮುಂದೂಡಿದ ತಕ್ಷಣವೇ ನಿಮ್ಮನ್ನು ಬರುವಂತೆ ಹೇಳಿ ಕಳುಹಿಸಿದ್ದೆ. ಆದರೆ ನೀವು ಇಲ್ಲಿರಲಿಲ್ಲ. ನಂತರ ನನ್ನ ಕೊಠಡಿಗೆ ಬನ್ನಿ ಮಾತನಾಡೋಣ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಆಯಿತು ನಾನು ತಮ್ಮ ಕೊಠಡಿಗೆ ಬರುತ್ತೇನೆ. ಆದರೆ ಸದರಿ ವಿಷಯ ಸಾರ್ವಜನಿಕ ಮಹತ್ವವುಳ್ಳ ವಿಷಯವಾಗಿದೆ.

**ಸಭಾಪತಿಯವರು:-** ಅದರ ತಾಪತ್ರಯಗಳ ಬಗ್ಗೆ ಸಾರ್ವಜನಿಕವಾಗಿ ಚರ್ಚೆ ಮಾಡುವುದು ಬೇಡ. ನನ್ನ ಕೊಠಡಿಗೆ ಬನ್ನಿ. ಅಲ್ಲಿ ಮಾತನಾಡೋಣ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರು ನಾನು ಸಲ್ಲಿಸಿರುವ ಮನವಿಯನ್ನು ಇವತ್ತಿನ ಕಾರ್ಯಕಲಾಪದಲ್ಲಿ ಕೂಡ ಅಳವಡಿಸಿಲ್ಲ.

**ಸಭಾಪತಿಯವರು:-** ಮೊದಲು ಶ್ರೀ ಚೌಡರೆಡ್ಡಿ ತೂಪಲ್ಲಿ ರವರು ಪ್ರಶ್ನೆಯಲ್ಲಿ ಕೇಳಲಿ.

## 2. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2443**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಅದರಲ್ಲಿ ಕ್ರಮ ಸಂಖ್ಯೆ (ಅ) ರನ್ವಯ ಕೇಳಿರುವ ಪ್ರಶ್ನೆ ಏನೆಂದರೆ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 20 ಅಥವಾ ಹೆಚ್ಚಿನ ಅಪಾರ್ಟ್‌ಮೆಂಟ್‌ನ್ನು (ಗುಂಪು ಮನೆಗಳು) ಹೊಂದಿರುವವರಿಗೆ ಕೊಳಚೆ ನೀರು ಸಂಸ್ಕರಣಾ ಘಟಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಸ್.ಟಿ.ಪಿ. ನಿರ್ಮಿಸಬೇಕೆಂದು ಆದೇಶ ಮಾಡಿರುವುದು ನಿಜವೇ? ಇದಕ್ಕೆ ಮಾನ್ಯ ಸಚಿವರು ಹೌದು ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. ಕ್ರಮ ಸಂಖ್ಯೆ (ಇ) ರನ್ವಯ ಕೇಳಿರುವ ಪ್ರಶ್ನೆಯೆಂದರೆ, ದಿನಾಂಕ 25/02/2016 ಕ್ಕೆ ಮೊದಲು ಕಟ್ಟಡವನ್ನು ಕಟ್ಟುವಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗಳು ಪರವಾನಿಗೆಯನ್ನು ನೀಡುವಾಗ ಮಾಲೀಕರಿಗೆ ಕೊಳಚೆ ನೀರು ಸಂಸ್ಕರಣಾ ಘಟಕ ಸ್ಥಾಪಿಸುವುದು ಕಡ್ಡಾಯ ಎಂದು ಅಧಿಕೃತವಾಗಿ ತಿಳಿಸಲಾಗಿತ್ತೇ ಎನ್ನುವುದಕ್ಕೆ ಇಲ್ಲ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ದಿನಾಂಕ 25/02/2016ಕ್ಕೆ ಮೊದಲೇ ನಿರ್ಮಿಸಿರುವ ಕಟ್ಟಡಗಳಿಗೆ ಯಾವುದೇ ನಿಬಂಧನೆಗಳಿಲ್ಲವೆಂದು ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಆದರೆ ಇವತ್ತಿನ ದಿವಸ ನಿಗದಿತ ದಿನಾಂಕಕ್ಕಿಂತ ಮುಂಚಿತವಾಗಿ ನಿರ್ಮಿಸಿರುವ ಎಲ್ಲಾ ವಸತಿ ಸಮುಚ್ಚಯಗಳಲ್ಲಿಯೂ ಕೂಡ ಕೊಳಚೆ ನೀರು ಸಂಸ್ಕರಣಾ ಘಟಕವನ್ನು ಕಡ್ಡಾಯವಾಗಿ ನಿರ್ಮಿಸಲು ಹೇಳುತ್ತಿದ್ದೀರಿ. ಆದರೆ ಹಳೆಯ ಕಟ್ಟಡಗಳಲ್ಲಿ ಎಸ್.ಟಿ.ಪಿ. ಮಾಡಲು ಜಾಗವಿಲ್ಲ. ಅಧಿಕಾರಿಗಳು ಪ್ರತಿನಿತ್ಯ ನಿವಾಸಿಗಳಿಗೆ ಈ ಸಂಬಂಧ ತೊಂದರೆಯನ್ನು ಕೊಡುತ್ತಿದ್ದಾರೆ; ಅವರುಗಳು ನೆಮ್ಮದಿಯಿಂದ ನಿದ್ದೆಯನ್ನು ಮಾಡಲಿಕ್ಕೆ ಅವಕಾಶ ನೀಡುತ್ತಿಲ್ಲ. ಎಸ್.ಟಿ.ಪಿ. ಅಳವಡಿಸದೇ ಇರುವವರಿಂದ ಈಗಾಗಲೇ ದಂಡವನ್ನು ವಸೂಲಿ ಮಾಡುತ್ತಿದ್ದಾರೆ. ಸರ್ಕಾರವು ನೀಡಿರುವ ಉತ್ತರದಲ್ಲಿ ಈಗಾಗಲೇ ನಿರ್ಮಿಸಿರುವ ಕಟ್ಟಡಗಳಿಗೆ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಅಳವಡಿಸಿಕೊಳ್ಳಲು ದಿನಾಂಕ 31/12/2017ರ ವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ ನೈಜವಾಗಿ ಪ್ರತಿನಿತ್ಯ ನಿವಾಸಿಗಳಿಗೆ ದಂಡವನ್ನು ವಿಧಿಸುತ್ತಿದ್ದಾರೆ, ಅವರುಗಳು ನಿದ್ದೆಯನ್ನು ಮಾಡುವುದಕ್ಕೆ ಬಿಡುತ್ತಿಲ್ಲ. ವಸತಿ ಸಮುಚ್ಚಯಗಳನ್ನು ನಿರ್ಮಿಸುವ ಮೊದಲು ಬಿ.ಡಬ್ಲ್ಯೂ.ಎಸ್.ಎಸ್.ಬಿ., ಕಾರ್ಪೋರೇಷನ್‌ಗಳಿಂದ ನಕ್ಷೆಯನ್ನು ಅನುಮೋದಿಸಿಕೊಂಡು ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಅಲ್ಲಿನ ನಿವಾಸಿಗಳಿಗೆ Occupation Certificateಗಳನ್ನು ಈಗಾಗಲೇ ನೀಡಲಾಗಿದ್ದು ನಿವಾಸಿಗಳು ಅಲ್ಲಿನ ಕಟ್ಟಡಗಳಲ್ಲಿ ವಾಸ ಮಾಡುತ್ತಿದ್ದಾರೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಹಳೆಯ ಕಟ್ಟಡಗಳಿಗೂ ಎಸ್.ಟಿ.ಪಿ.ಯನ್ನು ಕಡ್ಡಾಯವಾಗಿ ನಿರ್ಮಿಸಬೇಕು ಇಲ್ಲವೆಂದಾದಲ್ಲಿ ದಂಡವನ್ನು ಪಾವತಿಸುವಂತೆ ಪ್ರತಿನಿತ್ಯ ಅಧಿಕಾರಿಗಳು ನಿವಾಸಿಗಳಿಗೆ ತೊಂದರೆಯನ್ನು ಕೊಡುತ್ತಿದ್ದಾರೆ. ಅಧಿಕಾರಿಗಳ ಈ ವರ್ತನೆಯಿಂದ ಬೆಂಗಳೂರು ನಗರದ ನಾಗರೀಕರಿಗೆ ಬಹಳ ತೊಂದರೆಯಾಗಿದೆ. ಈ ತೊಂದರೆಗಳನ್ನು ನಿವಾರಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, 2002 ನೇ ಸಾಲಿನಲ್ಲಿ ಹೊರಡಿಸಿದ ಆದೇಶದ ಪ್ರಕಾರ 50 ಮನೆಗಳಿಗಿಂತ ಹೆಚ್ಚಿಗೆ ಇರುವ ವಸತಿ ಸಮುಚ್ಚಯಗಳಿಗೆ, 2,000 ಚದರಡಿ ಹೊಂದಿರುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಾಣಿಜ್ಯ ಸ್ಥಳಗಳು, 10,000 ಚದರಡಿ ಹೊಂದಿರುವ ಶಿಕ್ಷಣ ಸಂಸ್ಥೆಗಳು ಎಸ್.ಟಿ.ಪಿ.ಗಳನ್ನು ಅಳವಡಿಸಬೇಕು. ತಮಗೆ ಗೊತ್ತಿರುವ ಹಾಗೆ ನಮ್ಮ ಬೆಂಗಳೂರು ನಗರವು ಬೃಹದಾಕಾರದಲ್ಲಿ ಬೆಳೆಯುತ್ತಿದೆ. ಯಾರು ವಾಸಕ್ಕೆ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅವರುಗಳು ಯು.ಜಿ.ಡಿ. ಪದ್ಧತಿಯನ್ನು ಉಪಯೋಗಿಸಿಕೊಂಡಿದ್ದಾರೆ. ಇದಲ್ಲದೇ 20x30 ಅಡಿ, 30x40 ಅಡಿ ಅಳತೆಯ ನಿವೇಶನಗಳಲ್ಲಿ ಸಣ್ಣ-ಸಣ್ಣ ಮನೆಗಳನ್ನು ನಿರ್ಮಿಸಿರುವಂತಹ ಬಡಾವಣೆಗಳು ಇದೇ ಪದ್ಧತಿಯನ್ನು ಉಪಯೋಗಿಸುತ್ತಿದ್ದಾರೆ. ವಸತಿ ಸಮುಚ್ಚಯಕ್ಕೆ N.G.T (National Green Tribunal) ರವರು ಇತ್ತೀಚೆಗೆ ಒಂದು ಆದೇಶವನ್ನು ಮಾಡಿದ್ದಾರೆ. ಏಕೆಂದರೆ ನಮ್ಮಲ್ಲಿ ಕೇವಲ ಕನೆಕ್ಟಿಂಗ್ ಕೆರೆಗಳಿವೆ. ಈಗ ಏನಾಗಿದೆ ಎಂದರೆ ಭೂಗರ್ಭದ ಒಳಚರಂಡಿಯ ಪ್ರಕಾರ ನಿರ್ಮಿಸಲಾಗಿರುವ storm water drain ಗಳನ್ನೆಲ್ಲಾ ಒಡೆದು ಹಾಕಿರುವುದರಿಂದ ಅದು ಇವತ್ತಿನ ದಿವಸ sewage pipe ಆಗಿದೆ. ಇದನ್ನೆಲ್ಲಾ ನಿಯಂತ್ರಣ ಮಾಡಬೇಕಾದರೆ ಸರ್ಕಾರ ಕೆಲವೊಂದು ಕ್ರಮಗಳನ್ನು ಕೈಗೊಂಡಿದೆ. ಸರ್ಕಾರವು ತೆಗೆದುಕೊಂಡಿರುವ ತೀರ್ಮಾನವೇನೆಂದರೆ 20 ಅಥವಾ ಅದಕ್ಕೂ ಹೆಚ್ಚಿನ ವಸತಿ ಸಮುಚ್ಚಯವನ್ನು ನಿರ್ಮಿಸಿದವರು ಎಸ್.ಟಿ.ಪಿ.ಯನ್ನು ಅಳವಡಿಸಿಕೊಳ್ಳಬೇಕು. 20 ಕ್ಕಿಂತ ಹೆಚ್ಚಿನ ಹಳೆಯ ವಸತಿ ಸಮುಚ್ಚಯಕ್ಕೆ ಎಸ್.ಟಿ.ಪಿ. ಅಳವಡಿಕೆಯನ್ನು ಕಡ್ಡಾಯ ಮಾಡಿಲ್ಲ. ಆದರೆ 50 ಕ್ಕಿಂತ ಹೆಚ್ಚಿನ ಹಳೆಯ ವಸತಿ ಸಮುಚ್ಚಯಕ್ಕೆ ಎಸ್.ಟಿ.ಪಿ. ಅಳವಡಿಕೆಯನ್ನು ಕಡ್ಡಾಯವಾಗಿ ಮಾಡಿದೆ. ಆದರೆ, ಈ ಹಿಂದಿನ 20 ಕ್ಕಿಂತ ಹೆಚ್ಚಿನ ಹಳೆಯ ವಸತಿ ಸಮುಚ್ಚಯಕ್ಕೆ ಎಸ್.ಟಿ.ಪಿ. ಕಡ್ಡಾಯ ಅಳವಡಿಕೆಯ ಆದೇಶವನ್ನು ಹಿಂಪಡೆಯಲಾಗಿದೆ. ಆದರೆ ಹೊಸದಾಗಿ ನಿರ್ಮಿಸಿರುವ 20ಕ್ಕಿಂತ ಹೆಚ್ಚಿನ ವಸತಿ ಸಮುಚ್ಚಯಕ್ಕೆ ಅಥವಾ 2000 ಚದರಡಿ ವಾಣಿಜ್ಯ ಕಟ್ಟಡಗಳಿಗೆ, 5000 ಚದರಡಿ ಶಿಕ್ಷಣ ಸಂಸ್ಥೆಗಳಿಗೆ ಎಸ್.ಟಿ.ಪಿ.ಯನ್ನು ಅಳವಡಿಸಲು ಆದೇಶಿಸಿದೆ. ಎಸ್.ಟಿ.ಪಿ. ತಂತ್ರಜ್ಞಾನವು ಮೊದಲು ಇದ್ದ ಹಾಗೆ ಈಗ ಇಲ್ಲ STP technology ತುಂಬಾ ಬದಲಾಗಿದೆ. ಈಗ ಸುಮಾರು 20 ಫ್ಲಾಟ್‌ಗಳಿವೆ ಎಂದು ಹೇಳಿದರೆ ಸುಮಾರು 10-12 ಲಕ್ಷ ರೂಪಾಯಿಗಳಲ್ಲಿ ನಿರ್ಮಿಸಬಹುದಾದ ಎಸ್.ಟಿ.ಪಿ. ಕಾಂಪಾಕ್ಟ್ ಕಂಟೈನರ್ ಬಂದಿದೆ. ಎಲ್ಲರೂ ಸೆಟ್‌ಬ್ಯಾಕ್‌ಗಳನ್ನು ಬಿಟ್ಟಿದ್ದಾರೆ. ಅದರ ಅಂಡರ್ ಗ್ರೌಂಡ್‌ಗಳಲ್ಲಿ ಮಾಡಿಕೊಳ್ಳಬಹುದು. ಇದರಿಂದ ಅವರಿಗೆ ಆಗುವ ಪ್ರಯೋಜನವೇನೆಂದರೆ ಅವರ ಹುಲ್ಲುಹಾಸು, ಸ್ನಾನಗೃಹ ಅಥವಾ ವಾಹನಗಳನ್ನು ತೊಳೆಯುವುದಕ್ಕೆ ಸಂಸ್ಕರಿಸಿದ ನೀರನ್ನು ಬಳಸಿಕೊಳ್ಳಬಹುದು. ವಿಶ್ವದಲ್ಲಿ ನೀರನ್ನು ಉಳಿಸಿ ಎಂಬ ಆಂದೋಲನ ನಡೆಯುತ್ತಿದೆ. ಅದಕ್ಕೋಸ್ಕರವಾಗಿ ನಾವು ಈ ಯೋಜನೆಯನ್ನು ಮಾಡುತ್ತಿದ್ದೇವೆ. ಈ ಯೋಜನೆಯಿಂದಾಗಿ ಸಾರ್ವಜನಿಕರಿಗೆ ಹಾಗೂ ಇಡೀ ಬೆಂಗಳೂರು ನಗರಕ್ಕೆ ಒಳ್ಳೆಯದಾಗುತ್ತದೆ. ಏಕೆಂದರೆ ಒಂದು ಬಾರಿಗೆ ನೀರನ್ನು ಸಂಸ್ಕರಿಸಿ storm water drainಗೆ ಬಿಟ್ಟರೆ ನಮ್ಮ ಕೆರೆಗಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲುಷಿತಗೊಳ್ಳುವುದು ಸ್ವಲ್ಪ ಮಟ್ಟಿಗೆ ನಿಯಂತ್ರಣಗೊಳ್ಳುತ್ತದೆ. ನಮ್ಮ ಯೋಜನೆಯನ್ವಯ ಎಸ್.ಟಿ.ಪಿ.ಗಳನ್ನು ಸರಿಯಾಗಿ ಅಳವಡಿಸಿದ್ದಲ್ಲಿ ಅವರಿಗೆ ಪ್ರಯೋಜನವಾಗುತ್ತದೆ ಎನ್ನುವ ಉದ್ದೇಶದಿಂದ ಮಾಡಿದ್ದೇವೆ ಹೊರತು ನಿವಾಸಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದಲ್ಲ. ಡಿಸೆಂಬರ್ 2017 ರ ವರೆಗೆ ಎಸ್.ಟಿ.ಪಿ.ಗಳನ್ನು ಅಳವಡಿಸಿಕೊಳ್ಳಲು ಕಾಲಾವಕಾಶವನ್ನು ಕೊಟ್ಟಿದ್ದೇವೆ. ಹೀಗಾಗಿ ಅಲ್ಲಿಯವರೆಗೆ ಯಾವುದೇ ದಂಡವನ್ನು ವಸೂಲು ಮಾಡುವುದಿಲ್ಲ. ಒಂದು ವೇಳೆ ಯಾರಾದರೂ ದಂಡ ವಸೂಲಿ ಮಾಡುತ್ತಿದ್ದರೆ ಅದನ್ನು ಕೂಡಲೇ ನಿಲ್ಲಿಸುವಂತೆ ಆದೇಶ ಮಾಡುತ್ತೇವೆ. 2017ರ ನಂತರವೂ ಯಾರು ಎಸ್.ಟಿ.ಪಿ.ಗಳನ್ನು ಅಳವಡಿಸುವುದಿಲ್ಲವೋ ಅಂತಹವರಿಗೆ ದಂಡವನ್ನು ವಿಧಿಸಲಾಗುವುದು.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೆ, ಸರ್ಕಾರವು 2017ರವರೆಗೆ ಎಸ್.ಟಿ.ಪಿ.ಗಳನ್ನು ಅಳವಡಿಸಲು ಕಾಲಾವಕಾಶ ನೀಡುವುದಾಗಿ ಹೇಳುತ್ತಿದೆ. ಆದರೆ ಪ್ರಸ್ತುತ ಮನೆಗಳ ಹತ್ತಿರ ಹೋಗಿ ನಿವಾಸಿಗಳಿಗೆ ಕಿರುಕುಳವನ್ನು ಕೊಟ್ಟು ದಂಡವನ್ನು ವಸೂಲಿ ಮಾಡಿರುವುದಕ್ಕಾಗಿಯೇ ಈ ಪ್ರಶ್ನೆಯ ಉದ್ಭವವಾಗಿದೆ. ಸರ್ಕಾರವು ಉತ್ತರದಲ್ಲಿ ಒಂದು ರೀತಿಯಾಗಿ ಹೇಳಿದರೆ, ವಾಸ್ತವವಾಗಿ ನಿವಾಸಿಗಳಿಂದ ದಂಡ ವಸೂಲು ಮಾಡಿದ್ದಾರೆ. ದಿನಾಂಕ 25/02/2016 ಕ್ಕಿಂತ ಮುಂಚಿತವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ಎಸ್.ಟಿ.ಪಿ. ಅಳವಡಿಕೆಯು ಕಾನೂನಿನಲ್ಲಿರಲಿಲ್ಲ ಎಂಬ ಅಂಶವನ್ನೂ ಸಹ ಸರ್ಕಾರವೇ ಹೇಳುತ್ತದೆ. ಎಸ್.ಟಿ.ಪಿ. ಅಳವಡಿಕೆಯ ಅಂಶವು ಕಾನೂನಿನಲ್ಲಿ ಇಲ್ಲದೇ ಇರುವುದರಿಂದ; ಬೆಂಗಳೂರು ನಗರವನ್ನು ಸ್ವಚ್ಛ ನಗರವನ್ನಾಗಿ ಮಾಡಬೇಕು ಎನ್ನುವ ತಮ್ಮ ಕಾಳಜಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈಗ ಹೊಸದಾಗಿ ನಿರ್ಮಾಣ ಮಾಡುವ ಕಟ್ಟಡಗಳಿಗೆ ಎಸ್.ಟಿ.ಪಿ. ಅಳವಡಿಕೆಯನ್ನು ಕಡ್ಡಾಯವಾಗಿ ಮಾಡಿ ಇದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಹಳೆಯ ವಸತಿ ಸಮುಚ್ಚಯಗಳನ್ನು ಯಾರೋ ನಿರ್ಮಿಸಿ ಮಾರಾಟ ಮಾಡಿರುತ್ತಾರೆ ಹಾಗೂ ಅವುಗಳನ್ನು ಇನ್ನಾರೋ ಖರೀದಿಸಿರುತ್ತಾರೆ. ಅಂತಹ ಮನೆಗಳಲ್ಲಿ ಈಗ ಎಸ್.ಟಿ.ಪಿ. ಅಳವಡಿಸಲು ಸ್ಥಳಾವಕಾಶವಿಲ್ಲ. ಅಂತಹ ಮನೆಗಳಿಗೆ ಅಧಿಕಾರಿಗಳು ಹೋಗಿ ತೊಂದರೆಯನ್ನು ಕೊಡುತ್ತಿದ್ದಾರೆ ಹಾಗೂ ಈಗಾಗಲೇ ದಂಡವನ್ನು ವಸೂಲಿ ಮಾಡಿದ್ದಾರೆ. ಎಸ್.ಟಿ.ಪಿ.ಗಳನ್ನು ಅಳವಡಿಸಲು ಸ್ಥಳವಿಲ್ಲ, ಸ್ಥಳವಿದ್ದರೆ ಮಾಡಬಹುದಾಗಿತ್ತು.

(ಮುಂದು)

**(606) 08.06.2017 MSS-GR 11.30**

ಶ್ರೀ ಚೌಡರೆಡ್ಡಿ ತೂಪಲ್ಲಿ(ಮುಂದು):–

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕೆ ಏನಾದರು ಒಂದು ಸಮಿತಿಯನ್ನು ಯಾವ ಅಪಾರ್ಟ್‌ಗಳಲ್ಲಿ ಎಸ್‌ಟಿಪಿ ಯನ್ನು ಕಟ್ಟುವುದಕ್ಕೆ ಅವಕಾಶ ಇದೆ ಅಲ್ಲಿ ಕಟ್ಟುವಂತಹ ಕೆಲಸವನ್ನು ಮಾಡಲಿ. ಇಲ್ಲಿರುವಂತಹ ಜನರು ನೆಮ್ಮದಿಯಿಂದ ಇರುವುದಕ್ಕೆ ಅವಕಾಶ ಮಾಡಿಕೊಡಿ. ತಾವು ಮಾಹಿತಿಯನ್ನು ಕೊಟ್ಟಿದ್ದೀರಿ. ಆದರೆ ಅಲ್ಲಿ ಆ ರೀತಿಯಾಗಿ ನಡೆಯುತ್ತಿಲ್ಲ. ಕಾನೂನು ಪ್ರಕಾರ ಅಪಾರ್ಟ್‌ಮೆಂಟ್‌ನವರು ಒಳಚರಂಡಿ ಮಂಡಳಿಯವರಿಗೆ ಹಣವನ್ನು ಕೂಡ ಕಟ್ಟಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಹೇಳಿದ್ದನ್ನು ಗಮನಿಸಿ ಹುಷಾರ್ ಆಗಿ ಮಾಡಿ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, ಡಿಸೆಂಬರ್ 2017ನೇ ಇಸವಿಯವರಿಗೂ ಅಪಾರ್ಟ್‌ಮೆಂಟ್‌ಗಳಲ್ಲಿ ಎಸ್‌ಟಿಪಿ ಯನ್ನು ಅಳವಡಿಸುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇವೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೆ, ಇದೊಂದು ಸೂಕ್ಷ್ಮವಾದಂತಹ ವಿಚಾರವಾಗಿದೆ. ಈಗಾಗಲೇ ಪ್ರೋರೆಟಾ ಚಾರ್ಜ್ ಹಾಕಿ ಈಗಾಗಲೇ ದಂಡವನ್ನು ಕೂಡ ವಿಧಿಸಿ ಸಕ್ರಮಗೊಳಿಸಿದ್ದಾರೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಯಾರೋ ಅಪಾರ್ಟ್‌ಮೆಂಟ್ ಅನ್ನು ಕಟ್ಟಿ ಜನರಿಗೆ ಮಾರಾಟ ಮಾಡಿ ಹೊರಟು ಹೋಗುತ್ತಾರೆ. ಅಲ್ಲಿ ವಾಸ ಮಾಡುವಂತಹ ಜನರಿಗೆ ಇಷ್ಟಿಷ್ಟು ಎಂದು ಹಣ ಎಂದು ತೆಗೆದುಕೊಂಡಿದ್ದಾರೆ. ಕೆಲವು ಸಂದರ್ಭದಲ್ಲಿ ಏನಾಗಿದೆ ಎಂದರೆ, ಸಕ್ರಮಗೊಳಿಸಬೇಕಾದರೆ ಪ್ರೋರೆಟಾ ಚಾರ್ಜ್ ಹಾಕಿ ಮಾಡಿದ್ದಾರೆ. ಮಾನ್ಯ ಸಚಿವರು ಒಂದು ಮಾತನ್ನು ಏನು ಹೇಳಿದರು ಎಂದರೆ, ಇವತ್ತಿನ ದಿವಸ ಅಪಾರ್ಟ್‌ಮೆಂಟ್‌ನ ನೀರನ್ನು ಶುದ್ಧಿಕರಣ ಮಾಡಿ ಅದನ್ನು ಪುನರ್ ಬಳಕೆ ಮಾಡತಕ್ಕಂಥದ್ದು ಒಳ್ಳೆಯ ಕೆಲಸವೆ. ಆದರೆ ಸುಮಾರು ವರ್ಷಗಳಿಂದ ನೆನೆಗುದಿಗೆ ಇದ್ದಂತಹ, ಎಸ್‌ಟಿಪಿ ಇಲ್ಲದೇ ಇರತಕ್ಕಂತಹ ಸಂದರ್ಭದಲ್ಲಿ ಅದನ್ನು ಮಾಡುವುದಕ್ಕೆ ಜಾಗ ಇರುವುದಿಲ್ಲ. ಆ ರೀತಿಯಾಗಿ ಇಲ್ಲವೆಂದು ಸರ್ಕಾರ್‌ರು ದಂಡವನ್ನು ತೆಗೆದುಕೊಂಡಿದೆ. ಹೊಟ್ಟೆಗೆ ಇಲ್ಲದ ಶಾನುಭೋಗ ಹಳೆಯ ಪತ್ರವನ್ನು ಹುಡುಕಿದ ಹಾಗೆ. ನಾನು ಕೂಡ ಮಂತ್ರಿಯಾಗಿ ಈ ಖಾತೆಯನ್ನು ನಿರ್ವಹಣೆ ಮಾಡಿದ್ದೇನೆ. ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಯಾರ್‍ಯಾರು ಪ್ರೋರೆಟಾ ಚಾರ್ಜ್ ತೆಗೆದುಕೊಂಡು ರೆಗ್ಯೂಲರೈಸ್ ಮಾಡಲಾಗಿದೆ ಅಂಥದ್ದನ್ನು ಹೊರತುಪಡಿಸಿ, ಹೊಸದಾಗಿ ಅಪಾರ್ಟ್‌ಮೆಂಟ್ ಮಾಡುವವರಿಗೆ ಎಸ್‌ಟಿಪಿ ಮಾಡುವುದಕ್ಕೆ ಅವಕಾಶ ಇದೆ. ಅಂತಹವರು ಮಾಡುವುದಕ್ಕೆ ಇದು ಸರಿಯಾದ ಕ್ರಮವಾಗುತ್ತದೆ. ಇಲ್ಲ ಎಂದರೆ ತೊಂದರೆ ಸೃಷ್ಟಿಯಾಗುತ್ತದೆ. ಶ್ರೀ ಕೆ.ಜೆ.ಜಾರ್ಜ್‌ರವರು ಅನುಭವ ಇರತಕ್ಕಂಥವರು, ಅಧಿಕಾರಿಗಳು ಇದನ್ನು ಮಾಡಿ ಒಂದು ರೀತಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊಂದಲವನ್ನು ಉಂಟು ಮಾಡುತ್ತಿದ್ದಾರೆ. ದಯಮಾಡಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನ ಕೊಡಬೇಕೆಂದು ತಮ್ಮ ಮುಖಾಂತರ ಹೇಳುತ್ತಿದ್ದೇನೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೆ, ಈ ರೀತಿಯ ಅವೈಜ್ಞಾನಿಕ ಆದೇಶದಿಂದ ಈಗಾಗಲೇ ದಂಡವನ್ನು ವಿಧಿಸಿರುವಂತಹ ಹಣವನ್ನು ವಾಪಸ್ಸು ಕೊಡುವುದಕ್ಕೆ ಸರ್ಕಾರ ಕ್ರಮವನ್ನು ಕೈಗೊಳ್ಳುವುದೇ? ಎಂದು ಕೇಳಿದ್ದೇನೆ. ಈಗಾಗಲೇ ದಂಡವನ್ನು ವಸೂಲಿ ಮಾಡಿದ್ದಾರೆ. ಆ ದಂಡವನ್ನು ವಾಪಸ್ಸು ಕೊಡುವುದಿಲ್ಲವೆಂದು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, 2017ನೇ ಇಸವಿಯ ಡಿಸೆಂಬರ್ ಅಂತ್ಯದ ವರೆಗೆ ಎಸ್‌ಟಿಪಿ ಯನ್ನು ಅಳವಡಿಸುವುದಕ್ಕೆ ಕಾಲಮಿತಿಯನ್ನು ಕೊಟ್ಟಿದ್ದೇವೆ. ನಾನು ಸಚಿವನಾಗಿ ಹೇಳುವುದೇನೆಂದರೆ ಅಲ್ಲಿಯವರೆಗೂ ಯಾವುದೇ ರೀತಿಯಲ್ಲಿ ದಂಡವನ್ನು ವಸೂಲಿ ಮಾಡಬೇಡಿ ಎಂದು ಹಾಗೂ ಒಂದು ವೇಳೆ ಈಗಾಗಲೇ ದಂಡವನ್ನು ವಸೂಲಿ ಮಾಡಿದ್ದರೆ ಮುಂದಿನ ಬಿಲ್‌ಗೆ ಅಡ್ಜೆಸ್ಟ್ ಮಾಡಿ ಎಂದು ಆದೇಶ ಮಾಡುತ್ತೇನೆ. ಎರಡನೆಯದಾಗಿ ಈಗ ಟೆಕ್ನಾಲಜಿ ಬದಲಾವಣೆಯಾಗಿದೆ. ಅಪಾರ್ಟ್‌ಮೆಂಟ್‌ನಲ್ಲಿ 20 ಫ್ಲಾಟ್‌ಗಳಿದ್ದವರು ಕೂಡ ಸಣ್ಣ ಎಸ್‌ಟಿಪಿ ಯನ್ನು ಹಾಕಬಹುದು. ಅದನ್ನು ಹಾಕಿದರೆ ಅನುಕೂಲವಾಗುತ್ತದೆ. ಅದಕ್ಕೆ ಹೆಚ್ಚು ಹಣ ಕೂಡ ಖರ್ಚಾಗುವುದಿಲ್ಲ. ಈಗ ಎಸ್‌ಟಿಪಿ ಹಾಕಿದಂಥವರಿಗೆ sewage water ಮೇಲೆ cess ಏನಿದೆ ಅದನ್ನು ವಾಪಸ್ಸು ತೆಗೆದುಕೊಳ್ಳುವಂತಹ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

## <u>ಪ್ರಶ್ನೆ ಸಂಖ್ಯೆ: 2369</u>

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೆ, ಬೆಂಗಳೂರು ನಗರದಲ್ಲಿ ಸುರಂಗ ರಸ್ತೆ ನಿರ್ಮಾಣಕ್ಕೆ ಸರ್ಕಾರ ಉದ್ದೇಶಿಸಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದಕ್ಕೆ ಮಾನ್ಯ ಸಚಿವರು ಇಲ್ಲವೆಂದು ಹೇಳಿದ್ದಾರೆ. ಆದರೆ ಪ್ರತಿಕಾ ಗೋಷ್ಠಿಯಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವರು ಮತ್ತು ಮೇಯರ್‌ರವರು ಬೆಂಗಳೂರು ನಗರದಲ್ಲಿ ಸುರಂಗ ರಸ್ತೆಯನ್ನು ಮಾಡಲು ಒಂದು ಕಿಲೋ ಮೀಟರ್‌ಗೆ 500 ಕೋಟಿ ರೂಪಾಯಿಗಳಾಗುತ್ತದೆ ಎಂಬ ಅಂಕಿ ಅಂಶಗಳನ್ನೆಲ್ಲಾ ಕೊಟ್ಟಿದ್ದಾರೆ. ಸ್ಟೀಲ್ ಸೇತುವೆಯನ್ನು ಸುಮಾರು 1800 ಕೋಟಿ ರೂಪಾಯಿಗಳಲ್ಲಿ ಮಾಡಬೇಕಾಗಿದ್ದನ್ನು ಅದು ಸರಿಯೋ ತಪ್ಪೋ ಅದನ್ನು ರದ್ದುಪಡಿಸಲಾಯಿತು. ಇವತ್ತು ಜನದಟ್ಟಣೆ ಮತ್ತು ವಾಹನ ದಟ್ಟಣೆ ಕಡಿಮೆಯಾಗಬೇಕು. ಒಂದು ವರ್ಷದಲ್ಲಿ ಸುರಂಗ ರಸ್ತೆಯಾಗುತ್ತದೆಂದು ಹೇಳಿದ್ದಾರೆ. ಅದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಏನು ಆ್ಯಕ್ಷನ್ ಪ್ಲಾನ್ ಮಾಡಲಾಗಿದೆ. ಈ ಸರ್ಕಾರದ ಮುಂದಿರುವಂತಹ ಯೋಜನೆಗಳೇನು ಎನ್ನುವುದರ ಬಗ್ಗೆ ಸರ್ಕಾರದ ಈ ಸದನಕ್ಕೆ ಬೆಳಕು ಚೆಲ್ಲಿದರೆ ಒಳ್ಳೆಯದು.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, ನಾವು ಸರ್ಕಾರದಿಂದ ಸ್ಟೀಲ್ ಸೇತುವೆಯನ್ನು ಬಸವೇಶ್ವರ ವೃತ್ತದಿಂದ ಹೆಬ್ಬಾಳದವರೆಗೆ ಒಳ್ಳೆಯ ಉದ್ದೇಶದಿಂದ ಮಾಡಬೇಕೆಂದು ಇದ್ದೆವು. ಅದು ಸುಮಾರು 1,900 ಕೋಟಿ ರೂಪಾಯಿಗಳಾಯಿತು. ಅದನ್ನು ಇನ್ನು ಹೆಚ್ಚು ಮುಂದುವರೆಸಬೇಕಾಗಿದ್ದರೆ 200-300 ಕೋಟಿ ರೂಪಾಯಿಗಳು ಹೆಚ್ಚು ಖರ್ಚಾಗುತ್ತಿತ್ತು. ಆದರೆ ಅದರ ಬಗ್ಗೆ ತಮಗೆ ಗೊತ್ತಿರುವಂತೆ ಬೇರೆ ಬೇರೆ ಕಾರಣಗಳಿಂದ ಮತ್ತು ಜನಗಳು ಮರಗಳು ಸಾಕಷ್ಟು ಹೋಗುತ್ತದೆಂದು ಹೇಳಿದ್ದರಿಂದ ಅದನ್ನು ರದ್ದು ಮಾಡುವಂಥದ್ದನ್ನು ಮಾಡಿದೆವು. ಮೊದಲು ಎರಡು ಕಂಪನಿಯವರು ಬಂದಿದ್ದರು. ಒಂದು ಹರಿ ಖೋಡೇರವರು ಈಗ ಇಲ್ಲ. ಅವರು ಒಂದು ಸೌತ್ ಕೋರಿಯಾದ ಕಂಪನಿಯವರನ್ನು ಕರೆದುಕೊಂಡು ಬಂದು ಮಾಡುತ್ತೇವೆಂದು ಹೇಳಿದರು. ನಂತರ ಈಗ ಬಲ್ಗೇರಿಯಾದ ಕಂಪನಿಯವರು ಬಂದು ನಮ್ಮ ಹತ್ತಿರ ವಿನಂತಿಯನ್ನು ಮಾಡಿದ್ದಾರೆ. ಅವರಿಗೆ ಒಂದು ಕಿಲೋ ಮೀಟರ್ ಸುರಂಗ ರಸ್ತೆಯನ್ನು ಮಾಡುವುದಕ್ಕೆ ಅಂದಾಜು ಎಷ್ಟು ಆಗುತ್ತದೆಂದು ಕೇಳಿದಾಗ, ಅವರು 4 ಲೈನ್ ಸುರಂಗ ಮಾರ್ಗ ಹಾಗೂ 2 ಲೈನ್ ತುರ್ತು ಸುರಂಗ ಮಾರ್ಗವನ್ನು ಮಾಡಬೇಕಾಗುತ್ತದೆ. ಇದೆಲ್ಲವನ್ನೂ ಮಾಡುವುದಕ್ಕೆ ಅಂದಾಜು ಒಂದು ಕಿಲೋ ಮೀಟರ್‌ಗೆ 500 ಕೋಟಿ ರೂಪಾಯಿಗಳಾಗಬಹುದೆಂದು ಹೇಳಿದ್ದಾರೆ. ಅದರ ಪ್ರಕಾರವಾಗಿ ನಾವು ಅವರಿಗೆ ಏನು ಹೇಳಿದ್ದೇವೆಂದರೆ, ನೀವು ಇನ್ನು ಹೆಚ್ಚು ಸ್ಟಡಿ ಮಾಡಿ ಹೆಚ್ಚು ವಿವರಗಳನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದೇವೆ. ಅವರು ಈ ವಾರ ಅಥವಾ ಮುಂದಿನ ವಾರದಲ್ಲಿ ಬರುವವರಿದ್ದಾರೆ. ಅವರು ಬಂದ ನಂತರ ನಾನು ವಿವರಗಳನ್ನು ಕೊಡಬಹುದು. ಬೇಕಾದರೆ ಇಲ್ಲಿ ಚರ್ಚೆ ಕೂಡ ಆಗಬಹುದು. ನನಗೇನು ಅನ್ನಿಸುತ್ತದೆಂದರೆ ಬೇರೆ ರಾಜ್ಯದಲ್ಲಿ ಮತ್ತು ಬೇರೆ ದೇಶದಲ್ಲಿ ಸಮುದ್ರದ ಕೆಳಗಡೆಯಲ್ಲಿ ಸುರಂಗ ಮಾಡುತ್ತಾರೆ. ಆದರೆ ನಮಗೆ ಏನಾಗಿದೆ ಎಂದರೆ ಈಗ ಇರುವಂತಹ ರಸ್ತೆಯನ್ನು ಅಗಲ ಮಾಡುವುದಕ್ಕೆ ತೊಂದರೆಯಾಗುತ್ತದೆ. ರಸ್ತೆ ಅಗಲ ಮಾಡಬೇಕಾದರೆ ಕೆಲವು ಮರಗಳನ್ನಾದರು ಕಡಿಯಬೇಕಾಗುತ್ತದೆ. ಮರ ಕಡಿಯಬಾರದೆಂದರೆ ಕಷ್ಟವಾಗುತ್ತದೆ. ನಮ್ಮ ರಾಜ್ಯದಲ್ಲಿ ಒಂದು ಕೋಟಿ ಇಪ್ಪತ್ತು ಲಕ್ಷ ಜನರಿದ್ದಾರೆ. 65 ಲಕ್ಷ ವಾಹನಗಳಿರುವುದರಿಂದ ವಾಹನ ದಟ್ಟಣೆ ಇದೆ. ಟ್ರಾಫಿಕ್ ಜಾಮ್ ಆದರೆ ಸರ್ಕಾರವನ್ನೇ ಹೊಣೆಯನ್ನಾಗಿ ಮಾಡಲಾಗುತ್ತದೆ. ಒಬ್ಬರದ್ದು ಒಂದೊಂದು ರೀತಿಯ ಅಭಿಪ್ರಾಯ ಇದೆ. ಪ್ರಜಾಪ್ರಭುತ್ವದಲ್ಲಿ ಒಂದು ಚುನಾಯಿತ ಸರ್ಕಾರ ಇದ್ದಮೇಲೆ ಆ ಸರ್ಕಾರಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುವಂತಹ ಅಧಿಕಾರ ಇರುತ್ತದೆ. ಎಲ್ಲಾ ರೀತಿಯಲ್ಲಿ ಚರ್ಚೆಯನ್ನು ಮಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಸುರಂಗ ರಸ್ತೆ ನಿರ್ಮಾಣ ಮಾಡುವುದರ ಬಗ್ಗೆ preliminary stage ನಲ್ಲಿದೆ. ಪೂರ್ಣ ವರದಿ ಬಂದಮೇಲೆ ಈ ವಿಚಾರದಲ್ಲಿ ಸ್ಪಂದಿಸಬಹುದು.

**ಪ್ರಶ್ನೆ ಸಂಖ್ಯೆ: 2338**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೆ, ಇದೊಂದು ಸೂಕ್ಷ್ಮವಾದಂತಹ ಒಂದು ದೊಡ್ಡ ಪೆಡಂಭೂತ. ರಾಜ್ಯದ ಯಾವ್ಯಾವ ಭಾಗಗಳಲ್ಲಿ ಸೈಬರ್ ಅಪರಾಧ ತನಿಖಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದು ಕೇಳಿರುವುದಕ್ಕೆ ಒಟ್ಟು 8 ಕಡೆಗಳಲ್ಲಿ ಸೈಬರ್ ಕೇಂದ್ರಗಳು ಕೆಲಸವನ್ನು ನಿರ್ವಹಿಸುತ್ತಿವೆ ಎಂದು ಗೃಹ ಸಚಿವರು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ. ತಾಂತ್ರಿಕವಾಗಿ ಇತ್ತೀಚಿನ ದಿನಗಳಲ್ಲಿ ಐಟಿ, ಬಿಟಿ, ಈ-ಮೇಲ್, ಫೇಸ್‌ಬುಕ್ ಇಂತಹವುಗಳು ಬಂದಮೇಲೆ ಸರ್ಕಾರ ಎಚ್ಚೆತ್ತುಕೊಂಡಿರುವಂತಹ ಕ್ರಮಗಳನ್ನು ಯಾವುದನ್ನಾದರು ತೆಗೆದುಕೊಂಡಿದೆಯೇ? ಕರ್ನಾಟಕ ರಾಜ್ಯದಲ್ಲಿ ಸುಮಾರು 600ಕ್ಕೂ ಮೇಲ್ಪಟ್ಟು ಪ್ರಕರಣಗಳು ಈಗಾಗಲೇ ವರದಿಯಾಗಿವೆ. ಇದನ್ನು ಯಾವ ಹಂತದಲ್ಲಿ ಯಾವ್ಯಾವ ಸೆಕ್ಷನ್ ಮೇಲೆ ಕೇಸ್‌ಗಳನ್ನು ಹಾಕಲಾಗುತ್ತದೆ? ಯಾವುದಾದರು ಒಂದು ಪ್ರಕರಣದಲ್ಲಿಯಾದರು ಇಲ್ಲಿಯವರೆಗೆ ಶಿಕ್ಷೆಯಾಗಿರುವಂತಹ ಉದಾಹರಣೆ ಇದೆಯೇ? ಇದಕ್ಕಿಂತಲೂ ಮಿಗಿಲಾಗಿ ಬೆಂಗಳೂರಿನ ಇನ್‌ಫೆಂಟ್ರಿ ರಸ್ತೆಯಲ್ಲಿರುವ ಪೊಲೀಸ್ ಆಯುಕ್ತರ ಕಛೇರಿ ಅವರಣದ ಪೊಲೀಸ್ ಠಾಣೆಯಲ್ಲಿಯೇ 10 ಕ್ಕಿಂತಲೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಇಂತಹ ಪ್ರಕರಣಗಳಲ್ಲಿ ಯಾವುದಾದರು ಒಂದು ಕ್ರಮವನ್ನು ತೆಗೆದುಕೊಂಡು ಸಾರ್ವಜನಿಕರ ವ್ಯವಸ್ಥೆಗೆ ಅನುಗುಣವಾಗಿ ನಡೆಯುವಂಥದ್ದು ಏನಾದರು ಆಗಿದೆಯೇ? ಅದಲ್ಲದೇ ಈ Bitcoin ದಂಧೆ ಏನಿದೆ, ಇದಕ್ಕೆ ಕಡಿವಾಣವನ್ನು ಹಾಕುವುದಕ್ಕೆ ಸರ್ಕಾರ ಯಾವುದಾದರು ಕ್ರಮವನ್ನು ತೆಗೆದುಕೊಂಡಿದೆಯೇ? ಒಂದು Bitcoin 57,000 ರೂಪಾಯಿಗಳಾಗುತ್ತದೆ. ಕಂಪನಿಗಳಲ್ಲಿ ಏನೊಂದು ಈ ದಂಧೆ ನಡೆಯುತ್ತಿದೆ ಇದಕ್ಕೆ ಕಡಿವಾಣ ಹಾಕಬೇಕು. ಎಲ್ಲದಕ್ಕಿಂತಲೂ ಮೀಗಿಲಾಗಿ ಸಾಕ್ಷ್ಯಾಧಾರದ ಕೊರತೆಯಿಂದ ಇವತ್ತಿನ ದಿವಸ ಬಂಧಿಸುತ್ತಾರೆ ಹಾಗೂ ನಾಳೆ ಬೆಳಿಗ್ಗೆ ಬಿಡುಗಡೆ ಮಾಡುತ್ತಾರೆ. ಹೊರಗಡೆ ಬಂದವರು ರಾಜಾರೋಷವಾಗಿ ಇನ್ನು ಹಚ್ಚಿನ ದಂಧೆಯನ್ನು ಮಾಡುವಂತಹ ಕೆಲಸವನ್ನು ಮಾಡುತ್ತಿರುವುದು ನಡೆಯುತ್ತಿದೆ. ಈ ಸೈಬರ್ ಕ್ರೈಂ ಇಡೀ ರಾಜ್ಯದಲ್ಲಿ ವ್ಯಾಪಿಸಿದೆ. ಇದೊಂದು ದೊಡ್ಡ ಕಾಯಿಲೆ. ಈ ಕಾಯಿಲೆ ಬಿಹಾರ ರಾಜ್ಯದಲ್ಲಿರಬಹುದು, ಜಾರ್ಖಂಡ್ ಇರಬಹುದು, ಹೊರ ರಾಜ್ಯದಲ್ಲಿರುವವರು ಅಲ್ಲಿ ಕುಳಿತುಕೊಂಡು ಅಲ್ಲಿಂದಲೇ ಈ ದಂಧೆಯನ್ನು ಬೆಂಗಳೂರಿನಲ್ಲಿ ಮಾಡುತ್ತಾರೆ. ಅವರನ್ನು ಬೆಂಗಳೂರಿಗೆ ತೆಗೆದುಕೊಂಡು ಬಂದು ಕಾನೂನು ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಹೊರರಾಜ್ಯದಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಳಿತುಕೊಂಡು ಮಾಡುವಂತಹ ಇಂತಹ ಪಾಪದ ಕೆಲಸಕ್ಕೆ ಈ ದಂಧೆಗೆ ಅವರನ್ನು ಹಿಡಿದುಕೊಂಡು ಒಂದು ಏನಾದರು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಗೃಹ ಸಚಿವರಿಗೆ ಸಾಧ್ಯವಾಗುತ್ತದೆಯೇ ಯಾರದೋ ದೇಹಕ್ಕೆ ಯಾರದೋ ತಲೆಯನ್ನು ಹಾಕಿ ಮತ್ತೊಬ್ಬರನ್ನು ಹೋಲಿಕೆ ಮಾಡುವುದು. ಇಂತಹ ಪಾಪದ ಕೆಲಸವನ್ನು ಮಾಡುವುದು. ಇಡೀ ರಾಜ್ಯದಲ್ಲಿ ಇದು ವ್ಯಾಪಿಸಿದೆ. ಈ ದಂಧೆಗೆ ಕಡಿವಾಣ ಹಾಕುವುದಕ್ಕೆ ಸರ್ಕಾರ ಏನಾದರು ಕ್ರಮವನ್ನು ತೆಗೆದುಕೊಂಡಿದೆಯೇ?

. . . ಮುಂದು

(607) 08.06.2017 11.40 SV-MD (ಸಭಾಪತಿಯವರ ಉಪಸ್ಥಿತಿ)

**ಶ್ರೀ ವಿ.ಸೋಮಣ್ಣ(ಮುಂದು):-**

ಸಿ.ಐ.ಡಿ ನಲ್ಲಿ ಇದಕ್ಕೊಂದು ಬ್ರ್ಯಾಂಚ್ ಮಾಡಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಇಲ್ಲಿಯವರೆವಿಗೂ ಯಾವುದಾದರೊಂದು ಕೇಸು ಮಾಡಿ ಇಂತಹ ಒಂದು ಅಪರಾಧದಲ್ಲಿ ಶಿಕ್ಷೆಗೆ ಒಳಪಡಿಸಿದ್ದೇವೆ ಎನ್ನುವಂತಹ ಒಂದು ಉದಾಹರಣೆಯನ್ನು ತಿಳಿಸಿ ಸಾರ್ವಜನಿಕರಿಗೆ ಇದರಿಂದ ಆಗತಕ್ಕಂತಹ ಆಘಾತವನ್ನು ತಪ್ಪಿಸುವುದಕ್ಕೆ ಸರ್ಕಾರದ ಕ್ರಮಗಳೇನು ಎಂಬುದನ್ನು ತಿಳಿಸಬೇಕೆಂದು ಮಾನ್ಯ ಗೃಹ ಸಚಿವರಲ್ಲಿ ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

**ಡಾ:ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, computerized crime or cyber crime ಎಂದು ಏನು ನಾವು ಹೇಳುತ್ತೇವೆ, ಇದು ಇತ್ತೀಚೆಗೆ ಎಂದರೆ ಕಳೆದ ಐದಾರು ವರ್ಷಗಳಿಂದ ಇಡೀ ವಿಶ್ವದಲ್ಲಿಯೇ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆದು ಬಿಟ್ಟಿದೆ. ಮಾನ್ಯ ಶ್ರೀ ಸೋಮಣ್ಣನವರು ಬಹಳ ಉತ್ತಮವಾದ ಪ್ರಶ್ನೆಯನ್ನು ಕೇಳಿರುತ್ತಾರೆ. ಏಕೆಂದರೆ ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಮತ್ತು ನಮ್ಮ ದೇಶದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಇದು ಪ್ರಾರಂಭವಾಗಿ ಬಿಟ್ಟಿದೆ. ರಾಜ್ಯದಲ್ಲಿ ನಾವು ಇದನ್ನು ಗಮನಿಸಿದ ಮೇಲೆ ಎಂಟು ಕಡೆಗಳಲ್ಲಿ cyber crime ಅನ್ನು ನಿರ್ವಹಿಸಲು cyber crime police stations ಪ್ರಾರಂಭ ಮಾಡಿರುತ್ತೇವೆ. ಸಿ.ಐ.ಡಿ. ಘಟಕದಲ್ಲಿ ಅದಕ್ಕಾಗಿ ಒಂದು ವಿಶೇಷ ಠಾಣೆಯನ್ನು ತೆರೆಯಲಾಗಿದೆ. ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಛೇರಿಯಲ್ಲಿ ಮಾಡಿದ್ದೇವೆ.

**ಶ್ರೀ ಕೆ.ಗೋವಿಂದರಾಜು:-** ಮಾನ್ಯ ಸಭಾಪತಿಯವರೆ, ಇದಕ್ಕೆಂದೇ ವಿಶೇಷ ನೇಮಕಾತಿಯನ್ನು ಮಾಡಬೇಕೆಂದು ಹಿಂದೊಮ್ಮೆ ನಾನು ಸದನದಲ್ಲಿ ಹೇಳಿದ್ದೆನು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ:ಜಿ.ಪರಮೇಶ್ವರ್:-** ಬೆಂಗಳೂರು central range ನಲ್ಲಿ ಎಂದರೆ ನಮ್ಮಲ್ಲಿರತಕ್ಕಂತಹ 8 range ಗಳಲ್ಲಿ ಒಂದೊಂದು range ಗೆ ಒಂದು cyber crime police station ಎಂದು ನಿರ್ದಿಷ್ಟವಾಗಿ ಮಾಡಿದ್ದೇವೆ. ಇದಲ್ಲದೆ ಪ್ರತಿ ಪೊಲೀಸ್ ಠಾಣೆಯಲ್ಲಿಯೂ ಇಂತಹ ಪ್ರಕರಣಗಳನ್ನು ತೆಗೆದುಕೊಂಡು ರಿಜಿಸ್ಟರ್ ಮಾಡಿ ಸೈಬರ್ ಠಾಣೆಗೆ ರೆಫರ್ ಮಾಡುವುದಕ್ಕೂ ಸಹ ಅವಕಾಶ ಮಾಡಿದ್ದೇವೆ. ಎಲ್ಲಾ commissionerate ನಲ್ಲಿಯೂ ಸಹ ಒಂದೊಂದು cyber crime police station ಇರಬೇಕೆಂಬ ಒಂದು ಪ್ರಸ್ತಾವನೆಯೂ ಕೂಡ ಇದೆ. ಅದನ್ನು ಸದ್ಯದಲ್ಲಿಯೇ ಮಾಡುತ್ತೇವೆ. Professionals, technical persons ಇರುವುದಿಲ್ಲ ಎಂಬ ಅಂಶಗಳನ್ನು ಮಾನ್ಯ ಸದಸ್ಯರು ಕೇಳಿರುತ್ತಾರೆ. National Association of Software and Service Companies Lab (NASSCOM) ಎಂದು ಇರುತ್ತದೆ. ಅವರ ಜೊತೆಯಲ್ಲಿ ತರಬೇತಿಯನ್ನು ಮಾಡಿಸಿ ನಮ್ಮ ಅಧಿಕಾರಿಗಳಿಗೆ ಆಗಿಂದಾಗ್ಗೆ ತರಬೇತಿ ಕೊಟ್ಟು, ಪರಿಣತಿ ಇರತಕ್ಕಂತಹವರ ಸೇವೆಯನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗಿ ಕೂಡ ನಿಯಮಗಳನ್ನು ಮಾಡಿಕೊಂಡಿದ್ದೇವೆ. ಆ ಸೇವೆಗಳನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ. ಎಷ್ಟು ಪ್ರಕರಣಗಳು ಆಗಿವೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. 2015ನೇ ಇಸವಿಯಲ್ಲಿ 1447 ಪ್ರಕರಣಗಳು ವರದಿಯಾಗಿವೆ. 2016ನೇ ಇಸವಿಯಲ್ಲಿ 1226 ಪ್ರಕರಣಗಳನ್ನು ದಾಖಲಿಸಲಾಗಿದೆ. 2017ರಲ್ಲಿ ಇದುವರೆವಿಗೂ 679 ಪ್ರಕರಣಗಳನ್ನು ದಾಖಲಿಸಲಾಗಿದೆ. ಇದು ಕೇವಲ ಬೆಂಗಳೂರಿನದು ಮಾತ್ರವಲ್ಲ; ಇಡೀ ರಾಜ್ಯದ ಮಾಹಿತಿ ಆಗಿದೆ. ಇತ್ತೀಚೆಗೆ ಎಂದರೆ ಮಾರ್ಚ್ ತಿಂಗಳಿನಲ್ಲಿ ಬೆಂಗಳೂರಿನ commissionerate ನಲ್ಲಿ ಒಂದು cyber crime police station ಅನ್ನು ಉದ್ಘಾಟನೆ ಮಾಡಿದ್ದೆವು. ಕೇವಲ ಮೂರು ತಿಂಗಳಿನಲ್ಲಿ ಈಗಾಗಲೇ 160 ಎಫ್.ಐ.ಆರ್.ಗಳನ್ನು ಹಾಕಲಾಗಿದೆ. 420 ಅರ್ಜಿಗಳು ಬಂದಿವೆ. 159ರಲ್ಲಿ ಯಾವ ರೀತಿಯ ಪ್ರಕರಣಗಳು ಬಂದಿವೆ ಎಂದರೆ ಬ್ಯಾಂಕ್‌ನ ಕಾರ್ಡುಗಳನ್ನು skimming ಮಾಡಿಕೊಂಡು ಅದನ್ನು ಉಪಯೋಗ ಮಾಡಿ ಬೇರೆಯವರ ಅಕೌಂಟ್‌ದು ಹಣ transfer ಮಾಡತಕ್ಕಂತಹ ದಂಧೆಯ ಕುರಿತಾದ ಪ್ರಕರಣಗಳು. ಇದು ಅತಿ ಹೆಚ್ಚಾಗಿ ಆಗಿರತಕ್ಕಂತಹದ್ದು. ಪ್ರಕರಣಗಳು/ಅರ್ಜಿಗಳು ಬಂದಿರತಕ್ಕಂತಹದ್ದು ರಿಜಿಸ್ಟರ್ ಆಗಿರುವಂತಹದ್ದು.

ಅದು ಬಿಟ್ಟರೆ job fraud ಎಂದು ಹೇಳಲಾಗುತ್ತದೆ. ಕೆಲಸ ಕೊಡಿಸುತ್ತೇವೆಂದು ಹೇಳಿ facebook ಮುಂತಾದ social media ಗಳಲ್ಲಿ ಜಾಹೀರಾತು ಮಾಡಿ ಹಣ ಸಂಗ್ರಹಿಸಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂತಹದ್ದು ಕೂಡ ಹೆಚ್ಚಾಗಿದೆ. OTP fraud ಎಂಬುದನ್ನು ಬ್ಯಾಂಕಿನ ಮೂಲದಿಂದಲೇ ಮಾಡುವಂತಹದ್ದು. ಅದು ಕೂಡ ಹೆಚ್ಚಾಗಿದೆ. ಇದು ಇನ್ನೂ ಪ್ರಾರಂಭಿಕ ಹಂತದಲ್ಲಿದೆ. ಇದಕ್ಕೆ ಬೇರೆಯದೇ ಆದ ಕಾನೂನುಗಳನ್ನು ಮಾಡಬೇಕಾಗುತ್ತದೆ. ಏಕೆಂದರೆ ಅಂತರರಾಜ್ಯದ್ದು, ಅಂತರ ರಾಷ್ಟ್ರದ್ದು. ನಮಗೆ ಅವರ ಮೂಲವನ್ನು ಹಿಡಿಯುವುದೇ ಬಹಳ ಕಷ್ಟವಾಗುತ್ತದೆ. ಎಲ್ಲಿಯೋ ಇರುತ್ತಾರೆ. ಎಲ್ಲಿಯೋ fraud ಮಾಡುತ್ತಾರೆ. ನಮಗೆ ಗೊತ್ತೇ ಆಗುವುದಿಲ್ಲ. ಆದುದರಿಂದ ಬೇರೆ ಬೇರೆ ರಾಷ್ಟ್ರಗಳ ಸಹಕಾರದೊಂದಿಗೆ ಮಾಹಿತಿಯನ್ನು ಪಡೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಂತಹ ಕಾನೂನನ್ನೂ ಸಹ ಕೇಂದ್ರ ಸರ್ಕಾರ ಮಾಡಬೇಕಾಗುತ್ತದೆ. ಕೇವಲ ನಮ್ಮ ರಾಜ್ಯದಿಂದ ಮಾಡಿದರಷ್ಟೇ ಸಾಲುವುದಿಲ್ಲ. ಆ ಕಾನೂನುಗಳ ಪ್ರಸ್ತಾವನೆಗಳು ಎಲ್ಲಾ ರಾಜ್ಯದಿಂದಲೂ ಕೇಂದ್ರಕ್ಕೆ ಹೋಗಿರುತ್ತದೆ. ನಾವೂ ಸಹ ಕೇಂದ್ರವನ್ನು ಕೇಳಿದ್ದೇವೆ. ಇದರ ಜೊತೆಗೆ ನಾವು ಜನರಲ್ಲಿಯೂ ಅರಿವು ಮೂಡಿಸಬೇಕಾಗುತ್ತದೆ. ಪ್ರಕರಣ ಆದ ಮೇಲೆ ಅದನ್ನು ದಾಖಲಿಸಿಕೊಂಡು ಅಪರಾಧಿಗಳನ್ನು ಕಂಡು ಹಿಡಿದು ಅವರಿಗೆ ಶಿಕ್ಷೆ ಕೊಡುವುದು ಒಂದು ಭಾಗವಾದರೆ ಜನರಲ್ಲಿ ಒಂದಿಷ್ಟು ಅರಿವು ಮೂಡಿಸಬೇಕೆಂದು ಹೇಳಿ WhatsApp ನಲ್ಲಿ ಸಂದೇಶ ಕಳುಹಿಸುವ ಮೂಲಕ ಮತ್ತು ಶಾಲಾ-ಕಾಲೇಜುಗಳಿಗೆ ನಮ್ಮ ಅಧಿಕಾರಿಗಳು ಹೋಗಿ ಇವುಗಳ ಬಗ್ಗೆ ಹೇಳಿಕೊಡುತ್ತಿದ್ದಾರೆ. 'Cyber Safety Week' ಎಂಬುದನ್ನೂ ಪ್ರಾರಂಭ ಮಾಡುತ್ತಿದ್ದೇವೆ. ಯಾವ ರೀತಿ ಬ್ಯಾಂಕ್ ಖಾತೆಗಳನ್ನು, ನಿಮ್ಮ data bank information ಅನ್ನು ಕಾಯ್ದುಕೊಳ್ಳಬೇಕು ಎಂದು ತಿಳಿಸಿಕೊಡಲಾಗುತ್ತದೆ.

Bitcoin ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ವಿಪ್ರೋ ಕಂಪನಿಗೆ ಸ್ವಿಟ್ಜರ್‌ಲ್ಯಾಂಡ್‌ನಿಂದ ಒಂದು ಇ-ಮೇಲ್ ಬರುತ್ತದೆ. 500 ಕೋಟಿ ರೂಪಾಯಿಗಳನ್ನು ಮಾಡದಿದ್ದಲ್ಲಿ ವಿಪ್ರೋ ಕಂಪನಿಯನ್ನು blast ಮಾಡುತ್ತೇವೆ ಎಂದು ಇ-ಮೇಲ್ ಬಂದಿತ್ತು. ಅದರ ಮೂಲ ಹಿಡಿಯುವುದಕ್ಕೆ ಇದುವರೆವಿಗೂ ಸಾಧ್ಯವಾಗುತ್ತಿಲ್ಲ. ಏಕೆಂದರೆ ಅಷ್ಟು ಶೀಘ್ರವಾಗಿ ಅವರು ತಮ್ಮ ಅಕೌಂಟ್‌ಗಳನ್ನು ಬದಲಾಯಿಸಿಕೊಳ್ಳುತ್ತಾರೆ. ಅವರನ್ನು identify ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ರೀತಿ ಇನ್ನೂ ಪ್ರಾರಂಭಿಕ ಹಂತದಲ್ಲಿರುವುದರಿಂದ ಅಂತಹ ಪ್ರಕರಣಗಳೇ ಜಾಸ್ತಿಯಾಗುತ್ತಿವೆ. ಬ್ಯಾಂಕ್ ಅಕೌಂಟ್‌ಗಳನ್ನು hack ಮಾಡಲಾಗುತ್ತದೆ. ಈಗ ಉದಾಹರಣೆಗೆ ಮಾನ್ಯ ಸೋಮಣ್ಣನವರ ಖಾತೆಯನ್ನು hack ಮಾಡಿ ಎರಡು ನಿಮಿಷಗಳಲ್ಲಿ ಅವರ ಖಾತೆಯಲ್ಲಿರುವ ಹಣವನ್ನು ಅವರು ವರ್ಗಾವಣೆ ಮಾಡಿಕೊಂಡು ಬಿಡುತ್ತಾರೆ. ಅಂತಹ ಪ್ರಕರಣಗಳನ್ನು ಗುರುತು ಹಚ್ಚಿ ಈಗಾಗಲೇ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಆದರೆ ಇಲ್ಲಿಯವರೆವಿಗೂ ನಾವು ಯಾರಿಗೂ ಸಹ ಶಿಕ್ಷೆ ಕೊಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಧ್ಯವಾಗಿರುವುದಿಲ್ಲ. ಏಕೆಂದರೆ ಅದರ ಮೂಲ ಸಿಗಬೇಕು. ಅದಕ್ಕೆ ಬೇಕಾದಂತಹ ಸಾಕ್ಷಿಗಳು ಸಿಗಬೇಕು. ಅದನ್ನು ನಾವು ಕಾನೂನಿನ ಚೌಕಟ್ಟಿನಲ್ಲಿಯೇ ತರಬೇಕು. CrPC ಅಡಿಯಲ್ಲಿಯೇ ಅವರನ್ನು ತರಬೇಕು. ಅದಕ್ಕೆ ಪ್ರತ್ಯೇಕವಾದ ಕಾನೂನುಗಳು ಇನ್ನೂ ಕೂಡ ಬರಲಿಲ್ಲ. ಹಾಗಾಗಿ ಯಾವುದೂ ಸಹ convict ಆಗಿರುವುದು ವರದಿ ಆಗಿರುವುದಿಲ್ಲ. Computer crime related ಎಂದು ಒಂದು ಕೇಸ್ ಮಾತ್ರ 2015ರಲ್ಲಿ ಆಗಿದೆ. 2016-17ರಲ್ಲಿ ಇದುವರೆವಿಗೂ ಯಾವುದೂ ಆಗಿರುವುದಿಲ್ಲ. ಇದನ್ನು ಯಾವ ರೀತಿ ಮಾಡಬೇಕೆಂದು ಹೇಳಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಚರ್ಚೆ ಮಾಡಿಕೊಂಡು ರಾಜ್ಯಮಟ್ಟದಲ್ಲಿ ತರುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಸಚಿವರು ಹಾರಿಕೆಯ ಉತ್ತರವನ್ನು ನೀಡಿದ್ದಾರೆ. ರಾಜ್ಯದ ಜನರಲ್ಲಿರುವ ಆತಂಕವನ್ನು ಹೋಗಲಾಡಿಸುವುದಕ್ಕೆ ಸರ್ಕಾರದ ಕ್ರಮ ಏನು ಎಂದರೆ ನಮ್ಮಲ್ಲಿ ಯಾವುದೇ ಕಾನೂನು ಇಲ್ಲವೆಂದು ಹೇಳಿದ್ದಾರೆ. FIR ಮಾಡಿದ್ದೇವೆ ಎಂದರೆ ಯಾವ ಕಾನೂನಿನ ಅಡಿಯಲ್ಲಿ FIR ಮಾಡಿದ್ದಾರೆ? Facebook ಅನ್ನು ತೆರೆದರೆ ಯಾವ ರೀತಿಯ ಅಶ್ಲೀಲ ಚಿತ್ರಗಳು ಬರುತ್ತವೆ; ಗೌರವವಾಗಿ ಬದುಕುತ್ತಿರುವಂತಹ ಮನೆಯಲ್ಲಿರುವ ಮಕ್ಕಳ ಗತಿ ಯಾವ ಮಟ್ಟಕ್ಕೆ ಹೋಗುತ್ತಿದೆ? ಪೊಲೀಸ್ ಇಲಾಖೆಯಲ್ಲಿ Cyber crime ಗೆ ತನ್ನದೇ ಆದಂತಹ ಸಿಬ್ಬಂದಿ ಇದೆ ಎಂದು ಹೇಳಿದ್ದಾರೆ. ಎಂಟು ಕಡೆ Cyber Police Station ಗಳಾಗಿದ್ದು, ಅವುಗಳನ್ನು ಆಧುನೀಕರಣಗೊಳಿಸಿ, ಅದಕ್ಕೆ ಬೇಕಾದಂತಹ ತಾಂತ್ರಿಕ ವ್ಯವಸ್ಥೆಯನ್ನು ಮಾಡಿ, funding ಕೊಟ್ಟಿರತಕ್ಕಂಥ ಯಾವುದಾದರೊಂದು ಪ್ರಕರಣ ತೋರಿಸಿದರೆ ಸರಿ ಎನ್ನುತ್ತೇವೆ. ಮಾನ್ಯ ಗೃಹ ಸಚಿವರು ಅತ್ಯಂತ ಜವಾಬ್ದಾರಿಯುತವಾಗಿ ಮಾತನಾಡುವಂತಹ ವ್ಯಕ್ತಿ. ಇಂತಹ ಗಂಭೀರವಾದ ವಿಷಯದಲ್ಲಿ ಏನೂ ಮಾಡಲಿಕ್ಕಾಗುವುದಿಲ್ಲವೆಂದು ನಿಷ್ಕ್ರಿಯರಾದರೆ ಜನರ ಗತಿ ಏನಾಗಬೇಕು? ಇಂತಹ ತೊಂದರೆಯಲ್ಲಿರತಕ್ಕಂತಹ ಜನರ ಪಾಡೇನು? ಈ ಅಶ್ಲೀಲ ಚಿತ್ರಗಳನ್ನು ನಿಲ್ಲಿಸಲು ಸರ್ಕಾರ ಪೊಲೀಸರ ಬೆನ್ನು ತಟ್ಟಲಿಲ್ಲ ಎಂದರೆ ಪರಿಸ್ಥಿತಿ ಭಾರೀ ವಿಕೋಪಕ್ಕೆ ಹೋಗುತ್ತದೆ. ಅಂತಹ ವಿಕೋಪವನ್ನು ತಡೆಗಟ್ಟಲು ಸರ್ಕಾರದ ಕ್ರಮಗಳೇನು ಎಂದು ನಿರ್ದಿಷ್ಟವಾಗಿ ಹೇಳಬೇಕು. ಮಾನ್ಯ ಗೃಹ ಸಚಿವರು ಎಷ್ಟು ದಿನ ಇರುತ್ತಾರೆ ಎಂಬುದು ದೊಡ್ಡದಲ್ಲ. ಅವರ ಸಂದೇಶ ರಾಜ್ಯದ ಜನತೆಗೆ ಹೋಗಬೇಕಾಗಿದೆ. ಆದ್ದರಿಂದ ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರಿಸುವುದಕ್ಕಿಂತ ಇಂತಹ ಒಂದು ದೊಡ್ಡ ದಂಧೆಯನ್ನು ಮಟ್ಟ ಹಾಕುವಂತಹವರಾಗಬೇಕು. ದಂಧೆಕೋರರು ಎಲ್ಲಿಯೋ ಒಂದು ಕಡೆ ಕುಳಿತು ಯೋಚನೆ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(...ಮುಂದು)

(ಸಭಾಪತಿಯವರ ಉಪಸ್ಥಿತಿ)

(608)/8-6-2017/RC-MD/11-50

**ಶ್ರೀ ವಿ.ಸೋಮಣ್ಣ(ಮುಂದು):-** ಅವರು ತಾಂತ್ರಿಕತೆಯಿಂದ ಯಾರದೋ ಹಣವನ್ನು ಎಲ್ಲೋ ಕುಳಿತುಕೊಂಡು ಎರಡು ನಿಮಿಷದಲ್ಲಿ ಅದು ಸೋಮಣ್ಣನವರ ಅಕೌಂಟು ಅಥವಾ ಇನ್ನೊಬ್ಬರ ಅಕೌಂಟ್‌ನಿಂದ ತೆಗೆದುಕೊಳ್ಳುವುದು ಒಂದು ಕಡೆ ಇರಲಿ. ಆದರೆ ಹಣ ಕಳೆದುಕೊಂಡವನ ಗತಿ ಏನಾಗಬೇಕು? ಅದರ ಬಗ್ಗೆ ನಾವು ಏನು ಯೋಚನೆ ಮಾಡಿದ್ದೇವೆ? ದಮನಕಾರಿ ಶಕ್ತಿಗಳು ಎಲ್ಲೋ ಒಂದು ಕಡೆ ಕುಳಿತುಕೊಂಡು ಆ ರೀತಿ ಮಾಡುತ್ತಿರಬೇಕಾದರೆ ನಾವು ಸಾಮಾನ್ಯ ಜನರ ಒಳಿತನ್ನು ಕಾಪಾಡುವಂಥವರು ಏನು ಮಾಡಬೇಕೆಂದು ಗೃಹಸಚಿವರು ತಿಳಿಸಬೇಕೆಂದು ಮಾನ್ಯ ಸಭಾಪತಿಯವರ ಮುಖೇನ ಕೇಳಿಕೊಳ್ಳುತ್ತೇನೆ.

**ಡಾ||ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ನಾನು ಏನೂ ಮಾಡುವುದಕ್ಕೇ ಆಗುವುದಿಲ್ಲ, ಅದಕ್ಕೆ ಕಾನೂನೇ ಇಲ್ಲವೆಂದು ಹೇಳಲಿಲ್ಲ. ನಾನು ಬ್ಯಾಂಕ್ ಫ್ರಾಡ್ ಮತ್ತು ಯಾವ ರೀತಿ ಜನ computer aided cyber crime ಮಾಡುತ್ತಾರೆಂದು ಹೇಳಿ ಆ ಕ್ರೈಂಗಳಿಗೆ ಹೊಸದಾಗಿ ಕಾನೂನುಗಳು ಇಲ್ಲ. CrPC ನಲ್ಲಿ ಏನು ಬೇಕಾದರು ಮಾಡುವುದಕ್ಕೆ ಅವಕಾಶವಿದೆ. ಅದರಲ್ಲಿ ಹೊಸದಾಗಿ ಈ ನಿರ್ದಿಷ್ಟವಾದ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಹೇಳಿದ್ದೆ ವಿನಃ ಬೇರೇನು ಇಲ್ಲ. ತಾವು ಅಶ್ಲೀಲ ಚಿತ್ರಗಳ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಈಗಾಗಲೇ ಕೇಂದ್ರ ಸರ್ಕಾರ ಅದನ್ನು ಬ್ಯಾನ್ ಮಾಡುವುದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟಿದೆ. ಈ ವಿಷಯ ತಮಗೂ ಸಹ ತಿಳಿದಿರಬಹುದು. ಈಗಾಗಲೆ ಅದಕ್ಕೆ ಬೇಕಾದಂತಹ ಕಾನೂನುಗಳನ್ನು ಮಾಡಿ ಅದನ್ನು ತಡೆಯುವುದಕ್ಕೂ ಸಹ ಕೇಂದ್ರ ಸರ್ಕಾರ ಹೊರಟಿದೆ. ನಾವು ಅದನ್ನು ಯಾವುದೇ ರೀತಿಯಲ್ಲಿ ಇಲ್ಲಿ ಪ್ರೋತ್ಸಾಹ ಮಾಡುವುದಾಗಲಿ ಅಥವಾ ನಿಲ್ಲಿಸುವುದಿಲ್ಲವೆಂದು ಹೇಳುವುದಿಲ್ಲ. ಯಾರು ಅಂತಹ ಪ್ರಕರಣಗಳಲ್ಲಿ ತೊಡಗಿರುತ್ತಾರೆ ಅವರ ಮೇಲೆ case register ಮಾಡಿ FIR ಮಾಡುತ್ತೇವೆ. ಇರುವಂತಹ ಕಾನೂನಿನ ಚೌಕಟ್ಟಿನಲ್ಲಿಯೇ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಯಾರನ್ನೂ ಸಹ ಹಾಗೆಯೇ ಬಿಟ್ಟು ನೀವು ಏನು ಬೇಕಾದರು ಮಾಡಿಕೊಳ್ಳಿ ಎಂದು ಹೇಳುವಂತಹದಕ್ಕೆ ನಮ್ಮಲ್ಲಿ ಯಾವುದೇ ಅವಕಾಶವಿಲ್ಲ. ಆದುದರಿಂದ ಸರ್ಕಾರ ಅಶ್ಲೀಲ ಚಿತ್ರಗಳ ಮತ್ತು ಇಂತಹ ವಿಚಾರದಲ್ಲಿ ಕಟ್ಟುನಿಟ್ಟಿನ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳಬಯಸುತ್ತೇನೆ. ಆದರೆ cyber crimeಗೆ bank fraud ಗೆ ಅಥವಾ ನಿಮ್ಮ bitcoinಗೆ ಇಂತಹ ವಿಚಾರದಲ್ಲಿ ಕಾನೂನುಗಳನ್ನು ಹೊಸದಾಗಿ ತರಬೇಕೆಂದು ಹೇಳಿದ್ದೇನೆ.

**ಸಭಾಪತಿಯವರು:-** ಮಾನ್ಯ ಸುನೀಲ್ ಸುಬ್ರಮಣಿ ಎಂ.ಪಿ. ಅವರ ಪ್ರಶ್ನೆ ಸಂಖ್ಯೆ 2362 ಗೃಹ ಇಲಾಖೆಗೆ ವರ್ಗಾವಣೆ ಆಗಿದೆ.

**ಡಾ॥ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಆ ಪ್ರಶ್ನೆ ಆರೋಗ್ಯ ಇಲಾಖೆಗೆ ವರ್ಗಾವಣೆ ಆಗಿದೆ. ಸಾಂಕ್ರಾಮಿಕ ರೋಗ ನನಗೆ ಬರುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸಾಂಕ್ರಾಮಿಕ ರೋಗ ತಮಗೆ ಬರಬಾರದು.

**ಡಾ॥ಜಿ.ಪರಮೇಶ್ವರ್:-** ನೀವು ಹೇಳಿದಮೇಲೆ ಅದು ಬರುವುದಿಲ್ಲ ಬಿಡಿ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.:-** ಮಾನ್ಯ ಸಭಾಪತಿಯವರೆ, ಸದರಿ ಗಡಿ ಭಾಗದಲ್ಲಿ ಹೆಚ್ಚಿನ ಪೊಲೀಸ್ ಭದ್ರತೆಯನ್ನು ನಿಯೋಜಿಸುವುದರ ಬಗ್ಗೆ ಹಾಗೂ ಸಿ.ಸಿ.ಟಿ.ವಿ ಹಾಕುವಂಥ ವಿಚಾರದ ಬಗ್ಗೆ ನಾನು ಪ್ರಶ್ನೆ ಕೇಳಿರುವುದು. ಆದುದರಿಂದ ಮಾನ್ಯ ಗೃಹ ಸಚಿವರು ಇದರ ಬಗ್ಗೆ ಗಮನ ಹರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಈ ವಿಷಯ ಮಾನ್ಯ ಗೃಹ ಸಚಿವರಿಗೆ ಬರುವುದಾದರೆ ಮುಂದಿನ ವಾರ ತೆಗೆದುಕೊಳ್ಳಿ.

**ಡಾ॥ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಈ ವಿಷಯ ನನಗೆ ಬರುವುದಾದರೆ ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ 2396**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರದೀಪ್ ಶೆಟ್ಟರ್:-** ಸನ್ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ಬೆಂಗಳೂರು ಬಿಟ್ಟರೆ ಅತಿ ವೇಗವಾಗಿ ಬೆಳೆಯುತ್ತಿರುವಂತಹ ಮಹಾ ನಗರಗಳಲ್ಲಿ ಉತ್ತರ ಕರ್ನಾಟಕದ ಹುಬ್ಬಳ್ಳಿ-ಧಾರವಾಡ ಕೂಡ ಅತಿ ವೇಗವಾಗಿ ಬೆಳೆಯುತ್ತಿರುವಂತಹ ನಗರವಾಗಿದೆ. ಇಲ್ಲಿ ಖಾಸಗಿ ಜಾಹಿತಾತುದಾರರು ಏನಿದ್ದಾರೆ ಅವರು ಅಧಿಕೃತವಾಗಿ ಒಂದು ಅಥವಾ ಎರಡು ಲೈಸೆನ್ಸ್ ತೆಗೆದುಕೊಂಡು ಅಧಿಕಾರಿಗಳ ಜೊತೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಮೀಲಾಗಿ ಸುಮಾರು 6 ರಿಂದ 7 ಜಾಹಿರಾತುಗಳನ್ನು ಹಾಕುತ್ತಾರೆ. ಹುಬ್ಬಳ್ಳಿ-ಧಾರವಾಡದಲ್ಲಿ ಏನಾಗಿದೆ ಎಂದರೆ ಓಣಿ ಓಣಿಗಳಲ್ಲಿ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ರೌಡಿಗಳೆ ನಿಂತು ಅವರೇ ಒಂದು ಕಾರ್ಪೋರೇಶನ್ ಜಾಗವನ್ನು ಗುರುತು ಮಾಡಿ, ಅಧಿಕಾರಿಗಳಿಗೆ ಸ್ವಲ್ಪ ದುಡ್ಡು ಕೊಟ್ಟು ಅಲ್ಲಿ ತಾವೆ ಒಂದು ಬೋರ್ಡ್ ಹಾಕಿ ಅದರ ಮೇಲೆ ತಮ್ಮ ಮೊಬೈಲ್ ನಂಬರ್ ಬರೆದು ಜಾಹಿರಾತಿಗೆ ಸಂಪರ್ಕಿಸಿ ಎಂದು ಹಾಕಿ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಇದರಿಂದಾಗಿ ಮಹಾನಗರ ಪಾಲಿಕೆಗೆ ಭಾರಿ ನಷ್ಟ ಉಂಟಾಗುತ್ತಿದೆ.

ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಖಾಸಗಿ ಜಾಹಿರಾತುದಾರರಾದ ಕಿಯೋನಿಕ್ಸ್ ಮತ್ತು ಟ್ಯಾಲಿ ಅಕಾಡೆಮಿ ಸಂಸ್ಥೆಯವರು ತಮ್ಮ ಸಂಸ್ಥೆಯ ಜಾಹಿರಾತುಗಳನ್ನು ಗೋಕುಲ ರೋಡ್, ಕ್ಲರ್ಕ್ ಇನ್ ಹೋಟೆಲ್ ಹತ್ತಿರ ಇರುವ ಪಾಲಿಕೆಯ ಸೇತುವೆಯ ಮೇಲೆ ಅನುಮತಿ ಇಲ್ಲದೆ ಪ್ರದರ್ಶಿಸಿ, ಸಾರ್ವಜನಿಕ ಪ್ರದೇಶವನ್ನು ವಿರೂಪಗೊಳಿಸಿದ್ದು ಕಂಡು ಬಂದಿದ್ದರಿಂದ, ಸದರಿಯವರ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು (ಎಫ್.ಐ.ಆರ್) ಗೋಕುಲ ರೋಡ್ ಪೊಲೀಸ್ ಠಾಣೆ ಹುಬ್ಬಳ್ಳಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಕಿಯೋನಿಕ್ಸ್ ಮತ್ತು ಟ್ಯಾಲಿ ಕಂಪನಿಗಳು ಬಹಳ ಉತ್ತಮವಾದಂತಹ ಕಂಪನಿಗಳು. ಅಂಥವರೇ ಈ ರೀತಿ ಮಾಡುತ್ತಿದ್ದಾರೆ. ಮಾನ್ಯ ಸಚಿವರೆ, ದೊಡ್ಡ ದೊಡ್ಡ ಕಂಪನಿಗಳವರೇ ಈ ರೀತಿ ಮಾಡುತ್ತಿದ್ದಾರೆಂದರೆ ಇನ್ನು ಸಣ್ಣ ಕಂಪನಿಯವರು ಲೋಕಲ್ ರೌಡಿಸಂ ಮಾಡಿ ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಸ್ವಲ್ಪ ದುಡ್ಡು ಕೊಟ್ಟು, ತಾವೇ ಒಂದು ಬೋರ್ಡ್ ಹಾಕಿಕೊಳ್ಳುತ್ತಾರೆ. ಅಂದರೆ ಎರಡು ಕಂಬ ಹಾಕುವುದು, ಬೋರ್ಡ್ ಹಾಕುವುದು ತಾವೆ ಜಾಹಿರಾತು ನೀಡಿ ಲಕ್ಷಾಂತರ ರೂಪಾಯಿಗಳನ್ನು ದುಡಿದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಪಾಲಿಕೆಗೆ ಬಹಳ ನಷ್ಟ ಉಂಟಾಗುತ್ತಿದೆ. ದಯವಿಟ್ಟು ಇದು ನಿಲ್ಲಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಆರ್.ರೋಷನ್ ಬೇಗ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಮಾತನ್ನು ನಾನು ಪೂರ್ಣವಾಗಿ ಒಪ್ಪುತ್ತೇನೆ. ಕೆಲವು ಕಡೆ city corporations limits ನಲ್ಲಿ advertisement mafia ಎಂದು ಇದೆ. ನಾವು ಕಾನೂನಿನ ಪ್ರಕಾರ *Karnataka Open Places* (*Prevention* of Disfigurement) Act, 1981 ರಿಂದ ಎಲ್ಲೆಲ್ಲಿ ನಮ್ಮ ಗಮನಕ್ಕೆ ಬಂದಿದೆ ಅದರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ದೊಡ್ಡ ದೊಡ್ಡ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಂಪನಿಗಳ ಮೇಲೆ ಎಫ್.ಐ.ಆರ್. ರಿಜಿಸ್ಟರ್ ಆಗಿದೆ. ಇನ್ನು ಮುಂದಿನ ದಿನಗಳಲ್ಲಿ ತಾವು ಏನು ಹೇಳಿದ್ದೀರಿ open spaces ನಲ್ಲಿ ರೌಡಿಗಳು ದಂಧೆ ನಡೆಸುತ್ತಿದ್ದಾರೆಂದು, ಅದರ ಬಗ್ಗೆ ಕೂಡಲೆ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶ ನೀಡುತ್ತೇನೆ. ಇನ್ನು ಮುಂದೆ ಏನಾದರು ಮಾಹಿತಿ ಇದ್ದರೆ ಅದನ್ನು ಕಳುಹಿಸಿ ಕೊಟ್ಟರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ 2317**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯ ಮಂತ್ರಿಗಳು ಸವಿಸ್ತಾರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಾನು ಈ ಪ್ರಶ್ನೆ ಕೇಳಿರುವುದರಲ್ಲಿ ಒಂದು ವಿಶೇಷ ವಿನಂತಿ ಇದೆ. ಬೀದರ್ ಜಿಲ್ಲೆಯಲ್ಲಿ ರೈತರು ಬೆಳೆಯುವಂತಹ ಪ್ರಮುಖವಾದಂತಹ ಬೆಳೆ ಎಂದರೆ ಕಬ್ಬು. ಹತ್ತಾರು ವರ್ಷಗಳಿಂದ ರೈತರ ಭಾಗಿತ್ವದಿಂದ ಸಹಕಾರಿ ಕ್ಷೇತ್ರದಲ್ಲಿ ಮೂರು ಸಕ್ಕರೆ ಕಾರ್ಖಾನೆಗಳು ನಡೆಯುತ್ತಿದೆ. ಆದರೆ ಇವತ್ತಿನ ದುರಾದೃಷ್ಟವೇನೆಂದರೆ, ಬೀದರ್ ಸಕ್ಕರೆ ಕಾರ್ಖಾನೆ ಮತ್ತು ನಾರಂಜ ಸಕ್ಕರೆ ಕಾರ್ಖಾನೆ ಇವೆರಡು ಎಷ್ಟು ಸಾಲದ ಕೂಪದಲ್ಲಿ ಇವೆ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಪ್ರಕಾರ ನಾರಂಜ ಸಹಕಾರ ಸಕ್ಕರೆ ಕಾರ್ಖಾನೆಯ ಇವತ್ತಿನ ಸ್ಥಿರಾಸ್ತಿ 9745.00 ಕೋಟಿ ರೂಪಾಯಿ. ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯ ಸ್ಥಿರಾಸ್ತಿ ಸುಮಾರು 3605.71. ಆದರೆ ದುರಾದೃಷ್ಟವೆಂದರೆ, ನನ್ನ ಹತ್ತಿರ ಇರುವಂತಹ ಅಂಕಿ ಅಂಶಗಳ ಪ್ರಕಾರ 2014ರಲ್ಲಿ ನಾರಂಜ ಸಹಕಾರ ಸಕ್ಕರೆ ಕಾರ್ಖಾನೆ ಎಷ್ಟು ನಷ್ಟದಲ್ಲಿದೆ ಎಂದರೆ, 211.18 ಕೋಟಿ ರೂಪಾಯಿ. Today it values about Rs. 280 crore. ಅಂದರೆ ಅಷ್ಟು ಲಾಸ್ ಆಗಿದೆ. *BSS Sugar Factory* ಗೆ ಇರುವುದು ಸುಮಾರು 126.75 ಕೋಟಿ ರೂಪಾಯಿ. ಅಂದರೆ ಸುಮಾರು 200 ಕೋಟಿ ರೂಪಾಯಿ ಲಾಸ್ ಆಗಿದೆ. ಈ ಎರಡು ಕಾರ್ಖಾನೆಗಳನ್ನು ಮೂರು ಮೂರು ಸಲ ಮಾರಾಟ ಮಾಡಿದರೂ ಸಹ ಅದರ ಸಾಲವನ್ನು ತೀರಿಸುವುದಕ್ಕೆ ಆಗುವುದಿಲ್ಲ. ಇದು ಒಂದು ಭಾಗವಾದರೆ, ಈ ಕಾರ್ಖಾನೆ ನಡೆಯದೆ ಇದ್ದರೆ ಅಂದರೆ ಚಾಲನೆಯಲ್ಲಿ ಇಲ್ಲದೆ ಇದ್ದರೆ ರೈತ ತಾನು ಬೆಳೆದ ಕಬ್ಬನ್ನು ಸುಟ್ಟು ಹಾಕಬೇಕಾಗುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ಹಾಗೂ ನಾರಂಜ ಸಹಕಾರ ಸಕ್ಕರೆ ಕಾರ್ಖಾನೆ ಇವೆರಡರ ಬಗ್ಗೆ ರೈತರಿಗೆ ಉಪಯೋಗವಾಗುವ ದೃಷ್ಟಿಯಿಂದ ಏನಾದರು ಒಂದು ನಿರ್ಧಾರವನ್ನು ತೆಗೆದುಕೊಂಡು ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಖಾನೆಗಳನ್ನು ಮುಂದುವರೆಸುವುದಕ್ಕೆ ಏನಾದರು ಒಂದು ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿಸುತ್ತೇನೆ. ಏಕೆಂದರೆ, ಎರಡು ಮೂರು ದಿವಸದೊಳಗೆ ಅಲ್ಲಿಯ ಜನಪ್ರತಿನಿಧಿಗಳ ಒಂದು ನಿಯೋಗ ತಮ್ಮ ಬಳಿ ಬರಲು ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಆದುದರಿಂದ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ಕಾರ್ಖಾನೆಗಳನ್ನು ಮುಂದುವರೆಸುವುದಕ್ಕೆ ಏನಾದರು ಒಂದು ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳೆ, ಮಾನ್ಯ ಸದಸ್ಯರು ಕಬ್ಬು ಕೊಟ್ಟಿರುವಂತಹ ರೈತರಿಗೆ ದುಡ್ಡು ಕೊಡಿಸಿ ಎಂದು ಕೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಈಗಾಗಲೆ ರೈತರಿಗೆ ಕೊಡಬೇಕಾಗಿರುವಂತಹ ಹಣವನ್ನೆಲ್ಲಾ ಕೊಟ್ಟಿದ್ದೇವೆ. ಬಾಕಿ ಉಳಿದಿದ್ದರೆ ತಾನೆ ಕೊಡುವುದು. ಬಾಕಿನೇ ಇಲ್ಲವೆಂದ ಮೇಲೆ ಕೊಡುವುದು ಎಲ್ಲಿಂದ? ಮಾನ್ಯ ಸದಸ್ಯರ ಉದ್ದೇಶವೇನೆಂದರೆ, ಕಾರ್ಖಾನೆಗಳು ಸಾಲದಲ್ಲಿವೆ, ನಷ್ಟದಲ್ಲಿವೆ ಎಂದು ಹೇಳಿದರು. ನಾವು ಸಹ ಅವುಗಳಿಗೆ ಸಾಲವನ್ನು ಕೊಟ್ಟಿದ್ದೇವೆ. ಸಾಮಾನ್ಯವಾಗಿ ಸಹಕಾರಿ ಸಕ್ಕರೆ ಕಾರ್ಖಾನೆಗಳು ಅಂದರೆ, ಮಂಡ್ಯದಲ್ಲಿರಬಹುದು, ಪಾಂಡವಪುರದಲ್ಲಿರಬಹುದು ಅಥವಾ ಬೀದರ್‌ನಲ್ಲಿರಬಹುದು ಈ ರೀತಿ ಅನೇಕ ಸಹಕಾರಿ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿ ನಡೆಯುತ್ತಿವೆ. ಇದಕ್ಕೆ ನಾವು ಯಾರನ್ನು ಹೊಣೆಗಾರರನ್ನಾಗಿ ಮಾಡುವುದು? ಅಲ್ಲಿ ಚುನಾಯಿತ ಪ್ರತಿನಿಧಿಗಳಿರುತ್ತಾರೆ, ಅವರದೇ ಆದಂತಹ ಆಡಳಿತ ಮಂಡಳಿ ಇರುತ್ತದೆ. ಪಾಂಡವಪುರದಲ್ಲಿ ರೈತ ಪ್ರತಿನಿಧಿಗಳ ಕೈಗೆ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಕೊಟ್ಟು ನೋಡಿದ್ದಾಯಿತು. ಅಂದರೆ ರೈತರ ಪರ ಹೋರಾಟ ಮಾಡುತ್ತಿದ್ದರಲ್ಲ ರೈತರು ಅವರ ಕೈಗೂ ಕೊಟ್ಟಿದ್ದಾಯಿತು. ನಾವು ಅದನ್ನು ನಡೆಸಿದ್ದಾಯಿತು. ಬೇರೆ ಪಕ್ಷದವರು ಸಹ ನಡೆಸುತ್ತಿದ್ದರು. ಈಗ ನಿಮ್ಮ ಕೈಗೆ ಕೊಟ್ಟರೂ ಸಹ ಅದೇ ರೀತಿ ಆಗುತ್ತದೆ. ಆದುದರಿಂದ ಇದು ಒಂದು ರೀತಿ ಮೂಲ ವ್ಯಾಧಿ ಇದ್ದಂತೆ. ಈ ಮೂಲವ್ಯಾಧಿಗೆ ಸಿದ್ಧೌಷಧ ಏನು? ನನ್ನ ಪ್ರಕಾರ ಇದಕ್ಕೆ ಔಷಧಿಯೇ ಇಲ್ಲ. ಇದಕ್ಕೆ diagnose ಎಲ್ಲಾ ಮಾಡಿದ್ದು ಆಯಿತು. ಈಗ ಸಧ್ಯಕ್ಕೆ ರೈತರಿಗೆ ಯಾವುದೇ ರೀತಿಯಿಂದಲೂ ತೊಂದರೆ ಆಗದ ರೀತಿಯಲ್ಲಿ ನೋಡಿಕೊಂಡಿದ್ದೇವೆ. ಕಬ್ಬನ್ನು ಅರೆಯುವಂತಹ ಕೆಲಸ ಮಾಡಿದ್ದೇವೆ, ಅವುಗಳು ನಿಲ್ಲದಂತೆ ನೋಡಿಕೊಳ್ಳುತ್ತೇವೆ. ಒಟ್ಟಿನಲ್ಲಿ ರೈತರಿಗೆ ತೊಂದರೆ ಆಗಬಾರದು, ಆ ಭಾಗದಲ್ಲಿ ಕಬ್ಬು ಅರೆಯಬೇಕು. ಆ ರೀತಿ ಮಾಡೋಣ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 2341**

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕಾಂತರಾಜುರವರು ಗೈರು ಹಾಜರಿದ್ದರು)

(ಮುಂದು)

(609) 08.06.2017 KG.AK 12.00

**ಪ್ರಶ್ನೆ ಸಂಖ್ಯೆ 2393**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ವಿವರವಾಗಿ ನೀಡಿದ್ದಾರೆ. ಮಾನ್ವಿ ಪಟ್ಟಣಕ್ಕೆ ಕುಡಿಯುವ ನೀರಿಗಾಗಿ ಸರ್ಕಾರ 88 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದಷ್ಟು ಬೇಗ ಟೆಂಡರ್ ಕರೆದು ಬರುವ ಬೇಸಿಗೆ ಕಾಲದೊಳಗೆ ನೀರನ್ನು ಕುಡಿಯಲಿಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಸನ್ಮಾನ್ಯ ಸಚಿವರಲ್ಲಿ ತಮ್ಮ ಮುಖಾಂತರ ವಿನಂತಿ ಮಾಡುತ್ತೇನೆ.

**ಶ್ರೀ ಆರ್.ರೋಷನ್ ಬೇಗ್:–** ಮಾನ್ಯ ಸಭಾಪತಿಯವರೇ, ಇದು ಈಗಾಗಲೇ ಕ್ಯಾಬಿನೆಟ್‌ನಲ್ಲಿ ಪ್ರಸ್ತಾಪ ಆಗಿದೆ. ಕ್ಯಾಬಿನೆಟ್‌ನಿಂದ administrative approval ಕೂಡ ಕೊಟ್ಟಿದ್ದೇವೆ. Tenders float ಮಾಡಿದ್ದೇವೆ. ಆದಷ್ಟು ಬೇಗ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರಿಗೆ ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ 2357**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಮಂತ್ರಿಯವರು ವಿವರವಾಗಿ ಉತ್ತರವನ್ನು ನೀಡಿದ್ದಾರೆ. ಆದರೆ, ನನಗೆ 4–5 ಪ್ರಶ್ನೆಗಳಿಗೆ clarification ಬೇಕಾಗಿದೆ. 2014 ನೇ ಸಾಲಿನಿಂದ ಥಾಮಸ್ ವರದಿಯ ಶಿಫಾರಸ್ಸಿನನ್ವಯ ಐ.ಟಿ.ಐ., ಸಿಬ್ಬಂದಿಗಳಿಗೆ ಸೌಲಭ್ಯಗಳನ್ನು ಕೊಡಬೇಕೆಂದು ಸರ್ಕಾರಿ ಆದೇಶ ಆಗಿದೆ. ಆದರೆ, ಅದು ಇದುವರೆವಿಗೂ ಸಹ ಜಾರಿಗೆ ಬರಲಿಲ್ಲ. ಅದಕ್ಕೆ time bound increment ಸಹ ಕೊಡುತ್ತಿಲ್ಲ ಏಕೆ? ಪಿಂಚಣಿ, ಗ್ರಾಚ್ಯುಟಿ ಸೇವಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೌಲಭ್ಯಗಳೆಲ್ಲವನ್ನು ನೀಡಿದ್ದರೂ ಸಹ ಅದಕ್ಕೆ ಸಂಬಂಧಿಸಿದ 1997ರ ಅನುದಾನ ಸಂಹಿತೆಗೆ ಥಾಮಸ್ ವರದಿಯ ಶಿಫಾರಸ್ಸಿನನ್ವಯ ತಿದ್ದುಪಡಿ ಮಾಡಬೇಕಾಗಿತ್ತು. ಅದನ್ನು ಇದುವರೆವಿಗೂ ಮಾಡಲಿಲ್ಲ. ಇದಕ್ಕೆ ಕಾರಣ ಏನು? ಆ ಮೇಲೆ ಖಜಾನೆ-2 ರಿಂದ ನೇರವಾಗಿ ನೌಕರರ ವೇತನವನ್ನು ಪ್ರತಿ ತಿಂಗಳು ಅವರ ಖಾತೆಗೆ ಜಮಾ ಮಾಡಬೇಕೆಂದು ಆದೇಶ ಇದ್ದರೂ ಸಹ, ಅದು ಸಹ ಇದುವರೆವಿಗೂ ಜಾರಿ ಆಗಿಲ್ಲ. ಇದಕ್ಕೆ ಕಾರಣ ಏನು? ವಿದ್ಯಾರ್ಥಿಗಳಿಂದ ಸಂಗ್ರಹಿಸುವಂತಹ ರೂ.2,400.00 ಗಳ ಬೋಧನಾ ಶುಲ್ಕವನ್ನು ಆಡಳಿತ ಮಂಡಳಿಯು ತಮ್ಮಲ್ಲಿಯೇ ಇಟ್ಟುಕೊಂಡು ಈ ವಿದ್ಯಾರ್ಥಿಗಳ ತರಬೇತಿಗಾಗಿ ಅದನ್ನು ಬಳಸಿಕೊಳ್ಳಬೇಕೆಂದು ಹೇಳಿ ಆರ್ಥಿಕ ಇಲಾಖೆಯವರು ಸಹಮತಿ ಕೊಟ್ಟಿದ್ದರೂ ಸಹ, ಅದು ಇದುವರೆಗೂ ಜಾರಿಗೆ ಬಂದಿಲ್ಲ. ಮಾನ್ಯ ಮಂತ್ರಿಗಳು ಸೂಚನೆಯನ್ನು ಕೊಟ್ಟಿದ್ದರೂ ಸಹ ಅದು ಆಗಲಿಲ್ಲ. ಇದುವರೆಗೂ ಕೇವಲ 16 ಜನರಿಗೆ ಮಾತ್ರ ನಿವೃತ್ತಿ ಸೌಲಭ್ಯವನ್ನು ಕೊಟ್ಟಿದ್ದಾರೆ. ಇನ್ನೂ 100 ರಷ್ಟು ಜನರಿಗೆ ಇದುವರೆಗೂ ಕೊಟ್ಟಿಲ್ಲ. ಸರ್ಕಾರಿ ಆದೇಶಗಳು ಆಗಿದ್ದರೂ ಸಹ, ಇವುಗಳು ಜಾರಿಗೆ ಬರುತ್ತಿಲ್ಲ. ದಯಮಾಡಿ ಮಾನ್ಯ ಮುಖ್ಯ ಮಂತ್ರಿಯವರು ಈ ಕೂಡಲೇ ಸರ್ಕಾರದ ಮಟ್ಟದಲ್ಲಿ ಏನು ತೀರ್ಮಾನ ತೆಗೆದುಕೊಳ್ಳಲಾಗಿದೆ ಮತ್ತು ಅದರಂತೆ ಐ.ಟಿ.ಐ., ಮತ್ತು ಇತರೆ ನೌಕರರಿಗೆ ಸರ್ಕಾರ ಏನು ಆದೇಶ ಮಾಡಿದೆ ಅದನ್ನು implement ಮಾಡಬೇಕೆಂಬುದು ನನ್ನ ಒತ್ತಾಯವಾಗಿದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಥಾಮಸ್ ವರದಿ 2007 ರಲ್ಲಿಯೇ ಬಂತು. ಈ ಹಿಂದಿನ ಸರ್ಕಾರಗಳು ಇದನ್ನು ಮಾಡಲಿಲ್ಲ. ಆಗ ಮಾನ್ಯ ಸದಸ್ಯರಾದ ಪುಟ್ಟಣ್ಣ ರವರು MLC ಆಗಿದ್ದರು. ಆಗ ಮಾನ್ಯ ಪುಟ್ಟಣ್ಣ ನವರಿಗೂ ಮತ್ತು ಬಿ.ಜೆ.ಪಿ.ಗೂ ಗೆಳೆತನ ಇತ್ತು. ಅದಕ್ಕೆ ಮಾನ್ಯ ಪುಟ್ಟಣ್ಣ ರವರು ಇದನ್ನು ಕೇಳಲಿಕ್ಕೆ ಹೋಗಲಿಲ್ಲ ಮತ್ತು ಒತ್ತಾಯ ಮಾಡುವುದಕ್ಕೂ ಸಹ ಹೋಗಿರುವುದಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಮಾಡಿದ್ದೇವೆ. ಥಾಮಸ್ ವರದಿಯ ಶಿಫಾರಸ್ಸಿನನ್ವಯ 196 ಅನುದಾನಿತ ಸಂಸ್ಥೆಗಳ ಪೈಕಿ ದಾಖಲೆಗಳನ್ನು ಹಾಗೂ ಸೇವಾ ವಹಿಗಳನ್ನು ಸಲ್ಲಿಸಿದ 196 ರಲ್ಲಿ 181 ಸಂಸ್ಥೆಗಳ ಅರ್ಹರಿರುವ ಸಿಬ್ಬಂದಿಗಳಿಗೆ ಸೌಲಭ್ಯಗಳನ್ನು ನೀಡಿದ್ದೇವೆ. ಇನ್ನು 15 ಸಂಸ್ಥೆಗಳಿಗೆ ಸೌಲಭ್ಯಗಳನ್ನು ನೀಡಬೇಕಾಗಿದೆ. ವರದಿ ತರಿಸಿಕೊಂಡು ಅದನ್ನು ಮಾಡುತ್ತಿದ್ದೇವೆ. ಸುಮಾರು 1888 ಜನ ಸಿಬ್ಬಂದಿಗಳಿಗೆ ಈಗಾಗಲೇ ಸೌಲಭ್ಯಗಳು ದೊರೆತಿವೆ. ಆದಷ್ಟು ಬೇಗ ವರದಿ ತರಿಸಿ ಕ್ರಮಕೈಗೊಳ್ಳುತ್ತೇವೆ. ಉಳಿದ ಶಿಫಾರಸ್ಸುಗಳನ್ನು ಸಹ implement ಮಾಡುತ್ತೇವೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಸರ್ಕಾರ ಮಾಡಿರುವ ಆದೇಶಗಳು implement ಆಗುತ್ತಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ, ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ, ಸರ್ಕಾರದಿಂದ ಆದೇಶ ಆಗಿದೆ. ಆದರೆ, ಸರ್ಕಾರದಲ್ಲಿರುವ ಅಧಿಕಾರಿಗಳು ಅದನ್ನು implement ಮಾಡುತ್ತಿಲ್ಲವೆಂದು ಕೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಕೊಡಲೇ ಅದನ್ನು implement ಮಾಡುತ್ತೇವೆ. ನಾವು ಏನೇನೂ ಶಿಫಾರಸುಗಳನ್ನು ಒಪ್ಪಿಕೊಂಡಿದ್ದೇವೆ ಅವುಗಳನ್ನು ಖಂಡಿತವಾಗಿ implement ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ, ಮಾನ್ಯ ಸದಸ್ಯರು ತಮ್ಮನ್ನು ಅಭಿನಂದಿಸಿದ್ದಾರೆ. ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ 2331**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾವು ಆದೇಶ ಮಾಡುವುದಕ್ಕೆ ಮುಂಚೆಯೇ ಪ್ರಶ್ನೆ ಕೇಳಿಬಿಟ್ಟಿದ್ದಾರೆ. ನಾವು ಈಗಾಗಲೇ ಆದೇಶ ಮಾಡಿದ್ದೇವೆ. ಆದ್ದರಿಂದ ಅವರಿಗೆ ಉತ್ತರ ಬೇಕಾಗಿಲ್ಲ ಎಂದು ಅನಿಸುತ್ತಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರ ಬೇಕಾಗಿದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ದಿನಾಂಕ 01.06.2017 ರಂದು ಆದೇಶ ಮಾಡಿದ್ದೇವೆ. ಮಾನ್ಯ ಎಂ.ಆರ್.ಶ್ರೀನಿವಾಸಮೂರ್ತಿ, ಮಾಜಿ ಐ.ಎ.ಎಸ್ ಅಧಿಕಾರಿ ಅವರ ಅಧ್ಯಕ್ಷತೆಯಲ್ಲಿ ಮಾನ್ಯ ಮೊಹಮ್ಮದ್ ಸನಾವುಲ್ಲಾ, ಸದಸ್ಯರು ಮತ್ತು ಮಾನ್ಯ ಆರ್.ಎಸ್.ಪೋಂಡೆ, ಸದಸ್ಯರು ಇವರುಗಳನ್ನು ಒಳಗೊಂಡ ಒಂದು ಕಮಿಟಿಯನ್ನು ಈಗಾಗಲೇ ಮಾಡಿದ್ದೇವೆ. ಅವರಿಗೆ 4 ತಿಂಗಳ ಕಾಲ ಟೈಮ್ ಕೊಟ್ಟಿದ್ದೇವೆ. ಅವರು ವರದಿ ಕೊಟ್ಟ ನಂತರ ಸರ್ಕಾರ ಅದನ್ನು ಪರಿಶೀಲನೆ ಮಾಡಿ we will take a decision. ಇದರಲ್ಲಿ ಇನ್ನೂ ಏನಿದೆ ಹೇಳುವುದಕ್ಕೆ? ಮಾನ್ಯ ಸಭಾಪತಿಯವರೆ, 5 ವರ್ಷಗಳು ಮುಗಿದ ತಕ್ಷಣವೇ ನಮ್ಮ ಸರ್ಕಾರವೇ ವೇತನ ಆಯೋಗವನ್ನು ಮಾಡಿರುವುದು. You must appreciate it.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, 6ನೇ ವೇತನ ಆಯೋಗವನ್ನು ರಚನೆ ಮಾಡಲು ಈಗಾಗಲೇ ಆರು ತಿಂಗಳ ಕಾಲ ತಡವಾಗಿದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಹಿಂದಿನ ವೇತನ ಆಯೋಗಗಳ ಇತಿಹಾಸಗಳನ್ನು ಒಂದು ಬಾರಿ ತೆಗೆದು ನೋಡಲಿ. 6 ವರ್ಷ, 7 ವರ್ಷ, 8 ವರ್ಷ ಈ ರೀತಿ ಎಲ್ಲಾ ಮಾಡಿದ್ದಾರೆ. ಕೇಂದ್ರ ಸರ್ಕಾರದಲ್ಲಿ 10 ವರ್ಷಕ್ಕೊಮ್ಮೆ ವೇತನ ಆಯೋಗ ಮಾಡುತ್ತಾರೆ. ನಾವು 5 ವರ್ಷ ಮುಗಿದ ತಕ್ಷಣವೆ ಮಾಡಿದ್ದೇವೆ. You must appreciate it. Government stand appreciate ಮಾಡದೆ ಹೋದರೆ, wrong message would go to the people. ಮಾನ್ಯ ಸಭಾಪತಿಯವರೆ, ವೇತನ ಆಯೋಗವನ್ನು ರಚನೆ ಮಾಡಿದ ಮೇಲೂ ಸಹ ಮಾನ್ಯ ಸದಸ್ಯರು ನಮಗೆ thanks ಹೇಳಿಲಿಲ್ಲವೆಂದರೆ ಹೇಗೆ?

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಯವರೇ, ಮಾನ್ಯ ಸದಸ್ಯರಾದ ಪುಟ್ಟಣ್ಣನವರು ತಮಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಧ್ಯಂತರ ಪರಿಹಾರವನ್ನು ಕೊಡುತ್ತೀರಾ? ಮಧ್ಯಂತರ ಪರಿಹಾರವನ್ನು ನೀಡುವುದಕ್ಕೆ ಕಮಿಟಿಯಿಂದ ವರದಿಯನ್ನು ಪಡೆಯುತ್ತೀರಾ? ಎಂಬುದನ್ನು ಕೇಳಬಹುದು. ಮೊದಲು ಕಮಿಟಿಯಿಂದ ವರದಿ ಬರಲಿ, ಆ ಮೇಲೆ ಅದನ್ನು ನೋಡೋಣ. ನಾನು ಕಮಿಟಿಯಿಂದ ವರದಿ ಬರುವುದಕ್ಕೆ ಮುಂಚೆಯೇ ಏನು ಹೇಳಲಿ? ಇದು "ಕೂಸು ಹುಟ್ಟುವುದಕ್ಕೆ ಮುಂಚೆಯೇ ಕುಲಾಯಿ ಹೊಲಿಸಿದರಂತೆ" ಎಂಬ ಗಾದೆ ಮಾತಿನಂತೆ ಆಗುತ್ತದೆ. ನಾವು ಸರ್ಕಾರಿ ನೌಕರರ ಬೇಡಿಕೆಗಳ ಪರವಾಗಿ ಇದ್ದೇವೆ. ಈಗಾಗಲೇ ವೇತನ ಆಯೋಗ ಮಾಡಿದ್ದೇವೆ. ಇನ್ನೇನು ಆಗಬೇಕು ಮಾನ್ಯ ಸಭಾಪತಿಯವರೆ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟರೆ ಉಳಿದ ಕಷ್ಟಗಳನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, there is no scope for supplementary questions. Where is the scope for it?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವುದಕ್ಕೆ ಬಿಡುತ್ತಿಲ್ಲ. ಮಾನ್ಯ ಸದಸ್ಯರು ಇನ್ನೇನು ಮಾತನಾಡುತ್ತಾರೆ ಹೇಳಿ?

**Sri SIDDARAMAIAH:** Mr. Somanna, there is no scope for supplementary questions. ಮಾನ್ಯ ವಿ.ಸೋಮಣ್ಣನವರು ಹಿರಿಯ ಸದಸ್ಯರು ಇದ್ದಾರೆ. ಅವರು ಈ ರೀತಿ ಹೇಳಬಾರದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, 6ನೇ ವೇತನ ಆಯೋಗವನ್ನು ರಚನೆ ಮಾಡಿರುವುದಕ್ಕೆ ಗೌರವ್ವಾನಿತ ಮಾನ್ಯ ಮುಖ್ಯ ಮಂತ್ರಿಗಳನ್ನು ಹಾಗೂ ಸರ್ಕಾರವನ್ನು ನಾನು ಮನಃಪೂರ್ಕವಾಗಿ ಸಮಸ್ತ ಸರ್ಕಾರಿ ನೌಕರರ ಪರವಾಗಿ ಅಭಿನಂದಿಸುತ್ತೇನೆ. ಆದರೆ, ಇಲ್ಲಿ ಪೂರಕ ಪ್ರಶ್ನೆಗಳು ಇವೆ. ಮಾನ್ಯ ಮುಖ್ಯ ಮಂತ್ರಿಯವರು ಏಕೋ ಏನೋ ಪ್ರಶ್ನೆ ಈ) ರಿಂದ ಊ) ರಲ್ಲಿನ ಪ್ರಶ್ನೆಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಈಗಾಗಲೇ ಮಹಾರಾಷ್ಟ್ರ ರಾಜ್ಯ ಸರ್ಕಾರ ಸೇರಿದಂತೆ ಬಹುಪಾಲು ರಾಜ್ಯಗಳು ಕೇಂದ್ರದ ವೇತನ ಶ್ರೇಣಿಯನ್ನು ಯಥಾವತ್ತಾಗಿ ಕೊಡುವಂತಹ ಪರಂಪರೆ ನಮ್ಮ ದೇಶದಲ್ಲಿದೆ. ನಮ್ಮ ಸರ್ಕಾರಿ ನೌಕರರ ವೇತನಕ್ಕೂ ಮತ್ತು ಕೇಂದ್ರ ಸರ್ಕಾರಿ ನೌಕರ ವೇತನಕ್ಕೂ ಸುಮಾರು ಶೇಕಡಾ 70 ರಿಂದ 80 ರಷ್ಟು ದೊಡ್ಡ ಅಂತರವಿದೆ. ಮಾರುಕಟ್ಟೆಗೆ ಹೋದರೆ ಹಣ್ಣಿನ ಬೆಲೆ, ತರಕಾರಿ ಬೆಲೆ ನಮ್ಮ ರಾಜ್ಯ ಸರ್ಕಾರಿ ನೌಕರರಿಗೊಂದು ಬೆಲೆ ಮತ್ತು ಕೇಂದ್ರ ಸರ್ಕಾರಿ ನೌಕರರಿಗೊಂದು ಬೆಲೆ ಇರುವುದಿಲ್ಲ. ಇಲ್ಲಿ ನನ್ನ ಪ್ರಶ್ನೆ ಏನೆಂದರೆ, ಈಗಗಾಲೇ 4 ತಿಂಗಳ ಕಾಲ ತಡವಾಗಿ ವೇತನ ಆಯೋಗ ರಚನೆ ಆಗಿದೆ. ಇದರ ವ್ಯಾಪ್ತಿ ಜನವರಿ 2017 ಕ್ಕೆ ಮುಗಿದು ಹೋಗಿದೆ. ನಮ್ಮ ರಾಜ್ಯದ ಸರ್ಕಾರಿ ನೌಕರರ ಸಂಘದ ಎಲ್ಲಾ ಪದಾಧಿಕಾರಿಗಳು ವೇತನ ಆಯೋಗ ರಚನೆ ಮಾಡುವುದಕ್ಕೆ ಮುಂಚೆಯೇ ಶೇಕಡಾ 30% ಮಧ್ಯಂತರ ಪರಿಹಾರ ಕೊಡಿ ಎಂದು ಸರ್ಕಾರಕ್ಕೆ ಮನವಿಯನ್ನು ಮಾಡಿದ್ದರು. ಜೊತೆಗೆ ಇಂತಹ ನೂರಾರು ನಿದರ್ಶನಗಳು ನಮ್ಮ ಮುಂದೆ ಇವೆ. ಪಶ್ಚಿಮ ಬಂಗಾಳದಲ್ಲಿ ವೇತನ ಆಯೋಗ ರಚನೆ ಮಾಡಿದ್ದಾರೆ. ಅವರು ಶೇಕಡಾ 10% ಮಧ್ಯಂತರ ಪರಿಹಾರ ಕೊಟ್ಟಿದ್ದಾರೆ. ಆಂಧ್ರ ಪ್ರದೇಶದಲ್ಲಿ ವೇತನ ಆಯೋಗ ರಚನೆ ಮಾಡಿದ್ದಾರೆ. ಅವರು ಶೇಕಡಾ 27% ಮಧ್ಯಂತರ ಪರಿಹಾರ ಕೊಟ್ಟಿದ್ದಾರೆ. ಜಮ್ಮು–ಕಾಶ್ಮೀರದಲ್ಲಿ ಶೇಕಡಾ 20% ಮಧ್ಯಂತರ ಪರಿಹಾರ ಕೊಟ್ಟು ನಂತರ ಯಥಾವತ್ತಾಗಿ ಕೇಂದ್ರ ಸರ್ಕಾರದ ವೇತನ ಆಯೋಗದ ಶ್ರೇಣಿಯನ್ನು ಒಪ್ಪಿಕೊಂಡಿದ್ದಾರೆ. ಪಂಜಾಬ್‌ನಲ್ಲಿ ಸಹ ಕೊಟ್ಟಿದ್ದಾರೆ. ಸರ್ಕಾರ 4 ತಿಂಗಳ ಕಾಲಮಿತಿಯನ್ನು ಕಮಿಟಿಗೆ ಕೊಟ್ಟಿದೆ. ಆದರೆ, ಯಾರು ಸಹ 4 ತಿಂಗಳ ಕಾಲವಧಿಯಲ್ಲಿ ವರದಿಯನ್ನು ಕೊಡುವುದಿಲ್ಲ. ಅದು ಇನ್ನೂ 2–3 ತಿಂಗಳ ಕಾಲ ಮುಂದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುತ್ತದೆ. ಈಗಾಗಲೇ 4 ತಿಂಗಳ ಕಾಲ ಕಳೆದಿದೆ. ಹೆಚ್ಚು ಕಡಿಮೆ 11 ತಿಂಗಳು ಅಥವಾ ಒಂದು ವರ್ಷ ಮುಗಿದು ಹೋಗುತ್ತದೆ. ಇಲ್ಲಿ ನನ್ನ ಪ್ರಶ್ನೆ ಏನೆಂದರೆ, ಕೇಂದ್ರ ಸರ್ಕಾರಿ ನೌಕರರ ವೇತನಕ್ಕೂ ಮತ್ತು ನಮ್ಮ ರಾಜ್ಯ ಸರ್ಕಾರಿ ನೌಕರರ ವೇತನಕ್ಕೂ ದೊಡ್ಡ ಅಂತರ ಇದೆ. ಈಗಾಗಲೇ ಒಂದು ವರ್ಷ ತಡವಾಗುತ್ತಿದೆ. ಸರ್ಕಾರ ಏನಾದರೂ ಮಾಡಿ ಮಧ್ಯಂತರ ಪರಿಹಾರ ಕೊಡಬೇಕು. ಈ ಕುರಿತು ಈಗಾಗಲೇ ನೌಕರರು ಸರ್ಕಾರಕ್ಕೆ ಆಗ್ರಹ ಮಾಡಿರುವಂತಹದ್ದನ್ನು ಈಡೇರಿಸಬೇಕು. ಮಾನ್ಯ ಮುಖ್ಯ ಮಂತ್ರಿಯವರು ವೇತನ ಆಯೋಗದ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅದೇ ರೀತಿ ಮಧ್ಯಂತರ ಪರಿಹಾರ ನೀಡುವ ಬಗ್ಗೆಯೂ ಸಹ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

(610) 12.10 08-06-2017 ಎಂವಿ:ಎಕೆ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಈಗ ಇವರ ಪ್ರಶ್ನೆ ಏನು ಅಂದರೆ, ಕೇಂದ್ರ ಸರ್ಕಾರದವರು ಏಳನೇ ವೇತನ ಆಯೋಗವನ್ನು ಮಾಡಿ, ಅದನ್ನು ಜಾರಿ ಮಾಡಿದ್ದಾರೆ. ಇಡೀ ದೇಶದಲ್ಲಿ ಎಲ್ಲಾ ರಾಜ್ಯಗಳೂ ಕೂಡ ಅದನ್ನು ಒಪ್ಪಿಕೊಂಡು ಜಾರಿ ಮಾಡಿಲ್ಲ. It is a fact that some of the States have implemented the recommendations of the 7th Pay Commission of the Government of India. ಮಾನ್ಯ ಸದಸ್ಯರಾದಂತಹ ಶ್ರೀ ಕೆ.ಟಿ.ಶ್ರೀಕಂಠೇಗೌಡರೆ ನಿಮಗೇನೂ ತೊಂದರೆ ಇಲ್ಲ. ನೀವು ಎಂ.ಎಲ್.ಸಿ.ನೂ ಆಗಿದ್ದೀರಿ ಮತ್ತು ಅಲ್ಲಿ ಪ್ರಾಚಾರ್ಯರು ಸಹ ಆಗಿದ್ದೀರಿ. ಆದುದರಿಂದ ನಿಮಗೆ ಏನೂ ತೊಂದರೆ ಆಗುವುದಿಲ್ಲ ಇದರ ಅಗತ್ಯನೂ ಇಲ್ಲ. ನಮ್ಮ ರಾಜ್ಯದಲ್ಲಿ ಮೊದಲಿನಿಂದಲೂ ಕೂಡ ನಾವೇ ಒಂದು Pay Committee ಅಥವಾ Pay Commission ಅನ್ನು ರಚನೆ ಮಾಡಿಕೊಂಡು ಬರುತ್ತಿದ್ದೇವೆ. ಈಗ ನಾವು 6th Pay Commission ಮಾಡಿದ್ದೇವೆ, ಅವರಿಗೆ ನಾಲ್ಕು ತಿಂಗಳ ಸಮಯ ಕೊಟ್ಟಿದ್ದೇವೆ. ಅವರು ವರದಿ ಕೊಡಲಿ, ಇವರ ಪ್ರಕಾರ ಅದು ನಾಲ್ಕು ತಿಂಗಳಲ್ಲಿ ಆಗುವುದಿಲ್ಲವೆಂದು ಹೇಳುತ್ತಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, I am urging for Interim Relief.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅವರು Interim Relief ಕೇಳುತ್ತಿದ್ದಾರೆ, ನೋಡೋಣ ವರದಿ ಕೊಡಲಿ, ಇನ್ನೂ ವರದಿಯನ್ನು ಕೊಡುವುದಕ್ಕೆ ಮುಂಚೆಯೇ Interim Relief

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಿ, Final Relief ಕೊಡಿ ಆಮೇಲೆ ಇನ್ನಾವುದೋ Mid-term Relief ಕೊಡಿ. ಅವುಗಳನ್ನೆಲ್ಲಾ ಈಗಲೇ ಹೇಳುವುದಕ್ಕೆ ಆಗುವುದಿಲ್ಲ. ಆದುದರಿಂದ ವೇತನ ಆಯೋಗವನ್ನು ಮಾಡಿದ್ದೇವೆ ಅದರ ವರದಿ ಬರಲಿ, ಆ ವರದಿ ಬಂದ ಮೇಲೆ we will take a decision. ಈ ಹಿಂದೆ ಕೂಡ ನಾವು ವೇತನ ಆಯೋಗ ರಚನೆ ಮಾಡಿದ್ದೇವೆ, ಈ ಹಿಂದೆ ಹಣಕಾಸು ಮಂತ್ರಿ ಆಗಿದ್ದಾಗ ಕೂಡ ಈ ಕೆಲಸ ಮಾಡಿದ್ದೇನೆ. ಆಗಲೂ ಕೂಡ Interim Relief ಅನ್ನು ಕೊಟ್ಟಿರಲಿಲ್ಲ. ಅದಕ್ಕೆ ನಾನು ಹೇಳುವುದು ಏಳನೇ ವೇತನ ಆಯೋಗಕ್ಕೆ ಸಂಬಂಧಪಟ್ಟ ಹಾಗೆ, ತಾರತಮ್ಯ ಇರುವುದರ ಬಗ್ಗೆ ಇವರೆಲ್ಲಾ ವೇತನ ಆಯೋಗದ ಮುಂದೆ ಹೋಗಿ ಅವರಿಗೆ ಮನವಿ ಕೊಡಲಿ. I hope that they will consider all their grievances. ನೀವು ಮೊದಲು ಹೋಗಿ ಅವರಿಗೆ ಮನವಿ ಕೊಡಿ, ಶ್ರೀ ಕೆ.ಟಿ.ಶ್ರೀಕಂಠೇಗೌಡರೇ as President of the Principals' Association ನೀವು ಹೋಗಿ ಅವರಿಗೆ ಒಂದು memorandum ಕೊಡಿ, ನೀವು ಇಲ್ಲಿ ಏನು ಹೇಳುತ್ತಿದ್ದೀರಿ ಅದನ್ನೆಲ್ಲಾ ಅಲ್ಲಿಗೆ ಹೋಗಿ ಹೇಳಿ. ಆಮೇಲೆ ಅವರು ಅದನ್ನೆಲ್ಲಾ examine ಮಾಡುತ್ತಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ತಾರತಮ್ಯದ ವಿಚಾರದಲ್ಲಿ ಆಯೋಗಗಳು ಏನು ಹೇಳುತ್ತವೆ ಎಂದರೆ, ತಾರತಮ್ಯವನ್ನು ಸರ್ಕಾರದ ಹಂತದಲ್ಲೇ ಪರಿಹಾರ ಮಾಡಿಕೊಂಡು ಬನ್ನಿ, ಅದು ನಮ್ಮ ಜವಾಬ್ದಾರಿ ಅಲ್ಲವೆಂದು ಹೇಳುತ್ತಾರೆ. ಅದಕ್ಕಾಗಿಯೇ ನಾನು ಹೇಳವುದು, ತಾವು ಮಾತು ಕೊಟ್ಟಿದ್ದೀರಿ, ಸರ್ಕಾರವೆ ಅಧಿಕೃತವಾಗಿ ಶಿಫಾರಸ್ಸು ಮಾಡುತ್ತದೆಂದು

**ಸಭಾಪತಿಯವರು:–** ಮೊದಲು ವೇತನ ಆಯೋಗದ ವರದಿ ಬರಲಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮೊದಲು ವೇತನ ಆಯೋಗದ ವರದಿ ಬರಲಿ, ಆಮೇಲೆ ನೋಡೋಣ, ತಮ್ಮ ಮನವಿಗಳನ್ನೆಲ್ಲಾ ಅವರ ಮುಂದೆ ಮಾಡಿ, ಅವರು ಏನು ಹೇಳುತ್ತಾರೋ ಅದನ್ನು ನೋಡೋಣ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕಳೆದ ಬಾರಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾದರೆ, ನನಗೆ ಇಲ್ಲಿಯವರೆಗಿನ ವೇತನ ಆಯೋಗಗಳ ಮತ್ತು ವೇತನ ಸಮಿತಿಗಳ ವರದಿಗಳ ಕಾಪಿಯನ್ನು ಕೊಡಿ ಎಂದು ಕೇಳಿದ್ದೆ. ನಾನು ಮುಖ್ಯಮಂತ್ರಿಯವರಿಗೆ ಪತ್ರವನ್ನು ಸಹ ಬರೆದಿದ್ದೇನೆ. ನನಗೆ ಕಾಪಿ ಸಿಕ್ಕಿಲ್ಲ, ತಾವು ಕೊಡುತ್ತೇನೆಂದು ಭರವಸೆ ಕೊಟ್ಟಿದ್ದೀರಿ.

ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲ್ಲಿಯವರೆಗಿನ ಎಲ್ಲಾ ವೇತನ ಆಯೋಗಗಳು ಮತ್ತು ವೇತನ ಸಮಿತಿಗಳ ವರದಿಯ ಕಾಪಿ ನನಗೆ ಬಂದಿಲ್ಲ.

**ಸಭಾಪತಿಯವರು:–** ಹಳೇ ವೇತನ ಆಯೋಗಗಳ ಮತ್ತು ವೇತನ ಸಮಿತಿಗಳ ವರದಿಗಳನ್ನು ಕೇಳಿದ್ದೆ, ನೀವು ಕೊಡಿಸುತ್ತೇನೆಂದು ಹೇಳಿದ್ದೀರಿ, ಅವರು ಅದನ್ನು ಕೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅವರಿಗೆ ಹಳೇ ಆಯೋಗಗಳ ವರದಿ ಬೇಕೆ? ಏನು ತೀರ್ಮಾನ ಮಾಡಿದ್ದೇವೆಂದು, ಅದನ್ನು ಕೊಡೋಣ, no problem.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಇಬ್ಬರು ಸೇರಿ ಕೊಟ್ಟಿದ್ದಾರೆ, ಸದಸ್ಯರಾದಂತಹ ಶ್ರೀ ಎಂ.ಕೆ.ಪ್ರಾಣೇಶ್ ಮತ್ತು ಶ್ರೀ ಭಾನುಪ್ರಕಾಶ್, ಯಾರಾದರೂ ಒಬ್ಬರು ಕೇಳಿ ಮತ್ತೆ ನೋಡೋಣ.

**<u>ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ 2398 + 2425.</u>**

**<u>(ಉತ್ತರವನ್ನು ಒದಗಿಸಲಾಗಿದೆ)</u>**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೆ, ಬಹುಶಃ ನಾನು ಮೊನ್ನೆ ಈ ಪ್ರಶ್ನೆಯನ್ನು ಕೇಳಿದ್ದೆ, ಆದರೆ, ನಿನ್ನೆ ದಿವಸ ಕ್ಯಾಬಿನೆಟ್‌ನಲ್ಲಿ ಒಂದು ನಿರ್ಧಾರವನ್ನೂ ಕೂಡ ತೆಗೆದುಕೊಂಡು ಬಿಟ್ಟಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅವರ ಪರವಾಗಿ ಇವರು ಪ್ರಶ್ನೆ ಕೇಳುತ್ತಿದ್ದಾರೆಯೆ?

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೆ, ನಾವಿಬ್ಬರು ಕೇಳಿದ್ದೇವೆ, ನಾನು ಮತ್ತು ಮಾನ್ಯ ಸದಸ್ಯರಾದಂತಹ ಶ್ರೀ ಭಾನುಪ್ರಕಾಶ್.

**ಸಭಾಪತಿಯವರು:–** ಭಾನುಪ್ರಕಾಶ್ ಮತ್ತು ಅವರು ಇಬ್ಬರದ್ದು ಒಂದೇ ಪ್ರಶ್ನೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಮುಖ್ಯಮಂತ್ರಿಗಳು, ತಾವು ಮುಖ್ಯಮಂತ್ರಿ ಆದಂತಹ ಸಂದರ್ಭದಲ್ಲಿ ಈ ಒಂದು ಡಿನೋಟೀಫಿಕೇಶನ್ ವಿರುದ್ದವೇ ಹೋರಾಟ ಮಾಡಿದಂತಹ ನಿಮ್ಮ ನೇತೃತ್ವದ ಸರ್ಕಾರ, ಇವತ್ತಿನ ದಿವಸ ಮದ್ಯದಂಗಡಿಗಳ ರಕ್ಷಣೆಗೋಸ್ಕರ ಡಿನೋಟಿಫೈ ಮಾಡಿ, ಮತ್ತೆ ಅವುಗಳನ್ನು ಅಲ್ಲೆ ಉಳಿಸುವಂತಹ ಪ್ರಯತ್ನಗಳನ್ನು ಮಾಡುತ್ತಿದ್ದೀರಿ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿನ ಪತ್ರಿಕೆಯಲ್ಲಿ ನಾನು ನೋಡಿದೆ. ನಿಜವಾಗಿಯೂ ಇದು ದುರಾದೃಷ್ಟಕರ ಎಂದು ನಾನು ಭಾವಿಸಿದ್ದೇನೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಜನರ ಬದುಕಿನ ಬಗ್ಗೆ, ಆರೋಗ್ಯದ ಬಗ್ಗೆ ಚಿಂತನೆಯನ್ನು ಮಾಡಬೇಕಾಗಿರುವಂತಹ ಸರ್ಕಾರ. ಮದ್ಯದಂಗಡಿಗಳನ್ನು ನಿಲ್ಲಿಸಬೇಕು, ಬಂದ್ ಮಾಡಬೇಕು, ಆದಷ್ಟು ದೂರ ಹಾಕಬೇಕು ಎಂದು ಮಹಿಳಾ ಸಂಘಟನೆಗಳು ಸಾಕಷ್ಟು ಹೋರಾಟಗಳನ್ನು ಮಾಡುತ್ತಿವೆ. ಅದರ ಬಗ್ಗೆ ಯೋಚನೆಯನ್ನು ಮಾಡುವಂತಹ ಸಂದರ್ಭದಲ್ಲಿ, ನಿಮ್ಮಂತಹ ಮುಖ್ಯಮಂತ್ರಿಗಳು ಮದ್ಯದಂಗಡಿಗಳಿಗೆ ಪುನಃ ಆದ್ಯತೆಯನ್ನು ಕೊಡುವಂತಹ ಒಂದು ಚಿಂತನೆಯನ್ನು ಮಾಡಿ, ಇವತ್ತಿನ ದಿವಸ ರಸ್ತೆಗಳನ್ನು ಡಿನೋಟಿಫೈ ಮಾಡುವುದಕ್ಕೆ ಹೊರಟಿದ್ದೀರಿ ಎಂದು ಹೇಳಿದರೆ, ಇದಕ್ಕೆ ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆಂದು ನಾನು ಭಾವಿಸುತ್ತೇನೆ. ಬಹುಶಃ ರೈತರುಗಳ ಸಂಕಷ್ಟಗಳು ಇದ್ದಂತಹ ಸಂದರ್ಭದಲ್ಲಿ, ಸುಪ್ರೀಂಕೋರ್ಟ್‌ನ ಆದೇಶ ಇದೆ ಎಂದು ಹೇಳಿ ಅವರ ಆಶಯಗಳನ್ನು ಗಾಳಿಗೆ ತೂರುವಂತಹ ವ್ಯವಸ್ಥೆಗಳು ಕೂಡ ಆಗಿವೆ ಎಂದು ನಾನು ಭಾವಿಸಿದ್ದೇನೆ. ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ, ಇವತ್ತಿನ ದಿವಸ ರೈತರುಗಳು ಹಲವಾರು ವರ್ಷಗಳಿಂದ ಎಲ್ಲೋ ಒಂದು ಕಡೆ ತಮ್ಮ ಬದುಕಿನ ಜೀವನವನ್ನು ನಡೆಸಿಕೊಳ್ಳುವುದಕ್ಕೋಸ್ಕರ ಅರಣ್ಯ ಇಲಾಖೆಯಲ್ಲಿ ಇರಬಹುದು ಅಥವಾ ಕಂದಾಯ ಇಲಾಖೆಯಲ್ಲಿನ ಸ್ವಲ್ಪ-ಮಟ್ಟ ಜಾಗಗಳನ್ನು ಮಾಡಿದ್ದಾರೆ. ಜಾಗ ಮಾಡಿದಂತಹ ಸಂದರ್ಭದಲ್ಲಿ ಅವರನ್ನು ಒಕ್ಕಲೆಬ್ಬಿಸುವಂತಹ ವ್ಯವಸ್ಥೆ ಆಗುತ್ತಿದೆ. ಆಗ ನಾವು ಸರ್ಕಾರದ ಮುಂದೆ ಬಂದಂತಹ ಸಂದರ್ಭದಲ್ಲಿ, ಇದು ಸುಪ್ರೀಂಕೋರ್ಟ್‌ನ ಆದೇಶ, ಇದರೊಳಗಡೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿ ತಮ್ಮ ಬೆಟ್ಟನ್ನು ಸುಪ್ರೀಂಕೋರ್ಟ್‌ನ ಕಡೆ ತೋರಿಸುತ್ತೀರಿ. ಆದರೆ, ಇವತ್ತಿನ ದಿವಸ ಸುಪ್ರೀಂಕೋರ್ಟ್ ಮದ್ಯದ ಅಂಗಡಿಗಳನ್ನು 500 ಮೀಟರ್ ದೂರದ ಅಂತರದಲ್ಲಿ ಇಡಿ ಎಂದು ಹೇಳಿದಂತಹ ಸಂದರ್ಭದಲ್ಲಿ. ಇದು ಆರೋಗ್ಯಕ್ಕೆ ಹಾನಿಕರ, ಇದರ ಅವಶ್ಯಕತೆ ಏನಿದೆ. ಬದುಕಿಗೋಸ್ಕರ ಇದರ ಅವಶ್ಯಕತೆ ಇಲ್ಲವೆಂದು ಹೇಳುವ ಬದಲು ಅವರ ರಕ್ಷಣೆಗೋಸ್ಕರ ಡಿನೋಟಿಫೈ ಮಾಡುತ್ತಿರುವುದು ಸರಿಯಲ್ಲ, ಅದರ ಬದಲು ಮನುಷ್ಯನ ಬದುಕಿಗೆ ಇರುವಂತಹುದು ಜಾಗ. ಆ ಜಾಗವನ್ನು ಉಳಿಸುವುದಕ್ಕೆ ಡಿನೋಟಿಫೈ ಮಾಡಿ, ಸುಪ್ರೀಂಕೋರ್ಟ್‌ಗೆ ಮಾಹಿತಿ ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗಿತ್ತು. ಆದರೆ, ಅದನ್ನು ಮಾಡಲಿಲ್ಲ. ಇದನ್ನು ನಾವು ಗಂಭೀರವಾಗಿ ಯೋಚನೆ ಮಾಡಬೇಕು, ಏಕೆಂದರೆ ಸನ್ಮಾನ್ಯ ಮುಖ್ಯಮಂತ್ರಿಗಳ ಹಲವಾರು ಯೋಜನೆಗಳು, ಆರೋಗ್ಯದ ದೃಷ್ಟಿಯಿಂದ ಇರಬಹುದು, ಬಡವರ ದೃಷ್ಟಿಯಿಂದ ಇರಬಹುದು, ಕಾರ್ಯಕ್ರಮಗಳನ್ನು ತಾವು ಜೋಡಿಸಿದ್ದೀರಾ, ಆ ಜೋಡಿಸಿರುವುದರೊಳಗಡೆ ಏಕೆ ಈ ಕಪ್ಪುಚುಕ್ಕೆ ಆಗಬೇಕು. ನೀವು ಏಕೆ ಯೋಚನೆಯನ್ನು ಮಾಡಬಾರದು, ನನ್ನ ಅಹವಾಲು ಇಷ್ಟೇ, ಇದರ ಅವಶ್ಯಕತೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆಯಾ. ಸುಪ್ರೀಂಕೋರ್ಟ್ ಇಂತಹ ಒಂದು ಒಳ್ಳೆಯ ನಿರ್ಧಾರವನ್ನು ತೆಗೆದುಕೊಂಡಿದೆ. ಹೈವೆಯಿಂದ ದೂರ ಮದ್ಯದಂಗಡಿಗಳು ಇರಬೇಕಾಗಿದೆ, ಅದಕ್ಕೆ ಒಪ್ಪಿಕೊಳ್ಳಿ, ಅದರ ಬದಲು ರಸ್ತೆಗಳನ್ನು ಡಿನೋಟಿಫೈ ಮಾಡಿ, ಆ N.H. (National Highway) ಅನ್ನು ಕೂಡ ಬದಲಾವಣೆ ಮಾಡುವುದು ಬೇಡ. ಬೇರೆ ರಾಜ್ಯದಲ್ಲಿ ಏನು ಬೇಕಾದರೂ ಮಾಡಲಿ, ಅದರ ಬಗ್ಗೆ ನಾನು ಸದನದಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಕರ್ನಾಟಕ ರಾಜ್ಯದ ಬಗ್ಗೆ ಮಾತ್ರ ಯೋಚನೆ ಮಾಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನನ್ನ ಅಹವಾಲು ಏನೆಂದರೆ ನೀವು ಬೇರೆ ರಾಜ್ಯಗಳ ಬಗ್ಗೆ ಯೋಚನೆ ಮಾಡುವಂತಹ ಅವಶ್ಯಕತೆ ಇಲ್ಲ. ನಮ್ಮ ರಾಜ್ಯದ ಭವಿಷ್ಯದ ದೃಷ್ಟಿಯಿಂದ, ನಮ್ಮ ಜನರ ಹಿತದೃಷ್ಟಿಯಿಂದ, ಸುಪ್ರೀಂಕೋರ್ಟ್‌ನ ಆದೇಶ ಏನು ಆಗಿದೆ, ಆ ಸುಪ್ರೀಂಕೋರ್ಟ್‌ನ ಆದೇಶವನ್ನು ಪಾಲನೆ ಮಾಡುವಂಥದ್ದನ್ನು ತಾವು ಮಾಡಬೇಕು. ಇದೊಂದು ಒಳ್ಳೆಯ ಯೋಜನೆ ರಾಜಕೀಯವನ್ನು ಹೊರತುಪಡಿಸಿರುವಂಥದ್ದು.

**ಸಭಾಪತಿಯವರು:-** ನಿಮ್ಮ ಪ್ರಶ್ನೆ?

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಇಷ್ಟೇ, ನಾನು ಕೇಳಿರುವಂಥದ್ದು, ಇದನ್ನು ಎಷ್ಟು ಮಾಡಿದ್ದೀರಾ ಎಂಬುದಕ್ಕೆ ಸಹಜಸವಾದ ಉತ್ತರಗಳು ಸಿಕ್ಕಿವೆ. ನಾನು ಬೇರೆ ಪ್ರಶ್ನೆಗಳನ್ನು ಕೇಳಿದ್ದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅವರು ಹೀಗೆ ಭಾಷಣ ಮಾಡಿದರೆ ಹೇಗೆ, ಅವರು ಪ್ರಶ್ನೆ ಕೇಳಲಿ.

**ಸಭಾಪತಿಯವರು:-** ನಿಮ್ಮ ಪ್ರಶ್ನೆ ಏನೆಂದು ಕೇಳಿ, ಅವರು ಉತ್ತರ ಕೊಡುತ್ತಾರೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಶ್ನೆ ಕೇಳಿದ್ದೇನೆ. ತಮ್ಮ ಮುಂದೆ ಕೇಳಿರುವಂಥದ್ದು ಮೊದಲನೆಯದಾಗಿ ಎಂ.ಎಸ್.ಐ.ಎಲ್. ಮಳಿಗೆ ತೆರೆಯಲು ಎಷ್ಟು ಸ್ಥಳಗಳನ್ನು ಗುರುತಿಸಿದ್ದೀರಿ ಎಂದು ಕೇಳಿದ್ದೇನೆ. ಈ ಎಂ.ಎಸ್.ಐ.ಎಲ್. ಮಳಿಗೆ ತೆರೆದರೆ ಮಾತ್ರ ಈ ಬ್ರಾಂದಿ ಶಾಪ್‌ಗಳು ಹೊರಗೆ ಹೋಗುವಂತಹ ವ್ಯವಸ್ಥೆಗಳಾಗುತ್ತವೆ ಮತ್ತೆ ಸಾಮಾನ್ಯ ಜನರಿಗೆ ಯಾವ burden ಆಗುವುದಿಲ್ಲ. ಇಷ್ಟು ತೆಗೆಯುವುದಕ್ಕೆ ಎಂದು ಉತ್ತರವನ್ನು ಕೊಟ್ಟಿದ್ದೀರಾ. ಆದರೆ, ನಾನು ಕೇಳಿದ ಪ್ರಶ್ನೆಗೆ ನೀವು ಆಗಲೇ ನಿನ್ನೆಯ ದಿವಸ ಕ್ಯಾಬಿನೆಟ್‌ನಲ್ಲಿ ನಿರ್ಧಾರವನ್ನು ಮಾಡಿದ್ದೀರಾ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕೋಸ್ಕರ ಈ ಮಾತನ್ನು ನಾನು ಮಾತನಾಡಬೇಕಾದಂತಹ ಅವಶ್ಯಕತೆ ಬಂತು. ಸನ್ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸುಪ್ರೀಂಕೋರ್ಟ್‌ನವರು ಇತ್ತೀಚೆಗೆ ಒಂದು ಆದೇಶ ಮಾಡಿದ್ದಾರೆ, ಅಂದರೆ ಡಿಸೆಂಬರ್ ತಿಂಗಳಿನಲ್ಲಿ ಮದ್ಯದಂಗಡಿಗಳನ್ನು ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಯಿಂದ 500 ಮೀಟರ್ ಅಂತರಕ್ಕಿಂತ ಕಡಿಮೆ ದೂರಲ್ಲಿರುವ ಅವುಗಳನ್ನು ರದ್ದು ಮಾಡಬೇಕೆಂದು ಅಂದರೆ ಅವುಗಳನ್ನೆಲ್ಲಾ ಮುಚ್ಚಬೇಕೆಂದು, ಈ ಬ್ರಾಂದಿ ಮಾರುವವರು, ಸಾರಾಯಿ ಮಾರುವವರು ಮತ್ತು ರೆಸ್ಟೋರೆಂಟ್‌ಗಳು ಇರುವಂತವುಗಳು ಇವೆಲ್ಲವನ್ನೂ ಅಲ್ಲಿ ಮಾಡಬಾರದು, ಅಲ್ಲಿ ಪ್ರಯಾಣ ಮಾಡುವಂತಹ ಡ್ರೈವರ್‌ಗಳು, ಕಂಡಕ್ಟರ್‌ಗಳು, ಲಾರಿ ಕ್ಲೀನರ್‌ಗಳು ಮತ್ತು ಟ್ರಕ್ ಡ್ರೈವರ್‌ಗಳು ಇವರಿಗೆಲ್ಲಾ ತೊಂದರೆ ಆಗುತ್ತದೆ ಮತ್ತು ಇದರಿಂದ ಅಪಘಾತಗಳು ಆಗುತ್ತವೆ ಎಂದು ಅದನ್ನು ಮಾಡಿದ್ದಾರೆ. ಇದು ಒಂದು ಭಾಗ, ಇದರ ಬಗ್ಗೆ ನನ್ನದು ಸಹಮತ ಇದೆ, ಅವರು ಕುಡಿದುಬಿಟ್ಟು ಡ್ರೈವ್ ಮಾಡಬಾರದು. ಇನ್ನೊಂದು ಏನು ಹೇಳುತ್ತಾರೆಂದರೆ, ಇದನ್ನು ಕುಡಿಯುವುದರಿಂದ ಆರೋಗ್ಯಕ್ಕೆ ಹಾನಿಯಾಗುತ್ತದೆ ಎಂದು ಹೇಳುತ್ತಾರೆ. ಮಾನ್ಯ ಸಭಾಪತಿಯವರೆ, ಕುಡಿಯುವುದು ಇದೆಯಲ್ಲಾ ಇದು ಮನುಷ್ಯನಿಗೆ ಇರುವಂತಹ ಚಟ. ಸಿಗರೇಟ್ ಸೇದುವುದು, ಕುಡಿಯುವುದು ಆಮೇಲೆ drug addict ಆಗುವುದು ಮತ್ತು ಪಾನ್‌ಪರಾಗ್ ಇವುಗಳಿಗೆ ನಾವು ಎಲ್ಲಾ ಕಾನೂನುಗಳನ್ನು ಮಾಡಿದ್ದೇವೆ. ಈ ಕಾನೂನಿಂದ ಸ್ವಲ್ಪ ಭಯ ಬರಬಹುದೆ ಹೊರತು, ನಿರೀಕ್ಷಿತ ಪರಿಣಾಮ ಮತ್ತು ಲಾಭಗಳು ಸಿಕ್ಕಿಲ್ಲ ಮತ್ತು ಯಶಸ್ಸು ಸಿಕ್ಕಿಲ್ಲ.

**(ಮುಂದು...)**

(611) 08.06.2017 12.20 LL-RN

**ಸಭಾಪತಿಯವರ ಉಪಸ್ಥಿತಿ**

**ಶ್ರೀ ಸಿದ್ದರಾಮಯ್ಯ:-** (ಮುಂದುವರೆದಿದ್ದು...)

ಹಿಂದೆ ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಗಿತ್ತು. ಅದರಲ್ಲಿ ನಾನು, ಶ್ರೀ ಎಂ.ಪಿ. ಪ್ರಕಾಶ್, ಶ್ರೀ ಪಿ.ಜಿ.ಆರ್.ಸಿಂಧ್ಯಾ, ಶ್ರೀ ಎಂ.ಸಿ. ನಾಣಯ್ಯ, ಶ್ರೀ ಸಿ.ಬೈರೇಗೌಡ ಅವರೆಲ್ಲರನ್ನೂ ಒಳಗೊಂಡಂತೆ ಒಂದು ಸಮಿತಿಯಿತ್ತು. ಆಗ ಐದಾರು ರಾಜ್ಯಗಳಿಗೆ ನಾವು ಭೇಟಿ ನೀಡಿದ್ದೆವು. ಮಹಾತ್ಮ ಗಾಂಧಿ ಹುಟ್ಟಿದಂತಹ ನಾಡು ಗುಜರಾತ್‌ನಲ್ಲಿ ಸಾರಾಯಿ ಪೂರ್ಣ ನಿಷೇಧವಿದೆ. ನಾವು ಮಹಾರಾಷ್ಟ್ರ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗುಜರಾತ್, ಹೈದರಾಬಾದ್, ಚೆನ್ನೈ ಮತ್ತು ಕೇರಳ ಈ ಎಲ್ಲಾ ರಾಜ್ಯಗಳಲ್ಲಿಯೂ ನೋಡಿಕೊಂಡು ಬಂದೆವು. ಸಾರಾಯಿ ನಿಲ್ಲಿಸಿರುವ ಎಲ್ಲಾ ರಾಜ್ಯಗಳಲ್ಲಿಯೂ ಕೂಡ ಮತ್ತೆ ಅವುಗಳೆಲ್ಲವೂ ವಾಪಸ್ಸು ಶುರುವಾಗಿವೆ. ಪೂರ್ಣ ನಿಷೇಧ ಯಾರು ಮಾಡಿರಲಿಲ್ಲ. But only in Gujarat State, total prohibition is there. ಆದರೆ, ಉಳಿದೆಲ್ಲಿಯೂ ಯಶಸ್ವಿಯಾಗಿಲ್ಲ. ನಾನು ಅದಕ್ಕೆ ವರದಿ ಕೊಟ್ಟೆ, "As a Chairman of the sub-committee ನಾವೆಲ್ಲಾ ಸೇರಿ ಇದನ್ನು ಮುಚ್ಚುವುದರಿಂದ ಸಾರ್ವಜನಿಕರಿಗೂ ಅನುಕೂಲವಾಗುವುದಿಲ್ಲ, ಜನರ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಅವರಿಗೂ ಯಾವುದೇ ಅನುಕೂಲವಾಗುವುದಿಲ್ಲ, ಕುಡಿಯುವುದನ್ನೂ ನಿಲ್ಲಿಸುವುದಿಲ್ಲ ಮತ್ತು ರಾಜ್ಯಸರ್ಕಾರಕ್ಕೆ ಬರುವಂತಹ ಆದಾಯವು ಸಹ ನಿಂತುಹೋಗುತ್ತದೆ. On the other hand, ಭಟ್ಟಿ ಸಾರಾಯಿ, ಬೇರೆ ಬೇರೆ illicit liquor ಇವೆಲ್ಲಾ ಜಾಸ್ತಿಯಾಗಿ, ಅಕ್ರಮವಾಗಿ ಕುಡಿಯುವುದಕ್ಕೆ ಶುರು ಮಾಡುತ್ತಾರೆ. ಅನೇಕ ಜನ ಕುಡಿದು ಸತ್ತು ಹೋಗುತ್ತಾರೆ. ಈ ಎಲ್ಲಾ ಕಾರಣಗಳಿಂದ ಅದರಿಂದ ಪೂರ್ಣ ನಿಷೇಧ ಮಾಡುವುದಕ್ಕೆ ಸಾಧ್ಯವಿಲ್ಲವೆಂದು" ವರದಿ ನೀಡಿದ್ದೆವು. ಹಿಂದೆ, ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಸಾರಾಯಿ ನಿಷೇಧ ಮಾಡಿದರು. ಸಾರಾಯಿ ನಿಷೇಧ ಮಾಡಿರುವ ಯಾವುದಾದರೂ ಊರಿನಲ್ಲಿ ಜನರು ಕುಡಿಯುವುದನ್ನು ನಿಲ್ಲಿಸಿದ್ದಾರೆಯೇ? ಅಥವಾ ಕುಡಿಯುವ ಜನರಲ್ಲಿ ಒಬ್ಬರ ಸಂಖ್ಯೆಯಾದರೂ ಕಡಿಮೆಯಾಗಿದೆಯೇ? ಆದರೆ, ನಾನು ಕುಡಿಸುವುದರ ಪರವಾಗಿ ಇಲ್ಲ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಸಾರಾಯಿ ಕುಡಿಯುವುದರಿಂದ ಇವತ್ತಿನ ದಿವಸ ಅನೇಕ ಜನ ಸಾಯುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಜನ ಸಾರಾಯಿ ಕುಡಿದರೂ ಸಾಯುತ್ತಾರೆ, ವಿಸ್ಕಿ ಕುಡಿದರೂ ಸಾಯುತ್ತಾರೆ. **(ಗೊಂದಲ)** ಅದು ಬೇರೆ ವಿಷಯ. ವಿಸ್ಕಿ ಕುಡಿಸುತ್ತಾರಂತೆ, ಸಾರಾಯಿ ಬೇಡವಂತೆ. ಹಾಗೇನಾದರೂ ಆದರೆ 12ರೂಪಾಯಿಗೆ ಒಂದು ಪ್ಯಾಕೆಟ್ ಸಿಗುತ್ತಿತ್ತು. ಈಗ ಅದಕ್ಕೆ 100ರೂಪಾಯಿ ಕೊಡಬೇಕು.

**ಸಭಾಪತಿಯವರು:–** ಈಗ ಆ ವಿಚಾರ ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಶ್ರೀಕಂಠೇಗೌಡರೆ, ಅದು ತಮಗೆ ಗೊತ್ತಿದೆಯೇ..?

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರವರು ಕುಡಿಯುವುದಿಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ತಮ್ಮ ಊರಿನಲ್ಲಿ ಕೇಳಲಿ. ಅವರ ಊರು ದೊಡ್ಡದಿದೆ. ಅಲ್ಲಿಗೆ ಹೋಗಿ ಕೇಳಲಿ, "ಸಾರಾಯಿ ಕುಡಿತಿದ್ದಾರಲ್ಲಾ..? ಈಗ ವಿಸ್ಕಿಗೆ ಎಷ್ಟು ರೂಪಾಯಿ ಕೊಡುತ್ತಿದ್ದೀರಿ ಎಂದು ಕೇಳಿ ನೋಡಲಿ..." ಅವರು ಖುಷಿಯಿಂದ, 'ಹೌದು! ತಾವು ಹೇಳಿದಂತೆ, ತಾವು ಮಾಡಿದ್ದು ಸರಿಯಿದೆ, ಸಾರಾಯಿ ಕುಡಿಯುವುದರಿಂದ ನಾವು ಸಾಯುತ್ತಿದ್ದೆವು, ಈಗ ವಿಸ್ಕಿ ಕುಡಿಸುವುದು ಸರಿಯಿದೆ' ಎಂದು ಹೇಳಿದರೆ ಮಾನ್ಯ ಸದಸ್ಯರು ಹೇಳಿದಂತೆ ನಾನು ಕೇಳುತ್ತೇನೆ. ಸುಮ್ಮನೆ ಇದೆಲ್ಲಾ ಏತಕ್ಕೆ... ನಾನು ನನ್ನ ಅನುಭವದಿಂದ ಹೇಳುತ್ತಿದ್ದೇನೆ, ಕುಡಿಯಬಾರದು. ಕುಡಿಯುವುದರಿಂದ ಹಾನಿಕರ. ಆರೋಗ್ಯ ಕೆಟ್ಟು ಹೋಗುತ್ತದೆ. ಪಾಪ! ಅವರ ಕುಟುಂಬ ವರ್ಗದವರಿಗೆ ಅನ್ಯಾಯವಾಗುತ್ತದೆ. ತೊಂದರೆಯಾಗುತ್ತದೆ. ಅವೆಲ್ಲವೂ ನಿಜ. ಆದರೆ, ವಾಸ್ತವಿಕವಾಗಿ ಏನು..? ವಸ್ತುಸ್ಥಿತಿ ಏನು..? ಇದನ್ನು ಕೂಡ ಜ್ಞಾಪಕ ಇಟ್ಟುಕೊಳ್ಳಬೇಕು. ಮಾನ್ಯ ಪ್ರಾಣೇಶ್‌ರವರ ಊರು ಯಾವುದು..?

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೆ, ನಮ್ಮ ಊರು ಚಿಕ್ಕಮಗಳೂರು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಊರು ಚಿಕ್ಕಮಗಳೂರಾ..?

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ವಿಸ್ಕಿ ಕುಡಿಯುವವರು ಸಾರಾಯಿಯನ್ನು ನಿಷೇಧ ಮಾಡಬೇಕೆಂದು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನೋಡಿ. ಶ್ರೀ ಪುಟ್ಟಣ್ಣನವರಿಗೆ ಪ್ರಾಯೋಗಿಕವಾಗಿ ಅಭ್ಯಾಸವಿದೆ. **(ಗೊಂದಲ)** ಇರಲಿ, ತಪ್ಪೇನೂ ಇಲ್ಲ. ವಿಸ್ಕಿ ಕುಡಿದರೆ ತಪ್ಪು ಎಂದು ನಾನು ಹೇಳುತ್ತೇನೆಯೇ? ಮಾನ್ಯ ಶ್ರೀಕಂಠೇಗೌಡರು ಕುಡಿಯುತ್ತಾರೋ ಅಥವಾ ಇಲ್ಲವೋ ಅದು ನನಗೆ ಗೊತ್ತಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಈ ಕಡೆ ಮಾನ್ಯ ಸದಸ್ಯರು ತಮ್ಮ ಅನುಭವ ಹೇಳುತ್ತಿದ್ದಾರೆ. ಅವರ ಮಾತನ್ನು ಕೇಳೋಣ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ವಿಸ್ಕಿ ಕುಡಿಯುವುದು ಅಥವಾ ಬೇರೆ ಕುಡಿಯುವುದು ತಪ್ಪೆಂದು ಡಾಕ್ಟರ್ ಕೂಡ ಹೇಳುವುದಿಲ್ಲ. ಆದರೆ, 'ಸ್ವಲ್ಪ ಕುಡಿಯಿರಿ ಎಂದು ಹೇಳುತ್ತಾರೆ. ನೀನು ಕಲಿತುಬಿಟ್ಟಿದ್ದೀಯಾ, ನಿನ್ನ ಆರೋಗ್ಯಕ್ಕೆ ಯಾವುದೇ ತೊಂದರೆಯಾಗದಂತೆ ಸ್ವಲ್ಪ ಕುಡಿಯಿರಿ' ಎಂದು ಹೇಳುತ್ತಾರೆ.

**ಡಾ॥ ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, one or two drink..

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನೋಡಿ ಮಾನ್ಯ ಸಚಿವರು ಎಂ.ಬಿ.ಬಿ.ಎಸ್. ಡಾಕ್ಟರ್. One or two drinks ಎಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, Drinking a glass Beer is good for health ಎಂದು...

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಹೌದಾ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಹೌದು, good for health ಕಾರಣಕೋಸ್ಕರ Beer ತೆಗೆದುಕೊಳ್ಳಬಹುದು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನೋಡಿ ಇವರೆಲ್ಲಾ ವಿದ್ಯಾವಂತರು, ಪಾಠ ಮಾಡುವ ಮೇಷ್ಟು...

**(ಗೊಂದಲ)**

**ಸಭಾಪತಿಯವರು:-** ಅವರೇ ಪಾಠ ಮಾಡುವುದು.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಈ ಪಾಠವನ್ನು ಮಾನ್ಯ ಸದಸ್ಯರು ಯಾವುದಾದರೂ ವಿದ್ಯಾರ್ಥಿಗಳಿಗೆ ಹೇಳಿಕೊಟ್ಟಿದ್ದಾರೆಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ...

**ಶ್ರೀ ಸಿದ್ದರಾಮಯ್ಯ:-** ಮಾನ್ಯ ರಾಮಚಂದ್ರಗೌಡರೆ, ತಾವು ಕುಡಿಯುವುದಿಲ್ಲ ಮತ್ತು ಯಾವತ್ತೂ ಕುಡಿಯುವವರ ಜೊತೆಯಲ್ಲಿಯೂ ಕೂಡುವುದಿಲ್ಲ. ಇದೆಲ್ಲಾ ತಮಗೇಕೆ..?

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ. ನಮ್ಮ ಪ್ರೊ॥ ಲಕ್ಷ್ಮೀಸಾಗರ್‌ರವರು, "Drink Beer without fear, Whisky after Beer is risky" ಎಂದು ಹೇಳುತ್ತಿದ್ದರು.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಯಾರು ಈ ಮಾತನ್ನು ಹೇಳುತ್ತಿದ್ದರು?

**ಶ್ರೀ ರಾಮಚಂದ್ರಗೌಡ:-** ಪ್ರೊ॥ ಲಕ್ಷ್ಮೀಸಾಗರ್‌ರವರು ಈ ಮಾತನ್ನು ಹೇಳುತ್ತಿದ್ದರು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಪ್ರೊ॥ ಲಕ್ಷ್ಮೀಸಾಗರ್‌ರವರೇ..? ಅವರು ಒಬ್ಬ ಉತ್ತಮ ವ್ಯಕ್ತಿ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ಅವರು ನನ್ನ ಒಬ್ಬ ಉತ್ತಮ ಸ್ನೇಹಿತರಾಗಿದ್ದರು. ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದಾಗಿನಿಂದ ಅಂದರೆ, 1970ನಿಂದ ನನ್ನ ಜೊತೆಯಲ್ಲಿದ್ದವರು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಹೌದು. ಮಾನ್ಯ ಸದಸ್ಯರೆಲ್ಲರೂ ಕಾರ್ಪೋರೇಷನ್‌ನಲ್ಲಿ ಒಟ್ಟಿಗೆ ಇದ್ದವರು.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ಅವರು, "Drink Beer without fear, Whisky after Beer is risky" ಎಂದು ಹೇಳುತ್ತಿದ್ದರು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಮಗೆ ಈ ಎಲ್ಲಾ ವಿಚಾರಗಳು ಗೊತ್ತಿಲ್ಲ. ಮಾನ್ಯ ಸದಸ್ಯರು ಪ್ರೊ॥ ಲಕ್ಷ್ಮೀಸಾಗರ್‌ರವರ ಸಹವಾಸದಿಂದ ಈ ಎಲ್ಲವನ್ನು ಕಲಿತುಕೊಂಡಿದ್ದಾರೆ. "Drink Beer without fear...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, "Drink Beer without fear, Whisky after Beer is risky"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, "Drink Beer without fear, Whisky after Beer is risky" ಚೆನ್ನಾಗಿದೆ. **(ಗೊಂದಲ)** ಇಲ್ಲೇ ನೋಡಿ. ಸಾರಾಯಿ ನಿಷೇಧ ಬೇಕೋ ಬೇಡ ಎನ್ನುವುದಕ್ಕೆ ನಮಗೆ ಈ ಸದನದಲ್ಲಿಯೇ ಈ ರೀತಿಯ ಅಭಿಪ್ರಾಯಗಳು ಬರುತ್ತವೆ.

**ಸಭಾಪತಿಯವರು:-** ಮೇಷ್ಟ್ರುಗಳೇ ಹೀಗೆಲ್ಲಾ ಮಾಡುತ್ತಾರೆಂದು ಹೇಳೀಬಿಟ್ಟರಲ್ಲಾ..?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮೇಷ್ಟ್ರುಗಳು ಈ ರೀತಿ ಪಾಠ ಹೇಳಿಕೊಟ್ಟರೆ... ಮಾನ್ಯ ಪುಟ್ಟಣ್ಣನವರು ಪದವೀಧರರ ಕ್ಷೇತ್ರದಿಂದ ಆಯ್ಕೆಯಾದವರೆ..?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಶಿಕ್ಷಕರ ಕ್ಷೇತ್ರದಿಂದ ನಾನು ಆಯ್ಕೆಯಾಗಿದ್ದೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಶಿಕ್ಷಕರ ಕ್ಷೇತ್ರದಿಂದ...

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, I am from graduate constituency.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಬ್ಬರೂ ಕೂಡ ಸೇರಿಕೊಂಡಿದ್ದಾರೆ. **(ಗೊಂದಲ)** ಮಾನ್ಯ ಸದಸ್ಯರುಗಳು ಶಿಕ್ಷಕರ ಕ್ಷೇತ್ರ ಮತ್ತು ಪದವೀಧರರ ಕ್ಷೇತ್ರದಿಂದ ಆಯ್ಕೆಯಾದವರು. ಇವರ ಅಭಿಪ್ರಾಯಗಳೇ ಈ ರೀತಿಯಾಗಿವೆ. ಇನ್ನು ಸಾಮಾನ್ಯ ಜನರ ಅಭಿಪ್ರಾಯಗಳು ಯಾವ ರೀತಿ ಇವೆ?

**(ಗೊಂದಲ)**

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ...

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ಸಭಾಪತಿಯವರೆ, Teachers Whisky ಎಂದು ಒಂದು ಬ್ರ್ಯಾಂಡ್ ಕೂಡ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:–** ಯಾವುದು?

**ಶ್ರೀ ಡಿ.ಎಸ್. ವೀರಯ್ಯ:–** Teachers Whisky...

**ಶ್ರೀ ಸಿದ್ದರಾಮಯ್ಯ:–** ಓಹೋಹೋ... ಹೌದು... Teachers ಎಂದು ಒಂದು ಇದೆ. Correct, ಶ್ರೀ ವೀರಯ್ಯನವರೆ...

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೆ, **"**Drinks makes so much links" ಅಂತೆ. ಈಗ ಮಾನ್ಯ ಮುಖ್ಯಮಂತ್ರಿಗಳು ಎಲ್ಲವನ್ನು links ಮಾಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ಚಿನ್ನ ಬಿಟ್ಟರೆ ಬೇರೆ ಏನು ಗೊತ್ತಾಗುವುದಿಲ್ಲ. ಚಿನ್ನದ ವ್ಯಾಪಾರ ಮಾಡುವವರಿಗೆ ಈ ಎಲ್ಲಾ ವಿಚಾರಗಳು ಹೇಗೆ ಗೊತ್ತಾಗುತ್ತದೆ?

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, Teachers Whisky ಎಂದು ಇದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನೋಡಿ, ಮಾನ್ಯ ಶಾಣಪ್ಪನವರಿಗೆ ಜಾಸ್ತಿ ಅನುಭವವಿದೆ.

**ಸಭಾಪತಿಯವರು:–** ಅವರು ಹಿರಿಯರು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಶ್ರೀ ಶಾಣಪ್ಪನವರ ಅನುಭವವನ್ನು ಅಧಿಕೃತವಾಗಿ ತೆಗೆದುಕೊಳ್ಳಬಹುದು. ನನಗೂ ಅನುಭವವಿದೆ.

**(ಗೊಂದಲ)**

**ಸಭಾಪತಿಯವರು:–** ಆದರೆ ಅಷ್ಟು ಪ್ರಮಾಣದಲ್ಲಿ ನಿಮಗೆ ಹಿರಿತನ ಬರುವುದಿಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಹೌದು. ನನಗೆ ಹಿರಿತನ ಇಲ್ಲ. ಮಾನ್ಯ ಈಶ್ವರಪ್ಪನವರಿಗೆ ಅನುಭವವಿಲ್ಲವೇ? **(ಗೊಂದಲ)** ನಾನು ಸುಮ್ಮನೇ ಕೇಳಿದೆಯಷ್ಟೇ... ಇದ್ದರೆ ಇದೆಯನ್ನಲಿ, ಇಲ್ಲಾವಾದರೆ ಇಲ್ಲ ಎನ್ನಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಈ ಚರ್ಚೆಗಳನ್ನು ನೋಡಿದರೆ ಕರ್ನಾಟಕ ರಾಜ್ಯದಲ್ಲಿ ಇರುವಂತಹ ಜನ ಮುಖ್ಯಮಂತ್ರಿಗಳು ಕುಡಿಯಿರಿ ಎಂದು ಹೇಳುವಂತಹ ರೂಪದಲ್ಲಿ ಆಗುತ್ತದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇಲ್ಲ, ಇಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಹೇಳುತ್ತಿರುವ ವಿಚಾರವೇ ಬೇರೆ. ಶ್ರೀ ಎಂ.ಕೆ. ಪ್ರಾಣೇಶ್‌ರವರು ಪ್ರಾರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ತುಂಬಾ ಸ್ಪಷ್ಟವಾಗಿ ಹೇಳಿದರು. ರಾಜ್ಯದಲ್ಲಿ ಜನ, ವಿಶೇಷವಾಗಿ ಹೆಣ್ಣುಮಕ್ಕಳು ಕುಡಿಯುವುದನ್ನು ಬೇಡ ಅನ್ನುವಂತಹ ಯೋಚನೆ ಮಾಡುತ್ತಿರುವಂತಹ ಸಂದರ್ಭದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯ ಕೊಟ್ಟಂತಹ ತೀರ್ಪನ್ನು ಸಚಿವ ಸಂಪುಟದಲ್ಲಿ ತಿರುಚಿ, ಅದರಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಿರುವುದರಲ್ಲಿ ಎಷ್ಟರಮಟ್ಟಿಗೆ ನ್ಯಾಯವಿದೆ? ಇಲ್ಲಿ ಚರ್ಚೆಗಳು ಏನೇನು ಮಾಡುತ್ತಿದ್ದೇವೆ ಎಂಬುದನ್ನು ಇಡೀ ರಾಜ್ಯದ ಜನತೆ ನೋಡುತ್ತಿದ್ದಾರೆ. ಅದಕ್ಕೋಸ್ಕರ ನಾನು ಮುಖ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ ನಿನ್ನೆಯ ದಿವಸ ಸಚಿವ ಸಂಪುಟದಲ್ಲಿ ಏನು ತೀರ್ಮಾನ ತೆಗೆದುಕೊಂಡಿದ್ದಾರೆ..?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಸದನದಲ್ಲಿ ಯಾವಾಗಲೂ ಗಂಭೀರವಾಗಿ ಚರ್ಚೆ ಮಾಡುವುದಕ್ಕಾಗುತ್ತದೆಯೇ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇಲ್ಲ, ಇಲ್ಲ. ನಾನು ಅದರ ಬಗ್ಗೆ ಹೇಳಿಲ್ಲ. ನಾನು ನಗುವುದು ಬೇಡವೆಂದು ಹೇಳಿಲ್ಲ. ನಾನು ಕುಡಿಯುವುದು ಬೇಡವೆಂದು ಹೇಳುತ್ತಿದ್ದೇನೆ. ಎಷ್ಟು ಬೇಕಾದರೂ ನಗೋಣ. ಆದರೆ, ಎಷ್ಟು ಬೇಕಾದರೂ ಕುಡಿಯುವುದು ಬೇಡ. ನಾನು ಅದಕೋಸ್ಕರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ, ದಯಮಾಡಿ, ನಿನ್ನೆಯ ದಿವಸ ಸಚಿವ ಸಂಪುಟದಲ್ಲಿ ತೆಗೆದುಕೊಂಡಿರುವಂತಹ ನಿರ್ಣಯ ತದ್ವಿರುದ್ಧವಾಗಿದೆ...

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಈಶ್ವರಪ್ಪನವರೆ, ನಾನು ಆ ವಿಷಯಕ್ಕೆ ಇನ್ನೂ ಬಂದೇ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಳಲ್ಲಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಆದರೆ, ಸಚಿವ ಸಂಪುಟದಲ್ಲಿ ಬಂದಿದೆ. ದಿನಪತ್ರಿಕೆಯಲ್ಲಿಯೂ ಸಹ ಬಂದಿದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅದೇ ಉತ್ತರವನ್ನೇ ಹೇಳುವುದಕ್ಕೆ ನಾನು ಬರುತ್ತಿದ್ದೇನೆ. ನಾನು ಇನ್ನೂ ಆ ವಿಷಯಕ್ಕೆ ಬಂದೇ ಇಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಆ ವಿಷಯಕ್ಕೆ ಬರಲಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಶ್ರೀ ಎಂ.ಕೆ. ಪ್ರಾಣೇಶ್‌ರವರು ಹೇಳಿದ್ದಾರಲ್ಲ... ಅದಕ್ಕೆ ಪಾಪ! ಅವರು ಚಿಕ್ಕಮಗಳೂರಿನಿಂದ ಬಂದಿದ್ದಾರೆ. ಏಕೆಂದರೆ, ಎಲ್ಲಿ ಹೆಚ್ಚಿಗೆ ಕುಡಿಯುತ್ತಾರೆ, ಆ ಪ್ರದೇಶದಿಂದ ಬಂದಂತಹವರು. **(ಗೊಂದಲ)** ಮಲೆನಾಡಿನಲ್ಲಿಯೇ ಜಾಸ್ತಿ ಕುಡಿಯುವುದು.

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೆ, ಆದರೆ ನಮ್ಮ ಕಡೆ ಕುಡಿಯುವುದಕ್ಕೆ ಲಿಮಿಟ್ ಇದೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಲಿಮಿಟ್ ಇದೆಯೋ? ಅನ್‌ಲಿಮಿಟ್ ಇದೆಯೋ ಅದು ನನಗೆ ಗೊತ್ತಿಲ್ಲ. ಇಲ್ಲಿ ಶ್ರೀಮತಿ ಮೋಟಮ್ಮನವರು ಇದ್ದಾರೆ, ಅವರು ಕೋಪಿಸಿಕೊಳ್ಳುತ್ತಾರೆನೋ? ಅದು ನನಗೆ ಗೊತ್ತಿಲ್ಲ. **(ಗೊಂದಲ)** ಕುಡಿಯುತ್ತಾರಲ್ಲವೇ? **(ಗೊಂದಲ)** ಈಗ ಕೊಡಗು ಮತ್ತು ಚಿಕ್ಕಮಗಳೂರಿಗೂ ಹೋಗೋಣ. ಹಾಗೆಯೇ ಬೇರೆ ಯಾವುದಾದರೂ ಜಿಲ್ಲೆಗೆ ಭೇಟಿ ನೀಡೋಣ. ಎಲ್ಲಿ ಹೆಚ್ಚಿಗೆ ಜನ ಕುಡಿಯುತ್ತಾರೆ, ನೋಡೋಣ. ಆಗಬಹುದಾ? ಒಂದು ವೇಳೆ ಮಾನ್ಯ ಸದಸ್ಯರ ಜಿಲ್ಲೆಯಲ್ಲಿ ಜಾಸ್ತಿ ಕುಡಿದರೆ..? ಮಾನ್ಯ ಸದಸ್ಯರು ಹೆಚ್ಚಿಗೆ ಕುಡಿಯುತ್ತಾರೋ, ಇಲ್ಲವೋ ಅದು ನನಗೆ ಗೊತ್ತಿಲ್ಲ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಮಲೆನಾಡಿನಲ್ಲಿ ಪ್ರತಿ ಮನೆಗಳಲ್ಲಿ attached ಬಾರ್ ಇರುತ್ತದೆ. ಕೌಂಟರ್ ಇರುತ್ತದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಶ್ರೀಕಂಠೇಗೌಡರಿಗೆ ಮಲೆನಾಡಿನ ಕಡೆ ನೆಂಟಸ್ತುತನ ಇದೆಯಲ್ಲವೇ?

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ನೆಂಟಸ್ತನ ಇಲ್ಲ. ಆದರೆ, ಆ ಕಡೆ ಹೋಗಿ ಬಂದಿದ್ದೇನೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಆ ಕಡೆ ಭೇಟಿ ನೀಡಿದ್ದಾರೆ. ನಾನು ಹೇಳುವುದೇನೆಂದರೆ, ಕುಡಿಯಬಾರದು...

**ಶ್ರೀ ಸೋಮಣ್ಣ ವಿ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ಬಹಳಷ್ಟು ಜನರಿಗೆ ಇದರ ಬಗ್ಗೆ ಆಸಕ್ತಿಯಿದೆ. ಆದರೆ, ಹೆಣ್ಣುಮಕ್ಕಳು ಮಾತ್ರ ಇದನ್ನು ಕೊಡಪಾನ(ಬಿಂದಿಗೆ) ತೆಗೆದುಕೊಂಡು, ನೀರಿಗೆ ಯಾವ ರೀತಿ ಹಾಹಾಕಾರ ಆಗುತ್ತದೆ..? ಆ ರೀತಿ ಕಸದ ಪೊರಕೆ ತೆಗೆದುಕೊಂಡು ಇವರ ಬಗ್ಗೆ ಅಲ್ಲಿ ಹೋರಾಟ ಮಾಡುತ್ತಿದ್ದಾರೆ. ಆದುದರಿಂದ, ಬಹಳಷ್ಟು ಗಂಭೀರವಾಗಿ ಈ ವಿಷಯವನ್ನು ಪರಿಗಣಿಸಬೇಕು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಯಾವುದಕ್ಕೆ, ನೀರಿಗಾಗಿಯೇ?

**ಶ್ರೀ ಸೋಮಣ್ಣ ವಿ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ನೀರಿನ ವಿಚಾರವಲ್ಲ. ನಾನು ಹೇಳುತ್ತಿರುವುದು ಇದ್ದುವರೆವಿಗೂ ಚರ್ಚೆಯಾಗುತ್ತಿರುವ ವಿಷಯದ ಬಗ್ಗೆ ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಯಾರೂ ಕೂಡ ಸಾರಾಯಿ ಕುಡಿಯಬಾರದು.

**ಸಭಾಪತಿಯವರು:–** ಒಳ್ಳೆಯದಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅದು ಒಳ್ಳೆಯದಲ್ಲ. ಅದರಿಂದ ಸಂಸಾರದಲ್ಲಿ ತೊಂದರೆಯಾಗುತ್ತವೆ. ಮಹಿಳೆಯರಿಗೆ ತೊಂದರೆಯಾಗುತ್ತದೆ. ಕುಡಿಯುವವರೆಗೂ ಆರೋಗ್ಯ ಕೆಡುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವೆಲ್ಲಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಪ್ರಾಯೋಗಿಕವಾಗಿಯೂ ಕೂಡ ನಾವು ಯೋಚನೆ ಮಾಡುವುದು ಒಳ್ಳೆಯದೆಂದು ನಾನು ಇದುವರೆವಿಗೂ ಹೇಳಿದ್ದೇನೆ.

(ಮುಂದುವರೆದಿದೆ...)

(612)/8-6-2017/12-30/ಎಲ್ಎಂ/ಆರ್ಎನ್

**ಶ್ರೀ ಸಿದ್ದರಾಮಯ್ಯ(ಮುಂದು):-** ಸುಪ್ರಿಮ್ ಕೋರ್ಟ್ ತೀರ್ಮಾನವನ್ನು ನಾವು ತಿರುಚಲು ಹೋಗುವುದಿಲ್ಲ. ಈಗಾಗಲೇ ನಾವು ಲೈಸೆನ್ಸ್ ಇರುವವರಿಗೆ ನೋಟಿಸ್‌ನ್ನು ಇಶ್ಯೂ ಮಾಡಿದ್ದೇವೆ. ಅವರಿಗೆ ಇನ್ನು 30ನೇ ತಾರೀಖಿನವರೆಗೆ ಸಮಯವಿದೆ. ಮೊದಲು ನೀಡಿದಂತಹ ಆದೇಶ modify ಮಾಡಿದ್ದಾರೆ. ಮೊದಲು 500 ಮೀಟರ್ ಎಂದು ಹೇಳಿದ್ದರು. ಈಗ 20,000 ಕ್ಕಿಂತ ಒಳಗಡೆ ಜನಸಂಖ್ಯೆ ಇರುವಲ್ಲಿ 220 ಮೀಟರ್ ಎಂದು ಹೇಳಿದ್ದಾರೆ. 30 ನೇ ತಾರೀಖಿನವರಗೆ ಸಮಯವಿದೆ. ಲೈಸೆನ್ಸ್ ಇರುವವರು ಶಿಫ್ಟ್ ಮಾಡಿಕೊಳ್ಳುವುದಾದರೆ ಶಿಫ್ಟ್ ಮಾಡಿಕೊಳ್ಳಿ ಎಂದು ಹೇಳಿದ್ದೆವೆ. Nothing wrong in shifting.

**ಶ್ರೀ ಎಸ್.ನಾಗರಾಜ (ಸಂದೇಶ ನಾಗರಾಜ):-** ಮಾನ್ಯ ಸಭಾಪತಿಗಳೆ, ಶಿಫ್ಟ್ ಎಂದರೆ, ಸಿಎಲ್9 ಲೈಸೆನ್ಸ್ ಇರುವವರು ಶಿಫ್ಟ್ ಮಾಡಿಕೊಳ್ಳಬಹುದು. ಆದರೆ ಫೈವ್‌ಸ್ಟಾರ್, ಸೆವೆನ್‌ಸ್ಟಾರ್ ಹೊಟೇಲ್‌ಗಳು ಲೈಸೆನ್ಸ್ ಪಡೆದಿವೆ, ಅವರು ಏನು ಮಾಡಬೇಕು.

**ಶ್ರೀ ಸಿದ್ದರಾಮಯ್ಯ:-** ಆ ಲೈಸೆನ್ಸ್‌ಗಳೆಲ್ಲವು ಹೋಗುತ್ತವೆ ಅಷ್ಟೆ. ಏನೂ ಮಾಡಲು ಆಗುವುದಿಲ್ಲ ನೀವು ಕೋರ್ಟ್‌ಗೆ ಹೋಗಬೇಕು ಅಷ್ಟೆ. ನಾಗರಾಜರವರು ಬಾರ್ ಆಂಡ್ ರೆಸ್ಟೋರೆಂಟ್ ಇಟ್ಟುಕೊಂಡಿದ್ದಾರೆ, ಪಾಪ ಅವರ ಕಷ್ಟ ಅವರಿಗೆ.

**ಶ್ರೀ ಎಸ್.ನಾಗರಾಜ (ಸಂದೇಶ ನಾಗರಾಜ):-** ಅವರು ಏನು ಮಾಡಬೇಕು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, ಸಂದೇಶ ನಾಗರಾಜ್‌ರವರ ಹೊಟೇಲ್‌ಗಳು ಇವೆ. ಪಾಪ ಅವರ ಕಷ್ಟ ಅವರಿಗೆ. ಟೂರಿಸ್ಟ್‌ಗಳು ಕಡಿಮೆಯಾಗುತ್ತಾರೆ, ವ್ಯಾಪಾರ ಹೋಗುತ್ತದೆ ಎನ್ನುವುದು ಅವರ ಕಷ್ಟ. ಆದರೆ ಎಲ್ಲಾ ಕಷ್ಟಗಳಿಗೂ ಸರ್ಕಾರದ ಕಡೆಗೆ ನೋಡಿದರೆ ಹೇಗೆ ಆಗುತ್ತದೆ. ಸುಪ್ರೀಮ್ ಕೋರ್ಟ್ ಹೇಳಿಬಿಟ್ಟಿದೆ, ನಾವು review petition ಹಾಕಿದ್ದೆವು, ಲೈಸೈನ್ಸ್ ಇರುವವರೆಲ್ಲರೂ petition ಹಾಕಿದರು. ಆದರೆ ಅವರು ತಮ್ಮ ಆದೇಶವನ್ನು ಕೇವಲ modify ಮಾಡಿದ್ದಾರೆ. final

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

order ಹಾಗೆಯೇ ಇದೆ. ಅದಕ್ಕೆ ನಾವು ಸುರು ಮಾಡಿದ್ದೀರಾ ಮಾಡಿಕೊಳ್ಳಿ ಎಂದು ಹೇಳಿದ್ದೇವೆ. ನಿನ್ನೆ ಏನು ತೀರ್ಮಾನ ಮಾಡಿದ್ದೆವೆ ಎಂದರೆ, ನಗರಸಭೆ ವ್ಯಾಪ್ತಿಯಲ್ಲಿ, ಕಾರ್ಪೋರೇಶನ್ ವ್ಯಾಪ್ತಿಯೊಳಗೆ ಬರುವ ರಸ್ತೆಗಳನ್ನು, ಕಾರ್ಪೋರೇಶನ್ ರಸ್ತೆಗಳು, ಮುನ್ಸಿಪಾಲಿಟಿ ರಸ್ತೆಗಳು ಎಂದು de-notify ಮಾಡುತ್ತಿದ್ದೆವೆ. ರಾಜ್ಯ ಹೆದ್ದಾರಿ– ರಾಷ್ಟ್ರೀಯ ಹೆದ್ದಾರಿ ಎಂದು ಮಾಡಿರುವ ಹಾಗೆ ಮಾಡಿಬಿಟ್ಟಿದ್ದೇವೆ. ಪ್ರಾಣೇಶ್‌ರವರಿಗೆ ಒಂದು ವಿಚಾರವನ್ನು ಹೇಳಿಬಿಡುತ್ತೇನೆ, *Windsor Manor*, Le *Meridien* ಹೊಟೇಲ್‌ಗಳ ಲೈಸೆನ್ಸ್‌ಗಳು ರದ್ದಾಗುತ್ತವೆ. ಇಷ್ಟೆ ಅಲ್ಲ ಅದರ ಜೊತೆಗೆ ಇನ್ನು ಬೇಕಾದಷ್ಟು ಹೊಟೇಲ್‌ಗಳ ಲೈಸೆನ್ಸ್‌ಗಳು ಹೋಗುತ್ತವೆ. ಇದೇ ಇನ್ನು ಬೇಕಾದಷ್ಟು ಹೊಟೇಲ್‌ಗಳು ಹೋಗುತ್ತವೆ. ಕಾರ್ಪೋರೇಶನ್ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿಗಳನ್ನು maintain ಮಾಡುವವರು ನಾವೆ. Le *Meridien* ಎದುರು ಬರುವ ರಸ್ತೆ ರಾಷ್ಟ್ರೀಯ ಹೆದ್ದಾರಿ. ಅದನ್ನು maintain ಮಾಡುವವರು ಕಾರ್ಪೋರೇಶನವರು. ಆ ರಸ್ತೆ ಕಾರ್ಪೋರೇಶನ್ ಜೊತೆಯಲ್ಲಿ ಇರಬೇಕು. ಅದಕ್ಕಾಗಿ ಹಾಗೆ ಮಾಡಿದ್ದೇವೆ. ಇದು ಸರಿಯಾಗಿದೆ ಅಲ್ಲವೆ ನಾಗರಾಜ್. ಅದನ್ನು ಪ್ರಾಣೇಶ್‌ರವರಿಗೆ ಹೇಳಿಬಿಡಿ.

**ಶ್ರೀ ಭಾನುಪ್ರಕಾಶ್**:– ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಅವರಿಗೆ ಬಹಳ ದೊಡ್ಡ ಅನುಭವವಿದೆ. ಆ ಅನುಭವದ ಹಿನ್ನೆಲೆಯಲ್ಲಿ ಸುಪ್ರೀಮ್ ಕೋರ್ಟಿನ ಆದೇಶವನ್ನು ರಾಜ್ಯದ ಹೆಣ್ಣುಮಕ್ಕಳ ಪರವಾಗಿ ಇರುವಂತೆ ಸರಿಯಾಗಿ implement ಮಾಡುವ ಯೋಚನೆ ಹಾಗೂ ಶಕ್ತಿ ಅವರಿಗೆ ಇದೆ. ಆ ರೀತಿ ಮಾಡಿದರೆ ನಮ್ಮ ರಾಜ್ಯಕ್ಕೆ ಹೆಚ್ಚು ಲಾಭವಾಗುತ್ತಿತ್ತು ಎನ್ನುವುದು ನನ್ನ ಅನಿಸಿಕೆ. ಏಕೆಂದರೆ, ಈಗ ಸಚಿವ ಸಂಪುಟ ಒಂದು ತೀರ್ಮಾನ ಮಾಡಿದೆ, ನಮ್ಮಲ್ಲಿ ಈಗ ಒಟ್ಟು 6015 ಬಾಧಿತ ಲೈಸೆನ್ಸ್‌ಗಳ ಅಂಗಡಿಗಳು ಇವೆ. ಅವರಿಗೆ ಸ್ಥಳಾಂತರ ಮಾಡಲು 30ನೇ ತಾರೀಖಿನವರೆಗೆ ಸಮಯವಿದೆ. 30ನೇ ತಾರೀಖು ಆದ ಮೇಲೆ ಅವರು ಅಂಗಡಿ ಮುಚ್ಚಬೇಕು ಎಂದು ಇದೆ. ಈಗ ನೀವು de-notification ಮಾಡಿದ್ದೀರಿ, de-notification ಪ್ರಕ್ರಿಯೆ ಎಲ್ಲಾ ಆಗುವವರಗೆ ಆ ಲೈಸೆನ್ಸ್ ಉಳಿಯುತ್ತದೆಯೇ? 6015 ಅಂಗಡಿಗಳನ್ನು ಏನು ಮಾಡುತ್ತೀರಿ. ಪತ್ರಿಕಾ ವರದಿ ಪ್ರಕಾರ 858 ಕಿ.ಮೀ ಪಟ್ಟಣ ಪಂಚಾಯಿತಿಯಲ್ಲಿ ಹೋಗುತ್ತದೆ. ಅವರು Le Meridien ಹಾಗೂ ಇತರೆ ಹೊಟೇಲ್ ಬಗ್ಗೆ ಹೇಳಿದ್ದಾರೆ. ತುಮಕೂರಿನಲ್ಲಿ ಬಿಎಚ್ ರೋಡ್‌ಗಳ ಮಧ್ಯದಲ್ಲಿ, ಶಿವಮೊಗ್ಗ, ಹೊನ್ನಾವರ ಇವುಗಳ ಮಧ್ಯದಲ್ಲಿ 6 ಕಿ.ಮೀ. 3 ಕಿ.ಮೀ ಕಟ್ ಮಾಡಿ ಎನ್‌ಎಚ್ ನಿಂದ ತೆಗೆದರೆ ಅದರ ಪರಿಸ್ಥಿತಿ ಏನಾಗುತ್ತದೆ. ಅದು ಬಿಎಚ್ ರೋಡ್ ಆಗಿ ಉಳಿಯುತ್ತದೆಯೇ, ಆ ರೋಡ್‌ಗೆ ಬೇರೆ ಹೆಸರು ಇಡುತ್ತೀರಾ. ಗ್ರ್ಯಾಂಟ್ ಹೇಗೆ ಬರುತ್ತದೆ? ಕಾನೂನಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆಯು ಬರುತ್ತದೆ. ಇಲ್ಲಿಂದ ಹೊನ್ನಾವರದವರೆಗೂ ಬಿಎಚ್ ರೋಡ್ ಒಂದೇ ಇರುವುದು. ಇದು ಅನಾದಿ ಕಾಲದಿಂದಲೂ ಇದೆ. ಈಗ ಈ ಅಂಗಡಿಗಳನ್ನು ಉಳಿಸುವುದಕ್ಕಾಗಿ ಮಧ್ಯೆ-ಮಧ್ಯೆ ಅದು ಎನ್‌ಎಚ್ ಅಲ್ಲ ಎಂದರೆ... ಅದನ್ನು maintain ಮಾಡುವುದು ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಇರಬಹುದು. ಆದರೆ ಆ ರೋಡಿನ ಪರಿಸ್ಥಿತಿ ಏನಾಗುತ್ತದೆ. 858 ಕಿ.ಮೀ ಕಟ್ ಮಾಡಿದರೆ ಈಗ ಇರುವ ಲೆಕ್ಕದ ಪ್ರಕಾರ ರಾಷ್ಟ್ರೀಯ ಹೆದ್ದಾರಿಗೆ ಒಂದು ಕಿ.ಮೀ ಗೆ ಒಂದು ಕೋಟಿ ರೂ.ಗಳು, 50 ಲಕ್ಷ ರೂ.ಗಳಷ್ಟು maintenance ಬರುತ್ತದೆ. ಹೀಗಿರುವಾಗ 858 – 900 ಕೋಟಿ ರೂ.ಗಳಷ್ಟು ನಷ್ಟ ಸರ್ಕಾರಕ್ಕೆ ಆಗುತ್ತದೆ. ಆ ನಷ್ಟವನ್ನು ಎಲ್ಲಿಂದ ಭರಿಸುತ್ತೀರಿ ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಿದೆಯೇ? 175 ಅಂಗಡಿಗಳನ್ನು ಕೊಡುತ್ತಿದ್ದಿರಿ, ನಾನು ಕೈ ಜೋಡಿಸಿ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮಗೆ ಕುಡಿಯುವ ಅಭ್ಯಾಸವಿಲ್ಲ. ಆದರೆ ಕುಡಿದು ಹಾಳಾಗಿರುವಂತಹ ಅನೇಕ ಮನೆಗಳಿಗೆ ನಾವು ಹೋಗುತ್ತೇವೆ. ಆ ತಾಯಿಗಳ, ಆ ಹೆಣ್ಣುಮಕ್ಕಳ ಪರಿಸ್ಥಿತಿ ಚೆನ್ನಾಗಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಇದು ಇಲ್ಲಿ ಕುಳಿತಿರುವ ಎಲ್ಲರಿಗೂ ಗೊತ್ತಿರುವ ವಿಚಾರ. ಇವತ್ತು ತಾಂಡಾಗಳಿಗೂ ಅಂಗಡಿಗಳನ್ನು ಕೊಡಲು ಹೊರಟಿರುವುದು ನ್ಯಾಯವೇ? ಯಾರು ಎಲ್ಲಾದರೂ ಹೋಗಿ ಕುಡಿಯಲಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ನಾವು ಕುಡಿತದ ವಿರೋಧವಿರುತ್ತೇವೆ ಹೊರತು ಕುಡಕರ ವಿರುದ್ಧ ಅಲ್ಲ. ಅವರಿಗೆ ಏನೋ ಕಷ್ಟವಾಗಿರುತ್ತದೆ ಕುಡಿಯುತ್ತಾರೆ. ನಾವು ಹಳ್ಳಿಯಲ್ಲಿ ಹುಟ್ಟಿ ಬೆಳೆದವರು. ಆದರೆ ತಾಂಡಾಗಳಲ್ಲಿ, ಹರಿಜನರ ಕಾಲೋನಿಯಲ್ಲಿ ಅಂಗಡಿಗಳನ್ನು ಕೊಡುವುದು ಸರಿಯಲ್ಲ. ಅದನ್ನು consider ಮಾಡುವುದು ತಮಗೇನು ಕಷ್ಟವಲ್ಲ. ಅದನ್ನು ಎರಡು-ಮೂರು ಕಿ.ಮೀ ದೂರ ಕೊಡಿ ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, ಸಾರಾಯಿ ಬಂದ್ ಮಾಡಿದ ಮೇಲೆ ಅಲ್ಲಿಯ Arrack ಶಾಪ್‌ಗಳು ಬಂದ್ ಆಗಿವೆ. Arrack ಶಾಪ್‌ಗಳ ಬಂದ್ ಆದಮೇಲೆ ಯಾರು ಕಾನೂನು ಪ್ರಕಾರ ಸಿಎಲ್2 ಇಟ್ಟುಕೊಂಡಿದ್ದಾರೆ ಅವರ ಹತ್ತಿರ Arrack ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದಾರೆ. It is a fact. ನಾನು ಅಬಕಾರಿ ಸಚಿವನಾಗಿ ಹೇಳುತ್ತಿದ್ದೇನೆ. ಪೆಟ್ಟಿಗೆ ಅಂಗಡಿಗಳಲ್ಲಿ, ಟೀ ಅಂಗಡಿಗಳಲ್ಲಿ, ನ್ಯಾಯಬೆಲೆ ಅಂಗಡಿಗಳಲ್ಲಿಯು ಮಾರಾಟ ಮಾಡುತ್ತಿದ್ದಾರೆ. ನಾವು ಎಷ್ಟು ಪ್ರಯತ್ನ ಮಾಡಿದರು ನಿಲ್ಲಿಸಲು ಆಗುತ್ತಿಲ್ಲ. ನಾವು ಕುಡಿಯುವವರ ಪರವಾಗಿಯು ಇಲ್ಲ, ಕುಡಿತದ ಪರವಾಗಿಯು ಇಲ್ಲ. ನಾವು ಕುಡಿತದ ವಿರುದ್ಧ ಇದ್ದೇವೆ. ಗುಜರಾತ್‌ನಲ್ಲಿ ಭಾನುಪ್ರಕಾಶ್‌ರವರ ಸರ್ಕಾರವೆ ಇದೆ, ನೀವು ಅಲ್ಲಿಗೆ ಒಂದು ಸಾರಿ ಹೋಗಿ ಬನ್ನಿ. ಅಲ್ಲಿ ನಿಮ್ಮ ಸರ್ಕಾರ ಎಷ್ಟು ವರ್ಷಗಳಿಂದ ಇದೆ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಹಾತ್ಮಾಗಾಂಧಿಯವರು ಹುಟ್ಟಿದ ರಾಜ್ಯ ಅದು. ಅಲ್ಲಿ ಕುಡಿತ ನಿಲ್ಲಿಸಲಾಗಿದೆಯೇ ಎನ್ನುವುದನ್ನು ನೋಡಿಕೊಂಡು ಬಂದು ನನಗೆ ಹೇಳಿ. ಕುಡಿಯಬೇಕು ಎಂದು ನಾನು ಹೇಳುವುದಿಲ್ಲ. ಆದರೆ ಸಾವಿರಾರು ಜನರು ಇದರ ಮೇಲೆ ಅವಲಂಬಿತರಾಗಿದ್ದಾರೆ. ಅದಕ್ಕಾಗಿ ಶಿಫ್ಟ್ ಮಾಡಿಕೊಳ್ಳಿ ಎಂದು ಹೇಳುತ್ತಿದ್ದೆವೆ. ಏಕೆಂದರೆ ಬಹಳ ಜನರು ಸಾರಾಯಿ ಮೇಲೆ ಅವಲಂಬಿತರಾಗಿದ್ದಾರೆ. ಸಾರಾಯಿ ನಿಲ್ಲಿಸಿಬಿಟ್ಟರೆ ಅವರೆಲ್ಲರಿಗೂ ಉದ್ಯೋಗ ಕೊಡುವವರು ಯಾರು? ಅವರೆಲ್ಲರೂ ಬೀದಿಪಾಲಾಗಿ ಬಿಡುತ್ತಾರೆ. ಅಬಕಾರಿ ಹರಾಜಿನಲ್ಲಿ ಭಾಗಿಗಳಾಗುತ್ತಿರುವವರು ಇವತ್ತು ಬೀದಿಪಾಲಾಗಿದ್ದಾರೆ. ಅವರಿಗೆ ಮತ್ತೆ ಉದ್ಯೋಗ ಒದಗಿಸಿ ಕೊಡಲು ಇವತ್ತಿನವರೆಗೆ ಆಗುತ್ತಿಲ್ಲ. ಕರ್ನಾಟಕದಲ್ಲಿ ಒಟ್ಟು 6015, ಸಿಎಲ್2, ಸಿಎಲ್4, ಸಿಎಲ್9 ಅಂಗಡಿಗಳು ಇವೆ. ರಾಷ್ಟ್ರೀಯ ಹೆದ್ದಾರಿಯಲ್ಲಿ 2708 ಅಂಗಡಿಗಳು ಇವೆ, ರಾಜ್ಯ ಹೆದ್ದಾರಿಯಲ್ಲಿ 3300 ಅಂಗಡಿಗಳು ಇವೆ. 6015 ಆಬಾಧಿತ ಲೈಸೆನ್ಸ್‌ಗಳ ಮೇಲೆ ಎಷ್ಟು ಜನ ಅವಲಂಬಿತರಾಗಿರಬಹುದು? ಸಂದೇಶ್ ನಾಗರಾಜ್‌ರವರೆ ನೀವೆ ಹೇಳಿ ಎಷ್ಟು ಜನ ಅವಲಂಬಿತರಾಗಿರುತ್ತಾರೆ.

**ಶ್ರೀ ಎಸ್.ನಾಗರಾಜ್(ಸಂದೇಶ ನಾಗರಾಜ್):-** ಒಂದೇ ಉದಾಹರಣೆ ಹೇಳುತ್ತೇನೆ, ಒಂದು ಅಂಗಡಿಯಲ್ಲಿ 350 ಜನ ಉದ್ಯೋಗ ಮಾಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** 350 ಜನ ಒಂದು ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾರೆಂದರೆ, 6015x300 ಎಷ್ಟಾಯಿತು ಲೆಕ್ಕ ಮಾಡಿ ಹೇಳಿ. ಅನೇಕ ಜನರಿಗೆ ಲೆಕ್ಕ ಸರಿಯಾಗಿ ಬರುವುದಿಲ್ಲ, ಸರಿಯಾಗಿ ಲೆಕ್ಕ ಹಾಕಿ ಹೇಳಿ, ಮಾನ್ಯ ಈಶ್ವರಪ್ಪನವರು ಬಿ.ಕಾಂ ಓದಿದ್ದಾರೆ ಅವರೇನೊ ಸರಿಯಾಗಿ ಲೆಕ್ಕ ಹೇಳಬಹುದು.

**ಸಭಾಪತಿಯವರು:-** ಲಕ್ಷಾಂತರವಾಗುತ್ತದೆ.

**ಶ್ರೀ ಪ್ರಾಣೇಶ್ ಎಂ.ಕೆ.:-** ಕುಡಿತದಿಂದ ಹಾಳಾಗಿರುವ ಕುಟುಂಬಗಳನ್ನು ಲೆಕ್ಕ ಹಾಕಿ ಹೇಳಿ ಸರ್.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, ಎಷ್ಟು ಮನೆತನಗಳು, ಎಷ್ಟು ಮಕ್ಕಳು ಇದರಿಂದ ಹಾಳಾಗುತ್ತಾರೆ ಎನ್ನುವುದು ನಮಗೆ ಗೊತ್ತಿದೆ. 500 ಮೀಟರ್, 220 ಮೀಟರ್ ದೂರ ಮಾಡಿದರೆ ಕುಡಿಯುವುದು ನಿಂತು ಹೋಗುತ್ತದೆ, ಹೆಣ್ಣುಮಕ್ಕಳು ಇನ್ನು ಮುಂದೆ ಕಣ್ಣೀರು ಹಾಕುವುದೇ ಇಲ್ಲ, ಇದರಿಂದ ಇನ್ನು ಮುಂದೆ ಅವರ ಕಣ್ಣಲಿ ನೀರು ಬರುವುದೇ ಇಲ್ಲ ಎನ್ನುವುದಾದರೆ ಇದನ್ನು ಮಾಡಿ ಬಿಡೋಣ. ಆದರೆ ಹಾಗೆ ಆಗುವುದಿಲ್ಲ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(613) 08.06.2017 / YL-VK / 12.40 **(ಸಭಾಪತಿಯವರ ಉಪಸ್ಥಿತಿ)**

200 ಕಿ.ಮೀ. 500 ಕಿ.ಮೀ. ದೂರದಲ್ಲಿ ಸಾರಾಯಿ ಅಂಗಡಿಯನ್ನು ತೆರೆಯುವುದರಿಂದ ಹೆಣ್ಣು ಮಕ್ಕಳ ಕಣ್ಣೀರು ಒರೆಸುವುದಕ್ಕಾಗುವುದಿಲ್ಲ. Practically it is not so. ಆದ್ದರಿಂದ ನಾನು ಹೇಳುವುದೇನೆಂದರೆ ದೂರ ಅಂಗಡಿಗಳನ್ನು ಮಾಡಿಕೊಳ್ಳಿ ಎಂದು ಹೇಳುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ತಾಂಡಗಳ ಜಾಗದಲ್ಲಿ ಸಾರಾಯಿ ಅಂಗಡಿಗಳನ್ನು ಪ್ರಾರಂಭಿಸುವುದಕ್ಕೆ ಅನುಮತಿ ಕೊಡುವುದಿಲ್ಲ. ತಾಂಡಾಗಳ ಜಾಗದಲ್ಲಿ ಸಾರಾಯಿ ಅಂಗಡಿಗಳಿಗೆ ಅನುಮತಿ ಕೊಡಬಾರದೆಂದು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾಗಿ ನಿರ್ದೇಶನವನ್ನು ಕೊಟ್ಟಿದ್ದೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಊರಿನಲ್ಲಿ ವಾಸ ಮಾಡುತ್ತಿರುವ ಸಂಸಾರಸ್ಥರು ಸ್ನಾನಗೃಹದಲ್ಲಿ ಸ್ನಾನ ಮಾಡುತ್ತಿರುವಾಗ ಕೂಡ ಮದ್ಯದಂಗಡಿ ಕಾಣಿಸುತ್ತಿದೆ. ಹಾಗಾಗಿ ಆ ಅಂಗಡಿಯನ್ನು ಊರಿನಿಂದ ಹೊರಗೆ ಹಾಕಿ ಎಂದು ಇಡೀ ಊರಿನ ಜನರು ಬಂದು ಹೇಳಿದರು ಇಲಾಖೆ ಅದನ್ನು ಒಪ್ಪುತ್ತಿಲ್ಲ. ಅದನ್ನು Road list ಗೆ ಸೇರಿಸಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಒಂದು ಸಾರಾಯಿ ಅಂಗಡಿಯನ್ನು ತೆಗೆಯಬೇಕಾದರೆ, ಏನೇನು ಅಂಶಗಳನ್ನು ಗಮನಿಸಬೇಕೆಂಬುದೆಲ್ಲಾ ನಿಯಮಾವಳಿಗಳಿವೆ. ಶಾಲೆ, ಆಸ್ಪತ್ರೆ, ದೇವಾಸ್ಥಾನಗಳು ಇವುಗಳೆಲ್ಲದರಿಂದ ಮದ್ಯದಂಗಡಿ ಇಷ್ಟು ದೂರದಲ್ಲಿರಬೇಕೆಂಬುದು ಕಡ್ಡಾಯವಾಗಿ ನಿಯಮಾವಳಿಗಳಿವೆ. ಬಡವರು ವಾಸ ಮಾಡದೇ ಇರತಕ್ಕಂಥ ಜಾಗದಲ್ಲಿ, ಗುಡಿಸಲು ಇಲ್ಲದೇ ಇರತಕ್ಕಂಥ ಜಾಗದಲ್ಲಿ ಸಾರಾಯಿ ಅಂಗಡಿಗಳು ತೆಗೆಯಬೇಕೆಂದು ಇದೆ. ಅವುಗಳೆಲ್ಲವನ್ನು ನೋಡಿಕೊಂಡು ಅನುಮತಿ ನೀಡುತ್ತಾರೆ. ಅದಕ್ಕಾಗಿ ಅದರ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಮಾಹಿತಿಯನ್ನು ಕೊಟ್ಟಿದ್ದೇವೆ. ದೂರದ ಜಾಗಗಳಿಗೆ ವರ್ಗಾಯಿಸಿಕೊಳ್ಳುವಂತೆ ಹೇಳಿದ್ದೇವೆ. ಬಳ್ಳಾರಿ ರಸ್ತೆ ಹೈದ್ರಾಬಾದ್ ಬೆಂಗಳೂರಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿ ಏನಿವೆ. ಅದರ ವ್ಯಾಪ್ತಿಯಲ್ಲಿ ಏನು ಒಳಪಡುತ್ತದೆ ಅದನ್ನು ವಿಂಗಡಿಸಿದ್ದೇವೆ ಅಷ್ಟೇ. ಈ ಒಂದು ಕಾರಣದಿಂದ ಸಾರಾಯಿ ಅಂಗಡಿಯನ್ನು ಮಾಡಿದ್ದೇವೆಂಬುದು ಬಿಟ್ಟರೆ, ಕುಡಿಸಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು ಮಾಡಿಲ್ಲ. ಕುಡಿಸುವುದನ್ನು ಬಿಡಿಸಬೇಕು.

(ಗೊಂದಲ)

ನಾವು ಬಡವರ ಪರವಾಗಿದ್ದೇವೆ. ನಮ್ಮ ಸರ್ಕಾರದಷ್ಟು ಬಡವರ ಪರವಾಗಿ ಇರುವುದಕ್ಕೆ, ಬೇರೆ ಯಾವ ಸರ್ಕಾರದಿಂದಲೂ ಸಾಧ್ಯವೇ ಇಲ್ಲ. We are there for the poor people.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇಷ್ಟೆಲ್ಲಾ ಘೋಷಣೆ ಮಾಡುವಂತಹ ಮುಖ್ಯಮಂತ್ರಿ, ನಮ್ಮ ರಾಜ್ಯದಲ್ಲಿ ಮಾತ್ರವಲ್ಲ. ಇಡೀ ದೇಶದಲ್ಲಿಯೇ ಸಿಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಕೆ.ಎಸ್.ಈಶ್ವರಪ್ಪನವರು ಯೋಚನೆಯೇ ಮಾಡುವುದಿಲ್ಲವಲ್ಲಾ ಅದಕ್ಕಾಗಿಯೇ ಈ ರೀತಿಯ ಸಮಸ್ಯೆಗಳು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ರೀತಿಯ ಮಾತುಗಳನ್ನು ಕೇಳಿ, ಕೇಳಿ ಕೊನೆಗೆ ಮಾನ್ಯ ಪ್ರಾಣೇಶ್‌ರವರು ಸಹ ಮುಖ್ಯಮಂತ್ರಿಗಳೆ ನೀವು ಹೇಳುವುದು ಸರಿ. ನನಗೂ ಸಹ ಕುಡಿಯುವುದಕ್ಕೆ ಕೊಡಿ ಎಂದು ಕೇಳಿಯೇ ಬಿಡುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಆಯ್ತು, ಬಿಡಿ ಮಾನ್ಯ ಕೆ.ಎಸ್.ಈಶ್ವರಪ್ಪನವರೆ, ಸಾಕು.

**ಸಭಾಪತಿಗಳು:-** ಈಗಾಗಲೇ ಈ ಪ್ರಶ್ನೆಗೆ ಚರ್ಚೆಯಾಗಿ 30 ನಿಮಿಷಗಳಾಗಿದೆ. ಮಾನ್ಯ ವಿ.ಎಸ್.ಉಗ್ರಪ್ಪನವರು ಮತ್ತೆ ಮಾತನಾಡುವುದಕ್ಕೆ ಕೈ ಎತ್ತುತ್ತಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೇ? ಬೇಡವೇ?

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರೆ ಒಂದು ನಿಮಿಷ. ಮಾನ್ಯ ಮುಖ್ಯಮಂತ್ರಿಗಳು ಸಿಎಲ್-2, ಸಿಎಲ್-9 ವರ್ಗಾಯಿಸಿಕೊಳ್ಳಿ ಎಂದು ಹೇಳಿದ್ದಾರೆ. ಸ್ವಗೃಹ ಇರುವವರು ಹೇಗೆ ವರ್ಗಾಯಿಸುವುದು. ಕಟ್ಟಡವನ್ನೇ ವರ್ಗಾಯಿಸಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಸ್ವಗೃಹ ಇರುವಂತಹದ್ದನ್ನು ಏನು ಮಾಡುವುದಕ್ಕಾಗುವುದಿಲ್ಲ.

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೆ, ಇದರಿಂದ ಸರ್ಕಾರಕ್ಕೂ ಎಷ್ಟೋ ಹಾನಿಯಾಗುತ್ತದೆ. ನೀವು ಬೇರೆ ರೀತಿ ಉತ್ತರ ಹೇಳಿದ್ದೀರಿ. ಆದರೆ ನಾನು ಹೇಳುವುದೇನೆಂದರೆ ನಾನು ಕೇವಲ ಲೈಸೆನ್ಸ್ ಬಗ್ಗೆ ಹೇಳುತ್ತಿಲ್ಲ. ನನ್ನ ಒಂದು ಹೋಟೆಲ್‌ನಿಂದ ಸರ್ಕಾರಕ್ಕೆ ಲೈಸೆನ್ಸ್‌ನ fees ಹೋಗುತ್ತದೆ. ಮತ್ತೊಂದು ವಿಚಾರ ಏನೆಂದರೆ ಇವತ್ತಿನ ದಿನ ಹೇಗೆ ಪೆಟ್ಟಿ ಅಂಗಡಿಯಲ್ಲಿ ಸಾರಾಯಿ ಮಾಡುತ್ತಾರೆಯೋ, unauthorised ಆಗಿ ತೆರಿಗೆಯನ್ನು ಕಟ್ಟದೆ ಹೋಟೆಲ್‌ನಲ್ಲಿ ತಂದು ಮಾರುವಂತಹ ಪರಿಸ್ಥಿತಿ ಉದ್ಭವಿಸುತ್ತದೆ. ಇದು ನಿಲ್ಲುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ನಿಮ್ಮ ಪ್ರಶ್ನೆ ಕೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅನುಭವದ ಹಿನ್ನೆಲೆಯಲ್ಲಿ ಬಹಳ ರಂಜನೀಯವಾಗಿ ಸದನವನ್ನು ಅವರ ಕಡೆ ಸೆಳೆದಿದ್ದಾರೆ.

**ಸಭಾಪತಿಯವರು:–** ನಿಮ್ಮ ಪ್ರಶ್ನೆ ಏನೆಂಬುದನ್ನು ಕೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆಯೆನೆಂದರೆ, Excise Act ಪ್ರಕಾರ ದೇವಾಸ್ಥಾನಗಳು, ಕಛೇರಿಗಳು, ಶಾಲೆಗಳು, ಮಸೀದಿ, ಚರ್ಚ್, ಹೆದ್ದಾರಿಗಳು while issuing licences under CL 1 to CL 11 of Excise Act, certain conditions are there. As per the provisions of Article 141 in the Constitution of India any law declared by the Hon'ble Supreme Court of India is binding on each and every government. This is the legal position. Rightly or wrongly in the month of December 2016, the Hon'ble Supreme Court of India has declared a law. 500 ಕಿಲೋ ಮೀಟರ್‌ನಲ್ಲಿರತಕ್ಕಂಥ ಯಾವುದೇ ರಾಷ್ಟ್ರೀಯ ಹೆದ್ದಾರಿಗಳಲ್ಲಿರತಕ್ಕಂಥ ಸಿಎಲ್–1, ಸಿಎಲ್–2 ರಿಂದ ಸಿಎಲ್–11 ವರೆಗೂ ಇರುವ ಸಾರಾಯಿ ಅಂಗಡಿಯನ್ನು ತೆಗೆಯಬೇಕೆಂದು ಹೇಳಿದ್ದಾರೆ.

**ಸಭಾಪತಿಯವರು:–** ಈಗ ನಿಮ್ಮ ಪ್ರಶ್ನೆ ಏನು?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅದಕ್ಕಾಗಿ ಸರ್ವೋಚ್ಚ ನ್ಯಾಯಾಲಯದ ಆದೇಶ ಬಂದಾದ ಮೇಲೆ ಇದನ್ನು ಈ ರಸ್ತೆಯನ್ನು denotify ಮಾಡುತ್ತೇವೆ. ಈ ರಸ್ತೆಯನ್ನು ರಾಜ್ಯ ಹೆದ್ದಾರಿಯಿಂದ ತೆಗೆದು district road ಅಥವಾ ರಾಷ್ಟ್ರೀಯ ಹೆದ್ದಾರಿಯನ್ನು ತೆಗೆದು ರಾಜ್ಯ ಹೆದ್ದಾರಿ ಎಂದು ಹೇಳಿದ್ದರೆ, ನನ್ನ ಪ್ರಕಾರ ಸರ್ವೋಚ್ಚ ನ್ಯಾಯಾಲಯದಲ್ಲಿ ಯಾವ ಆಧಾರದ ಹಿನ್ನೆಲೆಯಲ್ಲಿ ಇದನ್ನು ಮಾಡಿದ್ದೀರಿ ಎಂದು ಕೇಳಿದರೆ ನಿಮ್ಮ ಹತ್ತಿರ ಉತ್ತರ ಏನಿದೆ? ನಾಳೆ if somebody questions the validity of this stand, where we will stand? ಇದು ನನ್ನ ಮೊದಲನೆಯ ಪ್ರಶ್ನೆ. ದಯಮಾಡಿ ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣಗೊಳಿಸಬೇಕು. ಎರಡನೆಯದಾಗಿ ಎಂಎಸ್‌ಐಎಲ್ ಲೈಸೆನ್ಸ್ ಬಗ್ಗೆ ಹೇಳಬೇಕಾದರೆ ಅರಸೀಕೆರೆಯಲ್ಲಿ ಈಗಾಗಲೇ ಒಂದನ್ನು identify ಮಾಡಿದ್ದಾರೆ. ಇನ್ನೊಂದು ಸರಗೂರಿನಲ್ಲಿ 4 ವೈನ್ ಶಾಪ್‌ಗಳಿವೆ. ಅದರ ಜೊತೆಗೆ 5ನೇ ವೈನ್ ಶಾಪ್‌ನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂಎಸ್ಐಎಲ್ ನಿಂದ ಹಾಕಬೇಕೆಂದು ಹೊರಟಿರಬೇಕಾದರೆ, ಅಲ್ಲಿರತಕ್ಕಂಥ 4 ವೈನ್ ಶಾಪ್ ಅಂಗಡಿಯವರು ಅವರಿಗೆ ವ್ಯಾಪಾರವಾಗುವುದಿಲ್ಲವೆಂಬುದಕ್ಕಾಗಿ ಇಲ್ಲಿ ವೈನ್ ಶಾಪ್ ಹಾಕಬಾರದೆಂದು ಹೇಳುತ್ತಾರೆ. ಆದರೆ, ಈ ಪಟ್ಟಿಯಲ್ಲಿ ನೋಡಿದರೆ ಅವೆರಡೂ ಇಲ್ಲ. ಏಕೆ ಕೊಟ್ಟಿಲ್ಲವೆಂಬುದು ಗೊತ್ತಾಗುತ್ತಿಲ್ಲ. ಆದ್ದರಿಂದ, ದಯವಿಟ್ಟು ಏತಕ್ಕಾಗಿ ಅವೆರಡನ್ನು ಬಿಟ್ಟಿದ್ದಾರೆಂಬುದನ್ನು ಹೇಳಬೇಕು As a lawyer, ನನ್ನ 30 ವರ್ಷಗಳ ವಕೀಲ ವೃತ್ತಿಯ ಹಿನ್ನೆಲೆಯಲ್ಲಿ ಹೇಳಬೇಕೆಂದರೆ ಕಾನೂನಿನಲ್ಲಿ ಸರ್ಕಾರದ denotify ಮಾಡಿ ತೆಗೆಯುವಂತಹದ್ದು ತೀರ್ಮಾನವೇನಿದೆ ಆ ತೀರ್ಮಾನ ಸರ್ವೋಚ್ಚ ನ್ಯಾಯಾಲಯದಲ್ಲಿ ನಿಲ್ಲುವುದಿಲ್ಲ. ದಯವಿಟ್ಟು ಮತ್ತೊಂದು ಸಾರಿ ಅದನ್ನು ಪರಿಶೀಲನೆ ಮಾಡುವುದು ಸೂಕ್ತವೆಂದು ಹೇಳಬಯಸುತ್ತೇನೆ.

**ಸಭಾಪತಿಯವರು:-** ಅದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ.

**ಶ್ರೀ ಭಾನುಪ್ರಕಾಶ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾಂಡದಲ್ಲಿ ಇಲ್ಲವೆಂದು ಹೇಳುತ್ತಿದ್ದೀರಿ. ನಾನು ಪಟ್ಟಿಯನ್ನು ನೋಡಿದ್ದೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಒಂದೇ ಪ್ರಶ್ನೆ ಇಷ್ಟೊಂದು ಸಮಯವನ್ನು ತೆಗೆದುಕೊಂಡರೆ ಹೇಗೆ. ನೀವೇ ಹೇಳಬೇಕು.

**ಸಭಾಪತಿಯವರು:-** 30 ನಿಮಿಷಕ್ಕಿಂತಲೂ ಅಧಿಕ ಸಮಯವಾಗಿದೆ. ಸದರಿ ಪ್ರಶ್ನೆಯ ಬಗ್ಗೆ ಚರ್ಚೆಯಾಗಿರುವುದು ಸಾಕು ಎಂದು ನಾನು ಹೇಳಿದ್ದೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನೀವೇ ಇದಕ್ಕೆ ಏನಾದರೂ ಮಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಸರ್ಕಾರ ಏನೇ ತೀರ್ಮಾನವನ್ನು ತೆಗೆದುಕೊಂಡರು, ಸುಮ್ಮನೆ ಕುಳಿತುಕೊಳ್ಳುವಂತಹ ಪರಿಸ್ಥಿತಿ ವಿರೋಧ ಪಕ್ಷದ ನಾಯಕರಿಗೆ ಬರುವುದಕ್ಕೆ ಸಾಧ್ಯವಿಲ್ಲ. ರಾಜ್ಯದ ಜನರು ಉಳಿಯಬೇಕು. ಹೆಣ್ಣುಮಕ್ಕಳ ಅಭಿಪ್ರಾಯವನ್ನು ತಿಳಿದುಕೊಂಡು ಸರ್ವೋಚ್ಚ ನ್ಯಾಯಾಲಯಕ್ಕೆ ತನ್ನ ಅಭಿಪ್ರಾಯವನ್ನು ತಿಳಿಸಬೇಕು.

**ಸಭಾಪತಿಯವರು:-** ಹಾಗಾದರೆ, ಮಾನ್ಯ ವಿ.ಎಸ್.ಉಗ್ರಪ್ಪನವರ ಪ್ರಶ್ನೆಗೆ ಉತ್ತರ ಬೇಡವೇ?

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೆ, ತಾಂಡದಲ್ಲಿ ಸಾರಾಯಿ ಅಂಗಡಿಯನ್ನು ತೆರೆಯುವುದಿಲ್ಲವೆಂದು ಹೇಳುತ್ತಿದ್ದಾರೆ. ನನ್ನದೇ ಮತ್ತೂರು ಪಂಚಾಯಿತಿಯ, ಪಕ್ಕದಲ್ಲಿರತಕ್ಕಂಥದ್ದು ಮಂಡ್ಯದ ಕೊಪ್ಪ ತಾಂಡ. ಶಿಕಾರಿಪುರ ತಾಲ್ಲೂಕಿನಲ್ಲಿ ಈಸೂರು ತಾಂಡ. ಬೇಕಾದರೆ ಪಟ್ಟಿಯಾಗಿರುವುದನ್ನು ನೀವೇ ನೋಡಿ. ದಯಮಾಡಿ ತಾಂಡಗಳಲ್ಲಿ ವಿಶೇಷ ಪರಿಶೀಲನೆ ಮಾಡಿ, ಸಾರಾಯಿ ಅಂಗಡಿಗಳನ್ನು ತೆರೆಯುವುದಕ್ಕೆ ಅವಕಾಶ ಕೊಡಬೇಡಿ. ಧನ್ಯವಾದಗಳು.

**ಸಭಾಪತಿಯವರು:-** ಆಯ್ತು. ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿ.ಎಸ್.ಉಗ್ರಪ್ಪನವರು ವಕೀಲರು ಎನ್ನುವ ಬಗ್ಗೆ ಎರಡನೆಯ ಮಾತೇ ಇಲ್ಲ. ಏಕೆಂದರೆ, ಸಂವಿಧಾನದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದಾರೆ. ನಮಗೆ ಎಲ್ಲವೂ ಮರೆತು ಹೋಗಿದೆ. ಎಲ್ಲಾ ರೀತಿ Excise Act ನ Articles, Sections, ಸಂವಿಧಾನದ ಎಲ್ಲಾ Articles ಗಳನ್ನು ಜ್ಞಾಪನದಲ್ಲಿಟ್ಟುಕೊಂಡಿದ್ದಾರೆ.

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಕೂಡ ವಕೀಲರಾಗಿದ್ದಾರೆ.

**ಸಭಾಪತಿಯವರು:-** ಸ್ವಲ್ಪ ಇರಿ. ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ಅವರನ್ನು ಮಾತನಾಡುವುದಕ್ಕೆ ಬಿಡಿ. ಈಗಾಗಲೇ 30 ನಿಮಿಷವಾಗಿದೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಾನು ಸಹ ವಕೀಲ. ಇಲ್ಲವೆಂದು ಹೇಳಿಲ್ಲ. ಆದರೆ ನನಗೆ ವಕೀಲ ವೃತ್ತಿ ಮರೆತು ಹೋಗಿದೆ. ನಾನು ವಕೀಲ ವೃತ್ತಿ ಅಭ್ಯಾಸ ಮಾಡುವುದನ್ನು 1982 ರಲ್ಲಿ ನಿಲ್ಲಿಸಿದ್ದೇನೆ. ಅಲ್ಲಿಂದ ಇಲ್ಲಿಯವರೆಗೆ 35 ವರ್ಷಗಳಾಗಿವೆ. ಹೀಗಾಗಿ ಎಲ್ಲವೂ ನೆನಪಿನಲ್ಲಿಟ್ಟುಕೊಳ್ಳುವುದಕ್ಕಾಗುತ್ತದೆಯೇ? ಎಲ್ಲವೂ ಮರೆತು ಹೋಗಿದೆ. ಜೊತೆಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ವಕೀಲರಾಗಿದ್ದರು. ಅವರಿಗೇನಾದರೂ ನೆನಪಿದೆಯೇ? ಏನೂ ನೆನಪಿಲ್ಲ. Now, I am proud of Mr. Ugrappa, ಏಕೆಂದರೆ ಅವರು ಎಲ್ಲವನ್ನು ನೆನಪಿನಲ್ಲಿಟ್ಟುಕೊಂಡು Sections ಎಲ್ಲವನ್ನು ಹೇಳುತ್ತಾರೆ nobody is questioning.

**ಶ್ರೀ ವಿನಯ್ ಕುಲಕರ್ಣಿ:-** ಮಾನ್ಯ ವಿ.ಎಸ್.ಉಗ್ರಪ್ಪನವರು ಹೇಳುವುದೆಲ್ಲವೂ ಸರಿಯಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ವಿ.ಎಸ್.ಉಗ್ರಪ್ಪನವರು ಹೇಳುವುದೆಲ್ಲಾ ಸರಿಯಾಗಿಯೇ ಇರುತ್ತದೆಂದು ನಾನು ಕೂಡ ಭಾವಿಸಿದ್ದೇನೆ. ಸರ್ವೋಚ್ಚ ನ್ಯಾಯಾಲಯದ ತೀರ್ಮಾನವನ್ನು ನಾವು ಜಾರಿ ಮಾಡುತ್ತಿದ್ದೇವೆ. ಈಗಾಗಲೇ ನೋಟೀಸನ್ನು ಕೊಟ್ಟಿದ್ದೇವೆ. ಸಾರಾಯಿ ಅಂಗಡಿಯನ್ನು ವರ್ಗಾಯಿಸಿಕೊಳ್ಳುವವರಿಗೆ ಜೂನ್ 30 ರವರೆಗೂ ಸಮಯವನ್ನು ಕೊಟ್ಟಿದ್ದೇವೆ. ರಸ್ತೆ ಏಕೆ ಮಾಡಿದ್ದೇವೆಂದರೆ, ಅನೇಕ ಕಡೆಗಳಲ್ಲಿ ರಸ್ತೆಗಳಿಗೆ ಹಣವನ್ನು ಖರ್ಚು ಮಾಡುವುದು, ರಸ್ತೆಗಳನ್ನು ರಿಪೇರಿ ಮಾಡುವುದು ಮುನಿಸಿಪಾಲಿಟಿಗಳೆ. ಬಳ್ಳಾರಿ ರಸ್ತೆಯ ಕಾಮಗಾರಿಗೆ ರಾಷ್ಟ್ರೀಯ ಹೆದ್ದಾರಿಯವರು ಬಂದು ಹಣವನ್ನು ಕೊಡುತ್ತಾರೆಯೇ? ಹಣವನ್ನು ನಾವು ಖರ್ಚು ಮಾಡುವುದು. ರಾಷ್ಟ್ರೀಯ ಹೆದ್ದಾರಿಯವರಿಗೆ ಬಿಟ್ಟು ಏನು ಮಾಡುವುದು? ನಾವು ರಸ್ತೆಗಳನ್ನು ನಿರ್ವಹಿಸುತ್ತೇವೆ. ಆದರೆ ಹೆಸರು ಮಾತ್ರ ನಿಮ್ಮದಾಗಿರಲಿ ಎಂದು ಹೇಳುವುದೇ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಬಿಬಿಎಂಪಿ ರಸ್ತೆಗಳನ್ನು ಕಾರ್ಪೋರೇಷನ್‌ರವರು maintain ಮಾಡುತ್ತಾರೆ. Taluk headquarters ನಲ್ಲಿ PWD ನವರು maintain ಮಾಡುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಶ್ರೀ ಬಿ.ಜೆ.ಪುಟ್ಟಸ್ವಾಮಿಯವರಿಗೆ ಹೇಳಿ ಮೈಸೂರಿನಲ್ಲಿಯೂ ರಸ್ತೆಗಳನ್ನು ನಾವೇ ನಿರ್ವಹಿಸುವುದು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಮೈಸೂರಿನದು ಮಹಾನಗರ ಪಾಲಿಕೆಗೆ ಸಂಬಂಧಪಡುತ್ತದೆ. ಹಾಗಾಗಿ ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮುನಿಸಿಪಾಲಿಟಿಗಳಲ್ಲಿಯೂ ಮಾಡಿ ಎಂದು ಹೇಳುತ್ತೇವೆ. ಅದರಿಗೂ ನಾವೇ ಹಣವನ್ನು ಕೊಡುವುದು. ನಗರೋತ್ಥಾನ ಯೋಜನೆಗೆ ಹಣವನ್ನು ಕೊಡುವವರ್ಯಾರು ನಾವೇ. ಕೇಂದ್ರ ಸರ್ಕಾರದವರು ಎಲ್ಲಿ ಬರುತ್ತಾರೆ? ಪಿಡಬ್ಲ್ಯೂಡಿಯವರು ಸಾಮಾನ್ಯವಾಗಿ ಮುನಿಸಿಪಾಲಿಟಿಯೊಳಗೆ, ನಗರ ಸಭೆಯೊಳಗೆ, ಕಾರ್ಪೋರೇಷನ್‌ಗಳೊಳಗೆ ಬರತಕ್ಕಂಥ ರಸ್ತೆಗಳ ಕಡೆಗೆ ಅವರದೇ ರಸ್ತೆಗಳಾದರೂ ಸಹ ರಸ್ತೆಗಳ ನಿರ್ವಹಣೆ, ದುರಸ್ತಿ ಮತ್ತು ಅಭಿವೃದ್ಧಿಪಡಿಸುವಂತಹ ಕೆಲಸವನ್ನು ಮಾಡುವುದು ಕಡಿಮೆ. ಮಾನ್ಯ ಮಹದೇವಪ್ಪನವರೆ ನಿಜವಲ್ಲವೇ?

**ಶ್ರೀ ಹೆಚ್.ಸಿ.ಮಹದೇವಪ್ಪ:-** ಹೌದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನೀವೇ ನೋಡಿ ಮಹದೇವಪ್ಪನವರು ತಲೆ ಆಡಿಸಿದರಲ್ಲವೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮಹದೇವಪ್ಪನವರು ಒಬ್ಬರೇ ಮುಖ್ಯಮಂತ್ರಿಗಳ ಜೊತೆಗಿರುವುದು.

(ಗೊಂದಲ)

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಆದರೆ,

(ಗೊಂದಲ)

ನೋಡೋಣ. Taluk headquarters ನಲ್ಲಿ ಯಾರು maintain ಮಾಡುತ್ತಾರೆಂದು.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಪುಟ್ಟಸ್ವಾಮಿಯವರೆ, ಅವರೂ ಸಹ 35 ವರ್ಷಕ್ಕಿಂತಲೂ ಹೆಚ್ಚು ರಾಜಕೀಯದಲ್ಲಿದ್ದಾರೆ. ತಲೆಯನ್ನು ಸುಮ್ಮನೆ ಆಡಿಸುತ್ತಾರೆಯೇ? ಮಾನ್ಯ ಈಶ್ವರಪ್ಪನವರು ಬರುವ ಮುಂಚೆಯೇ ಮಹದೇವಪ್ಪನವರು ವಿಧಾನಸಭೆಗೆ ಬಂದಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಬರುವುದಕ್ಕಿಂತ ಮುಂಚೆಯೇ ಮಾನ್ಯ ಮಹದೇವಪ್ಪನವರು ಪ್ರವೇಶಿಸಿದ್ದಾರೆ. ಆದರೆ, ನಾನು ಎಂದಿಗೂ ಸಹ ಮಾನ್ಯ ಮುಖ್ಯಮಂತ್ರಿಗಳಿಗೆ ತಲೆ ಬಾಗಿಸುವುದಿಲ್ಲ. ಮಾನ್ಯ ಮಹದೇವಪ್ಪನವರು ಒಬ್ಬರೆ ಮಾನ್ಯ ಮುಖ್ಯಮಂತ್ರಿಗಳಿಗೆ ತಲೆ ಬಾಗಿಸುವುದು. ಏತಕ್ಕಾಗಿಯೋ ಇತ್ತೀಚೆಗೆ ಮಾನ್ಯ ರೇವಣ್ಣನವರು ಮತ್ತು ಮಾನ್ಯ ಉಗ್ರಪ್ಪನವರು ಮುಖ್ಯಮಂತ್ರಿಗಳ ಜೊತೆಗಿದ್ದರು. ಆದರೆ, ಇವರುಗಳನ್ನು ಏತಕೋ ಕೈ ಬಿಟ್ಟಿದ್ದಾರೆ. ಹಾಗಾಗಿ ಈಗ ಮಾನ್ಯ ಮಹದೇವಪ್ಪನವರು ಒಬ್ಬರೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಉಳಿದಿರುವುದು.

(614) 08-06-2017 (12-50)BSD-VK

ಶ್ರೀ ಸಿದ್ದರಾಮಯ್ಯ:- ಮಾನ್ಯ ಈಶ್ವರಪ್ಪನವರು ತಲೆ ಬಗ್ಗಿಸಬೇಕು ಎಂದು ನಾನು ಯಾವತ್ತೂ expect ಮಾಡುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಅದು ಸಾಧ್ಯವೇ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಿದ್ದರಾಮಯ್ಯ:- ಸಾಧ್ಯವಿಲ್ಲ ಎಂದು ನನಗೂ ಗೊತ್ತು, ಅವರಿಗೂ ಗೊತ್ತು. ಅವರು ಯಾರಿಗೆ ತಲೆ ಬಗ್ಗಿಸುತ್ತಾರೆ ಎಂದು ಗೊತ್ತಿದೆ. ಯಾರಿಗೆ ಬಗ್ಗಿಸುವುದಿಲ್ಲ ಎಂದು ಗೊತ್ತಿದೆ. ಅವರು ಯಾರ್‍ಯಾರಿಗೆ ತಲೆ ಬಗ್ಗಿಸುತ್ತಾರೆ ಎಂದು ನಾನು ಹೇಳಲೇ?

**ಸಭಾಪತಿಯವರು:-** ಈ ಪ್ರಶ್ನೆಗೆ 40 ನಿಮಿಷಗಳಾಗಿದೆ.

ಶ್ರೀ ಸಿದ್ದರಾಮಯ್ಯ:- ಅದಕ್ಕೆ ನಾನೇನು ಮಾಡಲಿ? ನೀವು ಅವಕಾಶ ಕೊಟ್ಟು ನನಗೆ ಹೇಳಿದರೆ ನಾನೇನು ಮಾಡಲಿ? ಚರ್ಚೆಯಲ್ಲಿ ಪ್ರಶ್ನೆ ಕೇಳಲು ಎಲ್ಲರಿಗೂ ಅವಕಾಶ ಕೊಟ್ಟು ನನಗೆ ಹೇಳಿದರೆ ಹೇಗೆ?

**ಸಭಾಪತಿಯವರು:-** ತಾವು ಮಾತನಾಡುವಾಗ ಹೇಗೆ ಮಧ್ಯೆ ಬಾಯಿ ಹಾಕುವುದಕ್ಕೆ ಆಗುತ್ತದೆ.

**ಶ್ರೀ ಸಿದ್ದರಾಮಯ್ಯ:-** ಸುಪ್ರೀಂಕೋರ್ಟ್ ಆದೇಶವನ್ನು ಉಲ್ಲಂಘನೆ ಮಾಡುವ ಉದ್ದೇಶ ಇಲ್ಲ. We have got all the respect for the Supreme Court. It is binding on all the states. ಅದರ ಬಗ್ಗೆ ಎರಡನೇ ಮಾತಿಲ್ಲ. ಇದನ್ನು ಪ್ರಾಯೋಗಿಕವಾಗಿ ಯೋಚನೆ ಮಾಡಿ ತೀರ್ಮಾನ ಮಾಡಿದ್ದೇವೆ. This is nothing to do with liquor shops. ಇದು ಲಿಕ್ಕರ್ ಶಾಪ್‌ಗಳಿಗೆ ಸಂಬಂಧ ಇಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈ ಸರ್ಕಾರ ಲಿಕ್ಕರ್ ಲಾಬಿಗೆ ಬಗ್ಗಿದ್ದಾರೆ, ರಾಜ್ಯದ ಹೆಣ್ಣು ಮಕ್ಕಳ ವಿರುದ್ಧ ಇದೆ, ಮತ್ತು ಕುಡುಕರ ಪರವಾಗಿದೆ. ರಾಜ್ಯದಲ್ಲಿ ಇಂತಹ ಕಾನೂನು ತಂದು ಜನರನ್ನು ಕುಡುಕಮಯ ಮಾಡುತ್ತಿದ್ದಾರೆ. ಆದ್ದರಿಂದ ಸರ್ಕಾರದ ಈ ಧೋರಣೆಯನ್ನು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇವೆ. ಲಿಕ್ಕರ್ ಲಾಬಿಗೆ ಮಣಿಯುವುದು ಯಾವ ಕಾರಣಕ್ಕೂ ಒಳ್ಳೆಯದಲ್ಲ.

**ಸಭಾಪತಿಯವರು:-** ಮಾನ್ಯ ರಮೇಶ್‌ಬಾಬುರವರ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಈಶ್ವರಪ್ಪನವರು ಹೊರಗೆ ಹೋಗುತ್ತಿದ್ದಾರೆ, ಹೋಗಿ ಬರಲಿ. ಅವರು 5 ವರ್ಷ ಅಧಿಕಾರದಲ್ಲಿದ್ದಾಗ prohibition ಮಾಡಬಹುದಾಗಿತ್ತಲ್ಲವೇ? ಅವರ ಸರ್ಕಾರ ಇರುವ ರಾಜ್ಯಗಳಲ್ಲಿ ನಿರ್ಬಂಧ ಮಾಡಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಆಗ ಸುಪ್ರೀಂಕೋರ್ಟ್ ತೀರ್ಪು ಬಂದಿರಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರೆಲ್ಲರೂ ಸರ್ಕಾರದ ಉತ್ತರವನ್ನು ವಿರೋಧಿಸಿ ಸಭಾತ್ಯಾಗ ಮಾಡಿದರು)**

**ಶ್ರೀ ಸಿದ್ದರಾಮಯ್ಯ:-** ಮಧ್ಯಪ್ರದೇಶ, ರಾಜಾಸ್ಥಾನ, ಉತ್ತರಪ್ರದೇಶ ಸೇರಿದಂತೆ ಎಲ್ಲಾ ಕಡೆಗಳಲ್ಲಿಯೂ total prohibition ಮಾಡಲಿ. ಸುಮ್ಮನೆ ಬುರುಡೆ ಹೊಡೆಯುತ್ತಾರೆ. ಬಿಜೆಪಿಯವರು ಡೋಂಗಿ ರಾಜಕಾರಣ ಮಾಡುವುದನ್ನು ಬಿಡದಿದ್ದರೆ ದೇಶ ಉದ್ಧಾರವಾಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ರಮೇಶ್‌ಬಾಬುರವರ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ನನಗೆ ಪತ್ರ ಬಂದಿದ್ದು, ಮುಂದಿನ ವಾರ ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಂತರ ಶ್ರೀ ಭಾನುಪ್ರಕಾಶ್‌ರವರ ಪ್ರಶ್ನೆಗೂ ಕಾಲಾವಕಾಶ ಕೇಳಿದ್ದು, ಅದನ್ನು ಮುಂದಿನ ವಾರ ನೋಡೋಣ.

**ಶ್ರೀ ಸಿದ್ದರಾಮಯ್ಯ:-** ಎರಡು ಪ್ರಶ್ನೆಗಳಿಗೆ ಕಾಲಾವಕಾಶ ಕೇಳಿದ್ದೇನೆ.

**ಸಭಾಪತಿಯವರು:-** ಹೌದು, ಮುಂದಿನವಾರ ನೋಡೋಣ.

**ಶ್ರೀ ಸಿದ್ದರಾಮಯ್ಯ:-** ಆಯಿತು, ಮುಂದಿನ ವಾರ ನೋಡೋಣ.

**ಸಭಾಪತಿಯವರು:-** ನಂತರ ಶ್ರೀ ಬಸನಗೌಡ ಪಾಟೀಲ್‌ರವರು ಪ್ರಶ್ನೆ ಕೇಳಿ.

**(ಸಭಾಪತಿಯವರ ಉಪಸ್ಥಿತಿ)**

**(615) 08-06-2017 SK-BNS 1.00**

**ಶ್ರೀಮತಿ ಮೋಟಮ್ಮ:-** **(ಮುಂದು)**

ಎರಡನೆಯದಾಗಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಜನರಿಗೆ ಈ ಒಂದು ಸಾಲ ಸೌಲಭ್ಯವನ್ನು ಒದಗಿಸಲಾಗಿದೆ ಎಂದು ನಾನು ಕೇಳಿದ್ದೇನೆ. ಎಲ್ಲಾ ತಾಲ್ಲೂಕುಗಳನ್ನು ಗಮನಿಸಿದಾಗ, ಮೂಡಿಗೆರೆ ತಾಲ್ಲೂಕಿನಲ್ಲಿ ಮಾತ್ರ ಒಬ್ಬರಿಗೆ ಐದೂವರೆ ಲಕ್ಷ ರೂಪಾಯಿಗಳು loan sanction ಆಗಿದೆ. ನಾನು ಮೂಡಿಗೆರೆ ತಾಲ್ಲೂಕಿನವಳು ಆಗಿರುವ ದೆಸೆಯಿಂದ ಕೇಳುತ್ತಿದ್ದೇನೆ. ಈ ಪುಣ್ಯಾತ್ಮಾ ಯಾರು? ಅವರ ಹೆಸರನ್ನು ಹೇಳಿದರೆ ಒಳ್ಳೆಯದು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಬರೆದುಕೊಳ್ಳಿ ಅವರ ಹೆಸರು ಪ್ರೀತಮ್.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಪ್ರೀತಮ್ ನನ್ನ ಮಗ.

**ಶ್ರೀ ಸಿದ್ದರಾಮಯ್ಯ:-** ನಿಮ್ಮ ಮಗನೇ? ಆಯಿತು.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ವಾಸ್ತವವಾಗಿ ನನಗೆ ಈ ವಿಷಯ ಗೊತ್ತಿಲ್ಲ. ನಮ್ಮ ಚಿಕ್ಕಮಗಳೂರಿನ ಇಡೀ ಜಿಲ್ಲೆಗಳಲ್ಲಿ ಕಡೂರು, ಕೊಪ್ಪ, ಎನ್.ಆರ್.ಪುರ, ಶೃಂಗೇರಿ, ತರೀಕೆರೆ ತಾಲ್ಲೂಕುಗಳಲ್ಲಿ ಯಾರೂ ಸಾಲ ಸೌಲಭ್ಯವನ್ನು ಪಡೆದಿಲ್ಲ. ಅದಕ್ಕೆ ಕಾರಣವೇನೆಂದರೆ ಯಾವುದೇ ಬಡವರ ಮಕ್ಕಳು ಉದ್ಯಮವನ್ನು ಪ್ರಾರಂಭ ಮಾಡಬೇಕಾದರೆ security deposit ಇಡುವುದಕ್ಕೆ ಕಷ್ಟವಾಗಿ ಬಿಟ್ಟು, ಅವರು ಮುಂದೆ ಬರುವುದಿಲ್ಲ. ಇದನ್ನು ಕೂಡ ತಾವು ವಿಚಾರ ಮಾಡಬೇಕಾಗುತ್ತದೆ. ಇದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು, loan ಗೆ subsidy ಯನ್ನು Social Welfare Department ನಿಂದ adjust ಮಾಡುವ ಕೆಲಸವನ್ನು ತಾವು ಮಾಡಿದ್ದೀರಿ.

**ಶ್ರೀ ಸಿದ್ದರಾಮಯ್ಯ:-** ಯಾವುದು?

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಉದ್ದಿಮೆದಾರರಿಗೆ ನೀವು ಏನು subsidy ಯನ್ನು ಕೊಡುತ್ತೀರಿ ಅದು ನಿಮ್ಮ ಉತ್ತರದಲ್ಲಿರುವುದನ್ನು ತಾವು ಗಮನಿಸಿ. ಸರ್ಕಾರದ ಬಡ್ಡಿ ಸಹಾಯಧನ ಎಂದರೆ ಅದು subsidy. ಈ ಬಡ್ಡಿ ಸಹಾಯಧನದ ಯೋಜನೆಯಡಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಈ ಯೋಜನೆ ಪ್ರಾರಂಭವಾದ ದಿನದಿಂದ 2017 ರಿಂದ ಇಲ್ಲಿಯವರೆಗೂ 8,454 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಅದರ ಜೊತೆಗೆ ಹೆಚ್ಚಿನ ಮೊತ್ತ ಅಂದರೆ 8722.67 ಲಕ್ಷ ರೂಪಾಯಿಗಳನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗಿದೆ ಎಂದು ಕೂಡ ತಿಳಿಸಿದ್ದೀರಿ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಅವರು ಪ್ರಶ್ನೆಯನ್ನು ಕೇಳಿಬಿಡಲಿ. ಮಾನ್ಯ ಉಗ್ರಪ್ಪನವರೇ ಮಧ್ಯೆ ಬಾಯಿ ಹಾಕಬೇಡಿ. ಅವರು ಪ್ರಶ್ನೆ ಕೇಳುತ್ತಿದ್ದಾರೆ. She is asking a specific question to the Chief Minister.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಹ clarification ಕೊಡಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಶ್ರೀಮತಿ ಮೋಟಮ್ಮನವರು ಬಹಳ ಹಿರಿಯ ಸದಸ್ಯರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಬಗ್ಗೆ ಬಹಳ ಕಳಕಳಿಯನ್ನು ಹೊಂದಿದವರು. ಅವರುಗಳು ಹೊಸ ಉದ್ದಿಮೆ ಮಾಡುತ್ತಿರುವ ಸಂದರ್ಭದಲ್ಲಿ entrepreneurs ಗೆ Karnataka State Financial Corporation (KSFC)ನವರು ಯಾವ ರೀತಿ ಸಹಾಯ ಮಾಡುತ್ತಾರೆ ಎಂಬುದರ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ನಮ್ಮ ಸರ್ಕಾರ ಬಂದ ಮೇಲೆ ಐದು ಕೋಟಿ ಸಾಲ ಇದ್ದದ್ದನ್ನು ಹತ್ತು ಕೋಟಿಗೆ ಏರಿಕೆ ಮಾಡಿದ್ದೇವೆ ಇದು ಒಂದು. Collateral Security ಬಗ್ಗೆ ಕೂಡ ಈ ವರ್ಷ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದೇನೆ. ನೂರು ಕೋಟಿ corpus fund ಅನ್ನು create ಮಾಡುತ್ತಿದ್ದೇವೆ. ಆ corpus fund ಅನ್ನು Collateral Security Credit Guarantee Fund Trust ಮೂಲಕ ನಾವೇ ಮಾಡಿಕೊಳ್ಳುತ್ತಿದ್ದೇವೆ. Collateral Security ಸಮಸ್ಯೆ ಕೂಡ ನಿವಾರಣೆ ಮಾಡಿದ್ದೇವೆ. ಕನಿಷ್ಠ ಇಪ್ಪತ್ತು ಲಕ್ಷ ರೂಪಾಯಿಗಳಿರುವುದನ್ನು ಸುಮಾರು ಹತ್ತು ಲಕ್ಷ ರೂಪಾಯಿಗಳಿಗೆ reduce ಮಾಡಿದ್ದೇವೆ. Power ಎರಡು ರೂಪಾಯಿ ಎಂದು per unit ಗೆ ಮಾಡಿದ್ದೇವೆ. ಇದರ ಜೊತೆಗೆ subsidised ದರದಲ್ಲಿ ಶೆಡ್‌ಗಳನ್ನು ಕೊಡುತ್ತಿದ್ದೇವೆ. Karnataka Industrial Areas Development Board (KIADB) ನಿಂದ ಅವರಿಗೆ 50% ಜಾಗವನ್ನು ಕೊಡುತ್ತೇವೆ. ಪರಿಶಿಷ್ಟ ಜಾತಿಯವರು ಮುಂದೆ ಬರಬೇಕೆಂದು ಪ್ರತಿ ವರ್ಷ ನೂರು ಕೋಟಿ ಇತ್ತು. 2013-14 ರಲ್ಲಿ KSFC ಯಿಂದ ಕೊಟ್ಟಿದ್ದು, 106 ಕೋಟಿ ರೂಪಾಯಿಗಳಿತ್ತು. 2016-17 ರಲ್ಲಿ ಅದು ಇನ್ನೂರ ನಲವತ್ತೈದು ಕೋಟಿ ರೂಪಾಯಿಗಳಾಗಿದೆ. ಬಹಳ ಜನರು ಮುಂದೆ ಬರುತ್ತಿರುವುದು ಬಹಳ ಒಳ್ಳೆಯ ಬೆಳವಣಿಗೆ ಹಾಗೂ ಪರಿಶಿಷ್ಟ ಜಾತಿಯವರು ಕೂಡ ಉದ್ಯಮಿಗಳಾಗಬೇಕು ಎಂಬ ಕಾರಣಕ್ಕಾಗಿ ಇವುಗಳನ್ನು ಮಾಡುತ್ತಿದ್ದೇವೆ. ನಿಮ್ಮ ಜಿಲ್ಲೆಯಲ್ಲಿ ಒಬ್ಬರೇ ಒಬ್ಬರು ಸಾಲ ಕೇಳಿದ್ದರು. ಆದ್ದರಿಂದ, ಪ್ರೀತಮ್‌ನವರಿಗೆ ಕೊಟ್ಟಿದ್ದಾರೆ. ನಿಮ್ಮ ಮಗ ಎಂದು ನನಗೆ ಗೊತ್ತಿರಲಿಲ್ಲ ಅಮ್ಮ ಅವರು ಬೇರೆ ಇರಬೇಕು ನೋಡು ತಾಯಿ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಅವರು Sports Academy ಯನ್ನು start ಮಾಡುತ್ತೇವೆಂದು ಹೇಳಿ ಲೋನ್ ತೆಗೆದುಕೊಂಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಪ್ರೀತಮ್ ಎಂಬ ಹೆಸರಿನಿಂದ ಅಲ್ಲಿ ಸಾಲ ತೆಗೆದುಕೊಂಡಿದ್ದಾರೆ. ಅವರು ನಿಮ್ಮ ಮಗ ಎಂದು ಹೇಳುತ್ತಿದ್ದೀರಿ ಅದು ಬಹಳ ಸಂತೋಷದ ವಿಚಾರ. ಅವರ ಮಗ ಉದ್ಯಮಿಯಾಗುತ್ತಿರುವುದು ಬಹಳ ಸ್ವಾಗತಾರ್ಹವಾದದ್ದು. ಅವರಿಗೆ ನಾವು ಇನ್ನು ಏನು encouragement ಮಾಡಬೇಕೋ ಅದನ್ನೆಲ್ಲಾ ಮಾಡೋಣ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಸಭಾಪತಿಯವರು:-** ಧನ್ಯವಾದಗಳು. ವಿಷಯದ ಬಗ್ಗೆ discussion ಇಲ್ಲ. ಇದು ಪ್ರಶ್ನೋತ್ತರ ಅವಧಿ

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ವಿಷಯ ಮುಗಿಸಿ ಬಿಡುತ್ತಿದ್ದೆ. ಸರ್ಕಾರ ಶೇಕಡ 24 ಇರುವಂತಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಆದರೆ ಪ್ರಶ್ನೆ ಏನು ಎಂದು ಹೇಳಿದರೆ ಹತ್ತು ಕೋಟಿ ರೂಪಾಯಿಗಳ ಸಾಲ ಕೊಡುವಂತಹ ಸಂದರ್ಭದಲ್ಲಿ ಈಗ ಏನು collateral security ಬಗ್ಗೆ, ಯಾರು ಲೋನ್‌ನ್ನು ತೆಗೆದುಕೊಳ್ಳುತ್ತಾರೆ ಅವರ ಹತ್ತಿರ 50% collateral security ಹಾಗೂ ಇನ್ನು ಉಳಿದ 50% collateral security ಯನ್ನು ರಾಜ್ಯ ಸರ್ಕಾರ ಕೊಡುವುದಕ್ಕೆ ಏನಾದರೂ ಯೋಚನೆ ಮಾಡುತ್ತದೆಯೆ ಎಂಬುದನ್ನು ಕೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ಅವರು ಯಾರು ಕೊಡುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:-** ಹೇಳಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ದಯಮಾಡಿ ಅದು ರೆಕಾರ್ಡ್‌ಗೆ ಹೋಗಲಿ.

**ಸಭಾಪತಿಯವರು:-** ಪರಿಶೀಲಿಸುತ್ತೇವೆ ಎಂದು ಹೇಳಿದ್ದಾರೆ. ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರ ಸಲಹೆಯನ್ನು ಪರಿಶೀಲಿಸಲಾಗುವುದು. It is recorded.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು) (ಸಭಾನಾಯಕರ ಪರವಾಗಿ):-** ಮಾನ್ಯ ಸಭಾಪತಿಯವರೆ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 17ನೇ ಪಟ್ಟಿಯಲ್ಲಿರುವ ಒಟ್ಟು 129 ಪ್ರಶ್ನೆಗಳ ಪೈಕಿ 49 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನೋಡಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಲಿಖಿತ ಮೂಲಕ ಬರುವಂತಹ ಎಷ್ಟು ಪ್ರಶ್ನೆಗಳ ಪೈಕಿ ಎಷ್ಟು ಪ್ರಶ್ನೆಗಳಿಗೆ ಉತ್ತರ ಬರುತ್ತಿದೆಯೆಂಬುದನ್ನು ನೋಡಿ. ಕಳೆದ ಬಾರಿ ಬಂದಾಗ ನಾನು ಇದನ್ನು ಪ್ರಸ್ತಾಪ ಮಾಡಿದ್ದೆನು. ಅಧಿಕಾರಿಗಳಿಗೆ ಜವಬ್ದಾರಿ ಇಲ್ಲ. 129 ಪ್ರಶ್ನೆಗಳ ಪೈಕಿ ಕೇವಲ 49ಕ್ಕೆ ಉತ್ತರ ಬಂದಿದೆ. ಅಂದರೆ only 1/3rd ಈ ರೀತಿಯಾದರೆ ಹೇಗೆ? ದಯವಿಟ್ಟು, ಸರ್ಕಾರ ಅದರ ಬಗ್ಗೆ serious ಆಗಿ ಗಮನಿಸಬೇಕು.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಿಜ, ಬಹಳ ಕಡಿಮೆ ಪ್ರಶ್ನೆಗಳಿಗೆ ಉತ್ತರಗಳು ಬಂದಿದೆ. ಈ ಸದನ ಮುಗಿಯುವುದರೊಳಗೆ ಉಳಿದ ಪ್ರಶ್ನೆಗಳಿಗೆ ಉತ್ತರ ಕೊಡಿ ಎಂದು ನಾನು ಎಲ್ಲಾ ಇಲಾಖೆಯ ಮುಖ್ಯಸ್ಥರುಗಳಿಗೆ ಹೇಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇದು ಮೊದಲನೆ ಸಾರಿ ಅಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಹೀಗೆ ನಿಮ್ಮ ಕಾಲದಲ್ಲಿಯೂ ಆಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮತ್ತೆ ಇದೇ ರೀತಿಯ ಉತ್ತರ ನೀಡುತ್ತಾರೆ.

**ಶ್ರೀ ಸಿದ್ದರಾಮಯ್ಯ :-** ಮಾನ್ಯ ಸಭಾಪತಿಯವರೇ, ಇದು ಎಲ್ಲಾ ಕಾಲದಲ್ಲಿಯೂ ಆಗಿರುವುದು ನಿಜ. ಯಾರ ಕಾಲದಲ್ಲಿಯಾದರೂ ಅದು ತಪ್ಪೇ? ನಮ್ಮ ಕಾಲದಲ್ಲಿಯಾದರೂ ತಪ್ಪೇ. ಮಾನ್ಯ ಈಶ್ವರಪ್ಪನವರ ಕಾಲದಲ್ಲಿಯಾದರೂ ತಪ್ಪೇ. ಆದರೆ ಇವು ಎಲ್ಲಾ ಕಾಲದಲ್ಲಿಯೂ ತಪ್ಪು ಆಗಿದೆ ಎಂಬುದನ್ನು ಮಾತ್ರ ನಾನು ಹೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ ಇದು ಯಾವ ಕಾಲದಲ್ಲಿಯಾದರೂ ಆಗಲಿ. ಈಗ ಮಾನ್ಯ ಸಭಪತಿಯವರು ನಮಗೆ ರಕ್ಷಣೆಗೆ ಬರಬೇಕು. ಇಲ್ಲದಿದರೆ ಅವರಿಗೆ ರಕ್ಷಣೆ ಕೊಟ್ಟಂತಾಗುತ್ತದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಲಿಖಿತ ಉತ್ತರ ಬಂದಿಲ್ಲ ಎಂದು ಹೇಳಿದ್ದಾರೆ. ಆ ಪ್ರಶ್ನೆಗಳಿಗೆ ನಾನು ಉತ್ತರ ಕೊಡಿಸುವ ಪ್ರಯತ್ನ ಮಾಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮುಖ್ಯ ಮಂತ್ರಿಯವರು ಈ ರೀತಿ ಉತ್ತರ ಕೊಟ್ಟರೆ ಅದರಿಂದ ಸೋಮಾರಿ ಅಧಿಕಾರಿಗಳಿಗೆ ರಕ್ಷಣೆ ಕೊಟ್ಟಂತಾಗುತ್ತದೆ.

**ಶ್ರೀ ಸಿದ್ದರಾಮಯ್ಯ :–** ಮಾನ್ಯ ಸಭಾಪತಿಯವರೇ, ಅವರಿಗೆ ಶಿಕ್ಷೆ ಮಾಡುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನೀವು ಏನು ಮಾಡುತ್ತೀರಾ ನೋಡೋಣ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, practical ಆಗಿ ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಯಾವ ಪ್ರಶ್ನೆಗಳಿಗೆ ಉತ್ತರ ಕೊಡುವುದು ತಡವಾಗುತ್ತದೆ ಎಂದು ಹೇಳಿದರೆ ಎಲ್ಲಾ ತಾಲ್ಲೂಕಿನಿಂದ information ಪಡೆಯಬೇಕು ಎನ್ನುವ ಸನ್ನಿವೇಶ ಉದ್ಭವವಾಗುತ್ತದೆಯಲ್ಲವೇ ಆಗ ವಿಳಂಬವಾಗುತ್ತದೆ. ಅದೇ ಬೆಂಗಳೂರಿನ ಸುತ್ತಮುತ್ತಲಿನಲ್ಲಿ information ತರಿಸುವಂತಹ ಸಂದರ್ಭವಿದ್ದರೆ ವಿಳಂಬವಾಗುವುದಿಲ್ಲ. Depending on the nature of questions ಅದು ವಿಳಂಬವಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಪ್ರಶ್ನೆಗಳನ್ನು ನೋಡಿ ಎಲ್ಲಾ ತಾಲ್ಲೂಕಿನಲ್ಲಿ ತರುವಂತಹದ್ದು ಬಹಳ ಇರುವುದಿಲ್ಲ. ಅದು ಮಾಮೂಲಿ ಇರುತ್ತದೆ. ಈ ಒಂದು ಸಾರಿ ಸಂಬಂಧಪಟ್ಟವರ ಮೇಲೆ action ತೆಗೆದುಕೊಳ್ಳುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಇದನ್ನು ನೋಡಿ ಒಬ್ಬರ ಮೇಲೆ ಕ್ರಮ ತೆಗೆದುಕೊಳ್ಳಿ. ತದನಂತರ ಉತ್ತರಗಳು ಪಟ ಪಟ ಎಂದು ಬರುತ್ತವೆ. ಈಗ ಅಧಿಕಾರಿಗಳಿಗೆ ಹೇಳುವವರಿಲ್ಲ ಕೇಳುವವರಿಲ್ಲ. ಆದ್ದರಿಂದ ಇಂತಹ ಪರಿಸ್ಥಿತಿ ಎದುರಾಗಿದೆ.

**ಶ್ರೀ ರಮೇಶ ಬಾಬು:–** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಹೇಳುವುದು ಸರಿಯಾಗಿದೆ. ಸರಳವಾದ ಪ್ರಶ್ನೆಗಳಿಗೂ ಸಹ ಅಧಿಕಾರಿಗಳು ಉತ್ತರ ಕೊಡುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ. ಜಿ. ಪರಮೇಶ್ವರ್:-** ಪರಿಶೀಲನೆ ಮಾಡುತ್ತೇವೆ.

**ಶ್ರೀ ಟಿ.ಎ. ಶರವಣ:-** ಸನ್ಮಾನ್ಯ ಸಭಾಪತಿಯವರೇ, ಈ ತರಹವಿದ್ದರೆ ನಾವು ಏತಕ್ಕೆ ಪ್ರಶ್ನೆಯನ್ನು ಕೇಳಬೇಕು.

(ಮುಂದು..)

(616) 08.06.17, 1.10, TCH/BNS **(ಸಭಾಪತಿಯವರ ಉಪಸ್ಥಿತಿ)**

## 3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಶ್ರೀ ಸಿದ್ದರಾಮಯ್ಯ, (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, 31ನೇ ಮಾರ್ಚ್ 2016ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸ್ಥಳೀಯ ಸಂಸ್ಥೆಗಳ ವರದಿಯನ್ನು (ಸಂಖ್ಯೆ-5)ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

## 4. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) **ವಿಷಯ:-** ಉತ್ತರ ಕರ್ನಾಟಕ ಭಾಗದಲ್ಲಿನ ಮಳೆಯ ಆರ್ಭಟಕ್ಕೆ ಮೃತರಾಗಿರುವ ಕುಟುಂಬಕ್ಕೆ ಪರಿಹಾರ ನೀಡುವ ಬಗ್ಗೆ.

****

**ಶ್ರೀ ನಿರಾಣಿ ಹನುಮಂತ ರುದ್ರಪ್ಪ (ಪಧವೀದರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದೊಂದು ಮನಕಲಕುವ ದಾರುಣ ಘಟನೆ. ನಿನ್ನೆ ಮುಂಜಾನೆ ಉತ್ತರ ಕರ್ನಾಟಕದಲ್ಲಿ ಆರಂಭವಾಗಿರುವ ಮಳೆಯ ಆರ್ಭಟಕ್ಕೆ 7 ಮಂದಿ ಮೃತಪಟ್ಟಿದ್ದಾರೆ. ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನಲ್ಲಿ ಕಾರೊಂದು ಹಳ್ಳದ ನೀರಿನಲ್ಲಿ ಕೊಚ್ಚಿ ಹೋಗಿ ನಾಲ್ವರು ಮೃತಪಟ್ಟಿದ್ದಾರೆ. ಕೊಪ್ಪಳ ಜಿಲ್ಲೆಯ ಕುಷ್ಟಗಿಯಲ್ಲಿ ಶಾಲಾ ಬಾಲಕಿಯೊಬ್ಬಳು ನೆರೆಯಲ್ಲಿ ಕೊಚ್ಚಿಹೋಗಿದ್ದಾಳೆ. ವಿಜಯಪುರ ಹಾಗೂ ಕಲಬುರ್ಗಿ ಜಿಲ್ಲೆಗಳಲ್ಲಿ ಸಿಡಿಲಿಗೆ ಇಬ್ಬರು ಬಲಿಯಾಗಿದ್ದಾರೆ. ಭಾರಿ ಮಳೆಯಿಂದಾಗಿ ಬಾದಾಮಿ ತಾಲ್ಲೂಕಿನ ಅನವಾಲ-ಯಂಡಿಗೇರಿ ಮಧ್ಯದಲ್ಲಿ ಇರುವ ಹಳ್ಳದಲ್ಲಿ ನೆರೆ ಬಂದಿತ್ತು. ರಾತ್ರಿ 9 ಗಂಟೆ ಸುಮಾರಿಗೆ ಹಳ್ಳ ದಾಟಲು ಯತ್ನಿಸುತ್ತಿದ್ದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಲ್ಟೋ ಕಾರೊಂದು ನೆರೆಯ ನೀರಿನಲ್ಲಿ ಕೊಚ್ಚಿಹೋಗಿ ನಾಲ್ವರು ಮೃತಪಟ್ಟಿದ್ದಾರೆ. ಮೃತರನ್ನು ಯಂಡಿಗೆರೆಯ ಹೋಲಬಸಪ್ಪ ಬಸಪ್ಪ ಸಿರುಗುಪ್ಪ (55)ವರ್ಷ ಮತ್ತು ಯಮನಪ್ಪ ಬಸಪ್ಪ ಹಡಪದ (45)ವರ್ಷ, ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಕರಡಿ ಗುಡ್ಡದ ಅಶೋಕ ಶಿವಪುತ್ರಪ್ಪ ಸಾತಪ್ಪ (40)ವರ್ಷ ಹಾಗೂ ವೀರಭದ್ರಪ್ಪ ಗುರಪ್ಪ ಗುರನ್ನರವರು (55)ವರ್ಷ ಎಂದು ಗುರುತಿಸಲಾಗಿದೆ. ಇವರೊಂದಿಗಿದ್ದ ಯಂಡಿಗೇರಿ ಗ್ರಾಮದ ಬಸಲಿಂಗಪ್ಪ ಚೆನ್ನಪ್ಪ ಸಿರುಗುಪ್ಪಿ (32)ವರ್ಷ ಇವರು ಕಾರಿನಿಂದ ಜಿಗಿದು ಅದೃಷ್ಟವಶಾತ್ ಪಾರಾಗಿದ್ದಾರೆ.

ಇದೇ ವೇಳೆ, ಬಾಗಲಕೋಟೆಯ ತಾಲ್ಲೂಕಿನ ತುಳಸಿಗೇರಿಯ ಸರ್ಕಾರಿ ಶಾಲೆಯ ಅಡುಗೆ ಸಹಾಯಕಿ ಶ್ರೀಮತಿ ಲಕ್ಷ್ಮೀನಾಗನೂರು ಎಂಬುವವರು ಕೂಡ ಸಿಡಿಲಿನ ಹೊಡೆತದಿಂದ ಅಸ್ವಸ್ಥರಾಗಿದ್ದಾರೆ. ಅವರ ಕೈ-ಕಾಲು ಶಕ್ತಿಹೀನವಾಗಿದ್ದು ಕಿವಿಗಳು ಮಂದವಾಗಿವೆ. ತುಳಸಿಗೇರಿಯಲ್ಲಿ 5 ಮನೆಗಳು ಭಾಗಶಃ ಬಿದ್ದಿದ್ದು, ಜಿಲ್ಲೆಯ ವಿವಿಧೆಡೆ ಸುಮಾರು 40ಕ್ಕೂ ಹೆಚ್ಚು ಮನೆಗಳು ಹಾನಿಗೀಡಾಗಿವೆ. ಬಾದಾಮಿ ತಾಲ್ಲೂಕಿನ ಅನವಾಲದಿಂದ ಯಂಡಿಗೆರಿಗೆ ಹೋಗುವ ಮಾರ್ಗ ಮಧ್ಯದಲ್ಲಿರುವ ಹಳ್ಳಕ್ಕೆ ಮೇಲ್ಸೇತುವೆಯನ್ನು ನಿರ್ಮಿಸಿ, ಮುಂದೆ ಈ ರೀತಿಯಾದ ದುರ್ಘಟನೆ ನಡೆಯದಂತೆ ಮುಂಜಾಗ್ರತೆಯನ್ನು ವಹಿಸಿ, ಆದಷ್ಟು ಬೇಗನೆ ಸೇತುವೆ ನಿರ್ಮಿಸಬೇಕೆಂದು ಸರ್ಕಾರಕ್ಕೆ ಆಗ್ರಹ ಮಾಡುತ್ತೇನೆ.

ಗೌರವಾನ್ವಿತ ಸಭಾಪತಿಯವರೇ, ನಾನು ತಮ್ಮ ಮೂಲಕ ಸರಕಾರವನ್ನು ಆಗ್ರಹಿಸುವುದೇನೆಂದರೆ, ಸರಕಾರ ಕೂಡಲೇ, ಮೃತ ಕುಟುಂಬಗಳ ಬಳಿಗೆ ತೆರಳಿ ಸಾಂತ್ವನ ಹೇಳಬೇಕು ಹಾಗೂ ಸೂಕ್ತ ಪರಿಹಾರ ಘೋಷಿಸಬೇಕು ಮತ್ತು ಪ್ರಕೃತಿ ವಿಕೋಪಕ್ಕೆ ತುತ್ತಾದ ಪ್ರದೇಶದ ಪರಿಹಾರ ಕೆಲಸಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಬೇಕೆಂದು ಈ ಮೂಲಕ ಆಗ್ರಹಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ಶೂನ್ಯವೇಳೆಯ ವಿಷಯವು ತಮ್ಮ ಹೆಸರಿನಲ್ಲಿಯೇ ಇರುತ್ತದೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಬಾಗಲಕೋಟೆ ಭಾಗದಲ್ಲಿ ಉತ್ತರ ಕರ್ನಾಟಕ ಕಡೆ ಮಳೆಯಾಗಿದೆ. ಮಳೆಯಲ್ಲಿ ಪ್ರವಾಹ ಬಂದು ಒಂದು ಕಾರು ಸಮೇತ ಕಾರಿನಲ್ಲಿದ್ದವರೂ ಸಹ ಮೃತರಾಗಿದ್ದಾರೆ. ಇದನ್ನು ನಮ್ಮ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀಮತಿ ಉಮಾಶ್ರೀಯವರು ನನ್ನ ಗಮನಕ್ಕೆ ತಂದಿದ್ದಾರೆ. ಈಗಾಗಲೇ ಮೃತ ಕುಟುಂಬದವರಿಗೆ ಒಂದೊಂದು ಲಕ್ಷ ರೂಪಾಯಿ ಪರಿಹಾರವನ್ನು ಕೊಡುವುದಕ್ಕೆ ಹೇಳಿದ್ದೇನೆ. ಮುಂದೆ ಈ ತರಹ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಬಾರದೆಂದು ಸೇತುವೆ ನಿರ್ಮಾಣ ಮಾಡಲು ಕೂಡ ತಿಳಿಸಲಾಗಿದೆ. ಇನ್ನು ಯಾರಾದರು ಮೃತರಾಗಿದ್ದರೆ ಅವರಿಗೂ ಸಹ ನಾವು ಪರಿಹಾರವನ್ನು ಕೊಡುತ್ತೇವೆ ಮತ್ತು ವಿದ್ಯುಚ್ಛಕ್ತಿ ತಂತಿ ತಗಲಿ ಕೂಡ ಮೃತರಾಗಿದ್ದಾರೆ. ಅವರಿಗೂ ಸಹ ಪರಿಹಾರವನ್ನು ಕೊಡಲಾಗುತ್ತದೆ. ಕೊಪ್ಪಳ ಜಿಲ್ಲೆಯಲ್ಲಿಯೂ ಸಹ ಪರಿಹಾರವನ್ನು ಕೊಟ್ಟಿದ್ದೇವೆ. ಈ ಪ್ರಕೃತಿ ವಿಕೋಪದಿಂದ ಯಾರೂ ಸಾಯಬಾರದು. ಈ ತರಹದ್ದೆಲ್ಲಾ ಆಗಬಾರದು. ಈ ರೀತಿ ಆಗುವುದನ್ನು 'Act of God' ಎಂದು ಕರೆಯುತ್ತಾರೆ. ಆದ್ದರೆ ಇದು ನಮ್ಮ ಕೈಯಲ್ಲಿ ಇರುವುದಿಲ್ಲ ಹಾಗೂ ಇದು ಯಾರ ಕೈಯಲ್ಲಿಯೂ ಇರುವುದಿಲ್ಲ. ಸಿಡಿಲು ಬಡಿಯುತ್ತದೆ, ಮರಗಳು ಬಿದ್ದು ಹೋಗುತ್ತವೆ, ದಾರಿಯಲ್ಲಿ ಹೋಗುತ್ತಿದ್ದಾಗ ಪ್ರವಾಹ ಬಂದುಬಿಡುತ್ತದೆ. ಈ ತರಹ ಎಲ್ಲಾ ಅಗುತ್ತದೆ. ಈ ತರಹ ಪ್ರಕೃತಿ ವಿಕೋಪದಿಂದ ಯಾರು ಸಾಯುತ್ತಾರೆ ಇದಕ್ಕೆಲ್ಲಾ ಪರಿಹಾರ ಕೊಡತಕ್ಕಂಥದ್ದು ಮೊದಲು ಇರಲಿಲ್ಲ. ನಾವು ಒಂದೊಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಮೃತ ಹೊಂದಿದ ಕುಟುಂಬದವರಿಗೆ ಕೊಡುತ್ತಿದ್ದೇವೆ. ಅಲ್ಲಿ ಸೇತುವೆ ನಿರ್ಮಾಣ ಮಾಡಲು ಸಾರ್ವಜನಿಕರು ಕೇಳುತ್ತಿದ್ದಾರೆ. ಅಲ್ಲಿ ನಾವು ಸೇತುವೆ ನಿರ್ಮಾಣ ಮಾಡಲು ಕ್ರಮ ಜರುಗಿಸುತ್ತೇವೆ.

ಆ) **ವಿಷಯ:–** ಶಿವಾಜಿ ಮಹಾರಾಜರ ಸ್ಮರಣಾರ್ಥ ಭವ್ಯ ಸಮಾಧಿ ನಿರ್ಮಾಣ ಮಾಡುವ ಬಗ್ಗೆ.

****

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಮುಖ್ಯಮಂತ್ರಿಗಳೇ, ತಾವು ಸದನದಲ್ಲಿ ಇರುವುದು ನನಗೆ ಬಹಳ ಸಮಾಧಾನವಾಯಿತು. ಈ ವಿಷಯವು ತಮಗೆ ಸಂಬಂಧಪಟ್ಟಿರುತ್ತದೆ.

ಮಾನ್ಯ ಸಭಾಪತಿಯವರೇ, ಶಿವಾಜಿ ಮಹಾರಾಜರು ಈ ದೇಶದ ಸಂಸ್ಕೃತಿ, ಸ್ವಾಭಿಮಾನ ಕಾಪಾಡಲು ಮೊಘಲರ ವಿರುದ್ಧ ಹೋರಾಡಿ, ಯುದ್ಧವೀರನಾಗಿ ದೇಶದ ಕೀರ್ತಿಯನ್ನು ಬೆಳಗಿಸಿದರು. ಶಿವಾಜಿ ಮಹಾರಾಜರು ತಮ್ಮ ಅಗಾಧ ಶಕ್ತಿ ಪರಾಕ್ರಮಗಳನ್ನು ನಿರ್ಮಾಣ ಮಾಡಿ, ಔರಂಗಜೇಬನ ಸಾಮ್ರಾಜ್ಯದ ವಿರುದ್ಧ ಹೋರಾಟ ಮಾಡಿ, ರೆಜಿಮೆಂಟ್ ಹಾಗೂ ಮರಾಠ ಸಾಮ್ರಾಜ್ಯವನ್ನು ಕಟ್ಟಿ ಬೆಳೆಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಈ ಹೋರಾಟದಲ್ಲಿ ಗೆದ್ದು, ಅಧಿಕಾರ ವಹಿಸಿಕೊಳ್ಳುವ ಮೂಲಕ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಇದು ಇತಿಹಾಸದ ಪುಟಕ್ಕೆ ಸೇರಿರುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇವರ ತಂದೆ ಶಹಾಜಿ ಮಹಾರಾಜರ ಬಗ್ಗೆ ಹೇಳುತ್ತಿದ್ದೇನೆ. ಇವರು ವೀರ ಮತ್ತು ಧೀರ ಹೋರಾಟಗಾರರಾಗಿದ್ದು, ಮರಾಠ ಸಾಮ್ರಾಜ್ಯವನ್ನು ಕಟ್ಟುವುದಕ್ಕೆ ಶ್ರಮ ವಹಿಸಿದವರಲ್ಲಿ ಮುಂಚೂಣಿ ವಹಿಸಿದವರಾಗಿರುತ್ತಾರೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಅವರು ಉರ್ದು ಓದಿಕೊಂಡು ಬಂದಿರುವರು ಆದ್ದರಿಂದ ಕನ್ನಡವನ್ನು ಸರಿಯಾಗಿ ಓದುವುದಕ್ಕೆ ಬರುವುದಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನನಗೆ ಕನ್ನಡ ಓದಲು ಕೂಡ ಬಹಳ ಚೆನ್ನಾಗಿ ಬರುತ್ತದೆ. ಈ ಬಗ್ಗೆ ತಮ್ಮ ಹತ್ತಿರ ಕೊನೆಯಲ್ಲಿ ಮಾತನಾಡುತ್ತೇನೆ. This subject comes to you only. If you do it, it will be a credit to you. ಶಹಾಜಿ ಮಹಾರಾಜರ ಪತ್ನಿ ಜೀಜಾಬಾಯಿಯವರಾಗಿದ್ದು, ಇವರ ಮುದ್ದಿನ ಮಗನೆ ಶಿವಾಜಿ ಮಹಾರಾಜರಾಗಿರುತ್ತಾರೆ. ಶಹಾಜಿ ಮಹಾರಾಜರು ಬಿಜಾಪುರದ ಆದಿಲ್ ಶಾಹಿ ರಾಜರ ದಂಡನಾಯಕನಾಗಿ ಅನೇಕ ಯುದ್ಧಗಳನ್ನು ಮಾಡಿ, ದಕ್ಷಿಣದ ಕಡೆಗೆ ತನ್ನ ಸೇನೆಯೊಂದಿಗೆ ದಾವಣಗೆರೆ ಜಿಲ್ಲೆಯ ಚನ್ನಗಿರಿ ಮುಖಾಂತರ ಹಾದು ಹೋಗುವಾಗ, ಸೂಳೆಕೆರೆಯ ಸಮೀಪ ಈಗ ಇದು ಶಾಂತಿಸಾಗರ ಆಗಿದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಸೂಳೆಕೆರೆ, ಈಗಿನ ಶಾಂತಿಸಾಗರ ಆಗಿದೆಯೇ?

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಹೌದು. ಶಹಾಜಿ ಮಹಾರಾಜರು, ಸೂಳೆಕೆರೆಯ ಈಗಿನ ಶಾಂತಿಸಾಗರ ಸಮೀಪ ಅಸ್ವಸ್ಥರಾಗಿ ತೀರಿಕೊಂಡಾಗ ಅವರನ್ನು ಅಲ್ಲಿಯೇ ಶವ ಸಂಸ್ಕಾರ ಮಾಡಲಾಗಿದೆ. ಸುಮಾರು 300 ವರ್ಷಗಳಿಂದ ಅಲ್ಲಿ ಅಂತಹ ಮಹಾನ್ ಧೀಮಂತ ವೀರನ ಸಮಾಧಿ ಇದೆ. ಆದರೆ ಅಂತಹ ಮಹಾನ್ ವೀರನ ನೆನಪಿಗಾಗಿ ಅಲ್ಲಿ ಒಂದು ಸ್ಮಾರಕ ಇಲ್ಲದೇ ಇರುವುದು ದುರ್ದೈವವಾಗಿದ್ದು, ಅಲ್ಲಿ ಒಂದು ಭವ್ಯ ಸ್ಮಾರಕ ನಿರ್ಮಾಣ ಮಾಡಬೇಕು ಮತ್ತು ಅಲ್ಲಿ ಆ ಸಮಾಧಿ ಅಸ್ವಸ್ಥವಾಗಿ ಬಿದ್ದಿರುತ್ತದೆ. ಈ ರಾಜ್ಯದಲ್ಲಿರುವ ಪ್ರತಿಯೊಬ್ಬ ಮರಾಠರು ನಮ್ಮ ಹತ್ತಿರ ಬಂದು, ಬಹಳ ಕಾಳಜಿಯಿಂದ ಇದನ್ನು ಒಂದು ಭವ್ಯ ಸಮಾಧಿ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಒತ್ತಡ ತರಬೇಕೆಂದು ನನಗೆ ಹೇಳಿದ್ದಕ್ಕಾಗಿ, ನಾನು ತಮ್ಮ ಗಮನವನ್ನು ಸೆಳೆದಿದ್ದೇನೆ. ತಾವು ದಯಮಾಡಿ ಇದನ್ನು Archaeological Department ಅವರಿಗೆ ಹೇಳಿ, it should be remembered for ever. ಇದು ಯಾವ ಇಲಾಖೆಯವರಿಗೆ ಬರುತ್ತದೆಯೋ ಗೊತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಿ ಮನವಿ ಕೊಟ್ಟಿದ್ದಾರೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ನಿಜ ಅವರು ಮುಖ್ಯಮಂತ್ರಿಗಳಿಗೆ ಮನವಿಯನ್ನು ಕೊಟ್ಟಿದ್ದಾರೆ. In turn, they have asked me to convey it to you also.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಶಹಾಜಿ ಮಹಾರಾಜರು, ಶಿವಾಜಿಯವರ ತಂದೆ ಆಗಿರುತ್ತಾರೆ. ಶಿವಾಜಿಯವರ ಬಗ್ಗೆ ನಮಗೆ ಅಪಾರ ಗೌರವವಿದೆ. ಏಕೆಂದರೆ, ಅವರು ಹಿಂದೆ ಮೊಘಲರ ವಿರುದ್ಧ ಔರಂಗಜೇಬ್‌ನ ವಿರುದ್ಧ ಹೋರಾಟ ಮಾಡಿದವರಾಗಿರುತ್ತಾರೆ. ಅವರು ಸ್ವಾಭಿಮಾನಕ್ಕೋಸ್ಕರ ಹೋರಾಟ ಮಾಡಿದವರು. ಈ ದೇಶದ ನೆಲಕ್ಕೋಸ್ಕರ ಹೋರಾಟ ಮಾಡಿದವರು. ಇದೆಲ್ಲವೂ ಇದೆ. ಆದ್ದರಿಂದ ಅವರ ಬಗ್ಗೆ ನಮಗೂ ಬಹಳ ಗೌರವವಿದೆ. ಅವರ ತಂದೆ ಶಹಾಜಿ ಮಹಾರಾಜರು ದಾವಣಗೆರೆ ಜಿಲ್ಲೆಯ ಚನ್ನಗಿರಿಯ ಹತ್ತಿರ ಹೊಳಕೆರೆ ಎಂದು ಒಂದು ಊರು ಇದೆ. ಈಗ ಆ ಊರು ಶಾಂತಿಸಾಗರ ಆಗಿರುತ್ತದೆ. ಅಲ್ಲಿ ಕಾಲವಾದರು. ಅಲ್ಲಿಯೇ ಇವರನ್ನು ಶವಸಂಸ್ಕಾರ ಮಾಡಿದ್ದಾರೆ. ಆದ್ದರಿಂದ ಈಗ ಆ ಸ್ಥಳವನ್ನು ಅಭಿವೃದ್ಧಿಪಡಿಸಬೇಕೆಂದು ಹೇಳುತ್ತಿದ್ದಾರೆ. ನಾನು ಈ ಬಾರಿಯ ಆಯವ್ಯಯದಲ್ಲಿ ಈ ವಿಷಯದ ಬಗ್ಗೆ ಘೋಷಣೆ ಮಾಡಿದ ಜ್ಞಾಪಕ ಇದೆ.

**ಶ್ರೀ ಆರ್.ಪ್ರಸನ್ನಕುಮಾರ್:–** ಮಾನ್ಯ ಸಭಾಪತಿಯವರೇ, ಈ ಬಾರಿಯ ಆಯವ್ಯಯದಲ್ಲಿ ತಾವು ಹೇಳಿದ್ದೀರಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಹೌದು, ಈ ಸಾಲಿನ ಆಯವ್ಯಯದಲ್ಲಿ ಅದನ್ನು ಅಭಿವೃದ್ಧಿಪಡಿಸಬೇಕೆಂದು ಘೋಷಣೆ ಮಾಡಲಾಗಿದೆ. ಅದನ್ನು ಮಾಡುತ್ತೇವೆ. ಆಗಬಹುದೇ ಮಾನ್ಯ ಶಾಣಪ್ಪನವರೆ, ನೋಡಿ ನಮ್ಮ ಸರ್ಕಾರ ಹೇಗಿದೆ ಎಂದರೆ, ನೀವು ಕೇಳಿದ ತಕ್ಷಣವೇ ಅದನ್ನು ಹೇಗೆಲ್ಲಾ ಮಾಡುತ್ತೇವೆ. ನೀವು ಕೇಳುವುದಕ್ಕೆ ಮುಂಚಿತವಾಗಿಯೇ ಅದನ್ನು ಮಾಡಿದ್ದೇವೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಬಹಳ ಆನಂದ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಶಾಣಪ್ಪರವರೇ, ಅದಕ್ಕೆ ನೀವು ವಂದನೆಗಳನ್ನು ಹೇಳಿ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೇ, ವಂದನೆಗಳು. Hundreds of thanks to you for accepting our view.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಮುಖ್ಯಮಂತ್ರಿಯವರೇ, ಆಯವ್ಯಯದಲ್ಲಿ ಘೋಷಣೆಯನ್ನು ಮಾಡಿದ್ದೀರಿ, ಅದಕ್ಕೆ thanks. ಬಹಳ ಘೋಷಣೆ ಮಾಡಿರುವಂತಹವುಗಳು ಹಾಗೆಯೇ ಇರುತ್ತವೆ. ಹಾಗಾಗಿ ಅದನ್ನು ಹಾಗೆಯೇ ಬಿಡದೆ ಅಭಿವೃದ್ಧಿಪಡಿಸಬೇಕು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಆಯವ್ಯಯದಲ್ಲಿ ಘೋಷಣೆ ಮಾಡಿರುವಂತಹ ಯಾವ ಕಾರ್ಯಕ್ರಮಗಳನ್ನು ನಾವು ಬಿಟ್ಟಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಮುಖ್ಯಮಂತ್ರಿಗಳೇ, ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ.

**ಶ್ರೀ ಸಿದ್ದರಾಮಯ್ಯ:-** ಆಯವ್ಯಯದಲ್ಲಿ ಘೋಷಿಸಿರುವುದನ್ನು ಈ ವರ್ಷದಲ್ಲಿಯೇ ತಕ್ಷಣ ಪ್ರಾರಂಭ ಮಾಡಲಾಗುವುದು. ಇದಕ್ಕೆ ದುಡ್ಡನ್ನು ಮೀಸಲು ಇಡಲಾಗಿದೆ.

**Sri K.B.SHANAPPA**:- O.K., very kind of you.

**ಸಭಾಪತಿಯವರು:-** ಶ್ರೀ ರಮೇಶ್‌ಬಾಬುರವರೇ, ತಮ್ಮ ಶೂನ್ಯವೇಳೆಯ ಪ್ರಸ್ತಾವನೆಯನ್ನು ಸದನದಲ್ಲಿ ಓದಿ ಬಿಡಿ.

**ಶ್ರೀ ರಮೇಶ್‌ಬಾಬು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಯಾವತ್ತು ಯಾವತ್ತು ಇಲ್ಲ. ಇಂತಹ ಸರ್ಕಾರ ಇನ್ನು ಬರುವುದು ಬೇಡ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪರವರೇ, ನಾನಿದ್ದರೆ ನಿಮಗ್ಯಾಕ್ರೀ ಕಷ್ಟ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನೀವು ಇದ್ದರೆ ಕಷ್ಟವಿಲ್ಲ. ಇಂತಹ ಸರ್ಕಾರ ಇದ್ದರೆ ಕಷ್ಟ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಇವರಿಗೆ ಪಾಪ, ನಾನು ಇದ್ದರೆ ಏನು ಕಷ್ಟನೋ ಗೊತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮತ್ತೇ ಹೇಳುತ್ತೇನೆ. ನೀವು ಇದ್ದರೆ ಕಷ್ಟವಿಲ್ಲ. ನಾನು ಇದನ್ನು ವೈಯಕ್ತಿವಾಗಿ ಹೇಳುತ್ತಿಲ್ಲ. ಇಂತಹ ಸರ್ಕಾರ ಕೆಟ್ಟ ಸರ್ಕಾರವನ್ನು ನಾವು ಜೀವನದಲ್ಲಿ ನೋಡಿಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ನಾನು ಮುಖ್ಯಮಂತ್ರಿಯಾಗಿರುವುದು ಅವರಿಗೆ ಕಷ್ಟ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅವರು ಮುಖ್ಯಮಂತ್ರಿಯಾದರೆ ನಮಗೆ ಕಷ್ಟ ಇಲ್ಲ. ಪಾಪ ಆದರೆ ಅವರ ಪಕ್ಷದಲ್ಲಿರುವವರಿಗೆ ಬಹಳ ಕಷ್ಟ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಅದಕ್ಕೆ ಸುಮಾರು ಎರಡು ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಬಜೆಟ್‌ನಲ್ಲಿ ಘೋಷಣೆ ಮಾಡಿರುವುದನ್ನು ನಾವು ಬಹಳ ನೋಡಿದ್ದೇವೆ. ಆದರೆ ಅದನ್ನು ಜಾರಿ ಮಾಡಿಲ್ಲವಲ್ಲಪ್ಪಾ, ಆ ಬಜೆಟ್ ಘೋಷಣೆ ಜಾರಿ ಮಾಡಿ ಎಂದು ಕೇಳುತ್ತಿದ್ದೇವೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಈ ವರ್ಷ ಅಂದರೆ, 2017–18ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ, ಇದೇ ವರ್ಷ ಅದನ್ನು ಜಾರಿ ಕೂಡ ಮಾಡುತ್ತೇವೆ.

**Sri K.B.SHANAPPA**:- As promised in the Budget, if you complete erection of a grand mausoleum, hundreds of thanks to you.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಶ್ರೀ ಕೆ.ಬಿ.ಶಾಣಪ್ಪರವರು ಯಾವಾಗಲೂ ಬಹಳ ದೊಡ್ಡ ಮನುಷ್ಯರು. ಅವರು ಸತ್ಯವನ್ನು ಒಪ್ಪಿಕೊಳ್ಳುತ್ತಾರೆ. ಒಳ್ಳೆಯ ಕೆಲಸ ಮಾಡಿರುವುದನ್ನು appreciate ಮಾಡುತ್ತಾರೆ. You please continue it. Keep it up. ಶ್ರೀ ಈಶ್ವರಪ್ಪನವರು ಇದ್ದಾರಲ್ಲಾ ಇವರು, ಒಳಗಡೆಯೇ ನನಗೆ thanks ಹೇಳಬೇಕು ಎಂಬುದು ಇದೆ. ಆದರೆ, ವಿರೋಧ ಪಕ್ಷದ ನಾಯಕರಲ್ಲವೇ ಅದಕ್ಕೆ ಈ ತರಹ ಸುಳ್ಳು ಹೇಳುವುದು, ಏನೋ ಒಂದು ಆರೋಪವನ್ನು ಮಾಡುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈಗ ಇವರು ಮುಖ್ಯಮಂತ್ರಿಯಾಗಿ ಇಷ್ಟೊಂದು ಸುಳ್ಳನ್ನು ಹೇಳುವುದು ಇಡೀ ರಾಜ್ಯದಲ್ಲಿ, ಈ ದೇಶದಲ್ಲಿಯೇ ಯಾರು ಇಲ್ಲ.

**ಸಭಾಪತಿಯವರು:–** ಮಾನ್ಯ ರಮೇಶ್‌ಬಾಬು ರವರು.

ಇ) **ವಿಷಯ:–** ಖಾಸಗಿ ಸಂಸ್ಥೆಗಳ ಶೋಷಣೆ ನಿಲ್ಲಿಸುವ ಬಗ್ಗೆ.

****

**ಶ್ರೀ ರಮೇಶ್ ಬಾಬು (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯದ ಪದವಿಪೂರ್ವ ಶಿಕ್ಷಣ ಇಲಾಖೆಯ ನಿಯಮಾವಳಿಗಳ ಅನ್ವಯ ರಾಜ್ಯದಲ್ಲಿ ಪದವಿಪೂರ್ವ ಕಾಲೇಜುಗಳನ್ನು ತೆರೆಯಲು ಅನುಮತಿಯನ್ನು ನೀಡುತ್ತಿದೆ. ಸದರಿ ನಿಯಮಾವಳಿಗಳ ಪ್ರಕಾರ ಯಾವುದೇ ಸಂಸ್ಥೆ ಇಲಾಖೆಯ ಅನುಮತಿಯ ನಂತರ ಅವಶ್ಯಕವಾದ ಕಟ್ಟಡ ಮತ್ತು ಮೈದಾನದೊಂದಿಗೆ ಹಾಗೂ ಸೂಕ್ತ ವಿದ್ಯಾರ್ಹತೆ ಹೊಂದಿರುವ ಉಪನ್ಯಾಸಕರೊಂದಿಗೆ ಅನುಮತಿ ಪಡೆದ ವಿಭಾಗಗಳಿಗೆ ಕಾಲೇಜುಗಳನ್ನು ಪ್ರಾರಂಭ ಮಾಡಬೇಕಾಗಿರುತ್ತದೆ. ಯಾವುದೇ ಕಾರಣಕ್ಕೆ ಅನುಮತಿ ಪಡೆದಿರುವ ಶಿಕ್ಷಣ ಸಂಸ್ಥೆಗಳು ತಮ್ಮ ಸಂಸ್ಥೆಗಳನ್ನು ಬೇರೆ ಸಂಸ್ಥೆಗಳಿಗೆ ಬಾಡಿಗೆ ಅಥವಾ ಆರ್ಥಿಕ ಲಾಭದ ಮೇಲೆ ನೀಡಲು ಅಥವಾ ವಾಣಿಜ್ಯ ಚಟುವಟಿಕೆ ನಡೆಸಲು ಅವಕಾಶ ಇರುವುದಿಲ್ಲ.

ಬೆಂಗಳೂರು ಮತ್ತು ಕರ್ನಾಟಕದ ಇತರೆ ಭಾಗಗಳಲ್ಲಿ ಆಂಧ್ರಪ್ರದೇಶದಲ್ಲಿ ಸ್ಥಾಪಿತವಾಗಿರುವ ನಾರಾಯಣ ಮತ್ತು ಚೇತನಾ ವಿದ್ಯಾಸಂಸ್ಥೆಗಳು ಪದವಿಪೂರ್ವ ಶಿಕ್ಷಣ ಇಲಾಖೆಯ ಅನುಮತಿಯಿಲ್ಲದೇ, ಮಂಡಳಿಯ ನಿಯಮಾವಳಿಗಳಿಗೆ ವಿರುದ್ಧವಾಗಿ, ಬಾಡಿಗೆ ಕಟ್ಟಡಗಳಲ್ಲಿ ಪಿ.ಯು. ಕಾಲೇಜುಗಳನ್ನು ನಡೆಸುತ್ತಿವೆ. ಇಲ್ಲಿರುವ ಬಹುತೇಕ ಉಪನ್ಯಾಸಕರು ಸ್ಥಳೀಯರಾಗಿರುವುದಿಲ್ಲ ಮತ್ತು ನಿಯಮಾವಳಿಗಳಿಗೆ ಅನುಗುಣವಾಗಿ ವಿದ್ಯಾರ್ಹತೆ ಹೊಂದಿರುವುದಿಲ್ಲ. ಬಹುತೇಕ ಉಪನ್ಯಾಸಕರಿಗೆ ರಾಜ್ಯ ಸರ್ಕಾರದ ಸೂಚನೆಗೆ ಅನುಗುಣವಾಗಿ ವೇತನವನ್ನು ನೀಡುತ್ತಿಲ್ಲ. ಅಲ್ಲದೇ ಪಿ.ಯು. ಮಂಡಳಿಯಿಂದ ಅನುಮೋದಿತವಾಗಿರುವ ಶಿಕ್ಷಣ ಸಂಸ್ಥೆಗಳಿಂದ ಉಪ ಬಾಡಿಗೆ ಪಡೆದಿದ್ದು ಅಥವಾ ಆರ್ಥಿಕ ಲಾಭದ ಕರಾರಿನ ಮೂಲಕ ಪಿ.ಯು. ಕಾಲೇಜುಗಳನ್ನು ನಡೆಸಿ, ವಿದ್ಯಾರ್ಥಿಗಳಿಂದ ಅಧಿಕವಾದ ಶುಲ್ಕವನ್ನು ವಸೂಲಿ ಮಾಡುತ್ತಿದ್ದಾರೆ. ರಾಜ್ಯದ ಹಿತದೃಷ್ಟಿಯಿಂದ ಖಾಸಗಿ ಸಂಸ್ಥೆಗಳ ಇಂತಹ ಶೋಷಣೆಯನ್ನು ನಿಲ್ಲಿಸುವ ಕ್ರಮವನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕಾಗಿರುತ್ತದೆ. ಆದುದರಿಂದ ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದು, ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳಬೇಕಾಗಿ ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ನಂತರ ಉತ್ತರವನ್ನು ತರಿಸಿ ಕೊಡುತ್ತೇನೆ.

**(ಮುಂದು...)**

(617) 8.6.2017 1.20 ಪಿಕೆ:ಕೆಎಸ್(ಜಿಆರ್)

**ಸಭಾಪತಿಯವರು:-** ನಮ್ಮ ಸದನಕ್ಕೆ ಹೊಸದಾಗಿ ಇಬ್ಬರು ಸದಸ್ಯರು ಬಂದಿದ್ದಾರೆ. ಅವರ ಪೈಕಿ ಒಬ್ಬರಾದ ಮಾನ್ಯ ಪಿ.ಆರ್.ರಮೇಶ್‌ರವರು ಶೂನ್ಯವೇಳೆಯಲ್ಲಿ ನೋಟಿಸ್ ಕೊಟ್ಟಿದ್ದಾರೆ. ಆ ನೋಟಿಸನ್ನು ಓದಬೇಕು.

**ಈ) ಬೆಳ್ಳಂದೂರು ಮತ್ತು ವರ್ತೂರು ಕೆರೆಗಳಿಂದ ಪರಿಸರ ಹಾಗೂ ನಾಗರಿಕರಿಗೆ ಧಕ್ಕೆ ಉಂಟಾಗುತ್ತಿದ್ದು ಸದರಿ ಕೆರೆಗಳ ಪುನರ್ಜೀವನ ಹಾಗೂ ಶುದ್ಧೀಕರಿಸುವ ಬಗ್ಗೆ.**

**ಶ್ರೀ ಪಿ.ಆರ್.ರಮೇಶ್(ನಾಮ ನಿರ್ದೇಶಿತರು):-**ಮಾನ್ಯ ಸಭಾಪತಿಯವರೆ, ಬೆಂಗಳೂರು ನಗರದ ಬೆಳ್ಳಂದೂರು ಮತ್ತು ವರ್ತೂರು ಕೆರೆಗಳಿಂದ ಪರಿಸರ ಹಾಗೂ ನಾಗರಿಕರಿಗೆ ಧಕ್ಕೆ ಉಂಟಾಗುತ್ತಿರುವುದು ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗುತ್ತಿರುವ ಹಿನ್ನೆಲೆಯಲ್ಲಿ ಸದರಿ ಕೆರೆಗಳ ಪುನರ್ಜೀವನ ಹಾಗೂ ಶುದ್ಧೀಕರಿಸುವ ವಿಚಾರವು ಸಾರ್ವಜನಿಕ ಹಿತಾಸಕ್ತಿಯುಳ್ಳದ್ದಾಗಿದ್ದು ಈ ವಿಷಯವನ್ನು ಪ್ರಸ್ತಾಪಿಸಲು ಅನುವು ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು.

ಬೆಂಗಳೂರು ನಗರದ ಬೆಳ್ಳಂದೂರು ಮತ್ತು ವರ್ತೂರು ಕೆರೆಗಳಿಂದ ಸ್ಥಳೀಯ ನಾಗರಿಕರಿಗೆ ಹಾಗೂ ಪರಿಸರಕ್ಕೆ ಸುಮಾರು ವರ್ಷಗಳಿಂದ ಹಾನಿ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಹಾಗೂ ಹಲವಾರು ಇಲಾಖೆಗಳು ಸದರಿ ಕೆರೆಗಳನ್ನು ಶುದ್ಧೀಕರಿಸಿ ಸಾಮಾನ್ಯ ಪರಿಸ್ಥಿತಿಗೆ ತರುವ ಉದ್ದೇಶದಿಂದ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಈಗಾಗಲೇ ವೈಜ್ಞಾನಿಕ/ಪರಿಣಿತರ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಎಲ್ಲಾ ಸದಸ್ಯರುಗಳ ಹೆಸರು, ಅವರ ವಿದ್ಯಾರ್ಹತೆ, ಅನುಭವ ಹಾಗೂ ಸಮಿತಿಯ ಅವಧಿ ಮತ್ತು ಸಮಿತಿಗೆ ವಹಿಸಿರುವ ಕಾರ್ಯವ್ಯಾಪ್ತಿಯ ವಿವರಗಳನ್ನು ನೀಡುವುದು ಸದನಕ್ಕೆ ಅವಶ್ಯಕವಾಗಿರುತ್ತದೆ.

ಆಡಳಿತಾತ್ಮಕ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಕೆರೆಗಳನ್ನು ಶುದ್ಧೀಕರಿಸಿ ಕ್ರಮಬದ್ಧವಾಗಿ ಕೆರೆಯ ನೀರನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಈಗಾಗಲೇ ರಚಿಸಿರುವ ಸಮಿತಿಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರದಿಯನ್ನು ನೀಡಿದ್ದಲ್ಲಿ, ಈ ವರದಿಯನ್ನು ಸದನದ ಮುಂದೆ ಮಂಡಿಸುವುದು ಹಾಗೂ ವರದಿಯನ್ನು ಆಧರಿಸಿ ಸಾಧಿಸಿರುವ ಪ್ರಗತಿಯ ವಿವರಗಳನ್ನು ನೀಡಿ ಹಾಗೂ ಈ ಬೆಳ್ಳಂದೂರು ಮತ್ತು ವರ್ತೂರು ಕೆರೆಗಳನ್ನು ಅತೀ ಶೀಘ್ರಗತಿಯಲ್ಲಿ ಪುನರ್ಜೀವನ ಹಾಗೂ ಶುದ್ಧೀಕರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ನಗರಾಭಿವೃದ್ಧಿ ಖಾತೆ ಸಚಿವರು):-**ಮಾನ್ಯ ಸಭಾಪತಿಗಳೆ, ಬೆಳ್ಳಂದೂರು ಮತ್ತು ವರ್ತೂರು ಕೆರೆಗಳು ಹಲವಾರು ವರ್ಷಗಳಿಂದ ಮಾಲಿನ್ಯವಾಗಿದೆ. ಈ ವಿಚಾರವಾಗಿ ಮುಖ್ಯಮಂತ್ರಿಗಳು, ನಾನು, ಮಾನ್ಯ ರಾಮಲಿಂಗಾರೆಡ್ಡಿಯವರು ಅಲ್ಲಿಗೆ ಭೇಟಿ ಕೊಟ್ಟಿದ್ದೆವು. ನಾನು ವಿಕಾಸಸೌಧದಲ್ಲಿ ಎಲ್ಲಾ NGO ಗಳನ್ನು, ತಜ್ಞರನ್ನು ಕರೆಸಿ ನಡೆಸಿದ ಸಭೆಯಲ್ಲಿ ಅವರು ಕೊಟ್ಟ ಅಭಿಪ್ರಾಯದ ಮೇರೆಗೆ ಒಂದು ಸಮಿತಿ ಮಾಡಿದೆವು. ಆ ತಜ್ಞರ ಸಮಿತಿಗೆ ನಮ್ಮ ACS, Department of Urban Development ರವರು ಅಧ್ಯಕ್ಷರಾಗಿದ್ದಾರೆ. ಎಲ್ಲಾ ಸಂಘ-ಸಂಸ್ಥೆಗಳ, ಶ್ರೀ ಎಲ್ಲಪ್ಪ ರೆಡ್ಡಿ, ಪ್ರೊಫೆಸರ್ ರಾಮಚಂದ್ರ ಇಂಥವರ ತಜ್ಞರ ಸಮಿತಿ ಮಾಡಿ, ಅವರು ಸುಮಾರು ಐದಾರು ತಿಂಗಳು ಸಭೆ ನಡೆಸಿ, ಈ ಸಮಸ್ಯೆಗೆ ಎರಡು ಹಂತದ ಪರಿಹಾರವನ್ನು ಸೂಚಿಸಿದ್ದಾರೆ. ಈಗಾಗಲೇ ಒಂದನೇ ಹಂತದಲ್ಲಿ ಕಳೆ ಕೀಳುವುದು, aerate ಮಾಡುವ ಕೆಲಸ ಪ್ರಾರಂಭಿಸಲಾಗಿದೆ. ಎರಡನೆ ಹಂತದಲ್ಲಿ wet land treatment ಮಾಡಬೇಕಾಗಿದೆ. ಇದಲ್ಲಕ್ಕಿಂತಲೂ ಮುಖ್ಯವಾಗಿ ಈಗಾಗಲೇ ಶೇಕಡ 80 ರಷ್ಟು ಅಲ್ಲಿಗೆ ಹೋಗುವ ತ್ಯಾಜ್ಯ ನೀರನ್ನು ಶುದ್ಧೀಕರಣ ಮಾಡಲು STP ಮಾಡಿದ್ದೇವೆ. ಇನ್ನೂ ಶೇಕಡ 20 ರಷ್ಟು ಅಂದರೆ, 100 MLD ಏನು ಕೋರಮಂಗಲದಿಂದ ಬರುತ್ತದೆಯೋ ಅದನ್ನೂ ಸಹಿತ STP ಮಾಡಿದರೆ 20:20 ಆಗುತ್ತದೆ. ಅದರ ಒಳಗಡೆಯೇ bioremediate ಮಾಡಿ treat ಮಾಡುವಂತಹ ಕ್ರಮದ ಬಗ್ಗೆ ಬೆಂಗಳೂರು ನೀರು ಸರಬರಾಜು ಮಂಡಳಿಯವರು ತಜ್ಞರೊಟ್ಟಿಗೆ ಚರ್ಚೆ ಮಾಡುತ್ತಿದ್ದಾರೆ. ಟೆಂಡರ್ ಕರೆದು ಸಂಸ್ಥೆಗಳಿಗೆ ಕೊಡಲು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ. ಮತ್ತೆ, ಮಾನ್ಯ ಸದಸ್ಯರು ಏನು, ಆ ಸಮಿತಿಯಲ್ಲಿ ಯಾರ್‍ಯಾರು ಸದಸ್ಯರಾಗಿದ್ದಾರೆ, ಅವರು ಏನು ವರದಿ ಕೊಟ್ಟಿದ್ದಾರೆ ಎಂದು ಕೇಳಿದ್ದಾರೋ ಆ ಕುರಿತು ಮಾಹಿತಿ ಪಡೆದುಕೊಂಡು ಕಳುಹಿಸಿಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಅಮರನಾಥ ಪಾಟೀಲ್ ಮತ್ತು ಮಾನ್ಯ ಶ್ರೀಕಂಠೇಗೌಡರು ಒಂದೇ ವಿಷಯದ ಬಗ್ಗೆ ಪ್ರಸ್ತಾಪಿಸಲು ಶೂನ್ಯವೇಳೆ ಅಡಿ ನೋಟಿಸ್ ಕೊಟ್ಟಿದ್ದಾರೆ. ಯಾರಾದರೂ ಒಬ್ಬರು ಓದಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉ) ಶ್ರೀ ರಮೇಶ್ ಮರಾಠಿ, ಉಪನ್ಯಾಸಕರು, ಜನತಾ ಪಿಯು ಕಾಲೇಜು, ಬೀದರ್ ಜಿಲ್ಲೆ ಇವರಿಗೆ ಸರ್ಕಾರ ತುರ್ತಾಗಿ ವೇತನ ಬಿಡುಗಡೆ ಮಾಡುವ ಬಗ್ಗೆ.

**ಶ್ರೀ ಅಮರನಾಥ ಪಾಟೀಲ(ಪದವೀಧರ ಕ್ಷೇತ್ರ):-**ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ, ಇವರು ತಮ್ಮ ಮನವಿಯನ್ನು ನನಗೆ ಸಲ್ಲಿಸಿದ್ದು, ಶ್ರೀ ರಮೇಶ್, ಮರಾಠಿ ಭಾಷಾ ಉಪನ್ಯಾಸಕರು, ಜನತಾ ಪಿಯು ಕಾಲೇಜು, ಬೀದರ್ ಜಿಲ್ಲೆ, ಇವರು 1991 ರಿಂದ ನೇಮಕಾತಿ ಹೊಂದಿ, 2001ರಲ್ಲಿ ಅನುದಾನಕ್ಕೆ ಒಳಪಟ್ಟು ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. 2006ರಲ್ಲಿ ವಿದ್ಯಾರ್ಥಿ ಸಂಖ್ಯಾ ಬಲವಿದ್ದರೂ ಆಡಳಿತ ಮಂಡಳಿ ಮರಾಠಿ ವಿಷಯವನ್ನು ಮುಚ್ಚಿದ್ದರಿಂದ ಇವರಿಗೆ ಕಾರ್ಯಭಾರದ ಕೊರತೆ ಉಂಟಾಗಿ ವೇತನವನ್ನು ತಡೆಹಿಡಿದಿರುವುದರಿಂದ ಸುಮಾರು 11 ವರ್ಷಗಳ ಕಾಲ ವೇತನವಿಲ್ಲದೇ ಜೀವನ ಸಾಗಿಸುವುದು ಕಷ್ಟವಾಗಿರುವುದರಿಂದ ದಿನಾಂಕ 8.6.2017 ರಂದು ತಮ್ಮ ಕುಟುಂಬದ ಸದಸ್ಯರೊಂದಿಗೆ ಪದವಿಪೂರ್ವ ಶಿಕ್ಷಣ ಇಲಾಖೆಯ ಮುಂದೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಿಳಿಸಿರುತ್ತಾರೆ. ಅವರು ಒಂದು suicide note ಕೂಡ ಕೊಟ್ಟಿದ್ದಾರೆ. ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಹಾಗೂ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಇವರಿಗೆ ಮನವಿ ಸಲ್ಲಿಸಿರುತ್ತಾರೆ.

ಆದ್ದರಿಂದ ಶ್ರೀ ರಮೇಶ್, ಉಪನ್ಯಾಸಕರು, ಜನತಾ ಪಿಯು ಕಾಲೇಜು, ಔರಾದ್, ಬೀದರ್ ಜಿಲ್ಲೆ ಇವರಿಗೆ ಇಲಾಖೆ/ಸರ್ಕಾರ ತುರ್ತಾಗಿ ಇದರ ಬಗ್ಗೆ ಗಮನಹರಿಸಿ ವೇತನ ಬಿಡುಗಡೆ ಮಾಡಿ ಇವರ ಕುಟುಂಬಕ್ಕೆ ನ್ಯಾಯ ಒದಗಿಸಿ ಕೊಡಬೇಕಾಗಿ ಹಾಗೂ ಇವರ ಆತ್ಮಹತ್ಯೆಯನ್ನು ತಡೆಹಿಡಿಯಬೇಕಾಗಿರುವ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೆ, ನೀವು ಕೊಟ್ಟಿರುವ ನೋಟಿಸನ್ನೂ ಓದಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):-**ಮಾನ್ಯ ಸಭಾಪತಿಗಳೆ, ಏನು ಘಟನೆಯಾಯಿತು ಎಂದು ಸದನದ ಗಮನಕ್ಕೆ ತರಬಯಸುತ್ತೇನೆ . . .

**ಸಭಾಪತಿಯವರು:-** ಇದು ಶೂನ್ಯವೇಳೆ. ನೀವು ಬರೆದು ಕೊಟ್ಟಿರುವ ನೋಟಿಸನ್ನು ಓದಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-**ಇದೊಂದು ಅಪರೂಪವಾದ ಹೃದಯವಿದ್ರಾವಕವಾದ ಘಟನೆಯಾಗಿದೆ. ಇಡೀ ನಾಡು ತಲೆತಗ್ಗಿಸಬೇಕಾದ ಘಟನೆ. ಈಗಾಗಲೇ ಇಡೀ ಕುಟುಂಬ ಪದವೀಪೂರ್ವ ಶಿಕ್ಷಣ ಇಲಾಖೆಯ ಎದುರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಮುಂದಾಗಿರುವ ಸಂದರ್ಭದಲ್ಲಿ, ನಾನು ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರ ಜೊತೆ ದೂರವಾಣಿಯಲ್ಲಿ ಮಾತನಾಡಿಸಿ, ಆ ಕುಟುಂಬವನ್ನು ಕೂರಿಸಿ ಅವರನ್ನು ಸಮಾಧಾನ ಮಾಡಿ ಬಂದಿದ್ದೇವೆ. ತಾತ್ಕಾಲಿಕ ಪರಿಹಾರವನ್ನು ನಮ್ಮ ಎರಡೂ ಸಂಘಗಳಿಂದ ಕೊಟ್ಟಿದ್ದೇವೆ. 26 ವರ್ಷಗಳಿಂದ ಇವರು ಸೇವೆಯಲ್ಲಿದ್ದಾರೆ. 1991 ರಿಂದ 2001ರವರೆಗೆ ಏನೂ ಸಂಬಳವಿಲ್ಲದೇ ಉಚಿತವಾಗಿ ಸೇವೆ ಮಾಡಿದ್ದಾರೆ. 2001 ರಿಂದ 2006ರವರೆಗೆ ವೇತನ ಪಡೆದಿದ್ದಾರೆ. 2006ರಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಳ್ಳದೇ ಇದ್ದುದರಿಂದ ಆ ಸಂಬಂಧಪಟ್ಟ ಕಾಲೇಜಿನವರು, work load ಇಲ್ಲ ಎಂದು ಇವರನ್ನು ಕೈಬಿಟ್ಟಿದ್ದಾರೆ. ಆಗ ನೀವು ಇವರನ್ನು 3 ಕಾಲೇಜಿಗೆ ಹಾಕಿದರೂ ಅವರು report ಮಾಡಿಸಿಕೊಂಡಿಲ್ಲ. ಕಳೆದ 11 ವರ್ಷಗಳಿಂದ ಸಂಬಳ ಇಲ್ಲ. ಹಾಗಾದರೆ ಈ ಕುಟುಂಬ ಹೇಗೆ ಬದುಕಬೇಕು? ಅವರನ್ನು ನೀವು ಎಲ್ಲಾದರೂ re-allocation ಮಾಡಲೇಬೇಕು. Re-allocation ಮಾಡುವವರೆಗೆ ನೀವು ಸಂಬಳ ಕೊಡಬೇಕು. . .

**ಸಭಾಪತಿಯವರು:-** ಶೂನ್ಯವೇಳೆಯಲ್ಲಿ ನೀವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, ಇಲಾಖೆಯಿಂದ ಇನ್ನೂ ಉತ್ತರ ಬಂದಿಲ್ಲ, ಹಾಗಿದ್ದರೂ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದಂತಹ ವಿಷಯ ಸರ್ಕಾರದ ಗಮನದಲ್ಲಿದೆ. ಶ್ರೀ ರಮೇಶ್ ಎನ್ನುವ ಒಬ್ಬ ಉಪನ್ಯಾಸಕ 2006ರಲ್ಲಿ ಅನುದಾನಕ್ಕೆ ಒಳಪಟ್ಟು 2011ರವರೆಗೆ ಅದೇ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದ್ದು ಅವರಿಗೆ ನಾವು ವೇತನ ಕೊಟ್ಟಿದ್ದೇವೆ. 2011ರ ಅವಧಿಯಲ್ಲಿ ಮರಾಠಿ ವಿಷಯದಲ್ಲಿ ವಿದ್ಯಾರ್ಥಿಗಳ ಸಂಖ್ಯಾಬಲ ಕಡಿಮೆ ಇದ್ದುದರಿಂದ ಈ ಉಪನ್ಯಾಸಕರನ್ನು relieve ಮಾಡಿದರು. ನಮ್ಮ Grant-in-Aid policy ಯಲ್ಲಿ ನಿಯಮಗಳಿದ್ದರೂ ಕೂಡ, ನಾವು ಮಾನವೀಯತೆ ದೃಷ್ಟಿಯಿಂದ 3 ಕಡೆ 3 ಸಂಸ್ಥೆಗಳಲ್ಲಿ ಇವರನ್ನು ನಿಯೋಜನೆ ಮೇರೆಗೆ ಹಾಕಿದೆವು. ಆ 3 ಸಂಸ್ಥೆಯವರೂ ಇವರಿಗೆ ಪ್ರವೇಶ ಕೊಡಲಿಲ್ಲ. ಖಾಸಗಿ ವಿದ್ಯಾಸಂಸ್ಥೆಗಳು ಅನುದಾನಕ್ಕೆ ಒಳಪಟ್ಟ ಸಂದರ್ಭದಲ್ಲಿ ಅವರು ಕೊಟ್ಟಂಥ ಅಭ್ಯರ್ಥಿಗಳನ್ನೇ ನಾವು ಆಯ್ಕೆ ಮಾಡಬೇಕು ಎನ್ನುವ ಕೆಲವು ಮಾನದಂಡಗಳನ್ನು ಏನು ಹಾಕಿಕೊಂಡಿದ್ದಾರೋ ಅದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ನಾವು ನಿಯಮಾವಳಿಗಳನ್ನು ಸ್ಪಷ್ಟ ರೂಪದಲ್ಲಿ ಮಾಡುವುದಕ್ಕೆ ಸಚಿವಸಂಪುಟದ ಉಪಸಮಿತಿಯನ್ನು ರಚಿಸಿದ್ದೇವೆ, ಅದರಲ್ಲಿ ಮಾಡುತ್ತೇವೆ. ಸದರಿ ಉಪನ್ಯಾಸಕರ ವಿಚಾರವಾಗಿ ಔರಾದ್ ಪ್ರದೇಶದ ಶಾಸಕರಾದ ಮಾನ್ಯ ಪ್ರಭುಚೌಹಾಣ್‌ರವರು ನನ್ನನ್ನು ಭೇಟಿ ಮಾಡಿದಾಗ, ಇಲಾಖೆಗೆ ನಾನು ಸ್ಪಷ್ಟವಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ದೇಶನ ಕೊಟ್ಟಿದ್ದೆ. ಅದನ್ನು ಕಡತದಲ್ಲಿ ನನಗೆ ಕಳುಹಿಸಿ ಕೊಡಿ ಎಂದು ಹೇಳಿದ್ದೇನೆ. ಆ ಕಡತ ಬಂದ ಕೂಡಲೇ ಅದರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಮುಂದಾಗುತ್ತೇನೆ. ಸದರಿ ವ್ಯಕ್ತಿಯವರು ಈ ಹಿಂದೆ ರಾಷ್ಟ್ರಪತಿಯವರಿಗೆ ದಯಾಮರಣ ಕೋರಿ ಪತ್ರ ಬರೆದಿದ್ದಾಗ, ಆ ಸಂದರ್ಭದಲ್ಲಿ ನಾನು ಮಾಧ್ಯಮದ ಮೂಲಕ ಸಮಾಜಾಯಿಷಿ ಕೊಟ್ಟು, ಅವರ ಜೊತೆ ಮಾತನಾಡಿ ಸಾಂತ್ವನ ಹೇಳುವ ಕೆಲಸ ಮಾಡಿ ಸಮಾಧಾನ ಮಾಡಿದ್ದೇನೆ. ಈಗ 8ನೇ ತಾರೀಖು ಕುಟುಂಬ ಸಮೇತ ನಮ್ಮ ಪಿಯು ಮಂಡಳಿ ಮುಂದೆ ಬಂದು ಒಂದು ಪತ್ರ ಬರೆದು ಕೊಟ್ಟಿದ್ದಾರೆ. ಇವತ್ತು ಬೆಳಿಗ್ಗೆ ಮಾನ್ಯ ಶ್ರೀಕಂಠೇಗೌಡರ ದೂರವಾಣಿಯ ಮೂಲಕ ಅವರ ಜೊತೆ ಮಾತನಾಡಿ, ಈ ಸದನ ಮುಗಿಯುವುದರೊಳಗೆ ನಾನೊಂದು ತೀರ್ಮಾನ ಮಾಡುತ್ತೇನೆ ಎನ್ನುವ ಭರವಸೆ ಕೊಟ್ಟಿದ್ದೇನೆ. ಅದರಂತೆ ನಾವು ಇಲಾಖೆಯಿಂದ ಏನು ಸಹಾಯ ಮಾಡಬೇಕೋ ಮಾಡುತ್ತೇವೆ. ಅವರ ವೇತನ ವಿಚಾರವಾಗಿರಬಹುದು ಅಥವಾ ನಿಯೋಜನೆ ಮಾಡಿ ಕಾರ್ಯಭಾರಕ್ಕೆ ಸಂಬಂಧಪಟ್ಟಂತೆ ಏನು ಅವಕಾಶ ಮಾಡಿ ಕೊಡಬೇಕೋ ಆ ಕುರಿತು ಸ್ಪಷ್ಟವಾಗಿ ಸದನ ಮುಗಿಯುವುದರೊಳಗಾಗೆ ಮಾಡಿಕೊಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-**ನಾವು ಅವರನ್ನು ಅಲ್ಲಿ ಕೂರಿಸಿ ಬಂದಿದ್ದೇವೆ. ಅವರ ವೇತನಕ್ಕೆ ಸಂಬಂಧಪಟ್ಟಂತೆ ಒಂದು ನಿರ್ಧಾರ ತೆಗೆದುಕೊಳ್ಳಬೇಕು ಅಲ್ಲವೇ? ಪ್ರಕಟಣೆ ಮಾಡಬೇಕು ಅಲ್ಲವೇ?

(ಮುಂದು . . .)

**(618)08-06-2017 MM-KS[GR] 1.30**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಮುಂದು):-** ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರನ್ನು ತಡೆದು ಕೂರಿಸಿ ಬಂದಿದ್ದೇನೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ನಿಮಗೆ 11 ವರ್ಷದಲ್ಲಿ ಅವರನ್ನು ಅಯ್ಯೋ ಎನ್ನುವುದಕ್ಕೆ ಆಗಿಲ್ಲ.

**ಸಭಾಪತಿಯವರು:-** ಈಗ ಅದಕ್ಕೆ ಏನು ಮಾಡಬೇಕು? ಅದರ ಬಗ್ಗೆ ಮಾನ್ಯ ಸಚಿವರು ಮಾತನಾಡುತ್ತಿದ್ದಾರಲ್ಲವೇ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಶ್ರೀ ರಮೇಶ್ ಮರಾಠಿ ರವರು ಮೂರು ಬಾರಿ ತಮ್ಮನ್ನು ಕೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್ ಸೇಠ್:-** ಮಾನ್ಯ ಶ್ರೀಕಂಠೇಗೌಡರವರೆ, ಶ್ರೀ ಅಮರನಾಥ ಪಾಟೀಲ್‌ರವರು, ಶ್ರೀ ರಮೇಶ್ ಮರಾಠಿರವರು ತಮ್ಮ ಕ್ಷೇತ್ರದವರು ಎಂದು ಹೇಳಿದ್ದಾರೆ. ತಾವು ಅವರ ರಕ್ಷಣೆಗೆ ಇವತ್ತು ಹೋಗಿದ್ದೀರಿ. 11 ವರ್ಷದಿಂದ ಅವರ ಪಾಡು ಏನಾಗಿದೆ ಎಂಬುದನ್ನು ನೀವು ಯಾರು ಕೇಳುವುದಕ್ಕೆ ಹೋಗಿಲ್ಲ. ಈಗ ಅದು ನನ್ನ ಗಮನಕ್ಕೆ ಬಂದ ಮೇಲೆ ನಾನು ನನ್ನ ಇಲಾಖೆಗೆ ಕಡತದ ರೂಪದಲ್ಲಿ ಕಳುಹಿಸಿ ಕೊಡಿ ಎಂದು ಆದೇಶ ಕೊಟ್ಟಿದ್ದೇನೆ. ಕೇವಲ ಒಂದು ಹಾಳೆಯ ಮೇಲೆ ಆದೇಶ ಮಾಡುವುದಕ್ಕಾಗುವುದಿಲ್ಲ. ಈಗ ಈ ಸದನದಲ್ಲಿ ಸಚಿವನಾಗಿ ನನ್ನ ಇಲಾಖೆಯ ಜವಾಬ್ದಾರಿ ಹೊತ್ತು ನೇರವಾಗಿ ಮಾನ್ಯ ಸಭಾಪತಿಯವರ ಮೂಲಕ ತಮ್ಮೆಲ್ಲರಿಗೂ ಹೇಳುತ್ತಿದ್ದೇನೆ. ಈ ಸದನವು ದಿನಾಂಕ 16-6-2017ವರೆಗೆ ನಡೆಯುತ್ತದೆ . . .

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಚಿವರೆ, ತಾವು ಅವರಿಗೆ ವೇತನವನ್ನು ಕೊಡಬೇಕಲ್ಲವೇ?

**ಶ್ರೀ ತನ್ವೀರ್ ಸೇಠ್:-** ಮಾನ್ಯ ಶ್ರೀಕಂಠೇಗೌಡರವರೆ, ಅದರ ಬಗ್ಗೆ ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಿದ್ದಾರಲ್ಲವೇ? ಇಷ್ಟು ಸಾಕು.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೆ, ನಾನು ನಿಯಮಾವಳಿಯ ಪ್ರಕಾರ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:-** ಆಯಿತು ಆ ಪ್ರಕಾರ ತೀರ್ಮಾನ ತೆಗೆದುಕೊಳ್ಳಿ. ಈಗಾಗಲೇ ಮಾನ್ಯ ಸರ್ಕಾರದಲ್ಲಿ ಶೂನ್ಯವೇಳೆಯ ಬಗ್ಗೆ ಕೆಲವು ಉತ್ತರಗಳಿವೆ. ಆ ಉತ್ತರಗಳನ್ನು ಮಂಡಿಸಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಇಂದು ಸಂಜೆಯೊಳಗೆ ಇವರ ತೀರ್ಮಾನವನ್ನು ಹೇಳದೇ ಹೋದರೆ ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಕುಳಿತಿದ್ದಾರೆ. ಅವರನ್ನು ತಡೆಯುವವರಾರು?

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರವರೆ, ಮಾನ್ಯ ಸಚಿವರು ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರಲ್ಲವೇ? ಈಗಲೇ ತೀರ್ಮಾನ ಮಾಡುವುದಕ್ಕಾಗುತ್ತದೆಯೇ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, The issue is very serious.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ಒಂದು ಮಾತನ್ನು ಹೇಳುತ್ತೇನೆ . . .

**ಸಭಾಪತಿಯವರು:–** ಏನು ಮಾಡಬೇಕೆಂದು ಯಾರು ಹೇಳಲಿಲ್ಲ.

(ಗೊಂದಲ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಹಾಗಾದರೆ ಅವರು ಸಾಯುತ್ತಾರೆ ಅಷ್ಟೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ತಾವು ಉತ್ತರವನ್ನು ಮಂಡಿಸಿ.

(ಗೊಂದಲ)

**5. ಸಚಿವರ ಹೇಳಿಕೆ**

**ಅ) ಸರ್ಕಾರದ ಯೋಜನೆ ಸಕಾಲ ದುರ್ಬಲಗೊಳ್ಳುತ್ತಿರುವ ಬಗ್ಗೆ.**

– – – –

**ಶ್ರೀ ಕೆ.ಜೆ. ಜಾರ್ಜ್ (ಬೆಂಗಳೂರು ಅಭಿವೃದ್ಧಿ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿರವರ ದಿನಾಂಕ 07–06–2017ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳಿಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಮಂಡಿಸಲಾಯಿತು)**

**ಆ) ಆರ್ಯವೈಶ್ಯ ಸಮುದಾಯದ ಅವಶ್ಯಕ ವಿದ್ಯಾರ್ಥಿಗಳಿಗೆ ಜಾತಿ ಪ್ರಮಾಣಪತ್ರ ಹಾಗೂ ಆದಾಯ ಪ್ರಮಾಣ ಪತ್ರ ನೀಡುವ ವ್ಯವಸ್ಥೆ ಮಾಡಬೇಕೆಂಬ ಬಗ್ಗೆ.**

– – – –

**ಶ್ರೀ ಕೆ.ಜೆ. ಜಾರ್ಜ್ (ಬೆಂಗಳೂರು ಅಭಿವೃದ್ಧಿ ಸಚಿವರು) (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಟಿ.ಎ. ಶರವಣರವರು ದಿನಾಂಕ 07–06–2017ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳಿಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಮಂಡಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ 'ಡಿ' ವರ್ಗದ ನೌಕರರನ್ನು ಮಾನವೀಯ ನೆಲೆಯಲ್ಲಿ ಅವರು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸಂಸ್ಥೆಯಲ್ಲಿಯೇ ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ.**

**- - - - -**

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ದಿನಾಂಕ 06-06-2017ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳಿಗೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಮಂಡಿಸಲಾಯಿತು)**

**(ಈ ಹಂತದಲ್ಲಿ ವಿರೋಧ ಪಕ್ಷದ ಕೆಲವು ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ನಡೆಸಿದರು)**

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು):-** ಮಾನ್ಯ ಶ್ರೀಕಂಠೇಗೌಡರವರೆ, 11 ವರ್ಷದವರೆಗೆ ಏನು ಮಾಡಿದ್ದೀರಿ? ನಾನು ಕಡತವನ್ನು ನೋಡಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರವರೆ, ಮಾನ್ಯ ಸಚಿವರು ತೀರ್ಮಾನ ಮಾಡುತ್ತೇನೆಂದು ಹೇಳಿದ್ದಾರಲ್ಲವೇ?

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ಈಗಾಗಲೇ ಹೊರಗಡೆ ಇರುವ ಆ ಬಡಕುಟುಂಬ 11 ವರ್ಷದಿಂದ ಬಹಳಷ್ಟು ನೋವು ಅನುಭವಿಸಿದೆ. ಇವತ್ತು ಮಾನ್ಯ ಸಚಿವರು ಈ ಬಗ್ಗೆ ತೀರ್ಮಾನವನ್ನು announce ಮಾಡದಿದ್ದರೆ ಅವರು ಅಲ್ಲಿ ಆತ್ಮಹತ್ಯೆ ಮಾಡಿಕೊಂಡರೆ ಯಾರು ಹೊಣೆಗಾರರಾಗುತ್ತಾರೆ? ಆದ್ದರಿಂದ ದಯಮಾಡಿ ಸರ್ಕಾರವು ಈ ಬಗ್ಗೆ ಪರಿಶೀಲನೆ ಮಾಡಬೇಕು. ಇಂತಹ ಅನೇಕ ಕುಟುಂಬಗಳು ಹತ್ತಾರು ವರ್ಷಗಳಿಂದ ನೋವನ್ನು ಅನುಭವಿಸಿ ಸತ್ತಿರುವ ಉದಾಹರಣೆಗಳಿವೆ. ದಯಮಾಡಿ ಮಾನವೀಯತೆಯ ದೃಷ್ಟಿಯಿಂದ ಮಾನ್ಯ ಸಚಿವರು ಪರಿಹಾರ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ಸರ್ಕಾರವು ಇಂತಹ ಬಡ ಕುಟುಂಬಗಳಿಗೆ ನೆರವನ್ನು ನೀಡಬೇಕಾಗುತ್ತದೆ. ಇಷ್ಟೆಲ್ಲಾ ಶಾಸಕರು ಮಾನ್ಯ ಸಚಿವರಿಗೆ ಈ ರೀತಿ ಮನವರಿಕೆ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಡುತ್ತಿದ್ದರೂ ಇವತ್ತು ಅವರ ಮನಸ್ಸು ಕರಗುತ್ತಿಲ್ಲವೆಂದರೆ ಇದು ಕಠೋರ ಸರ್ಕಾರವೆಂದು ಹೇಳಬೇಕಾಗುತ್ತದೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಏನಾದರೂ ಹೇಳುವುದಿದ್ದರೆ ಹೇಳಿ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ಸರ್ಕಾರಕ್ಕೆ ಮಾನವೀಯತೆ ಇದೆ. ನಾನು ಶ್ರೀ ರಮೇಶ್ ಮರಾಠಿರವರ ಜೊತೆಯಲ್ಲಿ ದೂರವಾಣಿ ಮೂಲಕ ಸಮಜಾಯಿಷಿ ಕೊಟ್ಟಿದ್ದೇನೆ. ಈ ಸದನವು ದಿನಾಂಕ 16–6–2017ವರೆಗೆ ನಡೆಯುತ್ತದೆ. ಅಷ್ಟರೊಳಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನೆ. ಇದರ ಜೊತೆಗೆ ನಮ್ಮ Grant-in-Aid Policy ವಿಚಾರದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೂ Grant-in-Aid Policy ಇಂದ ಹೊರಗೆ ಹೋಗುತ್ತಾರೆ. ಹಾಗಿದ್ದರೂ ಕೂಡ ನನ್ನ ಇಲಾಖೆಯು ಈಗಾಗಲೇ ಮೂರು ಕಡೆಯಲ್ಲಿ ನಿಯೋಜನೆ ಮಾಡಿಕೊಡುವ ಆದೇಶವನ್ನು ಮಾಡಿದ್ದೇವೆ. ಈಗ ತಾವು ನಿಯಮ ಇದ್ದರೂ ಸರ್ಕಾರ ಏನನ್ನು ಮಾಡಿಲ್ಲ ಎಂದು ಬರೆದಿದ್ದೀರಿ. ಮಾಡಿಲ್ಲ ಎಂದು ಅಲ್ಲ ಮಾಡಿದ್ದೇವೆ. ನಾನು ಹೇಳುವುದೇನೆಂದರೆ, ಕಡತದಲ್ಲಿ ಪೂರ್ಣ ವಿವರಗಳನ್ನು ತರಿಸಿಕೊಳ್ಳುತ್ತೇನೆ. ನಂತರ ಆ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಈಗ ತಾವು ಎತ್ತಿರುವ ವಿಚಾರವು ನನಗೆ ಮನದಟ್ಟಾಗಿದೆ. ಅದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇನೆ ಎಂಬ ಭರವಸೆಯನ್ನು ಈ ಸದನದಲ್ಲಿ ಸ್ಪಷ್ಟವಾಗಿ ಕೊಡುತ್ತೇನೆ. ಇದರ ಮೇಲೆ ಇನ್ನೇನು ಮಾಡಬೇಕು? ನಾನು ಶ್ರೀ ರಮೇಶ್ ಮರಾಠಿ ರವರ ಜೊತೆಯಲ್ಲಿ ಮಾತನಾಡಿ ಧೈರ್ಯ ತುಂಬಿದ್ದೇನೆ. ಸರ್ಕಾರವು ಈ ವಿಚಾರವನ್ನು ಪರಿಗಣಿಸುತ್ತದೆ ಎಂದು ಹೇಳಿದ್ದೇನೆ. ಇದನ್ನೆಲ್ಲಾ ಅವರ ದೂರವಾಣಿಯಲ್ಲಿಯೇ ಮಾತನಾಡಿದ್ದೇನೆ. ತಾವು ಎತ್ತಿರುವ ವಿಚಾರವು ತಕ್ಷಣವೇ ತೀರ್ಮಾನವಾಗಬೇಕೆಂದರೆ ಅದು ಕಷ್ಟವಾಗುತ್ತದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ದೂರವಾಣಿಯಲ್ಲಿ ಮಾನ್ಯ ಸಚಿವರನ್ನು ಮಾತನಾಡಿಸಿದ್ದು ನಾನೇ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಅಮರನಾಥ ಪಾಟೀಲರವರೆ, ಶ್ರೀ ರಮೇಶ್ ಮರಾಠಿರವರು ತಮ್ಮ ಕ್ಷೇತ್ರದವರೇ ಆಗಿದ್ದು 11 ವರ್ಷದಿಂದ ತಾವು ಏನು ಮಾಡಿದ್ದೀರಿ ಎಂದು ಕೇಳಬೇಕಾಗುತ್ತದೆ. ನನ್ನ ಗಮನಕ್ಕೆ ಈಗ ವಿಷಯ ತಂದಿದ್ದೀರಿ. ನಾನು ತಕ್ಷಣವೇ ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮುಂದಾಗುತ್ತೇನೆ. ಕಡತದ ಮೇಲೆ ತರಿಸಿಕೊಳ್ಳುವುದಕ್ಕೆ ಈಗಾಗಲೇ ಪತ್ರವೊಂದನ್ನು ಬರೆದಿದ್ದೇನೆ. ನನ್ನ ಇಲಾಖೆಯಿಂದ ಕಡತ ಬಂದ ನಂತರ ಖಂಡಿತವಾಗಿಯು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಉತ್ತರವನ್ನು ಒಪ್ಪುತ್ತೇನೆ. ಆದರೆ ಇವತ್ತಿನ ಪರಿಸ್ಥಿತಿ ಮತ್ತು ಸಂದರ್ಭವನ್ನು ಮಾನ್ಯ ಸಚಿವರು ಅರ್ಥಮಾಡಿಕೊಳ್ಳಬೇಕು. ಇವತ್ತು ಶ್ರೀ ರಮೇಶ್, ಅವರ ಧರ್ಮಪತ್ನಿ ಮತ್ತು ಅವರ ಮಗಳು ಮೂವರು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೇಳಿದ್ದಾರೆ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಶ್ರೀಕಂಠೇಗೌಡರವರೆ, ಈಗ ಏನಾಗಬೇಕು ಎಂಬುದನ್ನು ಹೇಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಚಿವರೆ, ಅವರ ವೇತನವನ್ನು ಬಿಡುಗಡೆ ಮಾಡಬೇಕು. ವೇತನವನ್ನು ಏಕೆ ತಡೆಹಿಡಿಯುತ್ತೀರಿ? ಕಾನೂನಿನಲ್ಲಿ ಅವಕಾಶವಿದೆಯಲ್ಲ ವೇತನವನ್ನು ಬಿಡುಗಡೆ ಮಾಡಿ. ಅವರನ್ನು ತಡೆದು 40–50 ಜನರು ನಾವೆಲ್ಲ ಹೋಗಿ ತಮ್ಮ ದೂರವಾಣಿಯಲ್ಲಿ ಮಾತನಾಡಿಸಿ. ದಯವಿಟ್ಟು ಸಮಸ್ಯೆಯನ್ನು ಕೇಳಿಕೊಂಡು ಪರಿಹಾರವನ್ನು ಮಾಡಿಕೊಡಿ. ಅವರನ್ನು ಈಗ ತಡೆದಿದ್ದೇವೆ. ಅವರು ಸಂಜೆಯವರೆಗೂ ಹೊರಗಡೆ ಕುಳಿತಿರುತ್ತಾರೆ. ಸಂಜೆ ನಾವೇ ಅವರನ್ನು ತಮ್ಮ ಬಳಿಗೆ ಅವರನ್ನು ಕರೆದುಕೊಂಡು ಬರುತ್ತೇವೆಂದು ಹೇಳಿದ್ದೇವೆ. ಇಡೀ ತಂಡವೇ ಹೊರಗಡೆ ಕುಳಿತಿದೆ. ನನ್ನ ಪ್ರಶ್ನೆಯೇನೆಂದರೆ, ತಾವು ಇನ್ನೊಂದು ಕಡೆ reallocation ಮಾಡಿ ಒಂದು report ಮಾಡಿಕೊಂಡು ಸಂಬಳ ಬರುವವರೆಗೂ ಅವರಿಗೆ ವೇತನವನ್ನು ಕೊಡಬೇಕಲ್ಲವೇ? He is an aided employee. It is the duty of the Government to protect him. ಅವನು ಹೇಗೆ ಜೀವನ ಮಾಡುತ್ತಾನೆ?

**ಶ್ರೀ ತನ್ವೀರ್ ಸೇಠ್:–** ಮಾನ್ಯ ಶ್ರೀಕಂಠೇಗೌಡರವರೆ, ಒಂದು ವಿಚಾರವನ್ನು ಹೇಳುತ್ತೇನೆ ಕೇಳಿ. Grant-in-Aid Policy ಗೆ ಅನುಗುಣವಾಗಿ ನಾವು ನಡೆದುಕೊಳ್ಳಬೇಕಾದರೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ಹಾಗಿದ್ದರೂ ಕೂಡ ಇಲ್ಲಿ ಮರಾಠಿ ವಿಷಯದ ವಿಭಾಗವನ್ನು ಮುಚ್ಚಿ ಹಾಕಿದ ಕಾರಣದಿಂದ ನಾವು ಅದನ್ನು;

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಚಿವರೆ, ಮರಾಠಿ ವಿಷಯವನ್ನು ಮುಚ್ಚಿ ಹಾಕಿರುವುದಲ್ಲ, ಮಕ್ಕಳು admission ಆಗಲು ಬಂದರೂ ಬೇಕೆಂತಲೇ ಸೇರಿಸಿಕೊಳ್ಳಲಿಲ್ಲ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಶ್ರೀಕಂಠೇಗೌಡರವರೆ, ಅದು management ಮಾಡಿದ ತಪ್ಪಾಗಿದೆ. ಇವತ್ತಲ್ಲ 2011ರಲ್ಲಿ ಮಾಡಿದಂತಹ ತಪ್ಪು. ಹಾಗೇ ಇದ್ದ ಇವರ ಪ್ರಕರಣವನ್ನು ನಾನು ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಗೆ ಬಂದ ನಂತರ ನಿಯೋಜನೆ ಮಾಡುವಂತಹ ಆದೇಶವನ್ನು ಮಾಡಿದ್ದೇವೆ. ಇದನ್ನು ಮಾಡಿದ ಮೇಲೆ;

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಚಿವರೆ, ನಿಯೋಜನೆ ಮಾಡಿದ ಮೇಲೆ ಅವರನ್ನು report ಮಾಡಿಸಿಕೊಳ್ಳಬೇಕಿತ್ತಲ್ಲವೇ? DDPI ಇಲ್ಲವೇ, Joint Director, Director ಇಲ್ಲವೇ? Report ಮಾಡಿಸಿಕೊಳ್ಳಬೇಕಾಗಿತ್ತು. Attendance ಇರಲಿಲ್ಲವೇ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಎಲ್ಲಾ ಸದಸ್ಯರೂ ಕುಳಿತಿದ್ದಾರೆ. ಮಾನ್ಯ ಸದಸ್ಯರು ಅವರ ದೃಷ್ಟಿಯಲ್ಲಿಯೇ ಮಾತನಾಡಿಕೊಂಡು ಇತ್ಯರ್ಥ ಮಾಡುವುದಾದರೆ ಬೇರೆ ಸದಸ್ಯರು ಏನು ಮಾಡಬೇಕು?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಐವನ್ ಡಿ'ಸೋಜಾರವರೆ, ಈ ವಿಷಯವನ್ನು ಬಿಟ್ಟುಬಿಡಿ ಎಂದರೆ ಬಿಡುತ್ತೇವೆ ನಂತರ ಇದನ್ನು ತಾವೇ ನೋಡಿಕೊಳ್ಳಬೇಕಾಗುತ್ತದೆ. ಇಡೀ ಕುಟುಂಬ ಬಲಿಯಾಗುತ್ತದೆ. ದಯವಿಟ್ಟು ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಿ. ಅವರು 26 ವರ್ಷಗಳ ಸೇವೆಯನ್ನು ಸಲ್ಲಿಸಿದ್ದಾರೆ.

(ಗೊಂದಲ)

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಎತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ನಾನು ಪೂರ್ಣ ಮಾಹಿತಿಯನ್ನು ತರಿಸಿಕೊಂಡು ಅದರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು.

**ಸಭಾಪತಿಯವರು:–** ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಇಂದು ಸಂಜೆಯೊಳಗೆ ಅವರಿಗೆ ವೇತನವನ್ನು ಬಿಡುಗಡೆ . . .

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರವನ್ನು ಹೇಳಿದ್ದಾರೆ. ದಯಮಾಡಿ ತಾವೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಅವರನ್ನು ಕರೆಸಿ ಮಾತನಾಡಿ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ತನ್ವೀರ್ ಸೇಠ್:–** ಮಾನ್ಯ ಶ್ರೀಕಂಠೇಗೌಡರವರೆ, ಇಂತಹ ಹಠ ಮಾಡುವುದು ಸರಿಯಲ್ಲ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಚಿವರೆ, ನಾನು ಹಠವನ್ನು ಮಾಡುತ್ತಿಲ್ಲ. ಅವರು ಸಾಯುತ್ತಿದ್ದಾರೆ. ನಾವೇಕೆ ಹಠ ಮಾಡುತ್ತೇವೆ?

**ಶ್ರೀ ತನ್ವೀರ್ ಸೇಠ್:–** ಮಾನ್ಯ ಶ್ರೀಕಂಠೇಗೌಡರವರೆ, ಕಳೆದ 11 ವರ್ಷದಲ್ಲಿ ಮೂರು ತಿಂಗಳ ಹಿಂದೆ ನನ್ನ ಬಳಿಗೆ ಬಂದು ಮಾತನಾಡಿದ ಸಂದರ್ಭದಲ್ಲಿ . . .

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಚಿವರೆ, ಅವರು 11 ವರ್ಷದಿಂದ ನೂರಾರು ಬಾರಿ ಬಂದಿದ್ದಾರೆ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ಕಳೆದ ಮೂರು ತಿಂಗಳ ಹಿಂದೆ ಶ್ರೀ ಪ್ರಭು ಚವ್ಹಾಣ್ ರವರು ನನಗೆ ಕೊಟ್ಟಂತಹ ಸಂದರ್ಭದಲ್ಲಿ ಮೊನ್ನೆ ನಾನು ಬೀದರ್ ಜಿಲ್ಲೆಗೆ ಹೋದಂತಹ ಸಂದರ್ಭದಲ್ಲಿ ಮತ್ತೆ ನಾನು ಅದರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಇಲಾಖೆಗೆ ಹೇಳಿದ್ದೇನೆ. ನಾನು ಒಂದು ಕಡೆಗೆ ನಿಯೋಜನೆಗೆ ಹಾಕಿದ ಸಂದರ್ಭದಲ್ಲಿ ಆ ಸಂಸ್ಥೆಯವರು ಸೇರಿಸಿಕೊಳ್ಳಲಿಲ್ಲ. ನಂತರ ಅಲ್ಲಿರುವಂತಹ ವಾತಾವರಣವನ್ನು ನೋಡಿ ಮತ್ತೊಂದು ಸಂಸ್ಥೆಗೆ ಅವರನ್ನು ನಿಯೋಜನೆ ಮಾಡಿ ಎಂದು ಮಾರ್ಚ್ ತಿಂಗಳಿನಲ್ಲಿ ಆದೇಶ ಮಾಡಿಕೊಟ್ಟಿದ್ದೇನೆ. ಹಾಗಿದ್ದರು ಕೂಡ ಈಗಲೇ ಉತ್ತರ ಕೊಡಿ ಎಂದು ಕೇಳಿದರೆ ಕಷ್ಟವಾಗುತ್ತದೆ. ಇಂದು ಸಂಜೆಯೊಳಗೆ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ.

**ಸಭಾಪತಿಯವರು:–** ಬೇರೆ ವಿಷಯವನ್ನು ಚರ್ಚೆ ಮಾಡುವುದೇ ಬೇಡವೇ? ಒಬ್ಬ ವ್ಯಕ್ತಿಯ ಬಗ್ಗೆ ಈ ರೀತಿ ಚರ್ಚೆ ಮಾಡಿದರೆ ಹೇಗೆ? ಇದು ನನಗೆ ಒಪ್ಪಿಗೆಯಾಗುತ್ತಿಲ್ಲ. ಇಲಾಖೆಯ ಬಗ್ಗೆ ಮಾತನಾಡಿ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ.

**(ಈ ಹಂತದಲ್ಲಿ ಧರಣಿನಿರತ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)**

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ದಯಮಾಡಿ ಈ ರೀತಿ [xxx] ಎಂದು ಅವರಿಗೆ ಹೇಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ನಾವೇಕೆ [xxx] ಕೊಡುತ್ತೇವೆ? ದಯಮಾಡಿ ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಆಗಲಿ ಅದನ್ನು ಕಡತದಿಂದ ತೆಗೆಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ನಾವು [xxx] ಕೊಡುತ್ತಿಲ್ಲ. ಅದನ್ನು ಸರ್ಕಾರ ಕೊಡುತ್ತಿದೆ. 11 ವರ್ಷಗಳಿಂದ ಅವರು ಏನು ತಿನ್ನಬೇಕು?

**ಸಭಾಪತಿಯವರು:–** ಆಯಿತು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ನಾವು ಅಷ್ಟು ಕೆಟ್ಟ ಜನರೇ? ನೀವು ಜವಾಬ್ದಾರಿಯನ್ನು ಅರಿತು ಸರಿಯಾಗಿ ಕಾರ್ಯ ನಿರ್ವಹಿಸಿ, ನಮಗೆ ಅಷ್ಟೇ ಸಾಕು.

**ಸಭಾಪತಿಯವರು:–** ನಿಯಮ 330ರ ಮೇರೆಗೆ ನಿನ್ನೆ ಚರ್ಚೆ ನಡೆದು ಮಧ್ಯದಲ್ಲಿ ನಿಂತಿತ್ತು. ಅದನ್ನು ಇವತ್ತು ಚರ್ಚೆ ಮುಂದುವರೆಸಿ ಅದಕ್ಕೆ ಉತ್ತರವನ್ನು ಭೋಜನಕ್ಕೆ ಮುಂಚಿತವಾಗಿ ಮುಗಿಸಬೇಕು. ನಿಯಮ 330ರಡಿ ನಿನ್ನೆಯಿಂದ ಎರಡು ಗಂಟೆಗಳ ಕಾಲ ಚರ್ಚೆ ಮಾಡಿ ಅದನ್ನು ಇನ್ನೂ ಮುಗಿಸಿಲ್ಲವೆಂದರೆ ಬೇರೆ ವಿಷಯವನ್ನು ತೆಗೆದುಕೊಳ್ಳಬೇಕೋ ಬೇಡವೋ? ಬರದ ಬಗ್ಗೆ ಚರ್ಚೆ ಮಾಡಬೇಕಾಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಎಷ್ಟು ಜನರು ಮಾತನಾಡುತ್ತಾರೆ ಅವರಿಗೆಲ್ಲಾ ಎಷ್ಟು ಸಮಯವನ್ನು ಕೊಡುತ್ತೀರಿ ಇದು ಬಹಳ ಪ್ರಮುಖವಾದುದಾಗಿದೆ.

**ಸಭಾಪತಿಯವರು:–** ಇನ್ನು 50 ನಿಮಿಷದಲ್ಲಿ ನಿಯಮ 330ರಡಿ ಚರ್ಚೆ ಮತ್ತು ಉತ್ತರ ಮುಗಿಯಬೇಕು. ಇದನ್ನು ಮುಗಿಸಿದ ಮೇಲೆ ಭೋಜನ. ಭೋಜನದ ನಂತರ ಬರದ ಬಗ್ಗೆ ಚರ್ಚೆ ನಡೆಸಲಾಗುವುದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಉತ್ತರ ಕೊಡಲು ಮಾನ್ಯ ಸಚಿವರೇ ಇಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರು ಇದ್ದಾರೆ ಬರುತ್ತಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಉತ್ತರ ಕೊಡಲು ಮಾನ್ಯ ಸಚಿವರಾದ ಶ್ರೀ ಎಂ.ಬಿ. ಪಾಟೀಲರು ಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರುಗಳು ಮಾತನಾಡಿದ ನಂತರ ಬರುತ್ತಾರೆ. ನಿನ್ನೆ ದಿವಸ ಸಾಕಷ್ಟು ಸಮಯ ಇದ್ದರು. ಈಗ ಅವರನ್ನು ಕರೆಸಿದರೆ ಬರುತ್ತಾರೆ.

---

[xxx] ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರೇ ಇಲ್ಲದಿದ್ದರೆ ಯಾರಿಗೆ ಮಾತನಾಡುವುದು?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಬರದ ಬಗ್ಗೆ 3.00 ಗಂಟೆಗೆ ಚರ್ಚಿಸಲಾಗುವುದು ಅದನ್ನು ಈಗಲೇ ಪ್ರಾರಂಭ ಮಾಡುತ್ತೀರಾ?

**ಸಭಾಪತಿಯವರು:–** ನಿಯಮ 330ರ ಮೇರೆಗೆ ಚರ್ಚಿಸಲು ಮಾನ್ಯ ಸಚಿವರಾದ ಶ್ರೀ ಎಂ.ಬಿ. ಪಾಟೀಲರವರು ಬರಬೇಕು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ನಿಯಮ 330ರ ಮೇರೆಗೆ ನಿನ್ನೆ ದಿವಸ ಮೂರುವರೆ ಗಂಟೆಗಳ ಕಾಲ ಚರ್ಚೆಯಾಗಿದೆ. ನಾನು ಸರ್ಕಾರದ ಮುಖ್ಯ ಸಚೇತಕರಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಮೊನ್ನೆ ದಿವಸ ನಾಲ್ಕುವರೆ ಗಂಟೆಗಳ ಕಾಲ ಮತ್ತು ನಿನ್ನೆಯ ದಿವಸ ಸುಮಾರು ಮೂರುವರೆ ಗಂಟೆಗಳ ಕಾಲ ನಿಯಮ 330ರ ಮೇಲೆ ಚರ್ಚೆಯಾಗಿದೆ.

(ಮುಂದು . . .

(619) 08.06.2017/ 1.40/ ಕೆಹೆಚ್/ಜಿಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನಾನು ಮಧ್ಯಪ್ರವೇಶ ಮಾಡಿ ಒಂದು ವಿಷಯ ಹೇಳಿದ್ದೆ. ಅದೇನೆಂದರೆ ಇಡೀ ಸದನದಲ್ಲಿ ಎರಡು–ಮೂರು ಜನ ಸದಸ್ಯರೆ ಮಾತನಾಡುತ್ತ ಕುಳಿತರೆ ನಾವು ಸದನಕ್ಕೆ ಏಕೆ ಬರಬೇಕೆಂದು ನಮ್ಮ ಕಿರಿಯ ಸದಸ್ಯರ ಕಳಕಳಿ. ಸದನದಲ್ಲಿ ಹಾಜರಾತಿ ಕಡಿಮೆಯಾಗುತ್ತಿದೆ ಎಂಬುದು ಒಂದು ಕಡೆ ಇದೆ. ಇನ್ನೊಂದು ಕಡೆ ಕಿರಿಯ ಸದಸ್ಯರು ಸದನಕ್ಕೆ ಬರುವುದಿಲ್ಲ ಮತ್ತು ಲಾಸ್ಟ್ ಬೆಂಚ್‌ಗಳಲ್ಲಿ ಕುಳಿತ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ, ಅವರಿಗೆ ಮಾತನಾಡುವುದಕ್ಕೆ ಅವಕಾಶಗಳು ಸಿಗುವುದಿಲ್ಲ, ನಮ್ಮ ಯಾವ ವಿಚಾರಗಳು ಸಹ ಸದನದಲ್ಲಿ ಚರ್ಚೆಯಾಗುತ್ತಿಲ್ಲವೆಂದು ಇನ್ನೊಂದು ಕಡೆ ಇದೆ. ನಿಯಮ 330 ರ ಮೇಲೆ ಮೂರೂವರೆ ಗಂಟೆ ಮತ್ತು ನಾಲ್ಕೂವರೆ ಗಂಟೆ ಚರ್ಚೆ ಮಾಡುವುದಾದರೆ ನಾವು ಏಕೆ ಸದನಕ್ಕೆ ಬರಬೇಕೆಂದು ನನ್ನಲ್ಲಿ ಮಾನ್ಯ ಸದಸ್ಯರುಗಳು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಆದ್ದರಿಂದ ನಾನು ಸದನದ ಮೂಲಕ ನಿಮ್ಮ ಗಮನಕ್ಕೆ ತರುವುದೇನೆಂದರೆ ಕಿರಿಯ ಸದಸ್ಯರಿಗೂ ಮತ್ತು ಲಾಸ್ಟ್ ಬೆಂಚ್‌ಗಳಲ್ಲಿ ಕುಳಿತ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವ ಬಗ್ಗೆ ತಾವು ಗಮನಹರಿಸಬೇಕು. ಆಗ ಎಲ್ಲಾ ಸದಸ್ಯರುಗಳು ಆಸಕ್ತಿವಹಿಸಿ ಸದನಕ್ಕೆ ಬರುತ್ತಾರೆಂಬುದು ನನ್ನ ಒಂದು ಅಭಿಪ್ರಾಯ ಆಗಿದೆ.

**ಸಭಾಪತಿಯವರು:-** ಆಯಿತು. ಈಗ ಚರ್ಚೆ ಮಾಡಿ, ಎರಡೂವರೆ ಗಂಟೆಯೊಳಗೆ ಮುಗಿಸಬೇಕೆಂದು ಹೇಳಿ ಸಮಯವನ್ನು ನಿಗದಿ ಮಾಡಿದ್ದೇನೆ. ತಾವು ದಯಮಾಡಿ ಮಾನ್ಯ ಸಚಿವರನ್ನು ಸದನಕ್ಕೆ ಕರೆಯಿಸಿ. ಅಷ್ಟರೊಳಗೆ ನೆನ್ನೆಯ ದಿವಸ ಯಾರು ಮಾತನಾಡುತ್ತಿದ್ದರು. ಈಗ ವಿಷಯದ ಬಗ್ಗೆ ಯಾರು ಮುಂದುವರೆಸುತ್ತೀರಿ?

**ಶ್ರೀ ನಿರಾಣಿ ಹನಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, . . .

**ಸಭಾಪತಿಯವರು:-** ಶ್ರೀ ನಿರಾಣಿಯವರೆ ನೀವು ಇನ್ನು ಮಾತನಾಡುವುದನ್ನು ಮುಗಿಸಿಲ್ಲವೇ? ನೆನ್ನೆಯ ದಿವಸ ಈ ವಿಷಯದ ಬಗ್ಗೆ ತಾವು ಬಹಳ ಹೊತ್ತು ಮಾತನಾಡಿದ್ದೀರಿ. ಇವತ್ತು ಸಹ ಮಾತನಾಡುತ್ತೀರಾ? ಆಡಳಿತ ಪಕ್ಷದ ಕಡೆ ಯಾರಾದರೂ ಮಾತನಾಡುವುದಿದ್ದರೆ ಅವರಿಗೆ ಇವೊತ್ತು ಮೊದಲು ಅವಕಾಶವನ್ನು ಕೊಡುತ್ತೇನೆ. ನಿಯಮ 330 ರ ಮೇಲೆ ಮಾತನಾಡುವುದಕ್ಕೆ ಯಾರು ಇಲ್ಲವೇ? ಮಾತನಾಡುವುದಕ್ಕೆ ಪ್ರಾರಂಭ ಮಾಡಿ.

**6. ನಿಯಮ 330 ರ ಮೇರೆಗೆ ಚರ್ಚೆ**

**ವಿಷಯ: ಆಲಮಟ್ಟಿ ಕೃಷ್ಣ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.**

* * *

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಿಯಮ 330 ರ ಮೇರೆಗೆ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಸಮಯಾವಕಾಶವನ್ನು ಕೊಟ್ಟಿರುವುದಕ್ಕೆ ಧನ್ಯವಾದಗಳು. ನೆನ್ನೆಯ ದಿವಸ ಆಲಮಟ್ಟಿ ಕೃಷ್ಣ ಮೇಲ್ದಂಡೆ ಯೋಜನೆಯಿಂದ ಬಾಧಿತಗೊಂಡ ಸಂತ್ರಸ್ತ ಕುಟುಂಬಗಳಿಗೆ ಸಂಬಂಧಿಸಿದಂತೆ ಹಿರಿಯರಾಗಿರುವಂತಹ ಶ್ರೀ ಬಸನಗೌಡ ಆರ್. ಪಾಟೀಲ್, ಶ್ರೀ ನಿರಾಣಿ ಹನಮಂತ್ ರುದ್ರಪ್ಪ ಮತ್ತು ಶ್ರೀಮತಿ ತಾರಾ ಅನುರಾಧ ಇವರುಗಳು ಈ ಸದನಕ್ಕೆ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಇದು ಒಂದು ಬಾರಿ ಆಗುವಂತಹ ಕೆಲಸ. ನೀರಾವರಿಗೆ ಅನೇಕ ಫಲವತ್ತಾದ ಭೂಮಿಗಳನ್ನು ವಶಪಡಿಸಿಕೊಳ್ಳುವುದು ಮೊದಲಿನಿಂದಲೂ ಬಂದಿರುವಂತಹದ್ದು. ಆದರೆ ಆ ಭೂಮಿಗಳನ್ನು ವಶಪಡಿಸಿಕೊಂಡ ನಂತರ, ಎಲ್ಲರೂ ಸಹ ಮೂಲತಃ ಅಜ್ಜ, ತಾತನ ಕಾಲದಿಂದ ನಡೆದುಕೊಂಡು ಬಂದಂತಹ ಅಥವಾ ಆ ಹಳ್ಳಿಗಳಲ್ಲಿ ವಾಸ ಮಾಡಿಕೊಂಡು ಬಂದಂತಹ ಭಾವನಾತ್ಮಕ

ಸಂಬಂಧಗಳನ್ನು ಇಟ್ಟುಕೊಂಡಿರುವಂಹವರು ಸಂಪೂರ್ಣವಾಗಿ ಹಳ್ಳಿಯಿಂದ ಹೊರಗೆ ಹೋಗಬೇಕೆಂದರೆ ತುಂಬಾ ತೊಂದರೆದಾಯಕ ಪರಿಸ್ಥಿತಿ ಮತ್ತು ಅವರು ಬಹಳ ದುಃಖದಿಂದ ಹೊರಗೆ ಹೋಗುತ್ತಿದ್ದಾರೆ. ಇದು ನಮಗೆ ಮತ್ತು ನಿಮಗೆ ಗೊತ್ತಿರುವಂತಹ ವಿಷಯ. ಎಲ್ಲೋ ಒಂದು ಕಡೆ ಸರ್ಕಾರದವರಿರಬಹುದು. ಅಲ್ಲಿಯ ಚುನಾಯಿತ ಪ್ರತಿನಿಧಿಗಳಿರಬಹುದು. ಊರಿನ ಹಿರಿಯರಬಹುದು. ಇವತ್ತಿನ ದಿವಸ ಅವರಿಗೆ ಮನವೊಲಿಸಿ ಒಳ್ಳೆಯ ಕೆಲಸಕ್ಕೆ ನಿನ್ನ ಭೂಮಿಯನ್ನು ತೆಗೆದುಕೊಳ್ಳುತ್ತೇವೆ. ನೀನು ಸಮಾಧಾನದಿಂದಿರು. ನಿನಗೆಲ್ಲ ಅನುಕೂಲತೆಗಳನ್ನು ಮಾಡಿಕೊಡುತ್ತೇವೆಂಬ ವಿಷಯವನ್ನು ಅವರಿಗೆ ತಿಳಿಸಿ, ಅವರನ್ನು ಆ ಊರಿನಿಂದ ಬೇರೆ ಕಡೆಗೆ ವರ್ಗಾಯಿಸುವುದು ನಮಗೆಲ್ಲ ಗೊತ್ತಿರುವಂತಹ ವಿಷಯ. ಆದರೆ ನೆನ್ನೆಯ ದಿವಸ ಹಿರಿಯರಾದಂತಹವರು ಮಾತನಾಡಿದ್ದಾರೆ. ಈ ಸದನದಲ್ಲಿ ಒಂದರೆಡು-ಮೂರು ವಿಷಯಗಳನ್ನು ಸದನದ ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

**(ಈ ಹಂತದಲ್ಲಿ ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

1962 ನೇ ಇಸವಿಯಲ್ಲಿ ನಾವು ಇನ್ನು ಜನಿಸಿರಲಿಲ್ಲ. ಆಗ ವರದಾ ನದಿ ಮಹಾಪೂರ ಬಂದಿತ್ತು. ಆಗಿನ ಕಾಲದಲ್ಲಿ ವರದಾ ನದಿ ಮಹಾಪೂರ ಬಂದಾಗ ನಮ್ಮ ಜಿಲ್ಲೆಯಲ್ಲಿರುವಂತಹ ಮತ್ತು ನಮ್ಮ ತಾಲ್ಲೂಕಿನಲ್ಲಿರುವಂತಹ ಸುಮಾರು 13-14 ಹಳ್ಳಿಗಳನ್ನು ಎತ್ತಂಗಡಿ ಆವೊತ್ತಿನ ದಿವಸ ಮಾಡಿದರು. ಅಂದು ಹಳ್ಳಿಗಳಲ್ಲಿರುವವರನ್ನು ಎತ್ತಂಗಡಿ ಮಾಡಿ ಇಂದು ಸುಮಾರು 55 ವರ್ಷಗಳು ಗತಿಸಿದರೂ ಸಹ ಇವತ್ತಿನವರೆಗೂ ಆ ಹಳ್ಳಿಯಲ್ಲಿರುವವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸದೆ ಇರುವಂತಹ ವಿಚಾರವನ್ನು ನಾನು ನಿಮ್ಮ ಮುಂದೆ ಹೇಳುತ್ತಿದ್ದೇನೆ. 1962ನೇ ಇಸವಿಯಲ್ಲಿ ವರದಾ ನದಿ ಮಹಾಪೂರ ಬಂದಾಗ ನಮ್ಮ ಕ್ಷೇತ್ರದಲ್ಲಿರುವಂತಹ ಕುಣಿಮೆಳ್ಳಣ್ಣಿ ಇರಬಹುದು, ಹಲಸೂರು ಇರಬಹುದು, ಮೆಳ್ಳಾಗಟ್ಟಿ ಇರಬಹುದು, ಮನ್ನಂಗಿ ಇರಬಹುದು, ತಳ್ಳಳ್ಳಿ ಇರಬಹುದು, ನದಿನೀರಲಗಿ ಇರಬಹುದು. ಅವತ್ತಿನ ದಿವಸ ಬಂದಂತಹ ಸಂದರ್ಭದಲ್ಲಿ ಅವರಿಗೆ ಬೇರೆ ಕಡೆ plot ಅನ್ನು ಕೊಟ್ಟರು. ಅವರು ಮಸಾರಿ ಜಮೀನು, ರೆಡ್ ಸಾಯಿಲ್ ಇರುವಂಥ ಜಮೀನನ್ನು ಕಳೆದುಕೊಂಡಿದ್ದಾರೆ. ಆದರೆ ಆ ಹಳ್ಳಿಯಲ್ಲಿರುವವರಿಗೆ ಮಂಜೂರು ಮಾಡಿದಂತಹ ಜಮೀನು ಬ್ಲ್ಯಾಕ್ ಸಾಯಿಲ್. ಇವತ್ತಿನ ದಿವಸ ಆ ಜಮೀನಿನಲ್ಲಿ ಬುನಾದಿ ಹಾಕಿ ಮನೆ ಕಟ್ಟಿಕೊಳ್ಳಬೇಕೆಂದು ಹೇಳಿದರೆ, ಸುಮಾರು 15 ರಿಂದ 20 ಅಡಿ ಆಳ ತೋಡಬೇಕು. ಸ್ವಲ್ಪ ಹೆಚ್ಚು ಕಡಿಮೆ ಆಳ ತೋಡಿ ಮನೆ ಕಟ್ಟಿದರೆ, 6 ತಿಂಗಳಲ್ಲಿ ಅಥವಾ ವರ್ಷದಲ್ಲಿ ದೊಡ್ಡ ಮಳೆಯಾದರೆ ಬಿರುಕು ಬಿಟ್ಟು, ಮನೆಗಳು ಕುಸಿಯುತ್ತವೆ. ಹಳ್ಳಿಗಳಲ್ಲಿರುವ ಮನೆಗಳಿಗೆ ಹೋಗಬೇಕಾದರೆ ಮೊಣಕಾಲಿನ ಮಟ್ಟ ನೀರು ನಿಲ್ಲುತ್ತದೆ ಹಾಗೂ ಅವರು ಕೆಸರಿನೊಳಗೆ ಹೋಗಬೇಕು. ಇವತ್ತಿನ ದಿವಸಗಳಲ್ಲಿ ಸ್ವಲ್ಪ ರಸ್ತೆಗಳು ಸುಧಾರಣೆಯಾಗಿವೆ. ಇವತ್ತಿನ ದಿವಸ ಆ ರಸ್ತೆಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಡ್ಡಾಡಬಹುದು ಎಂಬ ಮನವರಿಕೆಯಲ್ಲಿದ್ದೇವೆ. ಸುಮಾರು 35–40 ವರ್ಷಗಳಿಂದ ಒಂದು ಹಳ್ಳಿಯಲ್ಲಿರುವಂತಹ ಸ್ಥಾನವನ್ನು ಬಿಟ್ಟು, ಬೇರೆ ಕಡೆಗೆ ಬಂದು ವಾಸ ಮಾಡಿದರೂ ಕೂಡ ಅವರ ಜೀವನ ಸರಿಯಾಗಿಲ್ಲ. ಅವರಿಗೆ ಸರಿಯಾಗಿರುವಂತಹ ನೀರಿನ ವ್ಯವಸ್ಥೆ ಇಲ್ಲ. ರಸ್ತೆಗಳ ವ್ಯವಸ್ಥೆ ಇಲ್ಲ. ಶಾಲೆಗೆ ಹೋಗುವಂತಹ ಮಕ್ಕಳಿಗೆ ಸರಿಯಾದ ವಾಹನಗಳ ವ್ಯವಸ್ಥೆ ಇಲ್ಲ. ಇದು ಸುಮಾರು 50 ರಿಂದ 55 ವರ್ಷಗಳ ಹಿಂದೆಯಾಗಿರುವಂತಹದ್ದು. ಆದರೂ ಕೂಡ ಯಾವುದೇ ಸರ್ಕಾರಗಳು ಬಂದು ಹೋದರೂ ಇವೊತ್ತಿನವರೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ವಿಫಲವಾಗಿವೆ. ಈ ಹಿಂದೆ ಅನೇಕ ಬಾರಿ ಫಲವತ್ತಾದ ಜಮೀನನ್ನು ಕಸಿದುಕೊಂಡು ಸ್ಥಳಾಂತರಗೊಳ್ಳುವ ವಿಚಾರದ ಬಗ್ಗೆ ನೆನ್ನೆಯಿಂದ ಇವತ್ತಿನವರೆಗೂ ನಾವು ಇಲ್ಲಿ ಏನು ಚರ್ಚೆಯನ್ನು ಮಾಡುತ್ತಿದ್ದೇವೆ. ಅದನ್ನು ಮನಗಂಡು ಇವೊತ್ತಿನ ಸರ್ಕಾರಗಳು ಬಹಳಷ್ಟು ಜಾಣ್ಮೆಯಿಂದ ಹೆಜ್ಜೆಯನ್ನಿಡಬೇಕಾಗುತ್ತದೆ. ಈಗಾಗಲೇ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಅನೇಕ ಫಲವತ್ತಾದ ಜಮೀನುಗಳನ್ನು ತೆಗೆದುಕೊಂಡಿರುವ ವಿಷಯ ನಮಗೆ ಮತ್ತು ನಿಮಗೆಲ್ಲ ಗೊತ್ತಿರುವ ವಿಷಯವಾಗಿದೆ. ಒಂದು ಲಕ್ಷ ಮೂವತ್ತಾರು ಸಾವಿರ ಎಕರೆ ಭೂಮಿಗಳನ್ನು ಈಗಾಗಲೇ ವಶಪಡಿಸಿಕೊಂಡು ನೀರಾವರಿ ಕೂಡ ಆಗಿದೆ. ಈಗ ಇರತಕ್ಕಂಥ 22 ಗ್ರಾಮಗಳಿಗೆ ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸುವ ಸಲುವಾಗಿ ನೆನ್ನೆಯಿಂದ ಇವತ್ತಿನವರೆಗೂ ಚರ್ಚೆ ನಡೆದಿದೆ. ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರು ಫಲವತ್ತಾದ ಜಮೀನುಗಳನ್ನು ವಂಶ ಪಾರಂಪರ್ಯವಾಗಿ ತಮ್ಮ ಮನೆತನದ ಕುಟುಂಬಗಳಿಗೆ ಸಲಹುವಂತಹ ಜಮೀನನ್ನು ಒಂದು ಬಾರಿ ತೆಗೆದುಕೊಂಡಾಗ ಅವರಿಗೆ ಹೆಚ್ಚು ಪ್ರಮಾಣದಲ್ಲಿ ಸರ್ಕಾರದಿಂದ ಪರಿಹಾರವನ್ನು ಕೊಡಬೇಕೆನ್ನುವುದು ಎಲ್ಲರ ಮನವಿಯಾಗಿದೆ. ಸರ್ಕಾರಗಳು ಒಂದು ಬಾರಿ ತೆಗೆದುಕೊಂಡಂತಹ ಭೂಮಿಗೆ ಬಂಗಾರದ ಬೆಲೆ ಕಟ್ಟಬೇಕೆನ್ನುವುದನ್ನು ನಾವೆಲ್ಲರೂ ಕೇಳಿದ್ದೇವೆ. ಆದರೆ ನಾವು ಕೊಡುವಂತಹ ಭೂಮಿಗೆ ಎಷ್ಟು ಬೆಲೆಯಾಗುತ್ತದೆಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಸರ್ಕಾರ ನಿಗದಿಪಡಿಸಿದ ಸಬ್–ರಿಜಿಸ್ಟ್ರಾರ್‌ರವರ ಪ್ರಕಾರ ಬೆಲೆ ಎಷ್ಟು ಬೇಕಾದರೂ ಇರಬಹುದು. ಒಂದು ಬಾರಿ ತೆಗೆದುಕೊಳ್ಳುವಂತಹ ಭೂಮಿಗೆ ಈಗಾಗಲೇ ಅಲ್ಲಿಯ ರೈತ ಬಾಂಧವರು ನಾವು ಹಳ್ಳಿಗಳನ್ನು ಬಿಟ್ಟು ಹೋಗುತ್ತಿದ್ದೇವೆ. ನಮ್ಮ ಜೀವನಕ್ಕೆ ಅನೇಕ ಅನುಕೂಲತೆಗಳನ್ನು ಮಾಡಿಕೊಡಬೇಕೆಂಬ ದೃಷ್ಟಿಯಿಂದ ಅವರು ಕೆಲಸ ಕಾರ್ಯಗಳಲ್ಲಿ ಮತ್ತು ಅನೇಕ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆದ್ದರಿಂದ ನನ್ನ ವಿನಂತಿಯೇನೆಂದರೆ, ಅಷ್ಟೊಂದು ಹತ್ತಿರವಾಗಿರುವಂತಹ ಸಂಬಂಧಗಳನ್ನು ಬಿಟ್ಟು ಬರಬೇಕಾದಂತಹ ರೈತನಿಗೆ, ನೀರಾವರಿ ಜಮೀನಿಗೆ ಎಕರೆಗೆ ಸುಮಾರು ನಲವತ್ತು ಲಕ್ಷ ರೂಪಾಯಿ ಮತ್ತು ಒಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಸಾಯದ ಜಮೀನಿಗೆ ಸುಮಾರು ಮೂವತ್ತು ಲಕ್ಷ ರೂಪಾಯಿಗಳನ್ನು ಕೊಡಬೇಕೆನ್ನುವುದು ಅವರ ನ್ಯಾಯಸಮ್ಮತವಾಗಿರುವಂತಹ ಬೇಡಿಕೆಯಾಗಿದೆ.

ಮಾನ್ಯ ಸಭಾಪತಿಯವರೆ, ತಮ್ಮ ಮೂಲಕ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಅದು ಬೆಂಗಳೂರಿನಲ್ಲಿರುವಂತಹ ವಿಚಾರ ಇರಬಹುದು, ದೊಡ್ಡ ದೊಡ್ಡ ನಗರಗಳ ವಿಚಾರ ಇರಬಹುದು. ಅಲ್ಲಿ 30X40 ಅಡಿ ಅಳತೆಯ ಸೈಟ್‌ಗಳಿಗೆ ಸರ್ಕಾರದವರೆ ಹತ್ತರಿಂದ ಹನ್ನೆರಡು ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಒಂದು ಗುಂಟೆ, ಒಂದು ಆಣೆಗೆ ಹನ್ನೆರಡರಿಂದ ಹದಿನೈದು ಲಕ್ಷ ರೂಪಾಯಿಗಳಿಗೆ ಸರ್ಕಾರದವರೆ ತೆಗೆದುಕೊಳ್ಳಬೇಕೆನ್ನುವಂತಹ ವಿಚಾರವನ್ನು ಈ ಸದನಕ್ಕೆ ಕೊಡುತ್ತಿದ್ದೇನೆ. ಗೃಹವಸತಿಗಳನ್ನು ತೆಗೆದುಕೊಳ್ಳಬೇಕೆನ್ನುವಂತಹ ವಿಚಾರ ತಮಗೆಲ್ಲ ಗೊತ್ತಿದೆ. 30X40 ಸೈಟುಗಳಿಗೆ ಹತ್ತರಿಂದ ಹದಿನೈದು ಲಕ್ಷ ರೂಪಾಯಿಗಳನ್ನು ನಿಗದಿಪಡಿಸುವಂತಹದ್ದು, ಆದರೆ ಹಳ್ಳಿಯಲ್ಲಿರುವ ಒಂದು ಎಕರೆಗೆ ಮೂವತ್ತರಿಂದ ನಲವತ್ತು ಲಕ್ಷ ರೂಪಾಯಿಗಳನ್ನು ಕೊಡುವುದರಲ್ಲಿ ಏನು ತಪ್ಪಿದೆ ಎನ್ನುವುದು ನನ್ನ ಪ್ರಶ್ನೆ. ಈ ವಿಚಾರವಾಗಿ ಒಂದು ಬಾರಿ ಬಿಟ್ಟು ಹೋಗುವಂತಹ ರೈತನಿಗಿರಬಹುದು. ಅವನಿಗೆ ಮೂಲಭೂತ ಸೌಕರ್ಯಗಳ ಜೊತೆಗೆ, ಅವನು ವಾಸ ಮಾಡುವಂತಹ ಎಲ್ಲ ಮೂಲಭೂತ ಸೌಕರ್ಯಗಳನ್ನು ಕೊಡಬೇಕು. ರಸ್ತೆಗಳನ್ನು ಕೊಡಬೇಕು. ಮನೆ ಕೊಡಬೇಕು. ವಿದ್ಯುತ್ ಅನ್ನು ಒದಗಿಸಬೇಕು. ಶಾಲೆ-ಕಾಲೇಜುಗಳನ್ನು ನಿರ್ಮಾಣ ಮಾಡಿಕೊಡಬೇಕು. ಮಾನ್ಯ ಸಭಾಪತಿಯವರೆ, ನಿಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. 1962ನೇ ಇಸವಿಯ ನಂತರ ಬಂದಂತಹ ಕುಣಿಮೆಳ್ಳಣ್ಣಿ ಎಂಬ ಗ್ರಾಮ. ಆ ಗ್ರಾಮದ ಒಂದು ಬದಿಯಲ್ಲಿ ಹತ್ತರಿಂದ ಹನ್ನೆರಡು ಮನೆಗಳಿವೆ. ಇನ್ನೊಂದು ಬದಿಯಲ್ಲಿ ಹತ್ತರಿಂದ ಹನ್ನೆರಡು ಮನೆಗಳಿವೆ. ನಡುವಿನಲ್ಲಿ ಹೈವೇ ರಸ್ತೆಯಿದೆ. ಒಂದು ಕಡೆ ಗ್ರಾಮ ಪಂಚಾಯಿತಿ, ಒಂದು ಕಡೆ ಕನ್ನಡ ಶಾಲೆ, ಒಂದು ಕಡೆ ಹೈಸ್ಕೂಲ್ ಇದೆ. ನೀವು ಆ ಗ್ರಾಮದ ಅಂಕಿ-ಅಂಶಗಳನ್ನು ತೆಗೆದುಕೊಂಡರೆ ವರ್ಷದೊಳಗೆ ಎರಡು ಅನಾಹುತಗಳು ಸಂಭವಿಸುತ್ತದೆ. ಆ ಊರಿನ ಶಾಲಾ ಬಾಲಕರಿರಬಹುದು. ಆ ಊರಿನ ಹಿರಿಯರಿರಬಹುದು ಅಥವಾ ಆ ಊರಿಗೆ ಬಂದಿರುವಂತಹ ಸಂಬಂಧಿಕರಿರಬಹುದು. ಊರಿನ ರಸ್ತೆಯನ್ನು ದಾಟುವಾಗ ಅಪಘಾತದಲ್ಲಿ ಸತ್ತು ಹೋಗುತ್ತಿದ್ದಾರೆ. ಅಂಕಿ-ಅಂಶಗಳ ಪ್ರಕಾರ ಅಲ್ಲಿ ಕಡಿಮೆ ಅಂದರೆ ವರ್ಷದಲ್ಲಿ ಎರಡು ಅನಾಹುತಗಳು ಆಗುತ್ತಿವೆ. ನೂರಕ್ಕೆ ನೂರು ಅದೇ ಊರಿನ ಜನರು ಅಥವಾ ಬೀಗರು ಸತ್ತು ಹೋಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಅವೈಜ್ಞಾನಿಕವಾಗಿ ಎಲ್ಲೋ ಒಂದು ಕಡೆ ನಿರ್ಣಯವನ್ನು ತೆಗೆದುಕೊಂಡಾಗ ಈ ರೀತಿಯ ಅನಾಹುತವಾಗುವುದು. ಮುಂದಿನ ಪೀಳಿಗೆಗೆ ತೊಂದರೆಯನ್ನು ಕೊಡುವಂತಹ ಕೆಲಸ ಕಾರ್ಯಗಳು ಇವತ್ತಿನ ದಿವಸ ಆಗುತ್ತಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

620/8-6-2017/1-50/bkp-gr

**ಶ್ರೀ ಸೋಮಣ್ಣ ಮ. ಬೇವಿಮರದ(ಮುಂದು. . )**

ಆ ನಿಟ್ಟಿನಲ್ಲಿ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ ನೀವು ಅದನ್ನು ಅವೈಜ್ಞಾನಿಕವಾಗಿ ಗುರುತಿಸುವುದನ್ನು ಬಿಟ್ಟು ವೈಜ್ಞಾನಿಕವಾಗಿ ಗುರುತಿಸಿ, ಅಲ್ಲಿ ಸ್ಥಳಾಂತರಗೊಂಡವರಿಗೆ ಮೂಲಭೂತ ಸೌಲಭ್ಯಗಳನ್ನು ಕೊಟ್ಟು, ಅವರಿಗೆ ಸಮಾಧಾನವಾಗುವ ರೀತಿಯಲ್ಲಿ ಬೆಲೆಯನ್ನು ಕೊಟ್ಟು ಅವರನ್ನು ಸಂತೋಷದಿಂದ ಮತ್ತೊಂದು ಹಳ್ಳಿಗೆ ಸ್ಥಳಾಂತರ ಮಾಡಬೇಕೆಂದು ಸನ್ಮಾನ್ಯ ಸಭಾಪತಿಯವರ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಸರ್ಕಾರ ಮನಸ್ಸು ಮಾಡಿದರೆ ಅವರಿಗೆ ಬಹಳಷ್ಟು ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ನಾನು ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಹಾವೇರಿ ಜಿಲ್ಲೆಯಲ್ಲಿ ಬಸರತ್ತಿ ಗ್ರಾಮದ ಹತ್ತಿರ ಮರಡೂರು ಎನ್ನುವ ಒಂದು ಊರು ಇದೆ. ಹಿಂದಿನ ಸರ್ಕಾರಗಳು ನಿಮಗೆ ಮನೆಯನ್ನು ತಯಾರು ಮಾಡಿದರು. ಅಲ್ಲಿ ಮೂಲಭೂತ ಸೌಕರ್ಯಗಳನ್ನು ತಯಾರು ಮಾಡಿದರು. ಭಾರತೀಯ ಜನತಾ ಪಕ್ಷದ ಸರ್ಕಾರ ಇದ್ದಂತಹ ಸಮಯದಲ್ಲಿ ಅಲ್ಲಿ ವಸತಿಗೆ ಯೋಗ್ಯವಾದಂತಹ ಮೂಲಭೂತ ಸೌಲಭ್ಯಗಳನ್ನು ಕೊಟ್ಟು ಸ್ಕೂಲು, ನೀರು, ಲೈಟ್ ಎಲ್ಲವನ್ನು ಮಾಡಿ ವಿಸ್ತಾರವಾದ ಜಾಗವನ್ನು ಕೊಟ್ಟು ಹಳ್ಳಿಗಳನ್ನು ಸ್ಥಳಾಂತರ ಮಾಡಿದರು. ಶ್ರೀಮಾನ್ ಲಮಾಣಿಯವರು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ. ಅವರು ಒಂದು ಬಾರಿ ಅಲ್ಲ, ಅನೇಕ ಬಾರಿ ಹಳ್ಳಿಗೆ ಹೋಗಿದ್ದಾರೆ. ಅದನ್ನು ಸ್ವಲ್ಪಮಟ್ಟಿಗೆ ಮಾದರಿಯನ್ನಾಗಿಟ್ಟುಕೊಂಡರೆ ತಪ್ಪೇನೂ ಇಲ್ಲ. ಅದಕ್ಕಾಗಿ ಅಂತಹ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಬಯಸುತ್ತೇನೆ. ನೀವೆಲ್ಲರೂ ಮಾತನಾಡುವಾಗ ಒಂದು ಬಾರಿ ಹೇಳಿದ್ದೀರಿ, ಅದೇನೆಂದರೆ ಈಗಿನ ಮುಖ್ಯಮಂತ್ರಿಗಳು ಹಿಂದೆ ಅವರು ಬೆಂಗಳೂರಿನಿಂದ ಬಳ್ಳಾರಿಗೆ ಕಾಲು ನಡಿಗೆಯಲ್ಲಿ ಹೋದರು. ಕಾಲು ನಡೆಗೆಯಲ್ಲಿ ಹೋದಂತಹ ಸಂದರ್ಭದಲ್ಲಿ ಕೃಷ್ಣ ಮತ್ತು ಕಾವೇರಿ ಈ ಎರಡು ಈ ನಾಡಿನ ಕಣ್ಣುಗಳು. ಅದಕ್ಕೆ ನಾವು ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳನ್ನಿಟ್ಟು ಅಭಿವೃದ್ಧಿ ಕೆಲಸಗಳಲ್ಲಿ ತೊಡಗುತ್ತೇವೆಂದು ಹೇಳಿದ್ದರು. 42 ಸಾವಿರ ಕೋಟಿ ರೂಪಾಯಿಗಳಲ್ಲಿ 31–32 ಸಾವಿರ ಕೋಟಿ ರೂಪಾಯಿಗಳನ್ನು ನೀರಾವರಿಗೋಸ್ಕರ ಖರ್ಚು ಮಾಡಿದ್ದೇವೆಂದು ಕಳೆದ ಅಧಿವೇಶನದ ಸಮಯದಲ್ಲಿ ಕೂಡ ಹೇಳಿದ್ದರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿರುವಂತಹ ಅನೇಕ ಅಭಿವೃದ್ಧಿ ಕೆಲಸಕ್ಕೆ ಅಂದರೆ ನೀರಾವರಿ ಅಭಿವೃದ್ಧಿ ಕೆಲಸಕ್ಕೆ, ಕಾಲುವೆಗಳಿಗೆ ನೀರಾವರಿಯಲ್ಲಿ ಭೂಮಿಯನ್ನು ವಶಪಡಿಸಿಕೊಂಡಿರುವಂತಹ ಭೂಮಿಯ ಮಾಲೀಕರಿಗೆ ಮೇಲಾಗಿ ಕುಡಿಯುವ ನೀರಿಗೆ ನಾಲ್ಕು CADA ಗಳಿಗೆ, ಅದರ ಜೊತೆಗೆ ಸವಳು-ಜವಳು ಮಾಡತಕ್ಕಂತಹದ್ದರಲ್ಲಿ ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ, ಇವತ್ತಿನವರೆಗೂ ಆ ಕೆಲಸ ಕಾರ್ಯಗಳು ಆಗಿಲ್ಲ. ಆದರೆ, ಆಣೆ ಮಾಡಿದ್ದು ಏನು? ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳನ್ನು ನೀರಾವರಿಗೆ ಮಾತ್ರ ಖರ್ಚು ಮಾಡುತ್ತೇವೆಂದು ಹೇಳಿದ್ದರು.

ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ ಆಣೆ ಮಾಡಿದ ಪ್ರಕಾರ 12ನೇ ಶತಮಾನದ ಬಸವಣ್ಣನವರ ಮೇಲೆ ಆಣೆ ಮಾಡಿ ಹೇಳಿದ ಪ್ರಕಾರ ಕೃಷ್ಣ ಮತ್ತು ಕಾವೇರಿಗೆ ನೀವು ಅನ್ಯಾಯವನ್ನು ಮಾಡಬಾರದು. ಅಲ್ಲಿ ಇದ್ದಂತಹ ರೈತರಿಗೆ ಅನ್ಯಾಯವನ್ನು ಮಾಡಬಾರದು. ಪುನರ್ ವಸತಿಯನ್ನು ನಿರ್ಮಾಣ ಮಾಡುತ್ತಂತಹ ಜನರಿಗೆ ಅಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ವಿನಂತಿಯನ್ನು ಮಾಡಿ, ಅಲ್ಲಿಯ ಜನರು ಸಂತೋಷದಿಂದ ಆ ಹಳ್ಳಿಯಿಂದ ಬಿಟ್ಟು ಇನ್ನೊಂದು ಹಳ್ಳಿಗೆ ಹೋಗುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಿಕೊಡಬೇಕು. ಬಡವರ ಕೆಲಸಗಳು ಅಲ್ಲಿ ಆಗಬೇಕೆಂದು ಸರ್ಕಾರದಲ್ಲಿ ವಿನಂತಿಯನ್ನು ಮಾಡುತ್ತೇನೆ. 1962 ರ ನೆನಪನ್ನು ಮತ್ತೊಮ್ಮೆ ಆ ಜನರು ತಂದು ಕೊಳ್ಳಬಾರದು ಎನ್ನುವ ವಿನಂತಿಯನ್ನು ನಾನು ಮಾಡಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸ್ವಾಭಾವಿಕವಾಗಿ 2 ಗಂಟೆಗೆ ಸದನವನ್ನು ಮುಂದೂಡುತ್ತಿದ್ದೀರಿ. ಹಾಗಾಗಿ, ಎಲ್ಲಾ ಶಾಸಕರುಗಳು ಸದನವನ್ನು ಮುಂದೂಡಲಾಗಿದೆ ಎಂದು ಹೇಳಿ ಹೋಗಿದ್ದಾರೆ. ಆದ್ದರಿಂದ, ತಾವು ಈಗ ಸದನವನ್ನು ಮುಂದೂಡಿ, 3 ಗಂಟೆಗೆ ಸೇರಿ ಅರ್ಧ ಗಂಟೆ ಕಾಲ ಸಚಿವರು ಉತ್ತರ ಕೊಡುವುದು, ಮತ್ತೊಂದನ್ನು ಮಾಡಬಹುದು. ಆದರೆ, ಇದಕ್ಕಿದ್ದಂತೆ ನೀವು ಎರಡೂವರೆ ಗಂಟೆಯವರೆಗೆ ಸದನವನ್ನು ನಡೆಸುತ್ತಿದ್ದೇವೆಂದು ಹೇಳುವುದು ಬೇಡ. ಈಗಾಗಲೇ ಕೆಲವು ಶಾಸಕರುಗಳು ಗೊತ್ತಿಲ್ಲದೆ ಹೋಗಿದ್ದಾರೆ. ಅದಕ್ಕೋಸ್ಕರ ತಮ್ಮಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ ಈಗ ಸದನವನ್ನು ಮುಂದೂಡಿ 3 ಗಂಟೆಗೆ ಮತ್ತೆ ಸದನವನ್ನು ಮುಂದುವರಿಸುವುದು ಸೂಕ್ತ.

**ಉಪ ಸಭಾಪತಿಯವರು:** ಇನ್ನು ಯಾರಾದರೂ ಈ ವಿಷಯದ ಬಗ್ಗೆ ಮಾತಾಡುವವರಿದ್ದರೆ ಹೇಳಿ. ಶ್ರೀಯುತ ಬಸವರಾಜ ಪಾಟೀಲ್ ಇಟಗಿ ಅವರು ಮಾತನಾಡಿ ಮುಗಿಸಿದರೆ ಒಳ್ಳೆಯದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ವಿರೋಧ ಪಕ್ಷದ ನಾಯಕರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರಿ ಮುಖ್ಯ ಸಚೇತಕರು):-** ಮದ್ಯಾಹ್ನಕ್ಕೆ ಮುಂದೂಡುವುದು ಸೂಕ್ತ.

**ಉಪ ಸಭಾಪತಿಯವರು:-** ನಿಯಮ 330 ಬಗ್ಗೆ ಊಟದ ವಿರಾಮದ ನಂತರ ತೆಗೆದುಕೊಳ್ಳಲಾಗುತ್ತದೆ. ಮಾನ್ಯ ಸಚಿವರು ಉತ್ತರವನ್ನು ನೀಡುತ್ತಾರೆ.

**(621+622) 08.06.2017 MSS-MD 3.15+3.20**

**(ಭೋಜನ ವಿರಾಮಕ್ಕಾಗಿ 1 ಗಂಟೆ 55 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 27 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಉಪ ಸಭಾಪತಿಯವರಾದ ಶ್ರೀ ಮರಿತಿಬ್ಬೇಗೌಡರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

## 6. ನಿಯಮ 330ರ ಮೇರೆಗೆ ಮುಂದುವರೆದ ಚರ್ಚೆ

### ವಿಷಯ: ಆಲಮಟ್ಟಿ ಕೃಷ್ಣಾ ಮೇಲ್ದಂಡೆ ಯೋಜನೆ ಕುರಿತು

---

**ಶ್ರೀಮತಿ ತಾರಾ ಅನೂರಾಧ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಮೊದಲನೆಯದಾಗಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ, ಈ ವಿಷಯದ ಬಗ್ಗೆ ಈಗಾಗಲೇ ಚರ್ಚೆಯನ್ನು ಪ್ರಾರಂಭ ಮಾಡಿದ್ದೇನೆ. ಮುಂದುವರೆಸುತ್ತಾ ಹೇಳುವುದೇನೆಂದರೆ, ಹಿನ್ನೀರಿನಲ್ಲಿ ಮುಳುಗಡೆಯಾಗಿರುವಂತಹ ಜಮೀನುಗಳಿಗೆ ಏಕ ರೂಪವಾದಂತಹ ಸಹಾಯಧನವನ್ನು ಒದಗಿಸುವುದರಲ್ಲಿ ನ್ಯಾಯ ಕಲ್ಪಿಸಬೇಕೆಂದು ಈಗಾಗಲೇ ಹೇಳಿದ್ದೇನೆ. ನೇರವಾಗಿ ಸಂತ್ರಸ್ತರಿಗೆ ಮತ್ತು ಪರೋಕ್ಷವಾಗಿ ಅನಾನುಕೂಲವಾಗುವಂತಹ ಸಂತ್ರಸ್ತರಿಗೂ ಕೂಡ ನೀವು ಸಹಾಯಧನವನ್ನು ಹೆಚ್ಚಿಸುವುದರಲ್ಲಿ ಅವರಿಗೆ ಸರ್ಕಾರದಿಂದ ಒದಗಿಸುವಂತಹ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕೆಂದು ಹೇಳಿದ್ದೆ. ಅದಕ್ಕೆ ಕಾರಣವನ್ನು ಕೂಡ ಹೇಳಿದ್ದೆ. ಏಕೆಂದರೆ ನೀರು ಎಲ್ಲಿಯವರೆಗೆ ಆವರಿಸುತ್ತದೆಯೋ ಅಲ್ಲಿಯವರೆಗೆ ಮಾತ್ರ ಸಂತ್ರಸ್ತರು ಎಂದು ಭಾವಿಸುತ್ತೇವೆ. ಆದರೆ ನೀರಿನ ಪಕ್ಕದಲ್ಲಿ ಮನೆಯನ್ನು ಕಟ್ಟಿಕೊಳ್ಳುವುದಕ್ಕಾಗಲಿ, ಕೃಷಿಯನ್ನು ಮಾಡುವುದಕ್ಕಾಗಲಿ ಸಾಧ್ಯವಾಗುವುದಿಲ್ಲ. ಮುಳುಗಡೆಯಾದ ಎರಡು ಕಿಲೋ ಮೀಟರ್ ನಂತರವೇ ಹಳ್ಳಿಯನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುವುದು. ಆದುದರಿಂದ ಅಲ್ಲಿಯವರೆಗೂ ಸಂತ್ರಸ್ಥರು ಎಂದು ಭಾವಿಸಿ ಪರಿಹಾರವನ್ನು ಕೊಡಬೇಕೆಂದು ಹೇಳಿದ್ದೆ. ಅಷ್ಟೇ ಅಲ್ಲದೇ ಸ್ವಂತ ಮನೆಯಿಲ್ಲದ, ಒಂದು ಇಂಚು ಕೂಡ ಜಮೀನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲದ, ಅಲ್ಲಿಯೇ ಹುಟ್ಟಿ ಬೆಳೆದ ಕೃಷಿ ಕಾರ್ಮಿಕರ ಜೊತೆಗೆ, ಗುಡಿ ಕಾರ್ಮಿಕರಾದ ಕುಂಬಾರರು, ಕಂಬಾರರು, ದೀನದಲಿತರುಗಳನ್ನು ಸಂತ್ರಸ್ತರು ಎಂದು ಭಾವಿಸಿ ಸಹಾಯಧನವನ್ನು ಮತ್ತೆ ಪರಿಷ್ಕರಣೆ ಮಾಡುವುದರಲ್ಲಿ ದಯೆ ತೋರಿಸಬೇಕೆಂದು ಹೇಳಿದ್ದೆ. ಮುಂದುವರೆದು ಬದುಕನ್ನು ಕಟ್ಟಿಕೊಳ್ಳಲು ಸರ್ಕಾರ ಸಹಾಯ ಮಾಡಬೇಕೆಂದು ಹೇಳಿದ್ದೆ. ಸಂತ್ರಸ್ತರಿಗೆ ಇರುವ ಗಂಡು ಮಕ್ಕಳಾಗಲಿ, ಹೆಣ್ಣು ಮಕ್ಕಳು ಆಗಲಿ ಅವರು ವಿದ್ಯಾವಂತರಾಗಿರುತ್ತಾರೆ. ಅವರಿಗೆ ಸರಿಯಾದ ಉದ್ಯೋಗವನ್ನು ಮೀಸಲಾತಿಯ ಮುಖಾಂತರ ಕಲ್ಪಿಸಿ ಕೆಲಸವನ್ನು ಕೊಡುವುದಕ್ಕೆ ಮತ್ತು ಸರ್ಕಾರದ ಕಡೆಯಿಂದ ಸಹಾಯಧನ ಒದಗಿಸುವ ಸರಿಯಾದ ಕೆಲಸವನ್ನು ಮಾಡಬೇಕು. ಸಂಕಷ್ಟದಲ್ಲಿ ಎಲ್ಲರೂ ಬರುತ್ತಾರೆ. ಅವರಿಗೆ ಸಹಾಯ ಹಸ್ತ ನೀಡುವುದು ನಿಮ್ಮ ಕರ್ತವ್ಯ. ತವರು ಮನೆಯ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಕೂಡ ಪಾಲು ಇದೆ ಎನ್ನುವುದು ಕಾನೂನು ಇದೆ. ಆದುದರಿಂದ ಹೆಣ್ಣು ಮಕ್ಕಳನ್ನು ಕೂಡ ಪರಿಗಣಿಸಿ ಭೂ ಸಂತ್ರಸ್ತರಿಗೆ ಕೊಡುವಂತಹ ಹಣದಲ್ಲಿ ಹೆಣ್ಣು ಮಕ್ಕಳ ಪಾಲಿನ ಹಣವನ್ನು ಅವರಿಗೂ ತಲುಪಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. 1980ನೇ ಇಸವಿಯಲ್ಲಿ 30–35 ವರ್ಷಗಳ ಹಿಂದೆ ಒಂದು ಎಕರೆಗೆ 25,000 ರೂಪಾಯಿಗಳ ಭೂ ಪರಿಹಾರದ ಧನ ಎಂದು ಕೊಡುತ್ತಿದ್ದರು. ಅದು ಮುಂದುವರೆದು 2017ರಲ್ಲಿಯೂ ಕೂಡ ಒಂದು ಎಕರೆಗೆ 25,000 ರೂಪಾಯಿಗಳ ಪರಿಹಾರದ ಧನವನ್ನು ಕೊಡುವುದು ಜಾರಿಯಲ್ಲಿಡುವುದು ಯಾವ ನ್ಯಾಯ ಎನ್ನುವುದು ಪ್ರಶ್ನೆ ವಾದ. ಕೊನೆಯದಾಗಿ ಸರ್ಕಾರ ಸಮಗ್ರವಾಗಿ ಚಿಂತನೆಯನ್ನು ಮಾಡಿ, ಈ ದೇಶದ ಬೃಹತ್ ಯೋಜನೆಗೆ ತ್ಯಾಗ ಮಾಡಿರುವಂತಹ ಆ ಜನರಿಗೆ ಮಾನವೀಯತೆಯ ಹಿನ್ನೆಲೆಯಲ್ಲಿ ಭೂಸ್ವಾಧೀನ ಮತ್ತು ಪುನರ್ ವಸತಿಗೆ ಧಾರಳತನವನ್ನು ತೋರಿಸಬೇಕೆಂದು ಸರ್ಕಾರವನ್ನು ಈ ನಿಟ್ಟಿನಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎಂ.ಬಿ.ಪಾಟೀಲ್(ಜಲ ಸಂಪನ್ಮೂಲ ಸಚಿವರು):–** ಮಾನ್ಯ ಸಭಾಪತಿಯವರೆ, ಕೃಷ್ಣ ಮತ್ತು ಕಾವೇರಿ ಈ ಎರಡೂ ನದಿಗಳು ನಮ್ಮ ರಾಜ್ಯದ ಜೀವನದಿಗಳು. ಕೃಷ್ಣ ಬೇಸಿನ್ ಸುಮಾರು 60 ಭಾಗ ಈ ರಾಜ್ಯದ ಕಣಿವೆಯಾಗಿದೆ. ಇನ್ನು ಉಳಿದಿರುವಂಥದ್ದು ಕಾವೇರಿ ಬೇಸಿನ್ ಪ್ರಮುಖವಾಗಿದೆ. ಕಾವೇರಿ ಇರಬಹುದು ಕೃಷ್ಣ ಇರಬಹುದು ಇದೆಲ್ಲಾ ನೀರಿನ ಹಂಚಿಕೆಯ ಮೇಲೆಯೇ ಅವಲಂಬಿತವಾಗಿರುವಂಥದ್ದು. ಮೊದಲು ಕಾವೇರಿ ನ್ಯಾಯಾಧೀಕರಣವಾಯಿತು. ಅಲ್ಲಿ ನಮಗೆ ನೀರಿನ ಹಂಚಿಕೆಯಾಯಿತು. ಅಲ್ಲಿ ನ್ಯಾಯಾಧೀಕರಣ ನಿರ್ಣಯ ಮಾಡಿದೆ. ಆದರೆ ಇಲ್ಲಿಯವರೆಗೆ ಅಲ್ಲಿ clarification ಆಗದೇ ಸುಪ್ರೀಂ ಕೋರ್ಟ್‌ನಲ್ಲಿ SLP (Special Leave Petition) ಯನ್ನು ಹಾಕಲಾಗಿದೆ. ಇಲ್ಲಿ ವಿಶೇಷವಾಗಿ ಕೃಷ್ಣ ನ್ಯಾಯಾಧೀಕರಣ 1 ಮತ್ತು 2 ಬಚಾವತ್ ಮತ್ತು Justice Brijesh Kumar ಆಯೋಗದಲ್ಲಿ ಏನು ಅಲಮಟ್ಟಿ ಡ್ಯಾಂ ಅನ್ನು ಕಟ್ಟಿ ಇವತ್ತಿನ ದಿವಸ ನೀರಾವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂತಹ ಸಂದರ್ಭದಲ್ಲಿ ಮೊದಲನೆಯ ಹಂತದಲ್ಲಿ ಲಕ್ಷಾಂತರ ಎಕರೆ ಭೂಮಿಯನ್ನು ನಾವು ಕಳೆದುಕೊಂಡಿರುವಂಥದ್ದು. ಈಗ ಕೃಷ್ಣ Tribunal Award ಬಂತು, ನಮ್ಮ ಬ್ರಿಜೇಶ್ ಕುಮಾರ್ ತೀರ್ಪು ಬಂತು. ಈ ತೀರ್ಪಿನಲ್ಲಿ ಕರ್ನಾಟಕ ರಾಜ್ಯ 278 ಟಿಎಂಸಿ ನೀರನ್ನು ಕೇಳಿತ್ತು. 73 ಟಿಎಂಸಿ ನೀರನ್ನು ಇವತ್ತಿನ ದಿವಸ ನಮಗೆ allocation ಮಾಡಿದ್ದಾರೆ. ಒಂದು ಸ್ಪಷ್ಟೀಕರಣ ಅಪರ್ ಭದ್ರಾ, ಅಪರ್ ತುಂಗಾ ಮತ್ತು ಸಿಂಗಟಾಲೂರಿನಲ್ಲಿ 4 ಟಿಎಂಸಿ ನೀರು ಕಡಿಮೆಯಾಗಿ 169 ಟಿಎಂಸಿ ನೀರು ಬರುತ್ತದೆ. ಇಲ್ಲಿ ಪ್ರಮುಖವಾಗಿ ಚರ್ಚೆ ಮಾಡಿರುವಂಥದ್ದು. ಆಲಮಟ್ಟಿ ಅಣೆಕಟ್ಟನ್ನು 519 ಮೀಟರ್‌ನಿಂದ 524.26 ಮೀಟರ್‌ಗೆ ಎತ್ತರಿಸಿದಾಗ ಅಲ್ಲಿ ಸುಮಾರು 75,000 ಎಕರೆ ಮುಳುಗಡೆಯಾಗುತ್ತದೆ ಮತ್ತು ಅಲ್ಲಿ ಒಟ್ಟಾರೆ 1,34,000 ಎಕರೆ ಭೂಮಿ ಮುಳುಗಡೆಯಾಗುವಂಥದ್ದು 75,563 ಎಕರೆ ಭೂಮಿ ಮತ್ತು ನಮ್ಮ ಮೂಲಭೂತ ಸೌಕರ್ಯವಾದ head works and canal network 51,837 ಎಕರೆ ಭೂಮಿ. ಏನು ಪುನರ್ ವಸತಿ ಕೇಂದ್ರಗಳನ್ನು ಮಾಡುತ್ತೇವೆ. ಅದಕ್ಕೆ 4,827 ಎಕರೆ ಭೂಮಿ ಬೇಕಾಗುತ್ತದೆ. ಬಾಗಲಕೋಟೆ ಉಪನಗರಕ್ಕೆ 1,640 ಎಕರೆ ಭೂಮಿ. ಕಟ್ಟಡಗಳು ಗ್ರಾಮೀಣ ಮಟ್ಟದಲ್ಲಿ 24,163 ಎಕರೆ ಭೂಮಿ ಮತ್ತು ನಗರ ಪ್ರದೇಶದಲ್ಲಿ 2,299 ಎಕರೆ ಭೂಮಿ ಬೇಕಾಗುತ್ತದೆ. ಈಗಾಗಲೇ ಸುಮಾರು 75,000 ಎಕರೆ ಭೂಮಿಯಲ್ಲಿ 43,000 ಎಕರೆ 11(1) ನೋಟಿಫಿಕೇಷನ್ ಆಗಿದೆ. ಕೆನಾಲ್‌ನಲ್ಲಿ ಸುಮಾರು 55,832 ಎಕರೆಯಲ್ಲಿ ಸುಮಾರು 14,320 ಎಕರೆ ಭೂಮಿ ಎಲ್-1ನಲ್ಲಿ ನೋಟಿಫಿಕೇಷನ್ ಆಗಿದೆ. ಆರ್‌ಸಿ ಯಲ್ಲಿ 4,877 ಎಕರೆ ಭೂಮಿಯಲ್ಲಿ 3,743 ಎಕರೆ ಭೂಮಿ ಎಲ್-1 ನಲ್ಲಿ ನೋಟಿಫಿಕೇಷನ್ ಆಗಿರುವಂಥದ್ದು. ಬಾಗಲಕೋಟೆ ನಗರಕ್ಕೆ 1640 ಎಕರೆ ಭೂಮಿಯಲ್ಲಿ 1640 ಎಕರೆ ಕೂಡ ನೋಟಿಫಿಕೇಷನ್ ಆಗಿದೆ. ಆಮೇಲೆ ಗ್ರಾಮೀಣ ಪ್ರದೇಶದಲ್ಲಿ ಕಟ್ಟಡ ಸಲುವಾಗಿ 24,263 ಎಕರೆಯಲ್ಲಿ 11,214 ಎಕರೆ ಭೂಮಿ ಎಲ್-1 ನಲ್ಲಿ ನೋಟಿಫಿಕೇಷನ್ ಅಗಿದೆ. ನಗರ ಪ್ರದೇಶದಲ್ಲಿ 2,299 ಎಕರೆಯಲ್ಲಿ ಎಲ್ಲಾ 2,299 ಎಕರೆ ಎಲ್-1 ನಲ್ಲಿ ನೋಟಿಪೀಕೇಷನ್ ಅಗಿದೆ. ಈ ದೇಶದಲ್ಲಿಯೇ ಇದು ಒಂದು ದೊಡ್ಡದಾದಂತಹ ಯೋಜನೆ. ಏನು ಆಲಮಟ್ಟಿ ಅಣೆಕಟ್ಟನ್ನು 519 ಮೀಟರ್‌ನಿಂದ 524.26 ಮೀಟರ್‌ಗೆ ಎತ್ತರಿಸುತ್ತೇವೆ. ಇದರಲ್ಲಿ 1,34,000 ಎಕರೆ ಭೂಮಿಗಿಂತಲೂ ಹೆಚ್ಚು ಭೂಮಿ ಮುಳುಗಡೆಯಾಗುತ್ತದೆ ಆದ್ದರಿಂದ ಪುನರ್ವಸತಿ, ಕೆನಾಲ್ ವರ್ಕ್ಸ್‌ಗೆ ಮತ್ತು ಮೂಲಭೂತ ಸೌಕರ್ಯಗಳನ್ನು ಮಾಡುವುದಕ್ಕೆ ಹೆಚ್ಚು ಹಣ ಬೇಕಾಗುತ್ತದೆ. ಬಹುಶಃ ಈ ದೇಶದಲ್ಲಿ ಪ್ರಸ್ತುತ ವರ್ಷದಲ್ಲಿ ಇದೊಂದು ಬಹಳ ದೊಡ್ಡ ಯೋಜನೆಯಾಗಿದೆ. ಈ ಚರ್ಚೆಯ ಪ್ರಾರಂಭದಲ್ಲಿ ಗೌರವಾನ್ವಿತ ಸದಸ್ಯರಾದ ಶ್ರೀ ನಿರಾಣಿ ಹಣಮಂತ ರುದ್ರಪ್ಪನವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ನಂತರ ಶ್ರೀ ಬಸನಗೌಡ ಪಾಟೀಲ್ ಯತ್ನಾಳ್‌ನವರು ಕೂಡ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಶ್ರೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟ ಶ್ರೀನಿವಾಸ ಪೂಜಾರಿಯವರು ಬೇರೆ ವಿಷಯದ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ವಿರೋದ ಪಕ್ಷದ ನಾಯಕರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ಮಧ್ಯೆ ಮಧ್ಯೆ ಮಾತನಾಡಿದ್ದಾರೆ. ನಮ್ಮ ತಾರಾಅನೂರಾಧರವರು ಮಾತನಾಡಿದ್ದಾರೆ. ಶ್ರೀ ವಿ.ಸೋಮಣ್ಣನವರು ಮಾತನಾಡಿದ್ದಾರೆ ಹಾಗು ಶ್ರೀ ವಿ.ಎಸ್.ಉಗ್ರಪ್ಪನವರು ಚರ್ಚೆಯ ಮಧ್ಯೆ ಮಧ್ಯೆದಲ್ಲಿ ಮಾತನಾಡಿದ್ದಾರೆ. ಶ್ರೀ ಡಿ.ಎಸ್.ವೀರಯ್ಯನವರು ಕೂಡ ಮಧ್ಯೆದಲ್ಲಿ ಮಾತನಾಡಿದ್ದಾರೆ. ಎಲ್ಲಾ ಗೌರವಾನ್ವಿತ ಸದಸ್ಯರುಗಳು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಾನು ಕೂಡ ಅದೇ ಭಾಗದಿಂದ ಬಂದಿರತಕ್ಕಂಥವನು. ಆಲಮಟ್ಟಿ ಅಣೆಕಟ್ಟನ್ನು ನಮ್ಮ ಯತ್ನಾಳ್‌ರವರು ಹೇಳಿದ ಹಾಗೆ ಏನು ಕಟ್ಟಿದ್ದೇವೆ. ವಿಜಯಪುರಕ್ಕೆ ಮೂಲಭೂತವಾಗಿ ಕೃಷ್ಣ ನ್ಯಾಯಾಧೀಕರಣ–1 ರಲ್ಲಿ ಏನೂ ಸಹಾಯವಾಗಲಿಲ್ಲ. ಕೇವಲ 30,000 ಹೆಕ್ಟೇರ್ ಅಂದರೆ ಸುಮಾರು 70,000 ಎಕರೆಗೆ ಮಾತ್ರ ಅನುಕೂಲವಾಯಿತು. ಈಗ ನ್ಯಾಯಾಧೀಕರಣ ಎರಡು ಏನು ಶ್ರೀ ಬ್ರಿಜೇಶ್ ಕುಮಾರ್‌ರವರ ನ್ಯಾಯಾಧೀಕರಣದಲ್ಲಿ ಸುಮಾರು 86 ಟಿಎಂಸಿ ನೀರು ನಮ್ಮ ಕ್ಷೇತ್ರ ಮತ್ತು ಶ್ರೀ ಬಸನಗೌಡ ಪಾಟೀಲ್ ಯತ್ನಾಳ್‌ರವರ ಜಿಲ್ಲೆಗೆ ನೀರು ಬರುವಂಥದ್ದು ಮತ್ತು ಭೂಮಿಯನ್ನು ಕಳೆದುಕೊಳ್ಳುವಂಥದ್ದು ವಿಶೇಷವಾಗಿ ಬೀಳಗಿ, ಜಮಖಂಡಿ ನನ್ನ ಮತ ಕ್ಷೇತ್ರವಾದ ವಿಜಯಪುರ ಜಿಲ್ಲೆ, ಮುದೋಳ ಹಾಗೂ ನಮ್ಮ ಬಸವನ ಬಾಗೇವಾಡಿ ಹೀಗೆ ಬಹಳ ದೊಡ್ಡ ಪ್ರಮಾಣದಲ್ಲಿ ಇವತ್ತಿನ ದಿವಸ ಭೂಮಿಯನ್ನು ಕಳೆದುಕೊಳ್ಳುತ್ತಿದ್ದೇವೆ. ನಾನು ಎಲ್ಲರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತೇನೆ. ಯಾರು ಭೂಮಿಯನ್ನು ಕಳೆದುಕೊಂಡಿರುವ ಫಲಾನುಭವಿಗಳಿರುತ್ತಾರೆ. ಜಲಾಶಯದ ನೀರನ್ನು ಪಡೆದುಕೊಂಡು ನೀರಾವರಿಯಾಗುವವರ ಅವರ ಜೀವನಕ್ಕಿಂತಲೂ ಇವರ ಜೀವನ ಉತ್ತಮವಾಗಬೇಕು ಎನ್ನುವ principle ಮೇಲೆ ನಾವು ಹೋಗಬೇಕು. ಆ ಒಂದು ಧೈರ್ಯ ನಮ್ಮಲ್ಲಿರಬೇಕು. ಈ ಚರ್ಚೆ ಮಾಡಿದ ಎಲ್ಲಾ ವಿಷಯಗಳ ಬಗ್ಗೆ ನಾನು ಹೋಗುವುದಿಲ್ಲ. ಪ್ರಮುಖವಾಗಿ 5–10 ನಿಮಿಷಗಳಲ್ಲಿ ಉತ್ತರವನ್ನು ಕೊಡುವುದಕ್ಕೆ ಬಯಸುತ್ತೇನೆ. ಈಗ ಹಳೆಯ ಭೂಸ್ವಾಧೀನ ಕಾಯ್ದೆ ಇತ್ತು. ಅದರಲ್ಲಿ ಏನು ನಮ್ಮ guidance value ಇರುತ್ತಿತ್ತು ಅದರ ಪ್ರಕಾರವಾಗಿ ಹಣವನ್ನು ಕೊಡಬೇಕೆಂದು ಇರುತ್ತಿತ್ತು. ಆದರೆ ಹಿಂದೆ consent ಆದ ಸಂದರ್ಭದಲ್ಲಿ ನಮಗೆ ಅದರ ಪರಿಣಾಮ ಅಷ್ಟು ಇಲ್ಲ. ಆದರೆ ಇಲ್ಲಿ consent ಆಗಿಲ್ಲ. ಬಹುಶಃ ಶ್ರೀ ಕಾಗೋಡು ತಿಮ್ಮಪ್ಪನವರಿಗೆ ಗೊತ್ತಿದೆ. ಬಹಳಷ್ಟು ಅನ್ಯಾಯಗಳೆಂದರೆ, ಬಹಳಷ್ಟು ಕಡಿಮೆ ಹಣದಲ್ಲಿ ಬಹಳಷ್ಟು ಭೂಮಿಯನ್ನು ಕೊಟ್ಟು ಹೋಗಿರುವಂಥದ್ದು ಇದೆ. ಈಗ ಪ್ರಮುಖವಾಗಿ ಚರ್ಚೆ ಬರುತ್ತಿರುವಂಥದ್ದು The Right To Fair Compensation And Transparency In Land Acquisition, Rehabilitation And Resettlement Act, 2013 ನಾನು ಯುಪಿಎ ಸರ್ಕಾರ ನಮ್ಮ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರ ಹೀಗೆ ಎಂದು ತಿಳಿದುಕೊಂಡು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿಲ್ಲ. ಆದರೆ ಇಷ್ಟು exhaustive ಆಗಿ ಈಗ ನಮ್ಮ ಸದಸ್ಯರಾದಂತಹ ಶ್ರೀಮತಿ ತಾರಾಅನೂರಾಧರವರು ಮಾತನಾಡುತ್ತಾ ಅವರು ಏನು ಹೇಳಿದ್ದಾರೆ ಯಾರಿಗೆ ಅಲ್ಲಿ ಭೂಮಿ ಇಲ್ಲದೇ ಇದ್ದವರಿಗೆ, ಮೂರನೆ ಪುಟದಲ್ಲಿ ಏನು ಹೇಳಿದ್ದಾರೆಂದರೆ,

*"(c) affected family includes*

*(i) a family whose land or other immovable property has been acquired;"*

ಯಾರು ಭೂಮಿ ಅಥವಾ immovable property ಕಳೆದುಕೊಂಡಿರುವವರು. "(ii) a family which does not own any land....

. . . ಮುಂದು

(623) 08.06.2017 03.40 SV-AK

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ಬಿ.ಪಾಟೀಲ್(ಮುಂದು):-**

Section 3(c)(ii) of The Right to Fair Compensation and Transparency in Land Acquisition, Rehabilitation and Resettlement Act, 2013 reads as follows:-

"3(c)(ii). A family which does not own any land but a member or members of such family may be agricultural labourers, tenants including any form of tenancy or holding of usufruct right, share-croppers or artisans or who may be working in the affected area for three years prior to the acquisition of the land, whose primary source of livelihood stand affected by the acquisition of land."

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದೇ ರೀತಿ ಅರಣ್ಯದ್ದು. ಇಲ್ಲಿ ಆ ಸಮಸ್ಯೆ ಬರುವುದೇ ಇಲ್ಲ. ನಮ್ಮಲ್ಲಿ ಅರಣ್ಯ ಇರುವುದಿಲ್ಲ. Section 3(c)(iii) of the said Act reads as follows:-

> "3(c)(iii). The Scheduled Tribes and other traditional forest dwellers who have lost any of their forest rights recognised under the Scheduled Tribes and Other Traditional Forest Dwellers (Recognition of Forest Rights) Act, 2006 due to acquisition of land."

ಅರಣ್ಯ ಕಾಯಿದೆ ನಮಗೆ ಗೊತ್ತೇ ಇರುವುದಿಲ್ಲ. ಏಕೆಂದರೆ ನಮಗೆ ಅರಣ್ಯವೇ ಇಲ್ಲವೆಂದ ಮೇಲೆ ಅದರ ಮೇಲೆ ನಮಗೆ ಹೆಚ್ಚು ಅನುಭವ ಇರುವುದಿಲ್ಲ. Section 3(c)(iv), 3(c)(v) and 3(c)(vi) of the said Act reads as follows:-

> "3(c)(iv). Family whose primary source of livelihood for three years prior to the acquisition of the land is dependent on forests or water bodies and includes gatherers of forest produce, hunters, fisher folk and boatmen and such livelihood is affected due to acquisition of land.
>
> 3(c)(v). A member of the family who has been assigned land by the State Government or the Central Government under any of its schemes and such land is under acquisition;
>
> 3(c)(vi). A family residing on any land in the urban areas for preceding three years or more prior to the acquisition of the land or whose primary source of livelihood for three years prior to the

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

acquisition of the land is affected by the acquisition of such land."

ಎಲ್ಲವನ್ನೂ ಕೂಡ ಇದರಲ್ಲಿ ಡೀಲ್ ಮಾಡಿದ್ದಾರೆ. ಬಹುಶಃ ಶ್ರೀ ಜೈರಾಂ ರಮೇಶ್ ಎಲ್ಲರೂ ಕೂಡಿ....

**ಡಾ:ಜಯಮಾಲ ರಾಮಚಂದ್ರ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೆ, ನನಗೆ ಇದರಲ್ಲಿ ಒಂದು ಪ್ರಶ್ನೆ ಉದ್ಭವವಾಗಿದೆ. 1993ರಲ್ಲಿ ಪುನರ್ವಸತಿ ನೀತಿಯನ್ನು ತರಲಾಯಿತು. ಆ ಪುನರ್ವಸತಿ ನೀತಿಯನ್ನು ಇದರಲ್ಲಿ ಅಳವಡಿಸಿಕೊಳ್ಳಲಾಗಿದೆಯೇ ಎಂದು ಕೇಳುತ್ತಿದ್ದೇನೆ.

**ಶ್ರೀ ಎಂ.ಬಿ.ಪಾಟೀಲ್:–** ಇದರಲ್ಲಿ ಪುನರ್ವಸತಿಯೂ ಸೇರಿದಂತೆ ಎಲ್ಲವನ್ನೂ ಕೂಡ ಡೀಲ್ ಮಾಡಿದ್ದಾರೆ. ಉದಾಹರಣೆಗೆ ಯಾರು ಭೂಮಿಯನ್ನು ಕಳೆದುಕೊಳ್ಳುತ್ತಾರೆಯೋ ಅವರಿಗೆ ನೌಕರಿಯನ್ನಾದರೂ ಕೊಡಬೇಕು. ಏಕೆಂದರೆ ಪ್ರತಿ ಮನುಷ್ಯನಿಗೆ ತಲಾ ರೂ.5 ಲಕ್ಷ ಪರಿಹಾರಧನವನ್ನು ಕೊಡಲಾಗುವುದು. ಇಲ್ಲಿ ವಿವಿಧ ಅಧ್ಯಾಯಗಳಿವೆ. ಖಾಸಗಿ ಕಂಪನಿಯವರಿಗೆ ಶೇ.8 ಇರಬೇಕು ಮತ್ತು ಪಬ್ಲಿಕ್ ಪ್ರೈವೇಟ್ ಪಾರ್ಟನರ್‌ಶಿಪ್‌ಗೆ ಶೇ.70 ಇರಬೇಕು ಎಂದು ತಿಳಿಸಿದ್ದಾರೆ. ಕನ್ಸೆಂಟ್ ಕುರಿತು ಇಲ್ಲಿ ಪ್ರಾವಿಷನ್ ಮಾಡಿರುವುದಿಲ್ಲ.

ಕುಟುಂಬ ಎಂದರೆ ಏನು ಎನ್ನುವ ವಿಚಾರವನ್ನು ಕೇಳುತ್ತಿದ್ದರು. Section 3(m) reads as follows:-

""Family" includes a person, his or her spouse, minor children, minor brothers and minor sisters dependent on him;

Provided that widows, divorcees and women deserted by families shall be considered separate families."

ಇದರ ಕುರಿತಾದ ವಿವರಣೆಯು ಹೀಗೆ ಹೇಳುತ್ತದೆ:–

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

> "Explanation.— An adult of either gender with or without spouse or children or dependents shall be considered as a separate family for the purposes of this Act."

ಆರ್ & ಆರ್ ಪರಿಹಾರವನ್ನು ನೀಡುವುದನ್ನೂ ಸೇರಿ ಯಾವುದನ್ನೂ ಕೂಡ ಇಲ್ಲಿ ಬಿಟ್ಟಿರುವುದಿಲ್ಲ. ನಾನು ಇಂದು ಬೆಳಿಗ್ಗೆ ಸಹ ಆರ್ & ಆರ್ ಆಯುಕ್ತರ ಜೊತೆಯಲ್ಲಿ ಮಾತನಾಡುತ್ತಿದ್ದ ಸಂದರ್ಭದಲ್ಲಿ ತೆಲಂಗಾಣದಲ್ಲಿ ಈ ಕನ್ಸೆಂಟ್ ಕುರಿತಾದ ಒಂದು ಕಾಯಿದೆಯನ್ನು ಮಾಡಿರುವ ವಿಚಾರದ ಪ್ರಸ್ತಾಪವಾಯಿತು. ಅದನ್ನು ಅಲ್ಲಿನ ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತು. The High Court quashed that order. ಏಕೆಂದರೆ ಅದರಲ್ಲಿ R & R Settlement Component ರೂ.5 ಲಕ್ಷ ಏನು ಕೊಡಲಾಗುತ್ತದೆಯೋ ಅದು ಇರಲಿಲ್ಲ. ತೆಲಂಗಾಣದವರು ಮುಂದೆ ಸುಪ್ರೀಂ ಕೋರ್ಟ್‌ಗೆ ಹೋದರು. ಸುಪ್ರೀಂ ಕೋರ್ಟ್ ಕೇಸನ್ನು ಅಡ್ಮಿಟ್ ಮಾಡಿಕೊಂಡು ಕನ್ಸೆಂಟ್ ಕಾಯಿದೆಗೆ ತಿದ್ದುಪಡಿ ತರಲಿಕ್ಕೆ with conditions ಅನುಮತಿ ಕೊಟ್ಟಿರುತ್ತದೆ. ಅದರ key features ಏನೆಂದರೆ "The new bill by Telengana State has been exempted chapter II and III of the new Land Acquisition Act of 2013." Applicability on SIA (Social Impact Assessment) and food security ಮೇಲೆ ಅದನ್ನು ಕೊಟ್ಟಿರುತ್ತಾರೆ. "...which was earlier provided by the Central Government but was not exercised by the State Government. It has made provision for land procurement by agreement of sale at higher price which can be fixed by state. It is made applicable to the..." ನಮಗೆ ಕನ್ಸೆಂಟ್ ಬಗ್ಗೆ ಇದ್ದ ಗೊಂದಲ ತೆಲಂಗಾಣ ಪ್ರಕರಣದಿಂದ ನಿವಾರಣೆಯಾಗಿದೆ. ಇದು ನಮಗೆ ಬಹಳಷ್ಟು ಸಹಕಾರಿಯಾಗುತ್ತದೆ. Our R & R Commissioner who is attending a seminar there has sent this to me today morning.

**Sri RAMACHANDRA GOWDA:** Who has made these amendments?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri M.B. PATIL:** The Telengana Government has made these amendments. The Supreme Court allowed the Telengana Government to bring this provision. It is a reference to adopt. We can also adopt it if it is good.

**ಶ್ರೀ ನಿರಾಣಿ ಹನಮಂತ್ ರುದ್ರಪ್ಪ:-** ಹೊಸ ಕಾಯ್ದೆಯಲ್ಲಿ ರೂಲ್ಸ್‌ಗಳನ್ನು ಪ್ರಾವಿಷನ್ ಮಾಡಿಕೊಳ್ಳಬಹುದು ಎಂಬುದು ಸ್ಪಷ್ಟವಾಗಿದೆ. Section 109 of the Act states it clearly. ತೆಲಂಗಾಣದಲ್ಲಿ ಮಾಡಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:-** ತೆಲಂಗಾಣ ಗೆಜೆಟ್‌ನ ಪ್ರಕಾರ ಅವರು ಈಗಾಗಲೇ ಈ ಬಿಲ್ಲುಗಳನ್ನು ಪಾಸ್ ಮಾಡಿಕೊಂಡಿದ್ದಾರೆ. It will help us. I have not read it in detail. I have to go into the details. ಇದು ನಮಗೆ ಇಂಪ್ಲಿಮೆಂಟ್ ಮಾಡಿಕೊಳ್ಳಲು ಬಹಳಷ್ಟು ಸಹಕಾರಿ ಎಂದು ಶ್ರೀ ಕಳಸದ್ ಅವರು ಹೇಳಿದರು.

ಮಾನ್ಯ ಸಭಾಪತಿಯವರೆ, ಅಲ್ಲಿ ಮನೆ ಕಳೆದುಕೊಂಡವರಿಗೆ ವಸತಿ ಯೋಜನೆ; ಷೆಡ್ಯೂಲ್ 2ರ ಪ್ರಕಾರ ಬಹುಪಾಲು ಭೂಮಿಯನ್ನು ಕಳೆದುಕೊಂಡು ಜೀವನಾಧಾರ ಕಳೆದುಕೊಂಡವರಿಗೆ ಸ್ಥಳಾಂತರ; ರೂ.5 ಲಕ್ಷ ಏಕಕಾಲದ ಅನುದಾನ ಮತ್ತು ಉದ್ಯೋಗದ ಭರವಸೆ; ಒಂದು ವರ್ಷದ ಅವಧಿಗೆ ಸ್ಥಳಾಂತರಗೊಂಡಿರುವ ಕುಟುಂಬಗಳಿಗೆ ಜೀವನಾಂಶ ಭತ್ಯೆ ಪ್ರತಿ ತಿಂಗಳು ರೂ.3,000/- ದಂತೆ; ಪ್ರತಿ ಸ್ಥಳಾಂತರಗೊಂಡ ಕುಟುಂಬಗಳಿಗೆ ಏಕಕಾಲದ ಸಾರಿಗೆ ವೆಚ್ಚ ರೂ.50,000/-; ವ್ಯಾಪಾರಸ್ಥರಿಗೆ ಮತ್ತು ಜಾನುವಾರು ಸಂರಕ್ಷಣೆಗೆ ದನದ ಕೊಟ್ಟಿಗೆ ಮತ್ತು ಸಣ್ಣ ಅಂಗಡಿಗೆ ಅನುದಾನ ವೆಚ್ಚ ಕನಿಷ್ಟ ರೂ.25,000/-; ಕುಶಲಕರ್ಮಿಗಳು, ಸಣ್ಣ ವ್ಯಾಪಾರಸ್ಥರು ಮತ್ತು ಇತರರಿಗೆ ಏಕಕಾಲದ ಅನುದಾನ ರೂ.25,000/- ದಂತೆ; ಮೀನುಗಾರಿಕೆ ಸಂತ್ರಸ್ತರಿಗೆ ಯೋಜನೆ ವ್ಯಾಪ್ತಿಯಲ್ಲಿ ಮೀನುಗಾರಿಕೆ ಹಕ್ಕುಗಳು; ಪ್ರತಿ ಸ್ಥಳಾಂತರಗೊಂಡ ಕುಟುಂಬಗಳಿಗೆ ಏಕಕಾಲದ ಸ್ಥಳಾಂತರ ಭತ್ಯೆ ರೂ.50,000/-; ಯೋಜನೆಯಿಂದ ಹಂಚಿಕೆಯಾದ ನಿವೇಶನಗಳಿಗೆ ಮನೆಯ ನೋಂದಣಿ ಶುಲ್ಕದ ವಿನಾಯಿತಿ ಈ ರೀತಿ ಬಹಳ exhaustive ಆಗಿ ಇದನ್ನು ಮಾಡಿದ್ದಾರೆ. ಸಾಧ್ಯವಾದರೆ land for land ಕೊಡಬೇಕೆಂದಿದೆ. ಆದರೆ land for land ಕೊಡಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ 1,33,000 ಎಕರೆಯಷ್ಟು ಸರ್ಕಾರಿ ಜಮೀನು ನಮ್ಮ ಹತ್ತಿರ ಇರುವುದಿಲ್ಲ ಎಂದು ಕಂದಾಯ ಸಚಿವರು ಈಗಾಗಲೇ ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಂತರ ಮಾರುಕಟ್ಟೆ ಬೆಲೆಯನ್ನು ಹೇಗೆ ನಿಗದಿ ಪಡಿಸಬೇಕು ಎಂಬುದೆಲ್ಲವನ್ನೂ ಇದರಲ್ಲಿ ಹೇಳಿದ್ದಾರೆ. Physical possession ಆಗಿ ಹಳೆಯದನ್ನು ಕೇಳುತ್ತಿದ್ದರು. ಇಲ್ಲಿ ಒಂದು clause ಇದೆ. It reads as follows:-

> "Notwithstanding anything contained in sub-section (1), in case of land acquisition proceedings initiated under the Land Acquisition Act, 1894, where an award under the said section 11 has been made five years or more prior to the commencement of this Act but the physical possession..."

ಇನ್ನೂ ನಾವು physical possession ತೆಗೆದುಕೊಂಡಿರುವುದಿಲ್ಲ.

> "...of the land has not been taken or the compensation has not been paid..."

ಅಂದರೆ ಹಳೆಯದಕ್ಕೆ ಯಾವುದಕ್ಕೂ ನಾವು ಪರಿಹಾರವನ್ನು ನೀಡಿರುವುದಿಲ್ಲ.

> "...the said proceedings shall be deemed to have lapsed and the appropriate Government, if it so chooses, shall initiate the proceedings of such land acquisition afresh in accordance with the provisions of this Act."

ಮಾರುಕಟ್ಟೆ ಬೆಲೆಯನ್ನು ಯಾವ ರೀತಿ ಮಾಡಬೇಕು? ಪ್ರತಿಯೊಂದನ್ನೂ ನಾನು ಓದಿ ಹೇಳಬೇಕಾಗಿಲ್ಲ ಎಂದು ನನಗನ್ನಿಸುತ್ತದೆ. It further reads as follows:-

> "26.(1) The Collector shall adopt the following criteria in assessing and determining the market value of the land, namely..."

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏಕೆಂದರೆ ಉಗ್ರಪ್ಪನವರು ಹಿಂದೆ ಹೇಳುತ್ತಿದ್ದರು. It further reads as follows:-

> "(a) the market value, if any, specified in the Indian Stamp Act, 1899 for the registration of sale deeds or agreements to sell, as the case may be, in the area, where the land is situated; or
> (b) the average sale price for similar type of land situated in the nearest village or nearest vicinity area; or
> (c) consented amount of compensation as agreed upon under sub-section (2) of section 2 in case of acquisition of lands for private companies or for public private partnership projects, whichever is higher."

ಇದು applicable ಆಗಿರುವುದಿಲ್ಲ.

(...ಮುಂದು)

(624)/8-6-2017/RC-AK/3-50

(ಉಪ ಸಭಾಪತಿಯವರು)

**ಶ್ರೀ ಎಂ.ಬಿ.ಪಾಟೀಲ್(ಮುಂದು):-** ಆನಂತರ ಮಾರುಕಟ್ಟೆಯ market value fix ಯಾವ ರೀತಿ ಮಾಡಬೇಕೆಂದು ಸಹ ಹೇಳಿದ್ದಾರೆ. Thereafter, the bill tells about the 'Parameters to be considered by Collector in determination of award, determination of value of things attached to land or building, Award of solatium.' ಆನಂತರ ಮಾನ್ಯ ಸದಸ್ಯರು Chapter V deals with Rehabilitation and Resettlement Award. ಬಗ್ಗೆ ಕೇಳಿದರು, The Rehabilitation and Resettlement Award shall include all of the following, namely:—

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

a. rehabilitation and resettlement amount payable to the family;
b. bank account number of the person to which the rehabilitation and resettlement award amount is to be transferred;
c. particulars of house site and house to be allotted, in case of displaced families."

ಈ ರೀತಿ ಎಲ್ಲಾ ಇವತ್ತಿನ ದಿವಸ ಉಳಿದುಕೊಂಡಿದೆ. ಆನಂತರ How to determine compensation for land owners is given in the First Schedule viz. factors 1, 2, 3, 4, etc. The First Schedule also says about the final award in urban areas, in rural areas, solatium, value of assets attached to land or building, factor by which the market value is to be multiplied in the case of urban areas, factor by which the market value is to be multiplied in the case of rural areas.

The Second Schedule says about the Elements of Rehabilitation and Resettlement Entitlements i.e. land for land, giving employment to one member if it is possible in case of private projects, one time grant to the family of artisan, small traders and certain others which I have already read and made a mention of it earlier. It also says about Fishing Rights, One-time Resettlement Allowance, Stamp Duty and Registration Fee, etc. The entitlement/provision about the Stamp duty and Registration Fee is given as follows:-

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"(1) The stamp duty and other fees payable for registration of the land or house allotted to the affected families shall be borne by the Requiring Body.

(2) The land for house allotted to the affected families shall be free from all encumbrances.

(3) The land or house allotted may be in the joint names of wife and husband of the affected family."

The Third Schedule says about the infrastructural amenities which should be mainly provided i.e. roads, proper drainage, safe drinking water, provision of drinking water for cattle, grazing land as per proportion acceptable in the State, a reasonable number of Fair Price Shops, Panchayat Ghars, Village level Post Offices, Appropriate seed-cum-fertilizer storage facility, efforts must be made to provide basic irrigation facilities to the agricultural land allocated to the resettled families if not from the irrigation project, then by developing a cooperative or under some Government scheme or special assistance, all new villages established for resettlement of the displaced persons shall be provided with suitable transport facility which must include public transport facilities through local bus services with the nearby growth centres/urban localities. ನಿನ್ನೆ ದಿವಸ ಮಾನ್ಯ ಸದಸ್ಯರಾದಂತಹ ನಿರಾಣಿಯವರು ಸ್ಮಶಾನದ ಬಗ್ಗೆ ಕೇಳುತ್ತಿದ್ದರು, It also says about, burial or cremation ground, depending on the caste communities at the site and their practices, facilities for sanitation, including

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

individual toilet points, individual single electric connections (or connection through non-conventional sources of energy like solar energy), for each household and for public lighting, Anganwadi's providing child and mother supplemental nutritional services, School as per the provisions of the Right of Children to Free and Compulsory Education Act, 2009 (35 of 2009), Sub-health centre within two kilometers range, Primary Health Centre as prescribed by the Government of India, playground for children, one community centre for every hundred families, places of worship and chowpal/tree platform for every fifty families for community assembly, of numbers and dimensions consonant with the affected area, separate land must be earmarked for traditional tribal institutions, the forest dweller families must be provided, where possible, with their forest rights on non-timber forest produce and common property resources (ನಿಮಗೆ ಅನ್ವಯಿಸುವಂಥದ್ದು ಸರ್) if available close to the new place of settlement and, in case any such family can continue their access or entry to such forest or common property in the area close to the place of eviction, they must continue to enjoy their earlier rights to the aforesaid sources of livelihood, Appropriate security arrangements must be provided for the settlement, if needed, Veterinary service centre as per norms. And the details of each component of infrastructural amenities is given in another chapter.

**ಡಾ॥ಜಯಮಾಲ ರಾಮಚಂದ್ರ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈಗ ಕಾನೂನಿನ ಬಗ್ಗೆ ಹೇಳಿದರು. ಇದರ ಒಂದು ಪ್ರತಿಯನ್ನು ಎಲ್ಲರಿಗೂ ಸರ್ಕ್ಯುಲೇಟ್ ಮಾಡಿದರೆ ಸ್ವಲ್ಪ ಅನುಕೂಲವಾಗುತ್ತಿತ್ತು. ಏಕೆಂದರೆ, ನಾನು 1993ರ ರಾಷ್ಟ್ರೀಯ ಪುನರ್ ವಸತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀತಿಯನ್ನು ಇದರೊಳಗಡೆ ಅಳವಡಿಸಿಕೊಳ್ಳಲಾಗಿದೆಯೇ ಎಂದು ಕೇಳಿದ್ದೇನೆ. ಏಕೆಂದರೆ, ಆಲಮಟ್ಟಿ ಅಣೆಕಟ್ಟಿನ ನಿರ್ಮಾಣದ ಸಂದರ್ಭದಲ್ಲಿ ಪುನರ್ ವಸತಿ ಇಲ್ಲದೆ ಲಕ್ಷಾಂತರ ಜನರ ಬದುಕು ಸರ್ವನಾಶವಾಯಿತು. ಇವತ್ತಿಗೂ ಸಹ ಆ ಜನರು ಅದರಿಂದ ಹೊರಗೆ ಬರುವುದಕ್ಕೆ ಆಗದೆ ಮಾನಸಿಕ ಅಸ್ವಸ್ಥರಾಗಿ ಖಿನ್ನತೆಯಿಂದ ಬಳಲುತ್ತಿರುವಂಥವರು ಅನೇಕರಿದ್ದಾರೆ. ಅದರಲ್ಲಿ ಎಷ್ಟೋ ಜನರು ಸತ್ತು ಹೋಗಿದ್ದಾರೆ. ಎಷ್ಟೋ ಜನ ಹೆಚ್.ಐ.ವಿ. ಸೋಂಕಿತರಾಗಿ, ಏಡ್ಸ್ ಪೀಡಿತರಾಗಿ ಸತ್ತು ಹೋಗಿದ್ದಾರೆ. ಅವಿಭಕ್ತ ಕುಟುಂಬಗಳೆಲ್ಲವೂ ಸಹ ಆಸ್ತಿ ಆಸೆಗಾಗಿ ಒಡೆದು ಹೋಗಿವೆ. ಏಕೆಂದರೆ, ಪುನರ್ ವಸತಿ ಯೋಜನೆಯಲ್ಲಿ ಸಂತ್ರಸ್ತರ ಕುಟುಂಬದಲ್ಲಿ ಇಬ್ಬರಿಗೆ ಮಾತ್ರ ಮನೆ ಕೊಡುವುದು ಎಂಬ ಕಾನೂನು ಮಾಡಲಾಗಿತ್ತು. ಆದರೆ ಒಂದು ಅವಿಭಕ್ತ ಕುಟುಂಬದಲ್ಲಿ ನಾಲ್ಕೈದು ಜನರಿದ್ದರೆ ಅವರಿಗೂ ಸಹ ಒಂದು ಹೊಸ ಕಾನೂನು ಮಾಡಬೇಕೆಂಬುದು ಪುನರ್ ವಸತಿ ಯೋಜನೆಯಲ್ಲಿ ಇರಲಿಲ್ಲ. ಆ ರೀತಿ ಇಲ್ಲದೆ ಇದ್ದಾಗ ಒಂದು ಮನೆಯಲ್ಲಿ ಆರೇಳು ಒಲೆಗಳನ್ನು ಹಾಕುವಂತಹ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ, ಇಲ್ಲಿರುವಂಥವರೆಲ್ಲರಿಗೂ ಸಹ ಈ ವಿಷಯ ಗೊತ್ತಿದೆ. ಅದೇ ರೀತಿ ಕುಟುಂಬಗಳು ಎರಡಾದವು, ಮನಸ್ಸುಗಳು ಒಡೆದು ಹೋದವು. ಹೆಣ್ಣು ಮಕ್ಕಳು ಒಬ್ಬರಿಗೊಬ್ಬರು ಜುಟ್ಟು ಹಿಡಿದು ಜಗಳ ಮಾಡುವಂತಹ ಸ್ಥಿತಿ ಬಂತು. ಅದಕ್ಕಿಂತಲೂ ವಿಪರ್ಯಾಸವೆಂದರೆ, 35 ವರ್ಷದವರೆಗೂ ಯಾರಿಗೆ ಮದುವೆ ಆಗಿಲ್ಲವೋ ಆ ಹೆಣ್ಣು ಮಗಳು ಆಸ್ತಿ ಕೇಳುವುದಕ್ಕೆ ಅರ್ಹಳಾಗಿದ್ದಾಳೆ ಎಂಬ ಕಾನೂನು ಇತ್ತು. ನಾನು 2006ನೇ ಇಸವಿಯವರೆಗೂ ಇದ್ದಂತಹ ಕಥೆಯ ಬಗ್ಗೆ ಹೇಳುತ್ತಿದ್ದೇನೆ. ಯಾವ ಒಬ್ಬ ಹೆಣ್ಣು ಮಗಳಿಗೆ 35 ವರ್ಷವಾದರು ಮದುವೆ ಆಗಿಲ್ಲವೋ ಆಕೆಗೆ ಈ ಪರಿಹಾರವನ್ನು ತೆಗೆದುಕೊಳ್ಳುವಂತಹ ಅರ್ಹತೆ ಇರುತ್ತಿತ್ತು, ಅಥವಾ ಆಕೆ ವಿಧವೆ ಆಗಿರಬೇಕು. ಅಂದರೆ ಒಬ್ಬ ಹೆಣ್ಣು ಮಗಳಿಗೆ 35 ವರ್ಷವಾದರೂ ಮದುವೆ ಆಗಿರಬಾರದು, ಅಥವಾ ಅವಳು ವಿಧವೆ ಆಗಿರಬೇಕು. ಹಾಗಿದ್ದಾಗ ಮಾತ್ರ ಆ ಹೆಣ್ಣು ಮಗಳು ಈ ಪುನರ್ ವಸತಿಯ ಯೋಜನೆಯನ್ನು ಪಡೆದುಕೊಳ್ಳಲು ಅರ್ಹಳಾಗಿದ್ದಳು.

ಮಾನ್ಯ ಸಭಾಪತಿಯವರೆ, ನಾವು ಇವತ್ತಿನವರೆಗೂ ಒಂದು ವಿಷಯವನ್ನು ಮರೆಯುವುದಕ್ಕೆ ಆಗುವುದಿಲ್ಲ. ಯಾವುದೆಂದರೆ, ನಾರಾಯಣಪುರ ಡ್ಯಾಂ ಕಟ್ಟಿದಾಗ ಇವತ್ತಿನ ದಿವಸ ಇರುವಂತಹ, ವ್ಯವಸ್ಥಿತವಾದಂತಹ ಪುನರ್ ವಸತಿಯ ಈ ರೀತಿಯಾದಂತಹ ಯಾವುದೇ ಚಿತ್ರಣ ಇರಲಿಲ್ಲ. ಇದ್ದಕ್ಕಿದ್ದಂತೆ ನೀರನ್ನು ಬಿಟ್ಟು ಬಿಟ್ಟರು. 41 ಹಳ್ಳಿಗಳಲ್ಲಿ ಹೆಣ್ಣು ಮಕ್ಕಳು, ಮಕ್ಕಳು, ವೃದ್ಧರು ಅನುಭವಿಸಿದಂತಹ ನೋವು ಹೇಳುವುದಕ್ಕಾಗುವುದಿಲ್ಲ. ರಾತ್ರೋ ರಾತ್ರಿ ಈ ರೀತಿ ನೀರು ಬರುತ್ತದೆ ಎಂಬ ಪರಿಕಲ್ಪನೆ ಕೂಡ ಯಾವ ಅಧಿಕಾರಿಗಳಿಗೂ ಇರಲಿಲ್ಲ. ಆ ರೀತಿ ನೀರು ಬಂದಾಗ ಪ್ರಾಣಿ, ಪಕ್ಷಿಗಳು, ದನ-ಕರುಗಳು, ಮನುಷ್ಯರು ಆ ನೀರಿನಲ್ಲಿ ಕೊಚ್ಚಿ ಹೋದರು. ಆಗ ಅಧಿಕಾರಿಗಳು ಅದನ್ನು ನೋಡಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆದರಿಕೊಂಡು ಲಾರಿ, tractor ಗಳಲ್ಲಿ ತುಂಬಿಕೊಂಡು ಹೋಗಿ ಸ್ಥಳಾಂತರ ಮಾಡಿದರು. ಎಲ್ಲೆಲ್ಲಿ ಸ್ಥಳಾಂತರ ಮಾಡಿದರೋ ಅದನ್ನೇ ಪುನರ್ ವಸತಿ ಕೇಂದ್ರಗಳೆಂದು ಘೋಷಣೆ ಮಾಡಿದರು. ಬಾಗಿಲಕೋಟೆಯ ನವನಗರದಲ್ಲಿ, ಎಂದಿಗೂ ಕೂಡ high-tension wire ಹೋಗಿರುವಂತಹ ಸ್ಥಳಗಳಲ್ಲಿ ಮನೆಗಳನ್ನು ಕಟ್ಟಬಾರದು ಎಂಬ ಒಂದು ಕಾನೂನು ನಮ್ಮಲಿ ಇದೆ. ಆದರೆ ಜೋತು ಬೀಳುತ್ತಿರುವಂತಹ high-tension wire ನ ಕೆಳಗಡೆ ಜಿಂಕ್ ಶೀಟ್‌ನಲ್ಲಿ 10'x10' ಗೆ ಒಂದೊಂದು ಶೆಡ್‌ಗಳನ್ನು ರೂಪಿಸಿ 44 ರಿಂದ 46 ಡಿಗ್ರಿ ತಾಪಮಾನ ಇರುವಂತಹ ಊರಿನಲ್ಲಿ ಶೆಡಿನ ಕೆಳಗೆ ಅವರು ಜೀವನ ಮಾಡುತ್ತಿರುವುದನ್ನು ತಾವು ಇವತ್ತಿಗೂ ಸಹ ನೋಡಬಹುದು. ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಯುವಕರಿದ್ದಾರೆ. ನಾನು ಸುಮಾರು 53 ವರ್ಷದ ಹಿಂದಿನ ಕಥೆಯನ್ನು ಹೇಳುತ್ತಿರಬಹುದು, ಆದರೆ ಇದು ಇಲ್ಲಿಯವರೆಗೂ ನಡೆದುಕೊಂಡು ಬಂದಿದೆ. ಮಾನ್ಯ ಸಚಿವರು ಸಮರ್ಥರಿದ್ದಾರೆ. ಇದನ್ನು ಅವರು ಗಮನಿಸಬೇಕು. ಇದರಲ್ಲಿ ಬೇಕಾದಷ್ಟು ದೋಷಗಳಿವೆ ಅವುಗಳನ್ನು ಮಾನ್ಯ ಸಚಿವರು ಗಮನಿಸಬೇಕು. ನಮ್ಮಲ್ಲಿ ಹಿರಿಯ ಸಚಿವರು ಕುಳಿತುಕೊಂಡಿದ್ದಾರೆ. ಶರಾವತಿ ಹಿನ್ನೀರಿನಿಂದ ಎಷ್ಟು ಅಚಾತುರ್ಯಗಳು ನಡೆದಿವೆ, ಎಷ್ಟು ಜೀವಗಳು ಹೋಗಿವೆ, ಇವತ್ತಿಗೂ ಎಷ್ಟು ಜನರು ಬದುಕ್ಕಿದ್ದು ಜೀವಂತ ಶವ ಆಗಿದ್ದಾರೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಆ ಶೆಡ್ಡಿನಲ್ಲಿರುವಂಥವರ ಬಗ್ಗೆ ನಾವು ಯೋಚನೆ ಮಾಡಬೇಕು. ಪ್ರತಿಯೊಬ್ಬರು ಪುನರ್ ವಸತಿ ಎಂದರೆ ಕೇವಲ ಆಸ್ತಿ ಇರುವವರಿಗೆ ಆಸ್ತಿ ಕೊಡುವಂಥದ್ದು, ಮನೆ ಇದ್ದವರಿಗೆ ಒಂದು ಮನೆ ಕೊಟ್ಟು ಅವನನ್ನು ಕಳುಹಿಸುವಂಥದ್ದು ಎಂದು ಆಲೋಚನೆ ಮಾಡುತ್ತಾರೆ. ಇಡೀ ಬದುಕನ್ನು ಅವರ ಮನೆಯಲ್ಲಿ ಸವೆದಿರುವಂಥವರು, ಒಂದು ಮನೆಯಲ್ಲಿ ಕೆಲಸ ಮಾಡುವಂಥವರು, ಎರಡನೇ ಹೆಂಡತಿಯಾಗಿ ಮಕ್ಕಳನ್ನು ಪಡೆದಿರುವಂಥವರು ಕಾನೂನಿನಲ್ಲಿ ಅದಕ್ಕೆ ಅವಕಾಶ ಇಲ್ಲದೆ ಇರಬಹುದು.

(ಮುಂದು)

(625) 08.06.2017 KG.RN 4.00

ಆದರೆ, ಆಕೆ ಅಲ್ಲಿ ಹುಟ್ಟಿದ್ದಾಳೆ, ಅಲ್ಲಿ ಬೆಳೆದಿದ್ದಾಳೆ, ಅಲ್ಲಿ ಸಂಸಾರ ಮಾಡಿದ್ದಾಳೆ, ಆಕೆಗೆ ಮಕ್ಕಳು ಇದ್ದಾರೆ. ಆದರೆ, ಅವರುಗಳಿಗೆ ಯಾವುದೇ ರೀತಿಯಾದಂತಹ ಅವಕಾಶವನ್ನು ನೀಡಲಿಲ್ಲ. ಆದ್ದರಿಂದ, ಆ ಹೆಣ್ಣು ಮಕ್ಕಳು ಮಳೆಯಲ್ಲಿ ಕುಳಿತುಕೊಂಡು ಧರಣಿ ಮಾಡಿದರು. ಮೊದಲ ಹಂತದ ಪುನರ್ವಸತಿಯನ್ನು ಮಾಡಿದವರು ಆಕೆಯನ್ನು ಮದುವೆ ಮಾಡಿಕೊಂಡಿರುವವನೋ, ಇಟ್ಟುಕೊಂಡವವನೋ, ಬಿಟ್ಟವನೋ, ಅವರೆಲ್ಲರೂ ಬೇರೆ ಬೇರೆ ಕಡೆಗೆ ಹೊರಟು ಹೋದರು. ಆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಾಯದ ಹೆಣ್ಣು ಮಕ್ಕಳು ಚಿಕ್ಕ ಚಿಕ್ಕ ಮಕ್ಕಳನ್ನು ಇಟ್ಟುಕೊಂಡು ಅವರುಗಳು ಪಟ್ಟ ಶ್ರಮ ಹೇಳಲಾಗದು. ಈ ಯೋಜನೆಯು ಅವರನ್ನು ವೇಶ್ಯೆಯರನ್ನಾಗಿ ಮಾಡುವಂತಹ ಸ್ಥಿತಿಗೆ ತಂದು ನಿಲ್ಲಿಸಿತ್ತು. ಈ ಯೋಜನೆಯು ಲಕ್ಷಾಂತರ ಹೆಣ್ಣು ಮಕ್ಕಳ ಬದುಕನ್ನು ಈ ರೀತಿ ದುರಂತಮಯವಾಗಿ ಆಗುವಂತೆ ಮಾಡಿತು. ಮಕ್ಕಳು ಅವರ ತಂದೆ ತಂದೆಯವರ ಮಾತನ್ನು ನಂಬಲಿಲ್ಲ. ಮಕ್ಕಳು ಹಣವನ್ನು ತರುತ್ತೇವೆಂದು ಹೇಳಿ ಬೆಂಗಳೂರು ಮತ್ತು ಮುಂಬೈ ನಂತಹ ನಗರಗಳಿಗೆ ಹೋದರು. ಆ ಮಕ್ಕಳು ಅಲ್ಲಿ ಮೋಜು-ಮಸ್ತಿ ಮಾಡಿ, ವಾಪಸ್ಸು ಬರಬೇಕಾದರೆ ಬರಿ ಕೈಯಲ್ಲಿ ಬಂದರು. ಮಾನ್ಯ ಸಭಾಪತಿಯವರೆ, ಇದೆಲ್ಲಾ ಯಾರಿಗೆ effect ಆಯಿತು? ಆ ಮನೆಯಲ್ಲಿ ಇರುವಂತಹ ಹೆಣ್ಣು ಮಕ್ಕಳಿಗೆ effect ಆಯಿತು. ಒಂದು ತಲೆಮಾರು ಶಾಲೆಯಿಂದ ಆ ಮಕ್ಕಳು ವಂಚಿತರಾದರು. ಒಂದು ಕಡೆ ಶಾಲೆಯಿಂದ ಮಕ್ಕಳನ್ನು ದೂರ ಉಳಿಸಿದರು. ಪುನರ್ವಸತಿ ಕೇಂದ್ರ ಕಟ್ಟಿದರು. ಅದರಲ್ಲಿ ಶಾಲೆ ಮತ್ತು ಆಸ್ಪತ್ರೆ ಮಾಡಿದರು. ಆದರೆ, ಇವರಿಗೆ ಅಲ್ಲಿಗೆ ಹೋಗುವುದಕ್ಕೆ ಆಗಲಿಲ್ಲ. ಆಗ ಅವರಿಗೆ ಇರುವಲ್ಲಿಯೇ ಉಳಿದುಕೊಳ್ಳಿ ಎನ್ನುವಂತಹ ಒಂದು ಅವಕಾಶವನ್ನು ಕೊಟ್ಟರು. ಅವರು ಇರುವಲ್ಲಿಯೇ ಉಳಿದು ಕೊಳ್ಳಿ ಎಂದರೆ, ಅಲ್ಲಿ ಶಾಲೆ ಇಲ್ಲ. ಶಾಲೆ ಪುನರ್ವಸತಿ ಕೇಂದ್ರಗಳಿಗೆ ಹೋಗಿ ಬಿಟ್ಟಿದೆ. ಆದರೆ, ಅವರು ಅಲ್ಲಿ ಬದುಕನ್ನು ಕಟ್ಟಿಕೊಳ್ಳಲಿಕ್ಕೆ ಆಗದೆ ಮತ್ತು ಪುನರ್ವಸತಿ ಕೇಂದ್ರಕ್ಕೂ ಸಹ ಹೋಗುವುದಕ್ಕೆ ಆಗಲಿಲ್ಲ. ಒಂದು ಕಡೆ ಸೊಳ್ಳೆಗಳ ಕಾಟ. ಇನ್ನೊಂದು ಕಡೆ ಬದುಕನ್ನು ನಿರ್ವಹಿಸುವ ಕಾಟ. ಅವರು ಕೆಲಸಕ್ಕೆ 10 ಕೀಲೋಮೀಟರ್ ದೂರ ಹೋಗಬೇಕು. ಆ ಮಕ್ಕಳು ಶಾಲೆಗೆ 4-5 ಕಿಲೋಮೀಟರ್ ನಡೆದುಕೊಂಡು ಹೋಗಬೇಕು. ಆ ದಾರಿಯಲ್ಲಿ ಪುಂಡ ಪೋಕರಿಗಳ ಕಾಟದಿಂದ ಆ ಮಕ್ಕಳನ್ನು ಶಾಲೆಗೆ ಹೋಗದಂತೆ ಮಾಡಿತು. ಈ ರೀತಿ ಶಾಲೆಯಿಂದ ಮಕ್ಕಳನ್ನು ವಂಚಿತರನ್ನಾಗಿ ಮಾಡಿತು. ಇಡೀ ಸಂಸಾರದ ಬದುಕುಗಳನ್ನು ನಾಶ ಮಾಡಿತು. ಇದು ನಮ್ಮ ಕಣ್ಣುಂದೆ ಇರುವಂತಹದ್ದು.

ಮಾನ್ಯ ಸಭಾಪತಿಯವರೇ, ಇದು ನೂರಾರು ವರ್ಷಗಳ ಹಿಂದಿನ ಕಥೆಯಲ್ಲ. ಕಳೆದ 40-50 ವರ್ಷಗಳ ಹಿಂದೆ ನಡೆದಿರುವಂತಹ ಘಟನೆಗಳು. ಅಂದರೆ, 1993-1994 ನೇ ಸಾಲಿನ ನಂತರ ಇದು ಹೆಚ್ಚಿನದಾಗಿ ತೀವ್ರತೆಯನ್ನು ಪಡೆದುಕೊಂಡಿತು. 'ಬಚಾವತ್' ತೀರ್ಪಿನಂತೆ ಈ ನೀರನ್ನು ಉಪಯೋಗಿಸಿಕೊಳ್ಳಬೇಕೆಂಬ ಒಂದೇ ಒಂದು ಕಾರಣಕ್ಕಾಗಿ ಇಡೀ 'ಆಲಮಟ್ಟಿ ಯೋಜನೆ' ಯಾವ ರೀತಿಯಾದಂತಹ ಪ್ರಕ್ರಿಯೆಯನ್ನು ತೋರಿಸಿತು ಎಂದರೆ ಅವರಿಗೆ ಪುನರ್ವಸತಿಯನ್ನು ಕೊಡುವುದು ಒಂದು ಕಡೆ. ಅವರು ಹೋದರೆ ಸಾಕು ಎನ್ನುವುದು ಇನ್ನೊಂದು ಕಡೆ. 'ಆಲಮಟ್ಟಿ ಯೋಜನೆ' ಮುಗಿಯಬೇಕು. ಆದರೆ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹೇಗೆ ಆಗಬೇಕು? ಅದು ಒಂದು ವ್ಯವಸ್ಥಿತವಾಗಿ ಆಗಬೇಕು? ಅಲ್ಲಿ ಇರುವಂತಹ ನೀರು ಸರಿಯಾಗಿ ಹಂಚಿಕೆ ಆಗಬೇಕು? ಅವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮನೆಗಳು ವ್ಯವಸ್ಥಿತವಾಗಿ ಸಿಗಬೇಕು? ಪುನರ್ವಸತಿ ಉಳ್ಳವನಿಗೆ ಮಾತ್ರ ಆಗುವುದು ಬೇಡ. ಅಲ್ಲಿ ಎಷ್ಟು ಜೀವಿಗಳು ಇವೆಯೋ ಅಷ್ಟೂ ಜೀವಿಗಳ ಸಮೀಕ್ಷೆಯಾಗಬೇಕು, ಸಂಪೂರ್ಣವಾಗಿ ಪುನರ್ ನಿರ್ಮಾಣ ಮಾಡಿದ ನಂತರ ಅವರಿಗೆ ಪುನರ್ವಸತಿಯನ್ನು ಮಾಡುವಂತಹ ಕಾನೂನು ಇದೆ. ಅದನ್ನು ಮಾನವೀಯ ನೆಲೆಗಟ್ಟಿನಲ್ಲಿ ಮಾಡಬೇಕಾಗುತ್ತದೆ. ಅಂತಹ ಪುನರ್ವಸತಿಯನ್ನು ಮಾಡಬೇಕು ಎಂದು ನಾನು ಮಾನ್ಯ ಸಚಿವರಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಬಹಳ ಯುವಕರಿದ್ದಾರೆ. ಅವರಿಗೆ ಆ ರೀತಿ ಮಾಡುವಂತಹ ಶಕ್ತಿ ಕೂಡ ಇದೆ. ಮಾನ್ಯ ಸಚಿವರು ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಈ ಹಿಂದೆ MYRADA (Mysore Resettlement and Development Agency) ಸಂಸ್ಥೆ ಕೆಲಸ ಮಾಡಿತ್ತು. ಇದರಲ್ಲಿ ಸಂಘ ಸಂಸ್ಥೆಗಳನ್ನು ಸೇರಿಸಿಕೊಳ್ಳಬೇಕೆಂದು ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಪುನರ್ವಸತಿಯಲ್ಲಿ ಯಾರು ಬಾಧಿತರಾಗಿದ್ದಾರೆ, ಅವರು ಇದರಲ್ಲಿ ಭಾಗವಹಿಸಬೇಕೆಂದು ಕಾನೂನು ಇದೆ. ಆದರೆ, ಎಲ್ಲರನ್ನು ಇದರಲ್ಲಿ ಭಾಗವಹಿಸುವಂತೆ ಮಾಡಿದ್ದಾರೆಯೇ ಕೇಳಿ? ನನ್ನನ್ನು ಹಿಡಿದು ಯಾರೇ ಆಗಲೀ, ಸ್ವಂತ ಆಸ್ತಿಯನ್ನು ಬಿಟ್ಟು ಕೊಡಬೇಕಾದಂತಹ ಪರಿಸ್ಥಿತಿ ಬಂದಾಗ, ಮನಃಪೂರ್ವಕವಾಗಿ ಆಯಿತು, ಈ ರಾಜ್ಯಕ್ಕೋಸ್ಕರ ನನ್ನ ಸ್ವಂತ ಆಸ್ತಿಯನ್ನು ಬಿಟ್ಟುಕೊಟ್ಟಿದ್ದೇನೆ ಎನ್ನುವಂತಹ ಮನಸ್ಸು ಬರಬೇಕು.

**ಸಭಾಪತಿಯವರು:-** ಈಗ ಏನಾಬೇಕು ಎಂಬುದನ್ನು ಮಾತ್ರ ಹೇಳಿ?

**ಡಾ||ಜಯಮಾಲ ರಾಮಚಂದ್ರ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅಲ್ಲಿ ಪುನರ್ವಸತಿ ಮತ್ತು ಪುನರ್ ನಿರ್ಮಾಣವಾದ ನಂತರ ಅವರುಗಳ ಮನವೊಲಿಸಿ ಅವರು ಪ್ರೀತಿಯಿಂದ ಅಲ್ಲಿಗೆ ಹೋಗುವಂತೆ ಮಾಡಬೇಕು. ಇಲ್ಲದೇ ಹೋದರೆ, ಅವರ ಬದುಕು ನಾಶವಾಗಿ ಹೋಗಿ ಬಿಡುತ್ತದೆ. ಇಲ್ಲಿ ಹಣ ಒಂದೇ ಮುಖ್ಯವಲ್ಲ. ಸಾಂಸ್ಕೃತಿಕವಾಗಿ ಮನುಷ್ಯ ತಾನು ಹುಟ್ಟಿದ ಜಾಗ, ತನ್ನ ತಂದೆ-ತಾಯಿ ಹುಟ್ಟಿದ ಜಾಗ, ತನ್ನ ಮಕ್ಕಳಿಗೆ ಜನ್ಮ ನೀಡಿದ ಜಾಗ ಅಲ್ಲಿ ಇರತಕ್ಕಂತಹ ದೈವ, ದೇವರು ಇವೆಲ್ಲವು ಕೂಡ ಒಬ್ಬ ಮನುಷ್ಯನಿಗೆ ನೆನಪುಗಳು ಕಾಡುತ್ತವೆ. ನೆನಪಿಗಿಂತ ದೊಡ್ಡದು ಯಾವುದು ಇಲ್ಲ. ನಾವು ಇಂತಹ ಭಾವನಾತ್ಮಕ ನೆಲೆಯಲ್ಲಿ ಆ ಮನುಷ್ಯರನ್ನು ಗೌರವಿಸಬೇಕಾಗುತ್ತದೆ. ನಾವು ಅವರನ್ನು confidence ಗೆ ತೆಗೆದುಕೊಂಡು ಅವರಿಗೆ ಒಪ್ಪಿಗೆಯಾಗುವಂತಹ ಪುನರ್ವಸತಿಯನ್ನು ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀಮತಿ ತಾರಾ ಅನೂರಾಧ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ನಿಮಿಷ ಮಾತನಾಡುತ್ತೇನೆ. ದಯವಿಟ್ಟು ಅವಕಾಶ ಮಾಡಿ ಕೊಡಿ. ಮಾನ್ಯ ಸಚಿವರು ಆ

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆಕ್ಟ್‌ನಲ್ಲಿ ಏನಿದೆ, ಅದರಲ್ಲಿ ಏನೇನು ಸೇರಿಕೊಂಡಿದೆ ಎಂಬುದರ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಮುಳುಗಡೆಗೆ ಮೂರು ವರ್ಷಗಳ ಹಿಂದೆ ಇದ್ದರೂ ಸಹ, ಅವರು ಸಹ ಪುನರ್ವಸತಿಗೆ ಯೋಗ್ಯರಾಗಿರುತ್ತಾರೆಂದು ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ, ಅದರ ಕಟುಸತ್ಯವನ್ನು ಆಡಳಿತ ಪಕ್ಷದ ಮಾನ್ಯ ಸದಸ್ಯರಾದ ಡಾ॥ಜಯಮಾಲ ರಾಮಚಂದ್ರ ರವರು ಸದನದಲ್ಲಿ ವಿವರವಾಗಿ ತೆರೆದಿಟ್ಟಿದ್ದಾರೆ. ಮಾನ್ಯ ಸದಸ್ಯರು ಇವತ್ತು ಅಲ್ಲಿನ ಪರಿಸ್ಥಿತಿ ಏನಿದೆ ಅದನ್ನೇ ಹೇಳಿದ್ದಾರೆ. ಮಾನ್ಯ ಸದಸ್ಯರು ಅಲ್ಲಿ ಜೊತು ಬೀಳುತ್ತಿರುವ high-tension wire ಕೆಳಗಡೆ ಈಗಲೂ ಮನೆಗಳನ್ನು ಹಾಕಿಕೊಂಡಿದ್ದಾರೆ ಎಂದು ಹೇಳಿದರು. ಡಾ॥ಜಯಮಾಲ ರಾಮಚಂದ್ರ ರವರು ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಬಗ್ಗೆ ಬರೆದು ಡಾಕ್ಟರೇಟ್ ಪದವಿ ತೆಗೆದುಕೊಂಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಮಾತನಾಡಿ.

**ಶ್ರೀ ಎಂ.ಬಿ.ಪಾಟೀಲ (ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವ್ವಾನಿತ ಸದಸ್ಯರಾದಂತಹ ಡಾ॥ಜಯಮಾಲ ರಾಮಚಂದ್ರ ರವರು ಇದರ ಬಗ್ಗೆ ಒಂದು ಅಧ್ಯಯನವನ್ನು ಮಾಡಿದ್ದಾರೆ. ಅಲ್ಲದೇ ಅವರು ಇದರ ಬಗ್ಗೆ ಒಂದು ಪುಸ್ತಕವನ್ನು ಸಹ ಬರೆದಿದ್ದಾರೆ. ಅವರು ಇದನ್ನು ಅಧ್ಯಯನ ಮಾಡಲಿಕ್ಕೆ ಬಂದಾಗ, ಅವರು ವಿಜಯಪುರಕ್ಕೂ ಸಹ ಬಂದಿದ್ದರು. ಅವರು ಇದರ ಬಗ್ಗೆ ಸಂಪೂರ್ಣವಾದ ಮಾಹಿತಿಗಳನ್ನು ಕೊಟ್ಟಿದ್ದಾರೆ. ಈ ಆಕ್ಟ್ ಬಂದಿದ್ದು ಹೇಗೆ? ಡಾ॥ಜಯಮಾಲ ರಾಮಚಂದ್ರ ರವರು ಹೇಳಿದ ವಿಷಯಗಳನ್ನೊಳಗೊಂಡು ಈ ಆಕ್ಟ್ ನಿರ್ಮಾಣವಾಗಿದೆ. ಮಾನ್ಯ ಸಭಾಪತಿಯವರೇ, ಉದಾಹರಣೆಗೆ 519 ಟಿ.ಎಂ.ಸಿ ಯಿಂದ 524.256 ಟಿ.ಎಂ.ಸಿ ನೀರು ಶೇಖರಣೆ ಮಾಡಬೇಕಾದರೆ, ನಾವು 100 ಟಿ.ಎಂ.ಸಿಯಲ್ಲಿ ಶೇಖರಣೆ ಮಾಡುತ್ತೇವೆ. 103 ಟಿ.ಎಂ.ಸಿ ನೀರನ್ನು ಬಳಕೆ ಮಾಡಿಕೊಳ್ಳುತ್ತೇವೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3ರಲ್ಲಿ ನಾವು ಈ ನೀರನ್ನು ಹಿಡಿದುಕೊಳ್ಳಬೇಕಾಗಿದೆ. ನಾವು infrastructure ಒದಗಿಸುತ್ತಿದ್ದೇವೆ. Head works and network canal ಇದೆಲ್ಲವನ್ನು ಮಾಡುತ್ತಿದ್ದೇವೆ. Physically ನೀರು ಸಂಗ್ರಹಣೆ ಮಾಡುವಾಗ, ಆ ನೀರು ಹಿಡಿದುಕೊಳ್ಳುವುದಕ್ಕಿಂತ 6 ತಿಂಗಳ ಮುಂಚಿತವಾಗಿ R & R Settlement ಸಂಪೂರ್ಣವಾಗಿ ಮುಗಿದಿರಬೇಕು. ಅಂದರೆ, ನೀರನ್ನು ಶೇಖರಣೆ ಮಾಡುವಾಗ height increase ಮಾಡುತ್ತಾರೆ. ಆ ನೀರನ್ನು ಶೇಖರಣೆ ಮಾಡುವುದಕ್ಕಿಂತ ಮುಂಚೆ In all respects six months prior to that R & R works should be completed, otherwise you cannot store water. It was very much

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

specified in the Act. ಯಾರು ಭೂಮಿಯನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ ಅವರ ಬದುಕು ಈ ಫಲಾನುಭವಿಗಳಿಗಿಂತ ಉತ್ತಮವಾಗಿರಬೇಕೆಂದು ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಎಲ್ಲರೂ ಮಾತನಾಡಿರುವಂತಹದ್ದನ್ನು ನಾನು ಸಹ ಒಪ್ಪಿಕೊಳ್ಳುತ್ತೇನೆ. ಮಾನ್ಯ ಸಭಾಪತಿಯವರೆ, ಈ ಆಕ್ಟ್‌ನಲ್ಲಿ ಎಲ್ಲವೂ ಒಳಗೊಂಡಿದೆ. ಮಾನ್ಯ ಸದಸ್ಯರು ಈ ಹಿಂದೆ ಏನೇನು ತೊಂದರೆಗಳು ಆಗಿವೆ, ಏನೇನೂ ಅನುಭವಗಳು ಆಗಿವೆ ಎನ್ನುವುದರ ಬಗ್ಗೆ ಎಲ್ಲವನ್ನೂ ಹೇಳಿದ್ದಾರೆ. ಡಾ||ಜಯಮ್ಮಾಲ ರಾಮಚಂದ್ರ ರವರು ಈ ಆಕ್ಟ್‌ನ್ನು ಒಂದು ಬಾರಿ study ಮಾಡಬೇಕು. ಅದೆಲ್ಲವು ಸಹ ಇದರಲ್ಲಿ ಕವರ್ ಆಗಿದೆ. ಅಷ್ಟೇ ಅಲ್ಲ ನಾನು ಈಗಾಗಲೇ ಹೇಳಿದಂತೆ those lands which were acquired earlier, ಅವುಗಳ physical possession ಅನ್ನು ಸರಕಾರ ಇನ್ನೂ ತೆಗೆದುಕೊಂಡಿಲ್ಲ.

**ಡಾ||ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಈ ಆಕ್ಟ್‌ನ್ನು ಅಧಿಕಾರಿಗಳು ಪಾಲನೆ ಮಾಡುತ್ತಿಲ್ಲ ಎನ್ನುವ ವಿಷಯವನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತಿದ್ದೇನೆ.

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ಅದು ಹಳೆಯ ಆಕ್ಟ್, ನಾನು ಈಗ ಹೊಸ ಆಕ್ಟ್‌ನ ಬಗ್ಗೆ ಮಾತನಾಡುತ್ತಿದ್ದೇನೆ.

**ಡಾ||ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಇಲ್ಲ ನಾನು ಮಾನ್ಯ ಸಚಿವರ ಹತ್ತಿರ ಎರಡು ಕೈಗಳನ್ನು ಮುಗಿದು with due respect ಇದೇ ಆಕ್ಟ್ ಬಗ್ಗೆ ಕೇಳುತ್ತಿದ್ದೇನೆ.

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಾದ ಡಾ||ಜಯಮಾಲ ರಾಮಚಂದ್ರ ರವರಿಗೆ ಬಹಳ ಗೌರವದಿಂದ ಹೇಳುವುದೇನೆಂದರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ಹಳೆಯ Land Acquisition Act ಇದ್ದಂತಹ ಸಂದರ್ಭದ ವಿಷಯ. ಇದು new Land Acquisition Act, 2013. ಈ New Land Acquisition Act ಬಂದ ಮೇಲೆ ಈ ತರಹ ಆಗಲಿಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಬಯಸುತ್ತೇನೆ. ಮಾನ್ಯ ಸದಸ್ಯರು ಮಾತನಾಡುತ್ತಿರುವುದು ಹಳೆಯ Land Acquisition Act ಬಗ್ಗೆ. ಹಳೆಯ Land Acquisition Act ನಲ್ಲಿ ಏನ್ನೆಲ್ಲಾ ನ್ಯೂನ್ಯತೆಗಳು ಇದ್ದವು, ಏನೆಲ್ಲಾ ತೊಂದರೆಗಳು ಆಗಿದ್ದವು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ ಅದೆಲ್ಲವೂ ಸತ್ಯ ಇದೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಅವರುಗಳು ಬಹಳಷ್ಟು ನೋವುಗಳನ್ನು ಪಟ್ಟಿದ್ದಾರೆ. ಅವರು ಅಲ್ಲಿರುವಂತಹ ಬಾಂಧವ್ಯ ಎಲ್ಲವನ್ನು ಬಿಟ್ಟು ಹೋಗಬೇಕು. ಆ ಭೂಮಿಯಲ್ಲಿ

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಳೆದಿರುವಂತಹ ಬೆಳೆಗಳನ್ನೆಲ್ಲಾ ಬಿಟ್ಟು ಬೇರೆ ಕಡೆಗೆ ಹೋಗಬೇಕು. ಇದು ಬಹಳ ಕಷ್ಟದ ಕೆಲಸವಾಗುತ್ತದೆ. ಇದು ಮಾನಸಿಕವಾಗಿ ಸಹ ಬಹಳಷ್ಟು ಹಿಂಸೆ ಆಗುತ್ತದೆ. ನಾವು ಅದನ್ನು ನೋಡಿದ್ದೇವೆ. ಕೆಲವರು ಏಕರೂಪ ಪರಿಹಾರ ತೆಗೆದುಕೊಂಡರು. ಅದರಲ್ಲಿ ಬಹಳಷ್ಟು ಮಂದಿ ಹಣವನ್ನು ತೆಗೆದುಕೊಂಡರು. ನಮ್ಮ ಹಿರಿಯರಲ್ಲಿ ಒಂದು ಪದ್ದತಿ ಇದೆ. ಅವರು ಭೂಮಿಯನ್ನು ಮಾರಾಟ ಮಾಡುವುದಕ್ಕೆ ಬಿಡುತ್ತಿರಲಿಲ್ಲ. ಆ ಭೂಮಿಯನ್ನು ಮಾರಾಟ ಮಾಡಿಕೊಂಡ ಮೇಲೆ ಏನೇನೋ ಉದ್ಯೋಗ ಮಾಡುವುದಕ್ಕೆ ಹೋದರು. ಅದರಲ್ಲಿ ಕೆಲವರು tractor ತೆಗೆದುಕೊಂಡರು. ಕೆಲವರು ದಾಬಾ ತೆರೆದರು. ಕೆಲವರು ಟೆಂಪೋ ತೆಗೆದುಕೊಂಡರು. ಏನೇನೋ ಉದ್ಯೋಗ ಮಾಡಿದರು. ಈ ಕಡೆ ಭೂಮಿಯು ಹೋಯಿತು. ಆ ಕಡೆ ಹಣವು ಸಹ ಹೋಯಿತು. ಈ ರೀತಿ ಆದವರು 50% ಕ್ಕಿಂತ ಜಾಸ್ತಿ ಜನ ಇದ್ದಾರೆ.

(626) 4.10 08-06-2017 ಎಂವಿ:ಆರ್‌ಎನ್

**(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ಬಿ.ಪಾಟೀಲ್ (ಮುಂದು...):-**

ಇಲ್ಲಿ ಬಹಳಷ್ಟು ಜನ ಉದ್ಯೋಗ ಮಾಡಿಕೊಂಡು, ಆ ಭೂಮಿಯಲ್ಲಿ ಬೆಳೆ ಬೆಳೆದುಕೊಂಡು ಆರಾಮಾಗಿ ಇದ್ದರು, ಆಗ ಅವರ ಹತ್ತಿರ ಭೂಮಿ ಇತ್ತು ಮತ್ತು ಒಂದು asset ಇತ್ತು. ನಾವು ನೋಡಿದ್ದೇವೆ ಎಲ್ಲರೂ ಬಾಡಿಗೆಯ ಸಲುವಾಗಿ ಟ್ರ್ಯಾಕ್ಸ್ ತೆಗೆದುಕೊಳ್ಳುವುದು, ಜೀಪು ಬರುವಂತಹ ಟ್ರ್ಯಾಕ್ಸ್‌ಗಳನ್ನು ಬಾಡಿಗೆಗೆ ಮಾಡಿಕೊಳ್ಳುವುದು, ಇನ್ನಿತರ ಉದ್ಯೋಗಗಳನ್ನು ಮಾಡುವುದಕ್ಕೆ ಹೋಗಿ ಕೈ ಸುಟ್ಟು ಕೊಂಡಿರುವವರು ಬಹಳಷ್ಟು ಜನ ಇದ್ದಾರೆ. ನನ್ನ ಪ್ರಕಾರ ಮತ್ತು ಮಾನ್ಯ ಸದಸ್ಯರಾದಂತಹ ಶ್ರೀ ಎಸ್.ಆರ್.ಪಾಟೀಲ್ ರವರ ಪ್ರಕಾರ ಶೇಕಡ 25ರಷ್ಟು ಇರಬಹುದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಅಂತಹವರು ಶೇಕಡ 50ರಷ್ಟು ಇದ್ದಾರೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, those who have lost lands, ಎಷ್ಟೋ ಲಕ್ಷಾಂತರ ಕೋಟಿ ರೂಪಾಯಿ ಕೊಟ್ಟರು ಯಾರೂ ಮರಳಿ ಹೊಲ ತೆಗೆದುಕೊಂಡು ಮತ್ತು ಹೊಲ ಮಾಡಿದವರು were not even twenty percent.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಇದು ಬಹಳ ಸತ್ಯ ಎಂದು ನಾನು ಹೇಳುತ್ತಿದ್ದೇನೆ. ಇಲ್ಲಿ ಎಲ್ಲರಿಗೂ ಕೂಡ ಏಕರೂಪದ ಬೆಲೆ ಸಿಗಬೇಕೆಂದು ನಮ್ಮ ಮುಂದೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಮುಖವಾಗಿ ಇರುವ ವಿಷಯ. ಇವತ್ತಿನ ದಿವಸ ನಮ್ಮ ಸರ್ಕಾರ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಿದೆ. ಈಗಾಗಲೇ ಆ ಸಮಿತಿಯ ಎರಡು ಸಭೆಗಳಾಗಿವೆ. ಇವತ್ತಿನ ದಿವಸ ಜಿಲ್ಲೆಯ ಎರಡು ಯೋಜನೆಗಳಿಗೆ ಭೂಮಿ ಕಳೆದುಕೊಂಡಂತಹ ಬಾಗಲಕೋಟೆ ಜಿಲ್ಲೆಯ ಮತ್ತು ವಿಜಯಪುರ ಜಿಲ್ಲೆಯ ರೈತರು ಮಾರ್ಗಸೂಚಿ ದರ ನಿಗದಿಯಿಂದ ಮತ್ತು ಪ್ರಾದೇಶಿಕವಾಗಿ ಸಮಾನ ಭೂ-ಪರಿಹಾರದಲ್ಲಿ ವ್ಯತ್ಯಾಸವಾಗಿರುವುದನ್ನು ವಿರೋಧಿಸಿ ಏಕರೂಪದ ಸಮಾನ ಭೂ-ಪರಿಹಾರ ನೀಡುವುದಕ್ಕೆ ಕೋರಿರುವುದರಿಂದ, ಈ ವಿಷಯವನ್ನು ದಿನಾಂಕ 16.09.2000ರಂದು ಜರುಗಿದ ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3ರ ಅನುಷ್ಠಾನದ ಉನ್ನತ ಅಧಿಕಾರದ ಸಮಿತಿ ಎರಡನೇ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿ, ರೈತರ ಬೇಡಿಕೆಯನ್ನು ಪುರಸ್ಕರಿಸಿ, ಕಾನೂನಿನ ಸಾಧಕ-ಭಾದಕಗಳನ್ನು ವಿಶ್ಲೇಷಿಸಲು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ, ವರದಿಯನ್ನು ಸಲ್ಲಿಸಿ, ಅದು ನಿಲುವಳಿಯಾಗಿರುತ್ತದೆ. ಅದರಂತೆ ನಿಯೋಜಿತ ಅಧ್ಯಕ್ಷರ ಸಭೆಯನ್ನು ದಿನಾಂಕ 21.09.2000ರಂದು ಜರುಗಿಸಿ, ಕೂಲಂಕಷವಾಗಿ ಚರ್ಚಿಸಿ ಅನೇಕ ನಿರ್ಧಾರಗಳನ್ನು ಮಾಡಿದ್ದಾರೆ. ಈಗ ಎಲ್ಲವೂ ಕೂಡ ನಿರ್ಣಯವಾಗಿರುವಂತಹ ಸಂದರ್ಭ ಬಂದಿದೆ, ಅಂತಹ ಸಂದರ್ಭದಲ್ಲಿ consent ಬಗ್ಗೆ ಒಂದು ಗೊಂದಲವೂ ಕೂಡ ಆಗಿದೆ. ತೆಲಂಗಾಣದಲ್ಲಿ ಏನು consent quash ಆಗಿತ್ತು, ಮುಂದೆ ಸುಪ್ರೀಂಕೋರ್ಟ್‌ಗೆ ಹೋಗಿ ಅದನ್ನು ಅಮೆಂಡ್‌ಮೆಂಟ್ ಮಾಡಿ ತರುವಂಥದ್ದು ಆಗಿದೆ. ತಮಗೂ ಕೂಡ ಅದರ ಒಂದು ಪ್ರತಿ ಕೊಡುತ್ತೇನೆ. ಈಗ ಪ್ರಮುಖವಾಗಿ ಏಕರೂಪದ ಬೆಲೆ ನಿರ್ಧಾರವಾಗಬೇಕು ಮತ್ತು ಅದು ಸರಿನೂ ಕೂಡ ಇದೆ. ಅದು ಒಂದೇ ಪ್ರಾಜೆಕ್ಟ್. ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದಲ್ಲಿರುವಂತಹ ಒಂಭತ್ತು ಯೋಜನೆಗಳು ಏನು ಬರುತ್ತವೆ. ಆ ಎಲ್ಲರಿಗೂ ಏಕರೂಪದ ಪರಿಹಾರ ಸಿಗಬೇಕು ಎನ್ನುವುದು ನನ್ನ ಮತ್ತು ಸರ್ಕಾರದ ಅಭಿಪ್ರಾಯವಾಗಿದೆ. ಆದರೆ, ಈಗ ಏನಾಗಿದೆ ಅಂದರೆ ಇವತ್ತಿನ ದಿವಸ ನಾವು ಮತ್ತೆ ಅದನ್ನೆ ಹೇಳಬೇಕಾಗುತ್ತದೆ. ಸರ್ಕಾರ ಈ ಬಗ್ಗೆ ಚಿಂತನೆಯನ್ನು ಮಾಡುತ್ತಿದೆ. ಇನ್ನೂ ಕೆಲವೇ ದಿನಗಳಲ್ಲಿ ಅಥವಾ ಒಂದು ಅಥವಾ ಎರಡು ತಿಂಗಳುಗಳಲ್ಲಿ ನಾವು ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಆದರೆ ಇಲ್ಲಿ ಬರುವಂತಹುದು ಈ Land Acquisition Act ಎಲ್ಲವೂ ಕೂಡ ಚೆನ್ನಾಗಿದೆ. ಮಾನ್ಯ ಸದಸ್ಯರಾದಂತಹ ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) ರವರೆ ದೋಷ Land Acquisition Act ನಲ್ಲಿ ಇಲ್ಲ. ಏನಾಗಿದೆ ಎಂದರೆ, ನಮ್ಮ Guidance Value, Market Value ನಲ್ಲಿ ನಾವು ಏನು ಮಾಡುತ್ತೇವೆ, ನಾವು property ಯನ್ನು ಹತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷ ರೂಪಾಯಿಗಳನ್ನು ಕೊಟ್ಟು ಖರೀದಿ ಮಾಡಿದರೂ ಕೂಡ, ನೋಂದಣಿಯನ್ನು ಎಷ್ಟಕ್ಕೇ ಮಾಡಿಸುತ್ತೇವೆಂದರೆ, ಕೇವಲ ಐವತ್ತು ಸಾವಿರಕ್ಕೆ ಮಾಡಿಸುತ್ತೇವೆ. ಅದರ ನಾಲ್ಕುಪಟ್ಟು ಎಂದರೆ ಏನಾಗುತ್ತದೆ, ಅದರ ಪರಿಹಾರ ಸಿಕ್ಕಿದರೂ ಎರಡು ಲಕ್ಷವಾಗುತ್ತದೆ. ದೋಷ ಇಲ್ಲಿದೆ ಇದು ನಿಜವಾಗಿರುವಂತಹ ಸಮಸ್ಯೆ, ground reality ಇರುವುದು ಇದು. ಒಂದು ವೇಳೆ ನಾವು ಸರಿಯಾಗಿ ಭೂಮಿಯ ಬೆಲೆ ನಮೂದು ಮಾಡಿಕೊಂಡಿದ್ದರೆ, ಅದರ ನಾಲ್ಕುಪಟ್ಟು ಪರಿಹಾರ ಆಗಿರುತ್ತಿತ್ತು. ನಾವು ಹತ್ತು ಲಕ್ಷ ರೂಪಾಯಿಗಳಿಗೆ ಭೂಮಿಯನ್ನು ತೆಗೆದುಕೊಂಡಿರುವಾಗ, ಹತ್ತು ಲಕ್ಷ ರೂಪಾಯಿಗಳಿಗೆ ಭೂಮಿಯನ್ನು ನೋಂದಣಿ ಮಾಡಿಕೊಂಡಿದ್ದರೆ, ನಾಲ್ಕುಪಟ್ಟು ಅಂದರೆ, ನಲವತ್ತು ಲಕ್ಷವಾಗುತ್ತಿತ್ತು. ಆದರೆ, ನೋಂದಣಿ ಮಾಡಿಕೊಳ್ಳುವಾಗ ನಾನು ಐವತ್ತು ಸಾವಿರ ರೂಪಾಯಿಗೆ ನೋಂದಣಿ ಮಾಡಿಸುತ್ತೇವೆ. ಕೆಲವು ಕಡೆ ವೈಟ್‌ಮನಿ ಮತ್ತು ಬ್ಲ್ಯಾಕ್‌ಮನಿ ವಿಷಯ ಇರುತ್ತದೆ. ಆದರೆ, ರೈತರ ಹತ್ತಿರ ಬ್ಲ್ಯಾಕ್‌ಮನಿ ಎಂಬುವಂತಹ ಪ್ರಶ್ನೆ ಬರುವುದಿಲ್ಲ. ಅವರು ಕೇವಲ registration fees avoid ಮಾಡಲಿಕ್ಕೆ ಕಡಿಮೆಯಲ್ಲಿ ನೋಂದಣಿ ಮಾಡಿಸಿಕೊಳ್ಳುತ್ತಾರೆ. ಅದರಿಂದಾಗಿ ಪರಿಹಾರ ಕೂಡ ನಾಲ್ಕು ಪಟ್ಟಷ್ಟು ಕಡಿಮೆಯಾಗುತ್ತದೆ. ಇಂತಹ ದೋಷ ನಮ್ಮಲಿದೆಯೇ ಹೊರತು not in the Land Acquisition Act. ಇವತ್ತಿನ ದಿವಸ ಬಹಳ ಸಮಗ್ರವಾಗಿ Land Acquisition Act ಮಾಡಿದ್ದಾರೆ. ಒಂದು ವೇಳೆ ಈ Land Acquisition Act, 2013 ಇಲ್ಲದಿದ್ದರೆ, ಈ ಹಿಂದೆ consent award ಆಗಿದೆ, ಅದನ್ನು ಬದಿಗಿಡಿ, ನೇರವಾಗಿ ಹಳೇ Land Acquisition Act ಪ್ರಕಾರ ನಾವು ಮಾಡಿದರೆ, ಆಗ ಏನಾಗುತ್ತಿತ್ತು ಅಂದರೆ, ಆ Guidance Value ಪ್ರಕಾರ ಕೊಡಬೇಕೆಂದಾಗಿದ್ದರೆ, ಯಾವುದೇ ಒಂದು ಸರ್ಕಾರ Guidance Value ಇಷ್ಟು ಇದೆ. ಅಷ್ಟು ಪರಿಹಾರವನ್ನು ಕೊಟ್ಟುಬಿಡುತ್ತೇವೆಂದು ಹೇಳಿಬಿಡುತ್ತಿದ್ದರು. Old Act ಪ್ರಕಾರ R&R settlement ಈ ರೀತಿ ಇದೆ, ಆ ಪ್ರಕಾರ ಕೊಟ್ಟುಬಿಡುತ್ತೇವೆ ಎಂದಿದ್ದರೆ, ಬಹಳಷ್ಟು ದೊಡ್ಡ ಅನಾಹುತವಾಗುತ್ತಿತ್ತು. ಅದಕ್ಕೆ ಕೇಂದ್ರ ಸರ್ಕಾರವಾದ ಯು.ಪಿ.ಎ. ಸರ್ಕಾರ ಬಹಳ ವ್ಯಾಪಕವಾಗಿ ಇವತ್ತಿನ ದಿವಸ Land Acquisition Act ಅನ್ನು ತಂದಿದೆ, ನಾವು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ National Highway & State Highway ಗಳು ಹಳ್ಳಿಗಳಲ್ಲಿ ಹಾದು ಹೋಗುವಾಗ ಅಲ್ಲೂ ಕೂಡ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೂಮಿ acquire ಮಾಡಿಕೊಳ್ಳುತ್ತಿದ್ದೀರಾ? ಅಲ್ಲಿ ಎಷ್ಟು ಹಣ ಕೊಡುತ್ತಿದ್ದೀರಿ? ಅದು ತಮಗೆ ಗೊತ್ತಿದೆಯೇ, ಬೆಲೆ ಕಟ್ಟಲಿಕ್ಕೆ ಆಗದಿರುವಷ್ಟು ಹಣ ಕೊಡುತ್ತಿದ್ದೀರಾ? ಇವತ್ತಿನ ದಿವಸ ರೈತ ಹಳ್ಳಿಗಳಲ್ಲಿ ಅವರು ಸ್ಟ್ಯಾಂಪ್ ವೆಚ್ಚ ಉಳಿಸಿಕೊಳ್ಳುವುದಕ್ಕೆ ಕಡಿಮೆ ದರದಲ್ಲಿ ನೋಂದಣಿ ಮಾಡಿಸಿಕೊಂಡಿರುತ್ತಾರೆ ನಿಜ. ಆದರೆ, ನಿಜವಾದ ಮಾರುಕಟ್ಟೆ ಬೆಲೆ ಏನು? ಅಲ್ಲಿ ಅವರು Highway ಗೆ ಒಂದಿಷ್ಟು ಜಾಗ ಬಿಟ್ಟು ಕೊಟ್ಟಿರುತ್ತಾರಷ್ಟೇ, ಒಂದಿಷ್ಟು ಎಕರೆ ಜಮೀನು ಬಿಟ್ಟಿರುತ್ತಾರಷ್ಟೆ. ಆದರೆ, ಇಲ್ಲಿ ಸರ್ವಸ್ವವನ್ನೂ ಬಿಡುತ್ತಾರಲ್ಲ. ಇದಕ್ಕೆ ನೀವೇ ಒಂದು ಹೊಸ ಇತಿಹಾಸ ಹಾಡಿ, ಹೌದು ತಾವು ಇವತ್ತಿನ ದಿವಸ ಹೇಳಿದ್ದೀರಿ ಇಡೀ ಜಗತ್ತಿನ ಹೆಸರಾಂತ ಅಣೆಕಟ್ಟುಗಳಲ್ಲಿ ಇದು ಒಂದು ಎಂದು ಅಲ್ಲವೆ. ಆ ಜಾಗತಿಕ ಮಟ್ಟದ ಅಣೆಕಟ್ಟಿಗೆ, ನೀವು ಅಂತಹುದೆ ಮಟ್ಟದ ಪರಿಹಾರ ಕೊಡುವಂತಹ ಇಚ್ಛಾಶಕ್ತಿಯನ್ನು ಮೆರೆಯಿರಿ. ಈ ಮೂವತ್ತು ಲಕ್ಷ ರೂಪಾಯಿ ಮತ್ತು ನಲವತ್ತು ಲಕ್ಷ ರೂಪಾಯಿ ಯಾವುದು ಇದೆ, ಅದನ್ನು ಅವರು ತುಂಬಾ ಕಡಿಮೆ ಕೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, Old Act ಏನಾಯಿತು ಎಂದರೆ, to evade the stamp duty and registration fee, farmers has tendency to register for lower cost ಎಂದು ಮಾನ್ಯ ಸಚಿವರು ಹೇಳಿದರು. ಹತ್ತು ಲಕ್ಷ ಖರೀದಿ ಮಾಡಿ, ಐವತ್ತು ಸಾವಿರಕ್ಕೆ ನೋಂದಣಿ ಮಾಡಿಕೊಳ್ಳುವುದು, ಅದರ ನಾಲ್ಕುಪಟ್ಟು ಎಂದರೆ ಎರಡು ಲಕ್ಷವಾಗುತ್ತದೆ, ಹತ್ತು ಲಕ್ಷಕ್ಕೆ ನೋಂದಣಿ ಮಾಡಿಕೊಂಡಿದ್ದರೆ, ನಲವತ್ತು ಲಕ್ಷವಾಗುತ್ತಿತ್ತು. To evade stamp duty, it is the usual tendency of farmers to register their sale deeds at the lower cost. Only with the intention to avoid the stamp duty farmers register their sale deeds at lower cost. ಜಮೀನು ಖರೀದಿದಾರರು ಮತ್ತು ಜಮೀನು ಮಾರುವವರು ಏನು ಮಾಡುತ್ತಾರೆಂದರೆ, ಸರ್ಕಾರಕ್ಕೆ ಏಕೆ ಕೊಡುವುದು, ನಿನಗೂ ಬರುವುದಿಲ್ಲ, ನನಗೂ ಬರುವುದಿಲ್ಲ, ಇದು ಸರ್ಕಾರಕ್ಕೆ ಹೋಗುತ್ತದೆಂದು, ಕಡಿಮೆ ಬೆಲೆಗೆ ನೋಂದಣಿ ಮಾಡಿಕೊಳ್ಳುತ್ತಾರೆ, it is the usual tendency in all the villages. ಇದಕ್ಕೆ ನಮ್ಮ ಮುಳಗಡೆಯಾದ ಹಳ್ಳಿಗಳು exceptional ಅಲ್ಲ, ಈ tendency ಎಲ್ಲಾ ಕಡೆ ಇದೆ. ಹಳ್ಳಿಗಳಲ್ಲಷ್ಟೆ ಇಲ್ಲ, ನಗರಗಳಲ್ಲಿಯೂ Urban ಸಹಿತ, ಬೆಂಗಳೂರಿನಲ್ಲೂ ಸಹ ಇದೆ. ಸರ್ಕಾರ ಅಂದರೆ ಯಾರದು ಎನ್ನುವುದೇ ಜನರಿಗೆ ಗೊತ್ತಿಲ್ಲ. ಜನರಿಗೆ ಇದು ವಿದೇಶ ಸರ್ಕಾರದ ಹಾಗೆ ಆಗಿದೆ. ಅದು ನಿಮಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುವುದಿಲ್ಲ, ನಮಗೂ ಬರುವುದಿಲ್ಲ. ಏಕೆ ಸರ್ಕಾರಕ್ಕೆ ಕೊಡುವುದು ಎಂದು ಈ ರೀತಿ ಮಾಡುತ್ತಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಭೂಮಿಯನ್ನು acquire ಮಾಡಿದಾಗ ಶೇಕಡ 50:50 ratio ದಲ್ಲಿ ಸೈಟ್‌ಗಳನ್ನು formation ಮಾಡಿಕೊಡುತ್ತಾರೆ. ಆದರೆ, ಅಲ್ಲಿ ಭೂಮಿ ಕಳೆದುಕೊಂಡವರಿಗೆ ಏಕೆ ಆ policy ಅನ್ವಯ ಮಾಡುವುದಿಲ್ಲ ಎನ್ನುವುದು ನನ್ನ ಮೂಲಭೂತ ಪ್ರಶ್ನೆಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಆಗ old Land Acquisition Act ಅಸ್ತಿತ್ವದಲ್ಲಿದ್ದಾಗ, capitalization system ಆಧಾರದ ಮೇಲೆ ಪರಿಹಾರ ಇತ್ತು. ಅಂದರೆ ಪ್ರತಿ ಎಕರೆಗೆ ಎಷ್ಟು ಆದಾಯ ಬರುತ್ತದೆ ಅದನ್ನು ನೋಡಿಕೊಂಡು cost of cultivation fifty percent ಆಧಾರದ ಮೇಲೆ ಪರಿಹಾರ ಇತ್ತು. Suppose, ಒಂದು ಲಕ್ಷ ರೂಪಾಯಿ ಆದಾಯ ಬಂದರೆ, ಎರಡು ಲಕ್ಷ ರೂಪಾಯಿ ಆದಾಯ ಬರುತ್ತದೆಂದು ಇಟ್ಟುಕೊಳ್ಳೋಣ. ಒಂದು ಲಕ್ಷ ರೂಪಾಯಿ ಸಾಗುವಳಿ ವೆಚ್ಚ ತೆಗೆದು, ಒಂದು ಲಕ್ಷ ರೂಪಾಯಿಗೆ ಹತ್ತರಷ್ಟು ಗುಣಿಸಿ ಹತ್ತು ಲಕ್ಷ ರೂಪಾಯಿ ಕೊಡುವಂತಹ ಒಂದು ವ್ಯವಸ್ಥೆ ಇತ್ತು. ಆಗ sale statistics ಆಧಾರದ ಮೇಲೆ ಎಲ್ಲೂ award ಮಾಡಿಲ್ಲ. Old Act ಇದ್ದಾಗ ಸಹಿತ sale statistics ಅನ್ನು ಬದಿಗೊತ್ತಿ, ಅದನ್ನು ತಿರಸ್ಕರಿಸಿ capitalization method ಮೇಲೆ ಪರಿಹಾರ ಮಾಡುತ್ತಿದ್ದರು. ಆದರೆ, ಈಗ ಏನಾಗಿದೆ ಎಂದರೆ guidance value, ತಾವು ಕಾನೂನನ್ನು ಬಹಳ ಚೆನ್ನಾಗಿ ಓದಿ ಹೇಳಿದ್ದೀರಿ, guidance value ಪ್ರಕಾರವೇ ಮಾಡಬೇಕು. ನೋಡಿ ನನ್ನ ತಾಲ್ಲೂಕಿನ ಪಕ್ಕದಲ್ಲೆ ಇವರ ತಾಲ್ಲೂಕು ಇದೆ. ಸರ್ವೆ ನಂಬರುಗಳು ಒಂದಕ್ಕೊಂದು ಆಜುಬಾಜು ಇರುತ್ತವೆ. ನನ್ನ guidance value ಒಂದು ಲಕ್ಷ ಇರುತ್ತೆಂದು ತಿಳಿದುಕೊಳ್ಳಿ, ಆಗ ನನಗೆ ನಾಲ್ಕು ಲಕ್ಷ ಬರುತ್ತದೆ. ಇವರಿಗೆ guidance value ಇವರದ್ದು ಪಕ್ಕದ ಜಮೀನು ಹತ್ತು ಸಾವಿರವಿದ್ದರೆ ಅವರಿಗೆ ನಲವತ್ತು ಸಾವಿರ ರೂಪಾಯಿ ಬರುತ್ತದೆ. ನೋಡಿ nature ಒಂದೇ ಇರುತ್ತದೆ. Fertility ಒಂದೇ ಇರುತ್ತದೆ. ಎಲ್ಲಾ ರೀತಿಯಲ್ಲೂ ಒಂದೇ ನಮೂನೆ ಇರುತ್ತದೆ. Same fertility, ಎರೆ ಜಮೀನು ಅಂದರೆ, ಎರೆ ಜಮೀನು. ಮಸಾರಿ ಜಮೀನು ಅಂದರೆ, ಮಸಾರಿ ಜಮೀನು. ಉಸುಕು ಜಮೀನು ಅಂದರೆ ಉಸುಕು ಜಮೀನು. ಜಮೀನು ಅಂದರೆ ಎಲ್ಲದರಲ್ಲೂ ಒಂದೇ ಇರುತ್ತದೆ. ನನ್ನ ಪಕ್ಕದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಮೀನೆ I am getting 4 lakhs, he is getting 40 thousand ಈ disparity ಹೋಗಲಾಡಿಸುವುದಕ್ಕೆ ಸರ್ಕಾರ ಸೂಕ್ತವಾದಂತಹ ಕ್ರಮ ಕೈಗೊಳ್ಳುವಂಥದ್ದು ಬಹಳ ಒಳ್ಳೆಯದು, ಇವತ್ತಿನ ದಿವಸ ನಿಮ್ಮದು ಬಾಗಲಕೋಟೆ ಜಿಲ್ಲೆ ಮತ್ತು ವಿಜಯಪುರ ಜಿಲ್ಲೆ they are adjoining lands. ಮಧ್ಯದಲ್ಲಿ ಕೃಷ್ಣೇ ಹರಿದು ಹೋಗಿದೆ. ಆದರೆ, ಜಮೀನು ಆ ಕಡೆ ಕೃಷ್ಣೇ ನದಿ ಆ ಕಡೆ ಇರುವಂತಹ ವಿಜಯಪುರ ಜಮೀನು, ಮತ್ತು ಈ ಕಡೆ ಇರುವಂತಹ ಬಾಗಲಕೋಟೆ ಜಮೀನು there is no difference in fertility. ಆದರೆ, ಮುಳುಗಡೆಯಾಗುವಂತಹ ಜಮೀನು Gangetic Belt ನ ಭೂಮಿ.

(ಮುಂದು...)

**ಉಪಸಭಾಪತಿಯವರ ಉಪಸ್ಥಿತಿ**

(627) 08.06.2017 04.20 LL-VK

**ಶ್ರೀ ಎಸ್.ಆರ್. ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- (ಮುಂದುವರೆದಿದ್ದು...)**

ಇಡೀ ದೇಶದಲ್ಲಿ ಫಲವತ್ತತೆಗೆ ತನ್ನದೇ ಆದಂತಹ ಹೆಸರು ಪಡೆದಂತಹ Ganga Gangetic beltಗೆ ಸರಿಸಮಾನವಾದಂತಹ ಫಲವತ್ತತೆ ಹೊಂದಿದಂತಹ ಭೂಮಿಗಳಿವು. ಆದರೆ, ಈ ಉತ್ತರದಲ್ಲಿ ಏನು ವ್ಯತ್ಯಾಸವಿಲ್ಲ. ಬಿಜಾಪುರ ಜಿಲ್ಲೆಯ ಜಮೀನುಗಳಿಗೆ ಪರಿಹಾರ ಮೊತ್ತ ಬೇರೆ. ಬಾಗಲಕೋಟೆ ಜಿಲ್ಲೆಯ ಜಮೀನುಗಳಿಗೆ ಪರಿಹಾರ ಮೊತ್ತ ಬೇರೆ. ಆಮೇಲೆ ನನ್ನ ಹಳ್ಳಿಯ ಜಮೀನಿಗೆ ಪರಿಹಾರ ಮೊತ್ತ ಬೇರೆ ಮತ್ತು ನನ್ನ ಪಕ್ಕದಲ್ಲಿರುವ ಹಳ್ಳಿಯ ಜಮೀನಿಗೆ ಪರಿಹಾರ ಮೊತ್ತ ಬೇರೆ. ಈ ರೀತಿಯಾದರೆ ಬಹುತರವಾಗಿ ಇದ್ದೊಂದು ದೊಡ್ಡ ಸಮಸ್ಯೆಯಾಗುತ್ತದೆ. ಬಹುತರವಾಗಿ ಇದು ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಯಾಗುತ್ತದೆ. ಯಾರು ಯಾರು ನೀರು ಮುಳುಗಡೆಯಿಂದಾಗಿ ಭೂಮಿಯನ್ನು ಕಳೆದುಕೊಳ್ಳುತ್ತಾರೆ, ಅವರು ಅದರಿಂದ ಬಾಧಿತರಾಗಿ ಅವರಲ್ಲಿ ದೊಡ್ಡ ಅಶಾಂತಿ ಹುಟ್ಟಿಕೊಳ್ಳುತ್ತದೆ, ಹಾಹಾಕಾರವಾಗುತ್ತದೆ, ಇದಕ್ಕೆ ಸರ್ಕಾರ... ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಈ ಬಗ್ಗೆ ಎರಡು ಸಭೆಗಳನ್ನು ಮಾಡಿದ್ದಾರೆ... ಆದರೆ, ಇದರ ಮೇಲೆ ಒಂದು ವಸ್ತುನಿಷ್ಠವಾದಂತಹ ನಿರ್ಣಯಕ್ಕೆ ಬರದೇ ಇದ್ದರೆ ಇದು ಸರಳವಾಗಿ ಮುಕ್ತಾಯವಾಗುವಂತಹ ಕೆಲಸವಲ್ಲ. ಮುಳುಗಡೆಯಾದ ಪ್ರದೇಶದಲ್ಲಿ ನಾವು Land Acquisition Act invoke ಮಾಡುತ್ತೇವೆ. As per the guidance value we will instruct the land acquisition officers and we will get the

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

award frame and we will disperse the compensation ಅಂದರೆ, this will not at all be solved.

**ಸಭಾಪತಿಯವರು:–** ಹೌದು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಎಲ್ಲರಿಗೂ ಏಕರೂಪದ ಪರಿಹಾರಧನವನ್ನು ನೀಡಬೇಕಾಗುತ್ತದೆ. ಹಿಂದೆ, 519.6 ಅಡಿ ಆಲಮಟ್ಟಿ ಜಲಾಶಯದ ಎತ್ತರ ಏರಿಸುವಾಗ ಮುಳುಗಡೆ ಪ್ರದೇಶದ ಖುಷ್ಕಿ ಜಮೀನಿಗೆ ಒಂದು ನಿಗದಿತ ಹಣ, ಒಂದು peak ಬೆಳೆಯುವಂತಹ ನೀರಾವರಿ ಜಮೀನಿಗೆ ಇಷ್ಟು... ಎರಡು peak ಬೆಳೆಯುವಂತಹ ನೀರಾವರಿ ಜಮೀನಿಗೆ ಇಂತಿಷ್ಟು ಎಂದು ಹೇಳಿ ದರ ನಿಗದಿ ಮಾಡಿ ಎಲ್ಲರನ್ನೂ ಸಮಾನವಾಗಿ ಮಾಡಿ ಪರಿಹಾರದ ಹಣ ಕೊಟ್ಟಿದ್ದರು. It may be meager compensation. ಡಾ॥ ಜಯಮಾಲರವರು ಹೇಳಿದಂತಹ ಸಮಸ್ಯೆಗಳು ಅಕ್ಷರಶಃ ಸತ್ಯ. ಆದರೆ, ಹೊಸ 2013ರ ಭೂಸ್ವಾಧೀನ ಕಾಯಿದೆ, ಇದು ಭೂಸ್ವಾಧೀನ ಕಾಯಿದೆಯಲ್ಲ. ಇದು ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಯಿದೆ. ಮೊದಲು ಅದರ ಟೈಟಲ್ Land Acquisition Act ಎಂದು ಇತ್ತು. ಈಗ Land Acquisition, Rehabilitation and Resettlement Act, 2013 ಎಂದು ಬಂತು. ಟೈಟಲ್ ಹೇಗಿದೆ ಆ ಟೈಟಲ್ ಪ್ರಕಾರ ಬಹಳಷ್ಟು ನ್ಯೂನತೆಗಳನ್ನು ಹೋಗಲಾಡಿಸಿದ್ದಾರೆ. ಆದರೆ, ಆ ಎಲ್ಲಾ ನ್ಯೂನತೆಯೊಳಗೆ ಏಕರೂಪದ ಪರಿಹಾರವನ್ನು ಕೊಡುವುದಕ್ಕೆ ಅವಕಾಶವಿಲ್ಲ. ಇವತ್ತಿನ ದಿವಸ ನನ್ನ ಸರ್ವೆ ನಂಬರ್‌ನಲ್ಲಿರುವ ಜಮೀನಿಗೆ ಒಂದು ಪರಿಹಾರ ಧನ, ನನ್ನ ಪಕ್ಕದಲ್ಲಿರುವ ಜಮೀನಿಗೆ ಒಂದು ಪರಿಹಾರ ಧನ ನೀಡುವುದು ಸರಿಯಲ್ಲ. ಈ ರೀತಿಯಾದರೆ ಜನರು ಸರ್ಕಾರವನ್ನೂ ಕ್ಷಮಿಸುವುದಿಲ್ಲ. ತಮಗೂ ಕ್ಷಮಿಸುವುದಿಲ್ಲ. ಇದೊಂದು ದೊಡ್ಡ ಅವಾಂತರವಾಗಲಿಕ್ಕೆ ನಾಂದಿಯಾಗುತ್ತದೆ. There is a very well provision in the new Land Acquisition Act itself. ಈಗ ಸರ್ಕಾರ ಹೆಚ್ಚಿಗೆ ಕೊಡಲಿಕ್ಕೆ ಯಾವುದೇ ನಿರ್ಬಂಧವಿಲ್ಲ. ಈ ಲ್ಯಾಂಡ್ ಅಕ್ವಿಜೇಶನ್ ಆಕ್ಟ್‌ನಲ್ಲಿ ನಿಗದಿ ಮಾಡಿದ್ದಕ್ಕಿಂತಲೂ ಹೆಚ್ಚಿಗೆ ಕೊಡಲಿಕ್ಕೆ ಯಾವುದೇ ತೊಂದರೆ ಇಲ್ಲ. ಕೊಡಬಹುದು. ಈ ವಿಷಯವನ್ನು ಸಚಿವರು ಮತ್ತು ಮುಖ್ಯಮಂತ್ರಿಗಳು ಗಮನಿಸಬೇಕೆಂದು ಹೇಳಬಯಸುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಸರ್ಕಾರಕ್ಕೆ ಇರುವ ಅವಕಾಶದ ಜೊತೆಗೆ, ಇಡೀ ಸದನದ ಸಹಮತವಿದೆ, ಪಕ್ಷಾತೀತವಾಗಿ ನಾವೆಲ್ಲರೂ ಅದಕ್ಕೆ ಒಪ್ಪಿಗೆ ಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೆ, ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ಕೂಡ ಅದೇ ವಿಚಾರವನ್ನು ಹೇಳುತ್ತಿದ್ದೇನೆ. Government hands are not tied here. ಈಗಿನ New Land Acquisition Act ನಲ್ಲಿ ಏನು ಪರಿಹಾರ ಹಣ ಕೊಡಬೇಕೆಂದು ಇದೆ, ಅದಕ್ಕಿಂತಲೂ ಹೆಚ್ಚಿಗೆ ಹಣವನ್ನು ಸರ್ಕಾರದವರು ಕೊಡಬಹುದು. ಕೊಡಬಾರದೆಂದು ಯಾರೂ ಹೇಳಿಲ್ಲ. ಆದರೆ, ಏಕರೂಪವಾಗಿ ಕೊಡಬೇಕು. ಸಮಾನತೆಯಿಂದ ಪರಿಹಾರಧನವನ್ನು ಕೊಡಬೇಕು. ಖುಷ್ಕಿ ಜಮೀನಿಗೆ ಇಷ್ಟು, ಒಂದು peak ಬೆಳೆಯುವಂತಹ ನೀರಾವರಿ ಜಮೀನಿಗೆ ಇಷ್ಟು, ಎರಡು peak ಬೆಳೆಯುವಂತಹ ನೀರಾವರಿ ಜಮೀನಿಗೆ ಇಷ್ಟು. ಈ ರೀತಿ ಏಕರೂಪತೆಯಿಂದ ಪರಿಹಾರಧನ ಕೊಟ್ಟರೆ ಇವತ್ತಿನ ದಿವಸ ನಮಗೆ ನಮ್ಮ ಪಾಲಿನ ನೀರಿನ ಹಕ್ಕನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಕೃಷ್ಣೆ ಉತ್ತರ ಕರ್ನಾಟಕದ ಜೀವನಾಡಿ. ಆದಷ್ಟು ಬೇಗ ಇದರ ಬಗ್ಗೆ ತೀರ್ಮಾನ ಮಾಡಿಕೊಳ್ಳಬೇಕು. ಮಾನ್ಯ ಸಚಿವರು ಉತ್ಸಾಹಿ ಯುವಕರಿದ್ದಾರೆ, ಪ್ರಭಾವಿ ಸಚಿವರಿದ್ದಾರೆ ಹಾಗೂ ಪ್ರಸ್ತುತ ಅಧಿಕಾರದಲ್ಲಿದ್ದಾರೆ. ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ, ಕಾಳಜಿ ವಹಿಸಿ ಮತ್ತು ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಎಲ್ಲ ಜನಪ್ರತಿನಿಧಿಗಳ ವಿಶ್ವಾಸ ತೆಗೆದುಕೊಂಡು ಏಕರೂಪದ ಪರಿಹಾರಧನವನ್ನು ಕೊಡಲಿಕ್ಕೆ ಮಾನ್ಯ ಸಚಿವರು ತಕ್ಷಣ ಕ್ರಮ ತೆಗೆದುಕೊಳ್ಳುವುದು ಬಹಳ ಅವಶ್ಯಕತೆ ಇದೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ...

**ಉಪಸಭಾಪತಿಯವರು:–** ಮಾನ್ಯ ರಾಮಚಂದ್ರಗೌಡರೆ, ಮಾನ್ಯ ಸಚಿವರು ಅವರ ಉತ್ತರ ಕೊಡಲಿ. ಆ ನಂತರ ತಮಗೆ ಅವಕಾಶ ಕೊಡುತ್ತೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅವರು ಕೊಟ್ಟಿರುವಂತಹ ಉತ್ತರದ ಮೇಲೆ ನಾನು ಮಾತನಾಡಬೇಕಾಗಿದೆ.

**ಉಪಸಭಾಪತಿಯವರು:–** ತಾವು ಹಿರಿಯ ಸದಸ್ಯರಿದ್ದೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಏನು ಕಾನೂನು ಆಗಿದೆ. ಆ ಕಾನೂನನ್ನು ಪೂರ್ತಿಯಾಗಿ ಬಿಡಿಸಿ, ಬಿಡಿಸಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಕಾನೂನಿಗೂ ಈ ಉತ್ತರಕ್ಕೂ ಏನು ಸಂಬಂಧವಿಲ್ಲ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ಅದನ್ನು ಹೇಳುತ್ತೇನೆ. ಇನ್ನೂ ನಾನು ನನ್ನ ಉತ್ತರವನ್ನು ಮುಕ್ತಾಯ ಮಾಡಿಲ್ಲ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಪರಿಹಾರ ಯಾವಾಗ ಕೊಡುತ್ತಾರೆ ಎನ್ನುವಂತಹ ಮಾತಿಲ್ಲ. ಅದರ ಉತ್ತರ ಬಂದರೆ ಸರಿ ಹೋಗುತ್ತದೆ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ನನ್ನ ಉತ್ತರ ಮುಕ್ತಾಯ ಮಾಡುತ್ತೇನೆ. ನಾನು ನನ್ನ ಉತ್ತರ ಹೇಳಿ ಮುಗಿಸಿದ ತರುವಾಯ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದರೆ ಒಳ್ಳೆಯದು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಪ್ರತಿಯೊಂದು ಪ್ಯಾರಾಗ್ರಾಫ್‌ನಲ್ಲಿಯೂ ಕೂಡ ತಾಲ್ಲೂಕಿನ ಉಪ ನೋಂದಣಿ ಅಧಿಕಾರಿಗಳಿಂದ ಮಾಹಿತಿ ಪಡೆದು ಮೂಲ ಮಾರುಕಟ್ಟೆ ಬೆಲೆ ನಿಗದಿಪಡಿಸಲಾಗುವುದು ಎಂದು ಇದೆ.

**ಉಪಸಭಾಪತಿಯವರು:–** ಮಾನ್ಯ ರಾಮಚಂದ್ರಗೌಡರೆ, ತಮಗೆ ನಂತರ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ಸಚಿವರು ಈಗ ತಮ್ಮ ಉತ್ತರ ಮುಕ್ತಾಯ ಮಾಡಲಿ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ನನ್ನ ಉತ್ತರವನ್ನು ಮುಕ್ತಾಯ ಮಾಡುತ್ತೇನೆ.

**ಉಪಸಭಾಪತಿಯವರು:–** ಮಾನ್ಯ ಸಚಿವರೆ, ಸುಮಾರು ಒಂದು ತಾಸು ಆಯಿತು. ದಯಮಾಡಿ, ತಮ್ಮ ಉತ್ತರವನ್ನು ಬೇಗ ಮುಕ್ತಾಯ ಮಾಡಿ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೆ, ಇನ್ನು ಕೇವಲ ಐದು–ಹತ್ತು ನಿಮಿಷದಲ್ಲಿ ಮುಕ್ತಾಯ ಮಾಡುತ್ತೇನೆ. ಮಾನ್ಯ ಎಸ್.ಆರ್. ಪಾಟೀಲ್‌ರವರು ಹಿರಿಯ ಸದಸ್ಯರು, ಮಾಜಿ ಮಂತ್ರಿಗಳು ಅವರು ಸಂಪೂರ್ಣವಾಗಿ ವಿಷಯವನ್ನು ತಿಳಿದವರು. ಮೇಲಾಗಿ ವಕೀಲರು ಕೂಡ ಅವರು ವಕೀಲರಾಗಿ ಲ್ಯಾಂಡ್ ಅಕ್ವಿಷೇಶನ್ ಪ್ರಕರಣಗಳನ್ನು ಡೀಲ್ ಮಾಡಿದ್ದಾರೆ. ಅದರ ಬಗ್ಗೆ ಅವರಿಗೆ ಸಂಪೂರ್ಣವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊತ್ತಿದೆ. ಗೌರವಾನ್ವಿತ ಸದಸ್ಯರು ಈಗಾಗಲೇ ಹೇಳಿದರು, "ಹೈವೇಸ್ ಆಕ್ಟ್ ಇದೆ, ಬಿ.ಡಿ.ಎ. ಆಕ್ಟ್ ಇದೆ ಮತ್ತು ವಿವಿಧ ಆಕ್ಟ್‌ಗಳು ಸಹ ಇವೆ." ಪ್ರಾರಂಭಿಕವಾಗಿ ಎಲ್ಲಾ ಆಕ್ಟ್‌ಗಳವರು ಏನು ತಿಳಿದುಕೊಂಡಿದ್ದಾರೆಂದರೆ, "ಲ್ಯಾಂಡ್ ಅಕ್ವಿಷೇಶನ್ ಆಕ್ಟ್ ನಮ್ಮ ಆಕ್ಟ್‌ಗೆ ಅನ್ವಯವಾಗುವುದಿಲ್ಲವೆಂದು ತಿಳಿದುಕೊಂಡುಬಿಟ್ಟಿವೆ." ರೈಲ್ವೇಸ್ ಇರಬಹುದು, ಹೈವೇಸ್ ಇರಬಹುದು, ಬಿ.ಡಿ.ಎ. ಇರಬಹುದು, ಇನ್ನಿತರ ಆಕ್ಟ್‌ಗಳು ಇರಬಹುದು ಈ ಎಲ್ಲರೂ ಆ ರೀತಿ ತಿಳಿದುಕೊಂಡಿದ್ದರು. ನಾನು ಈ ಬಗ್ಗೆ ಅನೇಕ ಬಾರಿ ಹೇಳಿದೆನು. ಮುಂದೆ ಆರ್ ಅಂಡ್ ಆರ್ ಕಮೀಷನರ್ ಅವರನ್ನು ಕರೆಯಿಸಿ ನಾನು ಅವರಿಗೆ ಈ ಬಗ್ಗೆ ಹೇಳಿಸಬೇಕಾಯಿತು. ಈ ಲ್ಯಾಂಡ್ ಅಕ್ವಿಷೇಶನ್ ಆಕ್ಟ್‌ನಲ್ಲಿ... ನ್ಯೂ ಲ್ಯಾಂಡ್ ಅಕ್ವಿಷೇಶನ್ ಆಕ್ಟ್ ಏನಿದೆ, ಅದರಲ್ಲಿ whether it is BDA, Highway, Railway or any other Act, ಇದನ್ನು ಗಮನದಲ್ಲಿಟ್ಟುಕೊಂಡು... ಇದರಲ್ಲಿ ಏನು 4 ಪಟ್ಟು ಪರಿಹಾರ ಇದೆ, R & R compensations ಇದೆ, ಇವೆಲ್ಲವನ್ನೂ ಒಳಗೊಂಡಿದ್ದರೆ ಮಾನ್ಯ ಎಸ್.ಆರ್. ಪಾಟೀಲರು ಹೇಳಿದಂತೆ... ಈಗ ಪರಿಹಾರ 4 ಪಟ್ಟು ಏನು ಇದೆ, ಅದನ್ನು ನಾನು 6 ಪಟ್ಟು ಕೊಡುತ್ತೇನೆಂದರೆ ಯಾರೂ prevent ಮಾಡುವುದಿಲ್ಲ.

**(ಗೊಂದಲ)**

**ಶ್ರೀ ಬಸನಗೌಡ ಆರ್.ಪಾಟೀಲ(ಯತ್ನಾಳ್):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು 40 ಲಕ್ಷ ಪರಿಹಾರಧನ ಕೊಡುತ್ತೇನೆಂದು ಘೋಷಣೆ ಮಾಡಲಿ, ಮುಂದೆ ಈ ಬಗ್ಗೆ ಯಾವುದೇ ಚರ್ಚೆಯನ್ನೇ ಮಾಡುವುದಿಲ್ಲ.

**(ಗೊಂದಲ)**

**ಶ್ರೀ ನಿರಾಣಿ ಹನಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೆ, ಹೆಚ್ಚಿಗೆ ಪರಿಹಾರ ಕೊಡಲಿಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ.

**(ಗೊಂದಲ)**

**ಉಪಸಭಾಪತಿಯವರು:–** ಮಾನ್ಯ ನಿರಾಣಿಯವರೆ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೆ, ದಯವಿಟ್ಟು ನಾನು ಸರ್ಕಾರದ ಉತ್ತರ ನೀಡುವುದಕ್ಕೆ ಅವಕಾಶ ಕೊಡಿ. ನಾನು ಉತ್ತರ ನೀಡಬೇಕೋ ಅಥವಾ ಬೇಡವೋ..? ಉತ್ತರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕಲ್ಲವೇ? Land Acquisition Act ನ ಪ್ರಕಾರ ಯಾವುದೇ ಪರಿಹಾರಧನವನ್ನು ಕಡಿಮೆ ಮಾಡುವುದಕ್ಕೆ ಆಗುವುದಿಲ್ಲ. ಅದರ ಮೇಲೆ ಏನು ಬೇಕಾದರೂ ಕೊಡಬಹುದು. ಆದರೆ, ಯಾವುದೇ component ಕೂಡ ಕಡಿಮೆ ಮಾಡುವುದಕ್ಕೆ ಆಗುವುದಿಲ್ಲ. R & R component 5ಲಕ್ಷ ಇರುತ್ತದೆ. ಇದುವರೆಗೆ ನಾನು ಏನು ಹೇಳಿದ್ದೇನೆ ಅವುಗಳಲ್ಲಿ any content or component of the act ಯಾವುದನ್ನು ಕೂಡ ಬಿಡುವುದಕ್ಕೆ ಬರುವುದಿಲ್ಲ. ಈಗ ಎಲ್ಲರಿಗೂ ಕೂಡ ಅದು ಅರ್ಥವಾಗಿದೆ. ಬಹಳಷ್ಟು ಸಲಹೆಗಳು ಬಂದಿವೆ ಮತ್ತು ಈಗ consent ಬಗ್ಗೆ ನಮಗೆ ಗೊಂದಲವಿತ್ತು. ಈಗ ಅದು ತೆಲಂಗಾಣ ರಾಜ್ಯದಿಂದ ಸ್ಪಷ್ಟೀಕರಣವಾಗಿದೆ. Consent ಮಾಡಿಕೊಳ್ಳುವುದಕ್ಕೆ ಇವತ್ತಿನ ದಿವಸ ಅವಕಾಶವಿದೆ. ತೆಲಂಗಾಣ ರಾಜ್ಯದಲ್ಲಿ ಏನು ತಪ್ಪಾಗಿತ್ತು ಎಂದರೆ, ಅದರಲ್ಲಿ R & R component ಇರಲಿಲ್ಲ. ಈಗ ಮಾನ್ಯ ಉಚ್ಚ ನ್ಯಾಯಾಲಯದವರು struck down ಮಾಡಿದ್ದಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿ ಅವರು ಅದನ್ನು ತಿದ್ದುಪಡಿ ಮಾಡಿದ್ದಾರೆ. ಅದರ ಪ್ರತಿ ಕೂಡ ನಮ್ಮ ಬಳಿಯಿದೆ. ಅದು ಕೇವಲ 10 ದಿವಸದ ಹಿಂದೆ ಆಗಿದೆ. President assent ಆಗಿದ್ದು ಕೇವಲ 10 ದಿವಸದ ಹಿಂದೆ. Yes, it is the best way. ರಾಷ್ಟ್ರಪತಿಗಳು ಇದಕ್ಕೆ 10 ದಿವಸಗಳ ಹಿಂದೆ consent ಕೊಟ್ಟಿರುವುದು. ಅದು ಕೂಡ ನಮ್ಮ ಬಳಿಯಿದೆ. After SC judgement they have taken an amendment to that Act. ತದನಂತರ ಈ ವಿಷಯಕ್ಕೆ ಸ್ಪಷ್ಟೀಕರಣ ದೊರೆಯಿತು. In view of keeping all entitlements, ಎಲ್ಲವನ್ನೂ ಇಟ್ಟುಕೊಂಡು... 4 ಪಟ್ಟು ಪರಿಹಾರ ಕೊಡುವುದು ಮತ್ತು ಏನೇನು ಸೌಲಭ್ಯಗಳು ಸಿಗಬೇಕು ಎಲ್ಲವನ್ನು ಸಂತ್ರಸ್ತರಿಗೆ ಈ ಆಕ್ಟ್ ಪ್ರಕಾರ ಕೊಟ್ಟು, ನಂತರ ಅದರ ಮೇಲೆ ಹೆಚ್ಚು ಕೊಡಬೇಕಾದರೆ ಅದನ್ನು consent ಪ್ರಕಾರ ಒಪ್ಪಿಕೊಳ್ಳಬೇಕೆಂದು ಕೂಡ ಇವೊತ್ತು ಸಾಬೀತಾಗಿದೆ. ಇಲ್ಲಿ ಅನೇಕ ಸಲಹೆಗಳು ಬಂದಿವೆ. ಅವುಗಳನ್ನು ನಾವು ಇಲ್ಲಿ ಉಲ್ಲೇಖ ಮಾಡದೇ ಇದ್ದರೆ ತಪ್ಪಾಗುತ್ತದೆ. ಟ್ರ್ಯಾಕ್ಟರ್, ಎತ್ತಿನಗಾಡಿ ನಿಲ್ಲಿಸುವುದಕ್ಕೆ ಜಾಗವಿರಬೇಕು. ನಮ್ಮ ದನಕರುಗಳಿಗೆ ಕೊಟ್ಟಿಗೆ ಕಟ್ಟಿಕೊಳ್ಳುವುದಕ್ಕೆ ಜಾಗವಿರಬೇಕು. ಇವೆಲ್ಲವೂ ಸಹ ಆಕ್ಟ್‌ನಲ್ಲಿ ಬಹುತೇಕ ಸೇರ್ಪಡೆಯಾಗಿವೆ. ನಾನು ಎಲ್ಲವನ್ನೂ ಕೂಡ ಗಮನಿಸಿದ್ದೇನೆ. ಸ್ಮಶಾನ ಬಗ್ಗೆ ಬಂದಿದೆ ಮತ್ತು ಇನ್ನೊಂದು ಮುಖ್ಯ ವಿಚಾರವೆಂದರೆ ನೀರು ಕೆಳಗಡೆ ಹೋದಾಗ ಅಲ್ಲಿನ ಭೂಮಿಯನ್ನು ಸಾಗುವಳಿ ಮಾಡಿಕೊಳ್ಳುವವರು ಪಂಪ್‌ಸೆಟ್ ಮುಖಾಂತರ ನೀರನ್ನು ತೆಗೆದುಕೊಂಡು ಸಾಗುವಳಿ ಮಾಡುತ್ತಾರೆ. ಆದರೆ, ಬಹಳಷ್ಟು ಕಡೆ ಈ ಅವಕಾಶವನ್ನು ನಾವು ಅಧಿಕೃತವಾಗಿ ಅನುಮತಿ ಕೊಡಬಹುದೇ ಎನ್ನುವಂತಹ ಗೊಂದಲ ನನಗೂ ಸಹ ಇದೆ. ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದುವರೆಗೆ ಅದನ್ನು prevent ಮಾಡಿಲ್ಲ. ಮಲಪ್ರಭಾದಲ್ಲಿ 41 ಟಿ.ಎಂ.ಸಿ. ನೀರಿತ್ತು. ಈಗ 27 ಟಿ.ಎಂ.ಸಿ.ಗೆ ಬಂದಿದೆ. ಅಂದರೆ ಸುಮಾರು 27 ಟಿ.ಎಂ.ಸಿ. ಯಿಂದ 41 ಟಿ.ಎಂ.ಸಿ.ಯವರೆಗಿನ ನೀರನ ಭೂಮಿ ಕೂಡ land acquisition ಆಗಿದೆ. ಆದರೆ, ಅವೆಲ್ಲವನ್ನೂ ಆ ರೈತರೇ ಉಳುಮೆ ಮಾಡುತ್ತಿದ್ದಾರೆ. ಅದನ್ನು ಹಿಂದಿನ ಸರ್ಕಾರವಾಗಲಿ ಅಥವಾ ಈಗಿನ ಸರ್ಕಾರವಾಗಲಿ ಯಾರೂ ಅದನ್ನು ಪ್ರಶ್ನೆ ಮಾಡುತ್ತಿಲ್ಲ. ನನ್ನ ಮತ ಕ್ಷೇತ್ರದಲ್ಲಿ ಕೂಡ ಈಗ ಜೇನಾಪುರ್, 519ರಲ್ಲಿಯೇ ಮುಳುಗಡೆಯಾಗಿವೆ. ಇನ್ನೂ ಕೂಡ ಅವರು ಬೆಳೆಗಳನ್ನು ಬೆಳೆದುಕೊಳ್ಳುತ್ತಿದ್ದಾರೆ. ಯಾರೂ ಸಹ ಸರ್ಕಾರದಿಂದ ಯಾವುದೇ ಪರಿಹಾರಧನ ಅವರಿಂದ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದನ್ನು ಅಧಿಕೃತವಾಗಿ ಕೊಡುವುದಕ್ಕೆ ಬರುತ್ತದೆಯೇ ಅಥವಾ ಇಲ್ಲವೇ ಎನ್ನುವುದು ನನಗೂ ಸಹ ಗೊಂದಲವಿದೆ. ಅದನ್ನು ಕಾನೂನು ಇಲಾಖೆ ಇವತ್ತಿನ ದಿವಸ ಹೇಳಬೇಕಾಗಿದೆ. ನಮ್ಮ dams safety ಒಳಗೊಂಡಂತೆ ಇವೊತ್ತು ನಿರ್ಧಾರವಾಗಬೇಕಾಗಿದೆ. ಎನ್.ಟಿ.ಪಿ.ಸಿ. ಬಗ್ಗೆ Land Acquisition Act ಆಯಿತು, ರೈಲ್ವೇಸ್ ಏನು ಆಯಿತು. ಆ ಎಲ್ಲಾ ವಿಚಾರಗಳನ್ನು ಇವತ್ತಿನ ದಿವಸ ಪ್ರಸ್ತಾಪ ಮಾಡಿದ್ದಾರೆ. ಆ ನಂತರ ಮಾನ್ಯ ಸದಸ್ಯರೊಬ್ಬರು ನಡುಗಡ್ಡೆಯಾಗಿರುತ್ತದೆಯೆಂದು ಹೇಳಿದರು. ಬಹುಶಃ ಇದು ಆಲಮಟ್ಟಿ ಪಕ್ಕ ಇದೆಯಲ್ಲಾ, ಇಂತಹ ಒಂದು similar problem ಅಲ್ಲಿ ಕೂಡ ಆಗಿದೆ.

(ಮುಂದುವರೆದಿದೆ...)

(628)/8-6-2017/4-30/ಎಲ್ಎಂ/ವಿಕೆ

**ಶ್ರೀ ಎಂ.ಬಿ.ಪಾಟೀಲ್(ಮುಂದು):-** ಇಂತಹ ಅನೇಕ ಸಮಸ್ಯೆಗಳು ಇವೆ. ಇವತ್ತು ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ತಮ್ಮ-ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಹಿಂದೆ ನಮಗೆ consent award ಆಗಿರುವುದು ಇದೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಒಂದು ವಿಚಾರವನ್ನು ಹೇಳಿದ್ದಾರೆ ಅದೇನೆಂದರೆ, ಬೀಳಗಿ ಮತ್ತು ನನ್ನ ಮತ ಕ್ಷೇತ್ರ ಬಿಜಾಪೂರ ಜಿಲ್ಲೆಗಳಲ್ಲಿಯ ಭೂಮಿ ಒಂದೇ ರೀತಿ ಇದೆ . ಇವುಗಳನ್ನು ಒಡೆಯುವುದು ಕೇವಲ ಒಂದು ಕೃಷ್ಣಾ ನದಿ. ಆದರೆ ಭೂಮಿ ಗುಣ ಒಂದೆ. ನಾವು ಯಾವ ಬೆಳೆಯನ್ನು ಬೆಳೆಯುತ್ತೇವೆ ಅವರು ಅದೇ ಬೆಳೆಯನ್ನು ಬೆಳೆಯುತ್ತಾರೆ. ಆದರೆ guidance value ಮಾತ್ರ ಮಾನ್ಯ ಎಸ್.ಆರ್.ಪಾಟೀಲ್‌ರವರಿಗೆ ಜಾಸ್ತಿ ಇದೆ, ಎಂ.ಬಿ.ಪಾಟೀಲ್‌ರವರಿಗೆ ಕಡಿಮೆ ಇದೆ. ರಿಜಿಸ್ಟ್ರೇಶನ್ ಬಗ್ಗೆ ಹೇಳುತ್ತಿದ್ದೇನೆ. ಈ ವಿಷಯವನ್ನು ಮತ್ತೆ-ಮತ್ತೆ ಹೇಳಬೇಕಾಗುತ್ತದೆ. ಏಕೆಂದರೆ Land Acquisition Act ನಲ್ಲಿ ಬಂದಿಲ್ಲ. ನಾವು ರಿಜಿಸ್ಟ್ರೇಶನ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿಕೊಳ್ಳುವಾಗ ಅದು ನಗರ ಪ್ರದೇಶದಲ್ಲಿ ಇರಬಹುದು ಅಥವಾ ಗ್ರಾಮಾಂತರ ಪ್ರದೇಶದಲ್ಲಿ ಇರಬಹುದು. ಕಡಿಮೆ ದರ ಮಾಡಿಕೊಂಡು ರಿಜಿಸ್ಟ್ರೇಶನ್ ಮಾಡಿರುವುದು ಎಲ್ಲರಿಗೂ ಗೊತ್ತಿದೆ. ಇದಕ್ಕೆ ಬೆಂಗಳೂರು ಕೂಡಾ ಹೊರತಾಗಿಲ್ಲ. 5000 guidance value ಇದ್ದರೆ ಕಡಿಮೆ ದರಕ್ಕೆ ರಿಜಿಸ್ಟ್ರೇಶನ್ ಮಾಡಿಕೊಂಡಿರುತ್ತೇವೆ. ಹೀಗಾಗಿ ರೈತರು registration cost ಕಡಿಮೆ ಮಾಡಿಕೊಳ್ಳಲು ಈ ರೀತಿ ಮಾಡಿಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ Multiplication ಮಾಡಿದಾಗಲು ಅವರಿಗೆ ಅಷ್ಟೊಂದು ಹಣ ಬರುವುದಿಲ್ಲ. ಇದು ನಿಜವಾಗಿ ಇರುವಂತಹ ಸಮಸ್ಯೆ. ಇದರ ಬಗ್ಗೆ ಚರ್ಚೆ ಮಾಡಲು ಸರ್ಕಾರದಲ್ಲಿ ಉನ್ನತ ಮಟ್ಟದ ಸಮಿತಿ ಇದೆ. ಬಸನಗೌಡರೆ ಈಗಲೇ ಪರಿಹಾರ announce ಮಾಡಿ ಎಂದರೆ announce ಮಾಡಲು ನನಗೆ ಅಧಿಕಾರವಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ಇದೆ. ಆ ಸಮಿತಿಯಲ್ಲಿ ಈಗಾಗಲೆ ಎರಡು ಸಭೆಗಳು ನಡೆಸಿದೆ. ಅದರಲ್ಲಿ ಉಪ ಸಮಿತಿ ಕೂಡಾ ಇದೆ. ಅಲ್ಲಿಯು ಸಭೆಗಳು ನಡೆದಿವೆ. ಆ ಸಮಿತಿಗಳು ಒಂದೆರಡು ತಿಂಗಳಲ್ಲಿ ಅಂತಿಮ ನಿರ್ಧಾರಕ್ಕೆ ಬರುತ್ತವೆ. ತಾವು ಎಲ್ಲರೂ ಏನು ಸಲಹೆಗಳನ್ನು ಕೊಟ್ಟಿದ್ದೀರಿ ಆ ಎಲ್ಲಾ ಸಲಹೆಗಳನ್ನು ತಮ್ಮ ಎಲ್ಲರೂ ಭಾವನೆಗಳನ್ನು ಆ ಸಮಿತಿಯ ಸದಸ್ಯನಾಗಿ ಮಾನ್ಯ ಮುಖ್ಯಮಂತ್ರಿಗಳ ಮುಂದೆ ಇಡುತ್ತೇನೆ. ಏಕರೂಪದ ಬೆಲೆ ಸಿಗಬೇಕು ಎನ್ನುವುದು ನಮ್ಮ ಭಾವನೆಯಾಗಿದೆ. ಆದರೆ ಒಂದು ಕಡೆ ಜಾಸ್ತಿ ಸಿಗುತ್ತದೆ, ಒಂದು ಕಡೆ ಕಡಿಮೆ ಸಿಗುತ್ತದೆ. ನಾವು ಕೆಳಗೆ ಇರುವವರನ್ನು ಮೇಲೆ ತೆಗೆದುಕೊಂಡು ಹೋಗಲು ಪ್ರಯತ್ನ ಮಾಡಬೇಕು. ಮೇಲೆ ಇರುವವರನ್ನು ಕೆಳಗೆ ಇಳಿಸಲು ಬರುವುದಿಲ್ಲ. ಆಗ ಅವರು ಕೋರ್ಟಿಗೆ ಹೋಗುತ್ತಾರೆ. ಇಲ್ಲಿ ಏನು ಆಗಿದೆ ಎಂದರೆ, some of the areas guidance values are very high. ಈಗ ಮಾನ್ಯ ಎಸ್.ಆರ್.ಪಾಟೀಲ್‌ರವರ ಮತ್ತು ನನ್ನ ಜಿಲ್ಲೆಯ ಭೂಮಿಯ ಮಧ್ಯೆ ಇರುವ ಅಂತರವನ್ನು ಹೇಳಿದ್ದೇವೆ. ಮಾನ್ಯ ಎಸ್.ಆರ್.ಪಾಟೀಲ್‌ರವರಿಗೆ ಕಡಿಮೆ ಹಣ ಕೊಡುತ್ತೇವೆ ಎಂದರೆ ಅವರ ರೈತರು ಒಪ್ಪುವುದಿಲ್ಲ. ಏಕೆಂದರೆ ನಮ್ಮ land acquisition value four times ಇರುವಾಗ ನಮಗೆ ಇಷ್ಟು ಸಿಗುತ್ತದೆ ಎಂದು ಹೇಳುತ್ತಾರೆ. ಆದರೆ ನಮ್ಮವರಿಗೆ four times ಮಾಡಿದಾಗ ಅಲ್ಲಿ ಹಣ ಕಡಿಮೆಯಾಯಿತು ಎಂದು ಗಲಾಟೆ ಶುರುವಾಗುತ್ತದೆ. ಕೆಳಗಡೆ ಇರುವವರನ್ನು ಮೇಲಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡಬೇಕು. ಮೇಲೆ ಇರುವವರಿಗೆ ಸಿಕ್ಕೇ ಸಿಗುತ್ತದೆ ಅವರಿಗೇನು ತೊಂದರೆ ಆಗುವುದಿಲ್ಲ. ಕೆಳಗೆ ಇರುವವರನ್ನು ಎಷ್ಟು ಮೇಲೆ ತೆಗೆದುಕೊಂಡು ಹೋಗಲು ಸಾಧ್ಯ ಎನ್ನುವುದು ನಮ್ಮ ಚಿಂತನೆಯಾಗಿದೆ. ಏಕರೂಪದ ಪರಿಹಾರ ಸಿಗಬೇಕು ಎನ್ನುವ ಬಗ್ಗೆ ಸಮಿತಿಯಲ್ಲಿ ನಾವು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಏಕೆಂದರೆ ಇದೆಲ್ಲವೂ ಒಂದೇ ಒಂದು ಯೋಜನೆಯಲ್ಲಿ ಬರುವುದು. ಹೀಗಾಗಿ ಸರ್ಕಾರದ ಮಟ್ಟದಲ್ಲಿ ಚರ್ಚೆ ಮಾಡಿ ಅದಕ್ಕೆ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಪುರ್ನವಸತಿಯಲ್ಲಿ ಕಾಯ್ದೆ ಬಹಳ ಕ್ಲೀಯರ್ ಆಗಿದೆ. ಆರು ತಿಂಗಳು ಮುಂಚಿತವಾಗಿ ಕಾಯ್ದೆಯಲ್ಲಿ ಏನೇನು ಇದೆ ಅದೆಲ್ಲವನ್ನು ಮಾಡಿದಾಗ ಮಾತ್ರ ನಾವು ನೀರು ತೆಗೆದುಕೊಳ್ಳಲು ಸಾಧ್ಯ. ಇಲ್ಲದಿದ್ದರೆ ನೀರು ತೆಗೆದುಕೊಳ್ಳಲು ಸಾಧ್ಯವಿಲ್ಲ. ತಾವು ಹೇಳುತ್ತಿರುವುದು ಹಳೆಯ ಕಾಯ್ದೆಯಲ್ಲಿ ಆಗಿರುವುದು. ಅನ್ಯಾಯಗಳು, ಶೋಷಣೆಗಳು ಎಲ್ಲವು ಆಗಿವೆ. ಅದಕ್ಕಾಗಿಯೇ ಈ ಹೊಸ ಭೂಸ್ವಾಧೀನ ಕಾಯಿದೆಯನ್ನು ತಂದಿರುವುದು. ಎಲ್ಲರಿಗೂ ಏಕರೂಪದ ಬೆಲೆ ಸಿಗಬೇಕು, ಪುರ್ನವಸತಿ ಮಾದರಿಯಾಗಬೇಕು ಎನ್ನುವುದು ಎಲ್ಲಾ ಸದಸ್ಯರ ಭಾವನೆ–ನಿಲುವು ಏನು ಇದೆ ಅದಕ್ಕೆ ನಾನು ಎಲ್ಲಾ ಸದಸ್ಯರ ಜೊತೆಯಲ್ಲಿ ಇದ್ದೇನೆ. ಇನ್ನು ಕೆಲವೆ ತಿಂಗಳಲ್ಲಿ ಇದರ ಬಗ್ಗೆ ಉನ್ನತ ಮಟ್ಟದ ಸಮಿತಿಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಗಳೆ, ಭಾರಿ ನೀರಾವರಿ ಸಚಿವರು ಹೊಸ ಕಾಯ್ದೆ ಬಗ್ಗೆ ಬಹಳ ಅಧ್ಯಯನ ಮಾಡಿದ್ದಾರೆ. ಹೊಸ ಕಾಯ್ದೆ ಬಗ್ಗೆ ಹೀಗೆ ವ್ಯಾಖ್ಯಾನ ಮಾಡುತ್ತಿದ್ದರೆ ನಿರ್ಗತಿಕರಿಗೆ ಹಣ ಬರುವುದಿಲ್ಲ. ಅವರಿಗೆ ಹಣ ಇನ್ನು ಸಿಗಲಿಲ್ಲ. ಮಧ್ಯಾಹ್ನದ ಸಮಯದಲ್ಲಿ ಟಿವಿ ಯಲ್ಲಿ ಒಬ್ಬ ಅಡಿಗೆ ಹೇಗೆ ಮಾಡುವುದು ಎನ್ನುವುದನ್ನು ತೋರಿಸುತ್ತಾನೆ. ಅವನು ತೋರಿಸುತ್ತಾನೆ ಅಷ್ಟೆ, ಅಡಿಗೆ ಮಾಡಲು ಹೋದರೆ ಅಡಿಗೆ ಆಗಿರುವುದಿಲ್ಲ.

**ಶ್ರೀ ಎಂ.ಬಿ.ಪಾಟೀಲ್:–** ನಮ್ಮ ಊರ ಕಡೆ ಒಂದು ಗಾದೆ ಮಾತು ಇದೆ.

**ಶ್ರೀ ರಾಮಚಂದ್ರಗೌಡ:–** ನಾನು ನಿಮ್ಮನ್ನು attack ಮಾಡುತ್ತಿಲ್ಲ ಕುಳಿತುಕೊಳ್ಳಿ. I am not attacking you, please sit down.

**ಶ್ರೀ ಎಂ.ಬಿ.ಪಾಟೀಲ್:–** ನಮ್ಮ ಊರ ಕಡೆ ಒಂದು ಗಾದೆ ಮಾತು ಇದೆ. "ಕೂಸು ಹುಟ್ಟುವುದಕ್ಕಿಂತ ಮುಂಚೆ ಕುಲಾಯಿ ಹೊಲಿಸಿದರಂತೆ" ಎಂದು. ನಿಮ್ಮ ಮಾತು ಕೂಡಾ ಹಾಗೆಯೇ ಆಗುತ್ತದೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಗಳೆ, ಇದು 2013ರಲ್ಲಿ ಬಂದಿರುವ ಕಾಯ್ದೆ. ನಿಮ್ಮ ಉತ್ತರದ ಮೊದಲನೆ ಪ್ಯಾರಾದಲ್ಲಿ ಸಂಬಂಧಿಸಿದ ತಾಲ್ಲೂಕಿನ ಉಪನೋಂದಾವಣೆ ಕಾರ್ಯಾಲಯದಿಂದ ಮಾಹಿತಿ ಪಡೆದು ಮೂಲ ಮಾರುಕಟ್ಟೆ ಬೆಲೆ ನಿಗದಿ ಮಾಡಿಸಲಾಗುವುದು. ಯಾವಾಗ ಮಾಡುತ್ತೀರಿ? ಇದು 2013ರಲ್ಲಿ ಆಗಿರುವ ಕಾಯ್ದೆ. ನೋದಣಿ ಕಛೇರಿಯಲ್ಲಿರುವ ಅಧಿಕಾರಿ ಆರು ತಿಂಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬದಲಾವಣೆಯಾಗುತ್ತಾರೆ. ಅರ್ಧ ಕೆಲಸ ಮಾಡುತ್ತಾರೆ, ಅರ್ಧ ಹಾಗೆ ಉಳಿದುಬಿಡುತ್ತದೆ. ನಾನು ಮಂತ್ರಿಯಾಗಿ ಕೆಲಸ ಮಾಡಿದ್ದರಿಂದ ಸರ್ಕಾರದಲ್ಲಿ ಏನು ಸಮಸ್ಯೆ ಬರುತ್ತದೆ ಎನ್ನುವುದು ನನಗೂ ಗೊತ್ತು, ನಿಮಗೂ ಗೊತ್ತು ಅದಕ್ಕಾಗಿ ಹೇಳುತ್ತಿದ್ದೇನೆ. 2013ರಲ್ಲಿ ಆಗಿರುವ ಕಾಯ್ದೆಗೆ ಇನ್ನು ಮೂಲ ಮಾರುಕಟ್ಟೆ ಬೆಲೆ ನಿಗದಿಪಡಿಸಲಾಗುತ್ತದೆ ಎಂದು ಹೇಳುತ್ತಿದ್ದೀರಿ. ಎರಡನೆ ಪ್ಯಾರಾದಲ್ಲಿ ಐತೀರ್ಪು ಘೋಷಿಸುವ ದಿನಾಂಕದವರೆಗೆ ಪ್ರತಿಶತ 12ರಷ್ಟು ಹೆಚ್ಚುವರಿ ಮಾರುಕಟ್ಟೆ ಬೆಲೆಯನ್ನು ಸೇರಿಸಿ ಪರಿಹಾರ ನೀಡಲಾಗುವುದು. ಮುಂದಿನ ಪುಟದಲ್ಲಿ ಉದ್ಯೋಗದ ಅವಕಾಶ, ಸಾರಿಗೆ ವೆಚ್ಚ ಅನೇಕ ಸೌಲಭ್ಯಗಳನ್ನು ನೀಡಲಾಗುವುದು ಎಂದು ತಿಳಿಸಿದ್ದಾರೆ. Everywhere they have given indefinite answers and they have not given any definite answer. ಭೂಸ್ವಾಧೀನ ನ್ಯಾಯಾಧೀಕರಣದಲ್ಲಿ ಕಾಯಿದೆ-ಕಲಂ 63ರ ಅಡಿ ಮೇಲ್ಮನವಿ ಸಲ್ಲಿಸಲು ಸಂತ್ರಸ್ತರಿಗೆ ಅವಕಾಶವಿರುತ್ತದೆ. ಹಾಗಾಗಿ ಇನ್ನು ಅವರಿಗೆ ಕಾಲಾವಕಾಶವಿದೆ. ನಿಯೋಜಿತ ಅಧ್ಯಕ್ಷಿಯ ಸಭೆಯು 21-9-2016ರಂದು ಜರುಗಿದ್ದು, ಕೂಲಂಕಷವಾಗಿ ಚರ್ಚಿಸಿ ಈ ಕೆಳಕಂಡಂತೆ ಸಭೆಯು ತೀರ್ಮಾನಿಸಿತು ಎಂದು ನಂತರ ಹೇಳುತ್ತೀರಿ. ಏನು ತೀರ್ಮಾನಿಸುತ್ತದೆ ಎಂದರೆ, ಭಾಗಾಯ್ತಾತ ಎಂದು ದರ ನಿಗದಿಪಡಿಸಬಹುದು ಎಂದು ತೀರ್ಮಾನಿಸಲಾಗಿದೆ. ಅದರ ಮುಂದಿನ ಪ್ಯಾರಾದಲ್ಲಿ ಹೇಳಿದ್ದಾರೆ, ಭೂಸ್ವಾಧಿನಕ್ಕೆ ಆಗುವ ವೆಚ್ಚವನ್ನು ಮರುಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸಬೇಕೆಂದು ತೀರ್ಮಾನಿಸಲಾಗಿದೆ. ಅಂದರೆ ಇನ್ನು ಎಷ್ಟು ದಿನ ಇದನ್ನು process ಮಾಡುತ್ತೀರಿ. ಎಷ್ಟು ದಿನದಲ್ಲಿ ಇದೆಲ್ಲವನ್ನು ಮಾಡಿ ಅವರಿಗೆ ಪರಿಹಾರವನ್ನು ಕೊಡುತ್ತೀರಿ? I want to know that time limit. ಸಮಯ ನಿಗದಿ ಮಾಡದೆ ಹೋದರೆ ಪ್ರಯೋಜನವೇನು? ಭೂ ಸ್ವಾಧೀನ ಮಾಡಿ 20 ವರ್ಷವಾಗಿದೆ. ಅವತ್ತಿನಿಂದ ಇಲ್ಲಿಯವರೆಗೆ ಅವರಿಗೆ ಪರಿಹಾರವನ್ನು ಕೊಟ್ಟಿರುವುದಿಲ್ಲ. ಈ ಹೊಸ ಕಾಯಿದೆ ಬಂದಿದೆ ಅದರ ಮೂಲಕ ನಿಮಗೆ ರಕ್ಷಣೆ ಸಿಗುತ್ತದೆ ಎಂದು ಹೇಳುತ್ತಲೇ ಇದ್ದಾರೆ. ನೀವು ರಕ್ಷಣೆ ಕೊಡುತ್ತೀರಿ ಎನ್ನುವ ನಂಬಿಕೆ ನಮಗೆ ಇದೆ. ಆದರೆ ಎಷ್ಟು ದಿನಗಳಲ್ಲಿ ಮಾಡಿಕೊಡುತ್ತೀರಾ ಎಂದು ಸ್ಪಷ್ಟಪಡಿಸಬೇಕು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳೆ, ನಾನು ಇಲ್ಲಿಯವರೆಗೆ ಯಾವುದೇ ರಾಜಕೀಯವನ್ನು ಬೆರಸದೆ ಮಾತನಾಡಿದ್ದೇನೆ. ಏಕೆಂದರೆ ಅದು ನಮ್ಮೆಲ್ಲರಿಗೂ ಸಂಬಂಧಿಸಿದ ವಿಚಾರ. ಹಿರಿಯ ಸದಸ್ಯರಾದ ರಾಮಚಂದ್ರಗೌಡರು, ಮಾಜಿ ಮಂತ್ರಿಗಳು ಕೂಡಾ ಆಗಿ ಕೆಲಸ ಮಾಡಿದ್ದಾರೆ. 2013ರಲ್ಲಿ Land Acquisition Act ಬಂದಿದೆ, ಇಲ್ಲಿಯವರೆಗೆ ಏನು ಮಾಡುತ್ತಿದ್ದೀರಿ ಎಂದು ಕೇಳಿದ್ದಾರೆ. ದಯಮಾಡಿ ತಪ್ಪಾಗಿ ಭಾವಿಸಿಕೊಳ್ಳಬೇಡಿ. ನಾನು ಅನಿವಾರ್ಯವಾಗಿ ಒಂದು ವಿಷಯವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಬೇಕಾಗುತ್ತದೆ. ಅದೇನೆಂದರೆ 2013ರ Land Acquisition Act ತಂದಿರುವುದು ನಮ್ಮ ಯುಪಿಎ ಸರ್ಕಾರ ಎನ್ನುವುದು ನಿಜ. ಆದರೆ ಮುಂದೆ ಅಧಿಕಾರಕ್ಕೆ ಬಂದಿರುವುದು ನಿಮ್ಮ ಎನ್‌ಡಿಎ ಸರ್ಕಾರ. ಈ Land Acquisition Act ಗೆ amendment ತರುತ್ತೇವೆ ಎಂದು ಹೇಳಿ ನಾಲ್ಕು ಸಾರಿ lapse ಮಾಡಿ ಒಂದು ವರ್ಷ ಮುಂದೆ ಹೋಯಿತು. ಕೊನೆಗೆ amendment ಕೂಡಾ ತರಲಿಲ್ಲ. Lapse ಆಗುವುದಕ್ಕೆ ಬಿಟ್ಟು ಮತ್ತೆ back to square one ಎನ್ನುವ ಹಾಗೆ ಅದೇ ಹಳೆಯ Land Acquisition Act ಬಂತು. ನೀವು ತಪ್ಪು ಮಾಡಿದ್ದೀರಿ ಎಂದು ನಾನು ಹೇಳುತ್ತೇನೆ. ಇದರ status ಏನು ಎನ್ನುವುದನ್ನು ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ರಾಜ್ಯದಲ್ಲಿ ನಾವು ಅದನ್ನು ಒಪ್ಪುವುದಿಲ್ಲ, ನಾವು ಯುಪಿಎ ಸರ್ಕಾರ ಮಾಡಿರುವುದನ್ನು ಮಾತ್ರ ಅನ್ವಯಿಸುತ್ತೇವೆ ಎಂದು ಹೇಳಿದ್ದೀರಿ. ಹೀಗಾಗಿ ಹಳೆಯದನ್ನು ನೀವು ಇಟ್ಟುಕೊಂಡಿದ್ದೀರಿ ಹೊರತು, ಹೊಸ ಕಾಯಿದೆಯನ್ನು ಅನುಷ್ಠಾನಗೊಳಿಸಲು ಆಸಕ್ತರಾಗಿಲ್ಲ.

**(ಮುಂದು)**

(629) YL-BNS / 08.06.2017 / 4.40

**ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):–** ಎನ್.ಡಿ.ಎ. ಸರ್ಕಾರ Land Acquisition Act ಗೆ ಯಾವುದೇ amendment ತಂದಿಲ್ಲ. Amendment ತರುವುದಕ್ಕೆ ಪ್ರಯತ್ನ ಮಾಡಿದ್ದರು, ಆದರೆ, amendment ತರಲಿಲ್ಲ. ಕೈಚೆಲ್ಲಿ ಕುಳಿತರು. ಇದು ವಾಸ್ತವ ಸಂಗತಿ. ನಾನು ಸದಸ್ಯರ ಮೇಲೆ ದೂಷಣೆ ಮಾಡುತ್ತಿಲ್ಲ. ಹೀಗಾಗಿ ಇಡೀ ದೇಶದಲ್ಲಿ ಎಲ್ಲಾ ಯೋಜನೆಗಳು ಒಂದು ಒಂದೂವರೆ ವರ್ಷ ವಿಳಂಬವಾಗಿತ್ತು.

**ಶ್ರೀ ಸೋಮಣ್ಣ ಮ ಬೇವಿನಮರದ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಮಾನ್ಯ ಸಚಿವರೆ ನೋಡಿ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ದಯವಿಟ್ಟು. ನಾನು ಸದಸ್ಯರನ್ನು ದೂಷಣೆಯನ್ನು ಮಾಡುತ್ತಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಸೋಮಣ್ಣ ಮ ಬೇವಿನಮರದವರೆ, ಈಗಾಗಲೇ ಬಹಳಷ್ಟು ಸಮಯವಾಗಿದೆ. ದಯವಿಟ್ಟು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಗೊಂದಲ)**

**ಶ್ರೀ ಸೋಮಣ್ಣ ಮ ಬೇವಿನಮರದ:–** ಮಾನ್ಯ ಸಭಾಪತಿಯವರೆ, ಸತ್ಯ ಮರೆಮಾಚಬಾರದೆನ್ನುವ ದೃಷ್ಟಿಯಿಂದಷ್ಟೇ ಹೇಳುತ್ತಿದ್ದೇನೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೆ, ನಿಮ್ಮ ಮಾತನ್ನು ಬೇಗ ಮುಗಿಸಿ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ಸದಸ್ಯರಿಗೆ ಇರುವ status ಹಾಗು facts ಅನ್ನು ಹೇಳಬೇಕಲ್ಲವೇ? 2013ಕ್ಕೆ ಕಾಯ್ದೆ ಬಂದಿದೆ. ಆದರೂ ಪರಿಹಾರ ವಿತರಣೆಗೆ ಏಕೆ ತಡವಾಗಿದೆ ಎಂದು ಸದಸ್ಯರು ಕೇಳುತ್ತಿದ್ದಾರೆ.

(ಗೊಂದಲ)

**ಶ್ರೀ ಸೋಮಣ್ಣ ಮ ಬೇವಿನಮರದ:–** ಮಾನ್ಯ ಸಭಾಪತಿಯವರೆ, ಒಂದೇ ಒಂದು ಮಾತನ್ನು ಹೇಳುತ್ತೇನೆ.

(ಗೊಂದಲ)

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, I am not yielding. ರಾಜಕೀಯ ಮಾತೆಲ್ಲಾ ಬೇಡ.

(ಗೊಂದಲ)

**ಶ್ರೀ ಸೋಮಣ್ಣ ಮ ಬೇವಿನಮರದ:–** ಮಾನ್ಯ ಸಭಾಪತಿಯವರೆ, 70 ವರ್ಷದಿಂದ ಈ ದೇಶವನ್ನು ಕಾಂಗ್ರೆಸ್ ಸರ್ಕಾರ ಆಡಳಿತ ಮಾಡಿದೆ ಎಂಬುದನ್ನು ತಾವು ಮೊದಲು ಅರ್ಥ ಮಾಡಿಕೊಳ್ಳಿ (ಗೊಂದಲ) ಯುಪಿಎ ಸರ್ಕಾರ ಇದ್ದಾಗಿನಿಂದ...

(ಗೊಂದಲ)

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ರಾಜಕೀಯವನ್ನು ಬೇರೆಸುತ್ತಿಲ್ಲ. ಇಂತಹ ವಿಷಯದಲ್ಲಿ ರಾಜಕೀಯವನ್ನು ಬೆರೆಸಬೇಕೇ? ಸದಸ್ಯರಿಗೆ ರಾಜಕೀಯ ಮಾತುಗಳನ್ನಾಡುವುದನ್ನು ಬಿಡುವುದಕ್ಕೆ ಹೇಳಿ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಉಪ ಸಭಾಪತಿಯವರು:–** ಮಾನ್ಯ ಸೋಮಣ್ಣರವರೆ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ನಮ್ಮ ವಿಜಯಪುರ ಜಿಲ್ಲೆ ಮತ್ತು ಬಾಗಲಕೋಟೆ ಜಿಲ್ಲೆಗಳು ಭೂಮಿ ಕಳೆದುಕೊಳ್ಳುವಂತಹ ಜಿಲ್ಲೆಗಳು. ನಮಗೆ ಅದರ ನೋವಿದೆ. ಇಲ್ಲಿ ರಾಜಕೀಯ ಮಾಡುವುದಕ್ಕೆ ನಾನು ಬಯಸುತ್ತಿಲ್ಲ.

(ಗೊಂದಲ)

**ಉಪ ಸಭಾಪತಿಯವರು:–** ಮಾನ್ಯ ಸೋಮಣ್ಣರವರೆ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಸೋಮಣ್ಣ ಮ ಬೇವಿನಮರದ:–** ಮಾನ್ಯ ಸಭಾಪತಿಯವರೆ, ಯಾವ ರೈತರಿಗೂ ಅನ್ಯಾಯವಾಗಬಾರದೆಂದು, ನೆನ್ನೆಯಿಂದ ಇವತ್ತಿನವರೆಗೂ ನಾವೆಲ್ಲರೂ ಸರ್ಕಾರಕ್ಕೆ ಒಕ್ಕೊರಲಿನಿಂದ ಒತ್ತಾಯವನ್ನು ಮಾಡುತ್ತಿದ್ದೇವೆ. ರಾಜಕೀಯವನ್ನು ಬೆರೆಸುವಂತಹ ಅವಶ್ಯಕತೆ ಇಲ್ಲ. ಅದರ ಸಂದರ್ಭವು ಬರುವುದಿಲ್ಲ. ಕೇವಲ ರಾಜ್ಯದ ಜನತೆಯ ರೈತರ ಬಗ್ಗೆ ಚರ್ಚೆಯಾಗುತ್ತಿದೆ.

**ಉಪ ಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರೆ ನಿಮ್ಮ ಉತ್ತರ ಮುಗಿಯಿತಾ?

(ಗೊಂದಲ)

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಉತ್ತರ ಇನ್ನೂ ಮುಗಿದಿಲ್ಲ. ನಾನು ಇನ್ನೂ ಮಾತನಾಡಬೇಕಾಗಿದೆ.

(ಗೊಂದಲ)

**ಉಪ ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈ ರೀತಿ ಒಬ್ಬೊಬ್ಬರು ಎದ್ದು ನಿಂತು ಮಾತನಾಡಿದರೆ ನಾನು ಹೇಗೆ ಸಭೆ ನಡೆಸಬೇಕು.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ಈಗ ಇರತಕ್ಕಂಥಹ ಣಚಿಣಣಾ ಬಗ್ಗೆ ಹೇಳಬಾರದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸೋಮಣ್ಣ ಮ ಬೇವಿನಮರದ:–** ಮಾನ್ಯ ಸಭಾಪತಿಯವರೆ, ಇರತಕ್ಕಂಥ ಣಚಿಣಣಾ ಬಗ್ಗೆ ಹೇಳಲಿ. ಆದರೆ,

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, fact ಏನೆಂಬುದನ್ನು ಹೇಳಬಾರದೆ? ಎನ್.ಡಿ.ಎ. ಸರ್ಕಾರದವರು ಕಾಯ್ದೆಗೆ amendment ತಂದಿಲ್ಲವೆಂದು ಹೇಳಬೇಕೇ? ಒಂದು ವರ್ಷ ವಿಳಂಬವಾಗಿದೆ ಎಂಬುದನ್ನು ಹೇಳಬಾರದೇ? ಈಗ ನಾನು conclusion ಗೆ ಬರುತ್ತಿದ್ದೇನೆ. ನಮ್ಮ ಸರ್ಕಾರದ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಗಳಿವೆ, ಉಪ ಸಮಿತಿಗಳಿವೆ. ಎಲ್ಲಾ matters ಅಲ್ಲಿಗೆ seize ಆಗಿದೆ. ನಮ್ಮ ಉದ್ದೇಶವೇನೆಂದರೆ, ಯಾರು ನಿರಾಶ್ರಿತರಿದ್ದಾರೆ, ಸಂತ್ರಸ್ಥರಿದ್ದಾರೆ ಅವರ ಜೀವನ ಹಸನಾಗಬೇಕು. ಯಾರು ನಮಗಾವರಿಗಾಗಿ ಭೂಮಿ ನೀಡಿದ್ದಾರೆ ಅದರ ಫಲವನ್ನು ಪಡೆದುಕೊಳ್ಳುತ್ತಾರೆ. ಅವರು ಉನ್ನತವಾಗಿರಬೇಕೆಂದು ನಮ್ಮ ಧ್ಯೇಯವಾಗಿದೆ. ಅದರ ಪ್ರಕಾರವಾಗಿ ಎಲ್ಲಾ ಭಾವನೆಗಳನ್ನು ಸಕಾರಾತ್ಮಕವಾಗಿಟ್ಟುಕೊಂಡು ನಮ್ಮ ಡಾ:ಜಯಮಾಲ ರಾಮಚಂದ್ರರವರು ಹೇಳಿದಂತೆ ಏನು ಸಂತ್ರಸ್ಥರ ನೋವುಗಳಿತ್ತು. ಅವುಗಳಲ್ಲವನ್ನು ಈ Land Acquisition Act ನಲ್ಲಿ address ಮಾಡಿದ್ದಾರೆ. ಇವೆಲ್ಲವನ್ನಿಟ್ಟುಕೊಂಡು ಏಕರೂಪದ ಬೆಲೆಯ ಬಗ್ಗೆ ಮತ್ತು ಪುನರ್ ವಸತಿ ಮಾದರಿಯಾಗಿ ಆಗಬೇಕು. ಇವುಗಳನ್ನೆಲ್ಲಾ ಇಟ್ಟುಕೊಂಡು ಸರ್ಕಾರ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ವಿ.ಎಸ್.ಉಗ್ರಪ್ಪನವರೆ,

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಒಂದು ಸ್ಪಷ್ಟೀಕರಣ ಬೇಕಾಗಿದೆ.

**ಉಪ ಸಭಾಪತಿಯವರು:–** ಸ್ನೇಹಿತರೆ ಒಂದು ನಿಮಿಷ ಸ್ಪಷ್ಟೀಕರಣಕ್ಕೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ವಿ.ಎಸ್.ಉಗ್ರಪ್ಪನವರು ಮೊದಲೇ ಮಾತನಾಡುತ್ತೇನೆಂದು ಎದ್ದರೂ, ಆದರೆ, ಅವರಿಗೆ ಅವಕಾಶವಾಗಿಲ್ಲ. ದಯಮಾಡಿ ಮಾನ್ಯ ವಿ.ಎಸ್.ಉಗ್ರಪ್ಪನವರೆ ತಾವು ಎರಡು ನಿಮಿಷದಲ್ಲಿ ಸ್ಪಷ್ಟೀಕರಣವನ್ನು ಕೇಳಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಎರಡು ನಿಮಿಷದಲ್ಲಿ ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ನೀವು ಬಹಳ ಸಾರಿ ಮಾತನಾಡಬೇಕೆಂದು ಸಮಯ ಕೇಳಿದ್ದೀರಿ. ಆದರೆ, ನೀವು ಹೊರಗಡೆ ಹೋಗಿದ್ದ ಕಾರಣದಿಂದಾಗಿ ನಿಮಗೆ ಅವಕಾಶವನ್ನು ಕೊಡಲಾಗಲಿಲ್ಲ. ಈಗ ನೀವು ಇಲ್ಲಿದ್ದೀರಿ, ಆದ್ದರಿಂದ ಈ ವಿಷಯದ ಬಗ್ಗೆ ನಿಮಗೆ ಮಾತನಾಡಲು ಅವಕಾಶ ಕೊಡುತ್ತಿದ್ದೇನೆ. ಆದ್ದರಿಂದ ತಾವು ಸ್ಪಷ್ಟೀಕರಣವನ್ನು ಕೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಉಪ ಸಭಾಪತಿಯವರೆ, ನನಗೆ...

**ಉಪ ಸಭಾಪತಿಯವರು:–** ಈಗಾಗಲೇ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಉತ್ತರವನ್ನು ಕೊಟ್ಟ ಮೇಲೆ ಸ್ಪಷ್ಟೀಕರಣವನ್ನು ಕೇಳುವುದಷ್ಟೇ ಅವಕಾಶವಿರುವುದು. ದಯವಿಟ್ಟು ತಾವು ಮತ್ತೆ ಚರ್ಚೆ ಮಾಡುವುದಕ್ಕೆ ಹೋಗಬೇಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಸ್ಪಷ್ಟೀಕರಣವನ್ನಷ್ಟೇ ಕೇಳುತ್ತೇನೆ.

**ಉಪ ಸಭಾಪತಿಯವರು:–** ಸರಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಈ Upper Krishna Project (UKP) ಅನ್ನು 1964ರ ಮೇ 22 ರಂದು ಲಾಲ್ ಬಹದ್ದೂರ್ ಶಾಸ್ತ್ರಿಯವರಿಂದ ಶಂಕು ಸ್ಥಾಪನೆಯಾಗಿತ್ತು. ಈಗಾಗಲೇ 53 ವರ್ಷಗಳಾಗಿದೆ. 53 ವರ್ಷಗಳಲ್ಲಿ 3 ಹಂತಗಳಿವೆ. ಒಟ್ಟಾರೆ ಈ project ನಲ್ಲಿ ಸುಮಾರು 15 ಲಕ್ಷ 36 ಸಾವಿರ ಎಕರೆ, ಗುಲ್ಬರ್ಗಾ, ರಾಯಚೂರು, ಬಿಜಾಪುರ, ಬಾಗಲಕೋಟೆ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ನೀರಾವರಿಯಾಗುವುದಕ್ಕೆ ಈ ಯೋಜನೆ ಇದೆ.

**ಶ್ರೀ ಎಸ್.ಆರ್.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇನ್ನೂ ಬೇರೆ ಬೇರೆ ಜಿಲ್ಲೆಗಳಿಗೆ ತೆಗೆದುಕೊಂಡು ಹೋಗಿ. ಅದೆಲ್ಲವನ್ನು ಹೇಳಿ, ಬಹಳ old concept.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇದರ ಜೊತೆಗೆ Krishna basin ಎಂದು ತೆಗೆದುಕೊಂಡರೆ, ಬೆಂಗಳೂರಿನಿಂದ Bangalore-Honnavar Road (B.H.Road) ಏನಿದೆ. ಇದರ ಬಲಭಾಗಕ್ಕೆ ಬರತಕ್ಕಂಥ the entire area has been classified as Krishna basin. 60% and above... ಇದರಲ್ಲಿ ತುಂಗ, ಭದ್ರ, ಕೃಷ್ಣ, ಭೀಮ, ಘಟಪ್ರಭ, ಮಲಪ್ರಭ ಇತ್ಯಾದಿಗಳೆಲ್ಲವೂ ಸಹ ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, tributaries of Krishna river.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇದರ ಹಿನ್ನೆಲೆಯಲ್ಲಿ ಬಹಳಷ್ಟು ವಿಸ್ತಾರವಾಗಿರತಕ್ಕಂಥದ್ದು ಒಂದು ಇದೆ. UKP-I stage ನಲ್ಲಿ ಸುಮಾರು 4,249.03 ಕಿಲೋ ಮೀಟರ್ area ಗೆ irrigation ಆಗತಕ್ಕಂಥದ್ದು. UKP-II stage ನಲ್ಲಿ ಸುಮಾರು 1971.20 ಕಿಲೋ ಮೀಟರ್ area ಗೆ irrigation ಆಗತಕ್ಕಂಥದ್ದು, ಈಗ UKP-I and II stages ನಲ್ಲಿರತಕ್ಕಂಥ projects ಯಾವ್ಯಾವುದೆಂದು ನಾನು details ಹೇಳುವುದಕ್ಕೆ ಹೋಗುವುದಿಲ್ಲ. 1964 ರಿಂದ 2013 ರವರೆಗೆ ಇಲ್ಲಿ Tribunal ನ ಎರಡು Awards ಇವೆ. ಒಂದು ಕಡೆ Award passed by Justice Bachawat ಇನ್ನೊಂದು ಕಡೆ Award passed by Justice Brijesh Mishra. ಈ ರೀತಿ Tribunal ನ ಎರಡು Awards ಗಳಿದ್ದಾವೆ. First Award ನಲ್ಲಿ 734 ಟಿ.ಎಂ.ಸಿ. ನೀರು. ನಾವು 5 ಟಿ.ಎಂ.ಸಿ. ನೀರನ್ನು ಹಾಗೆಯೇ ಆಂಧ್ರ ಪ್ರದೇಶದಿಂದ 5 ಟಿ.ಎಂ.ಸಿ. ನೀರನ್ನು, ಮಹಾರಾಷ್ಟ್ರದಿಂದ 5 ಟಿ.ಎಂ.ಸಿ. ನೀರನ್ನು ಕುಡಿಯುವುದಕ್ಕಾಗಿ ಚೆನ್ನೈಗೆ ಹರಿಸಿದ್ದೇವೆ. ನಾವು ಅದನ್ನು ಬೆಳೆಸುವುದಕ್ಕೆ ಹೋಗುವುದಿಲ್ಲ. ಆದರೆ, ಚೆನ್ನೈನವರು ನಮ್ಮ ಹತ್ತಿರ ಕಾವೇರಿ ನೀರಿನ ಬಗ್ಗೆ ಕಲಹ ತೆಗೆಯುತ್ತಾರೆ. ಈ ವಿಷಯದ ಬಗ್ಗೆ ನಾನು ಬೇರೆ ಸಂದರ್ಭದಲ್ಲಿ ಮಾತನಾಡುವುದಕ್ಕೆ ಹೋಗುತ್ತೇನೆ. ಆದರೆ, second Award ನಲ್ಲಿ ಏನಾಗಿತ್ತೆಂದರೆ, that is on 29.11.2013 ಅದರ ಪ್ರಕಾರ ನಮಗೆ 907 ಟಿ.ಎಂ.ಸಿ. ನೀರು, ಆಂಧ್ರ ಪ್ರದೇಶಕ್ಕೆ 1005 ಟಿ.ಎಂ.ಸಿ. ನೀರು, ಮಹಾರಾಷ್ಟ್ರಕ್ಕೆ 666 ಟಿ.ಎಂ.ಸಿ. ನೀರು.... ಇಲ್ಲಿರತಕ್ಕಂಥ ಪ್ರಶ್ನೆಯೇನೆಂದರೆ, 1964 ರಿಂದ 2013 ರವರೆಗೆ, 2013ರ ನಂತರ ಒಂದು ಹೊಸ development ಆಗಿರತಕ್ಕಂಥದ್ದು ಏನೆಂದರೆ ನಮ್ಮ ಆಲಮಟ್ಟಿಯ height ಅನ್ನು 519.6 ಮೀಟರ್ಸ್‌ನಿಂದ 524.256 ಮೀಟರ್ಸ್‌ಗೆ ಏರಿಸಿದ್ದಾರೆ. ನಮಗೆ ಅನುಮತಿ ಸಿಕ್ಕಿದೆ. ಒಂದು ಹಂತದಲ್ಲಿ ಇದರ ಬಗ್ಗೆ ಸರ್ವೋಚ್ಚ ನ್ಯಾಯಾಲಯದಲ್ಲಿ matter pending ಇತ್ತು. Finally, the Tribunal was constituted under Article 262 of the Constitution. D Tribunal, ನಮಗೆ ಇವತ್ತು ಇಷ್ಟು ನೀರನ್ನು ಕೊಡುತ್ತೇವೆಂದು ಆದೇಶವನ್ನು ಮಾಡಿದೆ. ಇದರ ಜೊತೆಗೆ you can raise the height of the dam ಎಂದಿದೆ. ಈ height ಅನ್ನು raise ಮಾಡುವುದರಿಂದ ಸುಮಾರು 76,357 ಎಕರೆ ಜಾಗ ಇವತ್ತು ಮುಳುಗಡೆಯಾಗುತ್ತದೆ. ಸುಮಾರು 22 villages submerge ಆಗುತ್ತವೆ. ಈ submerge ಆಗತಕ್ಕಂತಹ 22 villages ನಲ್ಲಿರುವವರಿಗೆ ಇನ್ನೂ 22 Rehabilitation Centres ಗಳನ್ನು ಸ್ಥಾಪನೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕಾಗುತ್ತದೆ. ನಾನು ಇದರ ಬಗ್ಗೆ ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ನಾನು ಇಲ್ಲಿ ಕೇಳುವುದು ಇಷ್ಟೇ. 1964 ರಿಂದ 2013 ರವರೆಗೆ ಏನಾಗಿದೆ, old Land Acquisition Act ನ ಪ್ರಕಾರ Sections 4(1), 6(1) and 11 and 16ರ ಅಡಿಯಲ್ಲಿ Preliminary Notification, Final Notification, Award and Possession has been taken ಎಂದಾಗಿದೆ.

(630) 08–06–2017 (04-50)BSD-BNS

**ಶ್ರೀ ವಿ.ಎಸ್. ಉಗ್ರಪ್ಪ (ಮುಂದು)**

ಯಾವ acquisition proceedings finality reach ಆಗಿಲ್ಲವೋ, ಅವುಗಳಿಗೆ provisions of the new Act is applicable ಎನ್ನುವುದು ಅದರಲ್ಲಿ ಅಡಕವಾಗಿದೆ. ಅಲ್ಲಿ ಎರಡು ವಿಷಯಗಳಿವೆ. Under Section 11 of the Act, award has to be passed and that award amount, either they have to deposit in Court or it has to be paid to the land owner. Thereafter, as per the provisions of Section 16 of the Act, possession has to be taken and Notification has to be issued stating that we have taken possession of such and such a land ಎಂದು ಮಾಡಿದಾಗ, there ends the matter and that is the finality. ಒಂದು ಪಕ್ಷ ಅದು ಆಗದಿದ್ದರೆ, then automatically provisions of the new Act will be applicable for the land which are under process. ಇದರ ಜೊತೆಗೆ ಆಲಮಟ್ಟಿಯ ಅಣೆಕಟ್ಟನ್ನು 524 ಮೀಟರ್‌ಗಳಿಗೆ ಜಾಸ್ತಿ ಮಾಡುವುದರಿಂದ ನಾನು ಆಗಲೇ ಹೇಳಿದಂತೆ 76 ಸಾವಿರ......

**ಉಪ ಸಭಾಪತಿಯವರು:–** ರೈತರ ಸಂಬಂಧ ತಮಗೆ ಏನಾಗಬೇಕು ಎಂದು ಕೇಳಿ, ಏನು ಮಾಡುತ್ತಾರೆ ಎಂದು ಕೇಳಿ. ಅವರು ಮಾಡುತ್ತಾರೋ, ಇಲ್ಲವೋ ಎಂಬುದನ್ನು ಕೇಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಈಗ ಹೊಸದಾಗಿ acquisition ಮಾಡಿಕೊಳ್ಳುವುದರಲ್ಲಿ ಎರಡು ಇದೆ. ಮೊದಲನೆಯದಾಗಿ incomplete ಆಗಿರುವುದಕ್ಕೆ new Act ಪ್ರಕಾರ 1:4 times ಪರಿಹಾರ ಕೊಡಬೇಕು. ಹೊಸದಾಗಿ ಮಾಡಿಕೊಳ್ಳುವುದಕ್ಕೆ 1:4 ಣುಟಜ ಕೊಡಬೇಕು. ಈಗಾಗಲೇ ಪ್ರಸ್ತಾಪ ಮಾಡಿರುವಂತೆ ತೆಲಂಗಾಣದಲ್ಲಿ amendment to the Act ಅನ್ನು ತಂದಿಲ್ಲ. ಹಳೆಯ Act ಗೆ ಸಹ ಕರ್ನಾಟಕದ State amendments ಇತ್ತು. ನಾನು ಸರ್ಕಾರವನ್ನು ಕೇಳುವುದೇನೆಂದರೆ, consent

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

award ಗೆ ಹಾಗೂ ನನ್ನ ಪ್ರಕಾರ ಏಕರೂಪ ಪರಿಹಾರ ನೀಡುವುದು ಕಷ್ಟಕರ. ಅಲ್ಲಿ ನೀರಾವರಿ, ಒಣ ಭೂಮಿ ಇರುತ್ತದೆ. ನೀರಾವರಿಯಲ್ಲಿ ಗಿಡ–ಮರಗಳು, ತೋಟ, ಮನೆ, structures ಎಲ್ಲವೂ ಇರುತ್ತದೆ.

**ಶ್ರೀ ಎಸ್.ಆರ್. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಗ ಸ್ವಾಧೀನಪಡಿಸಿಕೊಂಡಿದ್ದಾರೆ. I am going to rectify the mistake. ಒಪ್ಪಿತ ಐತೀರ್ಪಿನ ಮೂಲಕ ಪರಿಹಾರ ಕೊಡುವ ವ್ಯವಸ್ಥೆ ಇದ್ದು, ಒಣ ಭೂಮಿಗೆ ಒಂದು ಎಕರೆಗೆ ಇಷ್ಟು ಪರಿಹಾರ, ನೀರಾವರಿಯ ಜಮೀನಿಗೆ ಒಂದು ಪೀಕ್‌ಗ್ ಇಷ್ಟು ಪರಿಹಾರ, ಎರಡು ಪೀಕು ಬರುವುದಕ್ಕೆ ಇಷ್ಟು ಪರಿಹಾರ ಎಂದು ನಿಗದಿಮಾಡಿ, ಅದರ ಪ್ರಕಾರ ಪರಿಹಾರ ಕೊಟ್ಟರೆ ಅನುಕೂಲವಾಗುತ್ತದೆ. ಹಾಗೆ 3 ಲಕ್ಷ ಎಕರೆ ಭೂಮಿ ಸ್ವಾಧೀನಪಡಿಸಿಕೊಂಡಿದ್ದೇವೆ.

**Sri V.S.UGRAPPA**:- There are umpteen number of decisions. ಯಾವ ಗ್ರಾಮ ಅಥವಾ ಗ್ರಾಮ ಪಂಚಾಯಿತಿಯಲ್ಲಿ ಇರುವ guidance value ಸಾಮಾನ್ಯವಾಗಿ ಎಲ್ಲಾ ಕಡೆ ಒಂದೇ ಆಗಿರುತ್ತದೆ. ಆದರೆ ಅಲ್ಲಿರುವ ತೋಟ, ಕಟ್ಟಡ ಇತ್ಯಾದಿಗಳು ಹೆಚ್ಚುವರಿಯಾಗುತ್ತವೆ. ಇದರ ಬಗ್ಗೆ ಕೇವಲ ನಮ್ಮ Act ಮಾತ್ರವಲ್ಲದೇ ಸುಪ್ರೀಂಕೋರ್ಟ್‌ನ ತೀರ್ಪುಗಳು ಇವೆ. ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುವುದೇನೆಂದರೆ, ಈಗಾಗಲೇ 53 ವರ್ಷಗಳು ಕಳೆದಿದ್ದು, ಇದಕ್ಕೆ ಎಲ್ಲೋ ಒಂದು ಹಂತದಲ್ಲಿ ಇತಿಶ್ರೀ ಹಾಡಬೇಕಾಗಿದೆ. ಈ ಇತಿಶ್ರೀ ಹಾಡತಕ್ಕ ದೃಷ್ಟಿಯಿಂದ ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ತೆಲಂಗಾಣದಲ್ಲಿ ತಿದ್ದುಪಡಿ ತಂದಿರುವಂತೆ ನಮಗೆ ಅನ್ವಯವಾಗುವುದಿಲ್ಲ, because it is a State amendment. It will not be applicable to other States. ಇದಕ್ಕೆ ನಾನು ಕೇಳುವುದೇನೆಂದರೆ ತೆಲಂಗಾಣ ತಿದ್ದುಪಡಿ ತಂದಿರುವಂತೆ ಕರ್ನಾಟಕ ಸಹ consent award ಮಾಡಿಕೊಳ್ಳುವುದಕ್ಕೆ, are you going to bring a State amendment to the parent Act? ಎರಡನೆಯದಾಗಿ ನಾವು ವಾದ ಮಾಡುತ್ತಿರುವಂತೆ ಏಕರೂಪದ ಪರಿಹಾರ ಎಂದು category wise ಮಾಡಿ ಗೈಡ್‌ಲೈನ್ಸ್ ಹಿನ್ನೆಲೆಯಲ್ಲಿ ತೆಗೆದುಕೊಂಡಿರುವ ಹೋಬಳಿ ಅಥವಾ ಗ್ರಾಮ ಪಂಚಾಯಿತಿಗಳನ್ನು ಯೂನಿಟ್ ಎಂದು ಮಾಡಿ, ನೀರಾವರಿ, ಭಾಗಾಯ್ತು, ಅಥವಾ ಒಣ ಭೂಮಿ ಆದರೆ ಏನು ಪರಿಹಾರ ಹಾಗೂ ಅದರಲ್ಲಿರುವ structures ಗೆ ಹೇಗೆ ಪರಿಹಾರ ಕೊಡಬೇಕು ಎಂಬ ಬೇಸಿಸ್ ಮೇಲೆ categorise ಮಾಡಬೇಕು. ಇದನ್ನು ಮಾಡಬೇಕೆಂದರೆ, again they have to bring a State amendment ಮತ್ತು ಇದನ್ನು ಮಾಡುವ ಬಗ್ಗೆ ಸರ್ಕಾರಕ್ಕೆ ಚಿಂತನೆ ಇದೆಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರ ಮೂಲಕ ತಿದ್ದುಪಡಿ ತಂದು ರೈತರಿಗೆ ಇರುವಂತಹ ಸಮಸ್ಯೆಗಳನ್ನು ಏಕಕಾಲದಲ್ಲಿ ಇತ್ಯರ್ಥ ಮಾಡಬೇಕು. ಏಕೆಂದರೆ ಇದರ ಮೂಲಕ ರಾಜ್ಯದ ಬಹುಭಾಗ ನೀರಾವರಿ, ಕುಡಿಯುವ ನೀರು ಇನ್ನಿತರ ಭಾಗಗಳಿಗೆ ಅನುಕೂಲವಾಗುತ್ತದೆ. ಇದರ ಜೊತೆಗೆ ಅಂತಿಮವಾಗಿ ಇನ್ನೊಂದು ವಿಚಾರವನ್ನು ಹೇಳುವುದೇನೆಂದರೆ, ನಾನು ಅನೇಕ ಸಾರಿ ತುಂಗಭದ್ರಾ ವಿಚಾರವನ್ನು ಉದಾಹರಣೆಯಾಗಿ ಕೊಡುತ್ತಿದ್ದೆನು. ಅಲ್ಲಿ 33 ಟಿ.ಎಂ.ಸಿ. ಯಷ್ಟು ಹೂಳು ತುಂಬಿರುವ ಬಗ್ಗೆ ಇದೇ ಸದನದಲ್ಲಿ ಹೇಳಿದ್ದು, ಇದನ್ನು ತೆಗೆಯಲು ಆಂಧ್ರ ಪ್ರದೇಶದವರ ಬಳಿ proportionate ಆಗಿ ದುಡ್ಡು ಕೇಳಿ ಎಂದು ಹೇಳಿದ್ದೆನು. ಆಗ ಅದು ಆಗುವುದಿಲ್ಲ ಎಂದು ಹೇಳಿದ್ದು, ಈಗ ಆ ಭಾಗದ ರೈತರು ಹೂಳನ್ನು ಎತ್ತುತ್ತಿದ್ದಾರೆ. ಆದ್ದರಿಂದ ನಾನು ಕೇಳುವುದೇನೆಂದರೆ ಆಲಮಟ್ಟಿ ಅಣೆಕಟ್ಟಿನ projects ಗಳಲ್ಲಿ ಹೂಳು ತುಂಬುವುದರಿಂದ ಮುಳುಗಡೆ ಪ್ರದೇಶ ಜಾಸ್ತಿಯಾಗುತ್ತಾ ಹೋಗುತ್ತದೆ. ಆ ಹೂಳನ್ನು ತೆಗೆಯಬೇಕು. ಏಕೆಂದರೆ ನಾವು ಆಂಧ್ರಕ್ಕೆ ನೀರು ಬಿಡುತ್ತೇವೆ, ನಂತರ ತೆಲಂಗಾಣ ಸೇರಿದಂತೆ ಇಬ್ಬರೂ share ಮಾಡಿಕೊಳ್ಳುತ್ತಾರೆ. ಈ ಹೂಳಿನ ವಿಚಾರದ ಬಗ್ಗೆ ಸರ್ಕಾರದ ನೀತಿಯ ಬಗ್ಗೆ ಹೇಳಬೇಕೆಂದು ಕೇಳುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಮಾನ್ಯ ಸಭಾಪತಿಯವರೇ,

**ಉಪ ಸಭಾಪತಿಯವರುಃ–** ಇಲ್ಲ, ದಯವಿಟ್ಟು ಕುಳಿತುಕೊಳ್ಳಿ. ಸಮಯ ಇಲ್ಲ. ವಿರೋಧ ಪಕ್ಷದ ನಾಯಕರು ಮಾತನಾಡಿ. ಮಾನ್ಯ ಮಂತ್ರಿಗಳು ಉತ್ತರ ಮಾಡಿದ ಮೇಲೆ ಮತ್ತೆ ಮತ್ತೆ ಕ್ಲ್ಯಾರಿಫಿಕೇಷನ್ ಕೇಳಿದರೆ ಹೇಗೆ? ಇದಕ್ಕೆ ಎಷ್ಟು ಸಮಯ ಚರ್ಚೆ?

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)ಃ–** ಮಾನ್ಯ ಸಭಾಪತಿಯವರೆ, ಯಾವ ರೀತಿ ಆ ಬಡ ರೈತರಿಗೆ ಭೂಮಿಯ ಬಗ್ಗೆ ಹಣ ಕೊಡುವುದಕ್ಕೆ ನಿಧಾನವಾಗುತ್ತಿದೆಯೋ, ಹಾಗೆ ಸರ್ಕಾರದ ಉತ್ತರವೂ ಆಗುತ್ತಿದೆ.

**ಶ್ರೀ ಎಂ.ಬಿ. ಪಾಟೀಲ್:–** ಸಂತ್ರಸ್ತರ ಬಗ್ಗೆ ಮಾತನಾಡಲಿ, ಆದರೆ ರಾಜಕೀಯ ಬೇಡ.

**ಶ್ರೀ ಕೆ.ಎಸ್. ಈಶ್ವರಪ್ಪಃ–** ನಾನು ರಾಜಕೀಯ ಮಾತನಾಡಲಿಲ್ಲ, ನಾನು ಖಂಡಿತ ರಾಜಕೀಯ ಮಾತನಾಡುವುದಿಲ್ಲ, ಮಾಡುವುದೂ ಇಲ್ಲ. ನಾನು ನೇರವಾಗಿ ಹೇಳುತ್ತೇನೆ. ಇಲ್ಲಿ ಪ್ರಶ್ನೆ ಏನೆಂದರೆ, ಲಕ್ಷಾಂತರ ಎಕರೆ ಭೂಮಿ ಕಳೆದುಕೊಂಡ ರೈತನಿಗೆ ಪರಿಹಾರವಾಗಿ ಹಣ ಕೊಡಬೇಕು. ಪರಿಹಾರ ಕೊಡಲು ಇಚ್ಛಾಶಕ್ತಿ ಬಹಳ ಮುಖ್ಯ. ಮಾನ್ಯ ಎಸ್.ಆರ್. ಪಾಟೀಲರು, ಮಾನ್ಯ ಉಗ್ರಪ್ಪನವರು ಸೇರಿದಂತೆ ಉಳಿದವರೆಲ್ಲರೂ ಕ್ಲಿಯರ್ ಆಗಿ ಹೇಳಿದ್ದಾರೆ. ಈ ಕಾನೂನು, ತಿದ್ದುಪಡಿ, guidance value

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲವನ್ನು ಹಿಡಿದುಕೊಂಡು ಕುಳಿತುಕೊಂಡರೆ ಯಾವ ಕಾರಣಕ್ಕೂ ಸಮಸ್ಯೆ ಪರಿಹಾರ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಅಧಿಕಾರ ಇಲ್ಲವೇ? ನಾನು ಅನೇಕ ಸಾರಿ ಹೇಳಿದ್ದೇನೆ. ಹಿಂದೆ National Thermal Power Corporation (NTPC) Project ಮಾಡುವ ಸಂದರ್ಭದಲ್ಲಿ ಇದೇ ಸಮಸ್ಯೆ ನಿಮ್ಮ ಜಿಲ್ಲೆಯಲ್ಲಿ ಬಂತು. ಎಷ್ಟು ಪರಿಹಾರ ಕೊಡಬೇಕು ಏನು ಎಂಬಿತ್ಯಾದಿ ವಿಚಾರಗಳು ಬಂತು. ಆಗ ನಾವು  ಪರಿಹಾರ ಕೊಡಲಿಲ್ಲವೇ? ಅವರು ಸ್ವಲ್ಪ ಜಾಸ್ತಿ ಪರಿಹಾರ ಕೇಳಿದರು. ಅವರು ಹತ್ತನ್ನೆರಡು ಲಕ್ಷ ಕೊಡಿ ಎಂದು ಕೇಳಿದರು. ಅವರು ಕೇಳಿದ್ದು ತಪ್ಪಲ್ಲ. ಅವರನ್ನು ಕರೆದು, ಕೂರಿಸಿ ಮಾತನಾಡಿ ಏಳೂಕಾಲು ಲಕ್ಷ ಕೃಷಿ ಭೂಮಿಗೆ ಮತ್ತು ನೀರಾವರಿಗೆ ಒಂಭತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಾಗ ಸಂತೋಷವಾಗಿ ಒಪ್ಪಿಕೊಂಡರು. ಈಗ ಪ್ರಾಜೆಕ್ಟ್ ಸಹ ಆಗುತ್ತಿದೆ. ಇಲ್ಲಿ ಭೂಮಿಯನ್ನು ತೆಗೆದುಕೊಂಡು ಆಗಿದೆ, ಆದರೆ ಅವರನ್ನು ಈ ರೀತಿ ಕಾಯಿಸಿ ಕೂರಿಸುವುದು ಬೇಡ. ಮಾನ್ಯ ಮುಖ್ಯಮಂತ್ರಿಗಳು, ಕ್ಯಾಬಿನೆಟ್ ಮತ್ತು ಸರ್ಕಾರಕ್ಕೆ ಸಂಪೂರ್ಣ ಅಧಿಕಾರ ಇದೆ. ದಯವಿಟ್ಟು consent award ಮಾಡಿ. ಅವರನ್ನು ಕರೆದು ಕೂರಿಸಿ ಮಾತನಾಡಿ convince ಮಾಡಲು ಅವಕಾಶ ಇದೆ. ಈ ದಿಕ್ಕಿನಲ್ಲಿ ಪ್ರಯತ್ನ ಮಾಡಿ, ಸಮಸ್ಯೆ ಪರಿಹಾರ ಮಾಡಿದರೆ ರೈತರಿಗೂ ಅನುಕೂಲವಾಗುತ್ತದೆ, ನೀರಾವರಿ ಯೋಜನೆ ಮಾಡಲು ಅನುಕೂಲವಾಗುತ್ತದೆ. ಈ ದಿಕ್ಕಿನಲ್ಲಿ ಸರ್ಕಾರವು ಚಿಂತನೆ ಮಾಡುತ್ತದೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ.

(ಮುಂದು)

**(ಉಪಸಭಾಪತಿಯವರ ಉಪಸ್ಥಿತಿ)**

**(631) 08-06-2017 SK-KS (SP) 5.00**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೃಷ್ಣ ಮೇಲ್ದಂಡೆ ಯೋಜನೆಯ ಸಂತ್ರಸ್ಥರ ಬಗ್ಗೆ ಅತ್ಯಂತ ಮುಕ್ತ ಮನಸ್ಸಿನಿಂದ ಪಕ್ಷಾತೀತವಾಗಿ ಎಲ್ಲರೂ ಆ ಸಂತ್ರಸ್ತರ ಅಹವಾಲುಗಳನ್ನು ಹೇಳಿಕೊಂಡಿದ್ದಾರೆ. ತಾವು ಅಷ್ಟೇ ಮುಕ್ತ ಮನಸ್ಸಿನಿಂದ ಪ್ರತಿಕ್ರಿಯಿಸಿದ್ದೀರಿ. ಈಗಾಗಲೇ ಈ ಸಮಸ್ಯೆಗೆ 53 ವರ್ಷಗಳು ತುಂಬಿದೆ. ಆದರೆ ಇನ್ನು ಪರಿಹಾರ ದೊರೆತಿಲ್ಲ, ನನ್ನ ಮನವಿ ಇಷ್ಟೇ. ನೀವು ಏನು ಅವಕಾಶಗಳು ಬೇಕಾದರೂ ಮಾಡಿಕೊಳ್ಳಿ. Consent ನಲ್ಲಿ ಮಾಡುತ್ತೀರಾ ಅಥವಾ ಈಗಿನ ಕಾಯಿದೆಗಳನ್ನು ಉಪಯೋಗ ಮಾಡಿಕೊಳ್ಳುತ್ತೀರಾ ಮಾಡಿಕೊಳ್ಳಿ. ಬೇಕಾದರೆ ಇನ್ನು ಹೆಚ್ಚಿನ ಕಾಯಿದೆಗಳನ್ನು ತನ್ನಿ. ಇನ್ನು ಯಾವ್ಯಾವ ಅವಕಾಶಗಳಿಗೆ ಏನೇನೋ ಕಾಯಿದೆಗಳನ್ನು ತರುತ್ತೀರಾ ತನ್ನಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆ ಸಂತ್ರಸ್ತರನ್ನು ಸಮಾಧಾನಕರವಾಗಿ ನೋಡಿಕೊಂಡು ನಿಮ್ಮ ಅಣೆಕಟ್ಟಿನ ಕೆಲಸವನ್ನು ಪೂರ್ಣ ಮಾಡಿ. ಎರಡನೇಯದಾಗಿ, ಶ್ರೀಮತಿ ತಾರಾರವರು ಒಂದು ಮಾತನ್ನು ಹೇಳಿದರು; houseless, siteless and landless ನೀವು ಆ ಜನರ ಕಥೆಯನ್ನು ಏನು ಹೇಳಲಿಲ್ಲ. ಪ್ರತಿ ಹಳ್ಳಿಯಲ್ಲಿ ಕೂಲಿ ಕಾರ್ಮಿಕರು ಇರುತ್ತಾರೆ. ಅವರಿಗೆ ಮನೆ ಮತ್ತು ಜಮೀನು ಇರುವುದಿಲ್ಲ. ನೀವು ಅವರಿಗೆ ಏನು ಮಾಡುತ್ತೀರಾ? At least ಮತದಾರರ ಪಟ್ಟಿಯಲ್ಲಾದರೂ ಅವರು ಇರುತ್ತಾರೆ. ನೀವು ಅವರಿಗೆ ಏನು ಮಾಡುತ್ತೀರಾ ಎಂದು ಹೇಳಬೇಕು. ಮೂರನೇಯದಾಗಿ, ಬಹಳ ಸಲ ಏನಾಗಿ ಬಿಡುತ್ತದೆ ಎಂದರೆ ಎಲ್ಲಾ ಅಣೆಕಟ್ಟನ್ನು ಕಟ್ಟಿ ಬಿಡುತ್ತೇವೆ. ಹಿಂದುಗಡೆ ಬಹಳ ಹಳ್ಳಿಗಳು ಉಳಿದುಕೊಂಡು ಬಿಡುತ್ತವೆ. ಕೆಳಗಡೆಯವರು ಮಾತ್ರ ನೀರನ್ನು ನೋಡುತ್ತಾರೆ. ಹಿಂದುಗಡೆ ಹಳ್ಳಿಯಿರುವ ಕಡೆ ನೀರು ಕೊಡುವ ಬಗ್ಗೆ ಯೋಚನೆ ಮಾಡಲಿಲ್ಲ. Lift irrigation ಹಾಕಿ ಹಿಂದುಗಡೆ ಹಳ್ಳಿಯವರಿಗೂ ನೀರು ಕೊಡಿ. ಅವರಿಗೇಕೆ ನೀರು ಕೊಡಬಾರದು? ಅವರು ಜಮೀನುಗಳನ್ನು ಕೊಟ್ಟು, ಬೆಳಿಗ್ಗೆ ಎದ್ದು ಬರೀ dam ನ್ನಷ್ಟೇ ನೋಡಬೇಕೇ? ಇದರ ಬಗ್ಗೆ ನೀವು ಯಾವ ತರಹ ಆಲೋಚನೆ ಮಾಡುತ್ತೀರಾ ಗೊತ್ತಿಲ್ಲ. ಹಿಂದೆ ಇರುವ ಜಮೀನುಗಳಿಗೆ Lift irrigation ಮೂಲಕ ನೀರು ಕೊಡುವಂತಹ ಯೋಜನೆಯನ್ನು ಮಾಡಿ. Landless ನವರನ್ನು ನೋಡಿ ಮತ್ತು ಒಟ್ಟಾರೆ ಪರಿಹಾರ ಕೊಡುವ ದಿಸೆಯಲ್ಲಿ ಅತ್ಯಂತ ಮುಕ್ತ ಮನಸ್ಸಿನಿಂದ ಒಂದು ನಿರ್ಧಾರಕ್ಕೆ ಬಂದು ಇತಿಹಾಸಕ್ಕೆ ನಾಂದಿ ಹಾಡುವುದಕ್ಕೆ ಕಾರಣೀಭೂತರಾಗಿ. ನೀವು ಆ ಭಾಗದವರಿದ್ದೀರಿ ಅದನ್ನು ಮಾಡಿದರೆ ಜನರು ನಿಮ್ಮನ್ನು ನೆನಸಿಕೊಳ್ಳುತ್ತಾರೆ.

**ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಶ್ರೀ ಕೆ.ಟಿ. ಕಂತೇಗೌಡರು ಹೇಳಿದ್ದನ್ನು ನಾನು ಈಗಾಗಲೇ ಹೇಳಿದ್ದೇನೆ. ಭೂಮಿ ಇಲ್ಲದಂತಹವರು, ಮೂರು ವರ್ಷ ಆ ಭಾಗದಲ್ಲಿದ್ದಂತಹ ವ್ಯಾಪಾರಸ್ಥರು, ಗುಡಿ ಕೈಗಾರಿಕೆ ಇರಬಹುದು, ಅದು ಯಾರಾದರೂ ಇರಬಹುದು, ಇದನ್ನೆಲ್ಲಾ ನಾನು ಹೇಳಿದ್ದೇನೆ. ಇನ್ನು ಏಕ ರೂಪದ ಬೆಲೆ ಬಗ್ಗೆ ನಾನು ಏನಾದರೂ ಸತ್ಯ ಹೇಳುವುದಕ್ಕೆ ಹೋಗಿ ಬಿಟ್ಟರೆ ಏನಾಗುತ್ತದೆ ಅದು ತಪ್ಪು ಅರ್ಥವಾಗುತ್ತದೆ. ನಾನು ಬಹಳ short time ನಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ಮೊದಲಿನಿಂದ ನಾನು Upper Krishna Project (UKP) ಸೇರಿದಂತೆ ಮೊದಲು ಪ್ರಾರಂಭ ಮಾಡಿ World Bank ಹಿಡಿದುಕೊಂಡು ಇಲ್ಲಿಯವರೆಗೆ ಬರಬೇಕಾಗಿತ್ತು. ಆದರೆ ಸಮಯದ ಆಭಾವ ಇರುವುದರಿಂದ ನಾನು ಮಾತನಾಡಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ಮಾನ್ಯ ಸಭಾಪತಿಯವರೆ, 2010 ರಲ್ಲಿ Tribunal Award ಆಯಿತು. ಇಲ್ಲಿ ಏನಾಗಿದೆ ಎಂದರೆ ಈ ಹಿಂದೆ 2012ನೇ ಇಸವಿಯಲ್ಲಿ ಹಿಂದಿನ ಸರ್ಕಾರವಿದ್ದಾಗ, ಇದಕ್ಕೆ 17,206 ಕೋಟಿ ರೂಪಾಯಿಗಳ ಆಡಳಿತಾತ್ಮಕ ಅನುಮೋದನೆ ಕೊಟ್ಟರು. 17,206 ಕೋಟಿ ರೂಪಾಯಿಗಳಿಗೆ ಹೇಗೆ administration approval ಕೊಟ್ಟರು? ಮಾನ್ಯ ಈಶ್ವರಪ್ಪನವರೇ ಅದು ತಪ್ಪು ಎಂದು ಹೇಳುತ್ತಿಲ್ಲ. ಮಾನ್ಯ ಯತ್ನಾಳ್ ಮತ್ತು ಮಾನ್ಯ ನಿರಾಣಿಯವರೆ ಪ್ರತಿ ಎಕರೆಗೆ 2,20,000 ರೂ. ನಂತೆ ದರ ನಿಗದಿ ಮಾಡಿ, ಆಡಳಿತಾತ್ಮಕ ಅನುಮೋದನೆ ನೀಡಿ 17,206 ಕೋಟಿ ರೂಪಾಯಿಗಳನ್ನು ತಂದರು. ಇವತ್ತು ಬಹಳಷ್ಟು ಸಲ ಈ ವಿಷಯಗಳು ಚರ್ಚೆಯಾಗುತ್ತಾ ಇರುತ್ತದೆ. ನಾವು ಈ ಹಿಂದೆ ವಿರೋಧಪಕ್ಷದಲ್ಲಿದ್ದೆವು. ಈ ಹಿಂದೆ ರಾಜ್ಯದಲ್ಲಿ ಒಟ್ಟಾರೆ 17,206 ಕೋಟಿ ರೂಪಾಯಿಗಳನ್ನು ಒಳಗೊಂಡಂತೆ ಆ ದಿನ ಅಂದಾಜು ಮಾಡಿದ್ದರು. UKP Stage-III ಇಲ್ಲಿ ಏನು ಒಂಭತ್ತು ಉಪ ಯೋಜನೆಗಳು ಬರುತ್ತವೆ. ಇವುಗಳನ್ನೆಲ್ಲಾ ಕೂಡಿ 17206 ಕೋಟಿ ರೂಪಾಯಿಗಳು. ಇನ್ನಿತರ ಎಲ್ಲಾ ಯೋಜನೆಗಳನ್ನು ಕೂಡಿಕೊಂಡು Upper Bhadra ಏನು revised ಅಲ್ಲ. ಹಳೆ estimation ಪ್ರಕಾರ ಸಿಂಗಟಾಲೂರು ನೀರಾವರಿ ಯೋಜನೆಯ ಹಳೆ estimation ಪ್ರಕಾರ including land acquisition Rs.2,20,000 ಎಲ್ಲಾ ಕೂಡಿ 50,000 ಸಾವಿರ ಕೋಟಿ ರೂಪಾಯಿಗಳಂತೆ, ಈಗ ನಾವು New Land Acquisition Act ಬಂತು. ಆಗ ಏನು ಅಂದಾಜು ಮಾಡಿದ್ದರು. ಈ ರಾಜ್ಯದಲ್ಲಿ ಒಟ್ಟಾರೆ 50,000 ಸಾವಿರಕೋಟಿ ರೂಪಾಯಿ ನೀರಾವರಿ ಯೋಜನೆಗಳು ಆಗುತ್ತವೆ. ನಮ್ಮ ಸರ್ಕಾರ ಮಾಡಿದ್ದಲ್ಲ, ಹಿಂದಿನ ಸರ್ಕಾರದವರು ನೀರಾವರಿ ಯೋಜನೆಗಳಿಗೆ estimate ಮಾಡಿದ್ದರು. The total estimated cost to complete all irrigation projects in the State was Rs.50,000 crores. ಈ ಹಿಂದೆ ನಮ್ಮ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ನಾಯಕರಾಗಿದ್ದಾಗ, ಅಂದರೆ 50,000 ಕೋಟಿ ರೂಪಾಯಿಗಳು ಬೇಕಾದಾಗ, ಪ್ರತಿ ವರ್ಷ 10,000 ಕೋಟಿ ರೂಪಾಯಿಗಳನ್ನು ಕೊಟ್ಟರೆ, ನಮ್ಮ ಸರ್ಕಾರದ ಐದು ವರ್ಷಗಳ ಅವಧಿಯಲ್ಲಿ ಎಲ್ಲಾ ಯೋಜನೆಗಳು ಮುಗಿಯುತ್ತವೆ. Total Rs.50,000 crores ನಲ್ಲಿ ಮುಗಿಸುವುದಕ್ಕೆ ಉದ್ದೇಶವಿತ್ತು. UKP ಯ Stage-III ಒಂದೇ 50,500 ಕೋಟಿ ರೂಪಾಯಿಗಳಾಗಿದೆ. ಈಗ Cabinet ಗೆ revised estimate ಬರುತ್ತಿದೆ. ಏಕೆಂದರೆ 2,20,000 X 4 ಎಂದರೆ ಎಷ್ಟಾಯಿತು? Rs.8,80,000 crores ಆಯಿತು. ಅದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಷ್ಟು ಕಡಿಮೆಯಿದೆ? ಈಗ 50,500 ಕೋಟಿ ರೂಪಾಯಿಗಳು ಹೊಸ SR rate ಇವೆಲ್ಲವನ್ನು ಕೂಡಿ New Land Acquisition Act ಪ್ರಕಾರ ಇವತ್ತಿನ ದಿವಸ Land acquisition and R&R component(Rehabilitation and Resettlement)ನಲ್ಲಿ ಮಹತ್ವದ ಬದಲಾವಣೆಯಾಗುವಂತಹದ್ದು ಇದೆ. ಇವತ್ತು ಒಂದು ಲಕ್ಷ ಕೋಟಿಯಾಗಿದೆ. Upper Bhadra ನು ಕೂಡ ಮೊದಲು ಮಾನ್ಯ ಉಗ್ರಪ್ಪನವರೇ ಎಷ್ಟು ಇತ್ತು? ಮೊದಲು ಸುಮಾರು 4,800 ಕೋಟಿ ಎಷ್ಟೋ ಇತ್ತು, ಈಗ Rs.12,500 crores ಆಗಿದೆ. ಸಿಂಗಟಾಲೂರು ನೀರಾವರಿ ಯೋಜನೆ 590 ಕೋಟಿ ಇತ್ತು. ಈಗ ಸುಮಾರು 5,800 ಕೋಟಿಯಾಗಿದೆ. ಈಗ ಎಲ್ಲಾ ಹೊಸ ಯೋಜನೆಗಳು ಮತ್ತು ಎತ್ತಿನಹೊಳೆ ಯೋಜನೆಗಳು ಕೂಡಿ ಒಂದು ಲಕ್ಷ ಕೋಟಿಯಾಗಿದೆ. ಪದೇ ಪದೇ ಟೀಕೆ ಬರುತ್ತಿತ್ತು, ಇಲ್ಲ 10,000 ಕೋಟಿ ಬರೀ ಕೃಷ್ಣ ಮೇಲ್ದಂಡೆ ಯೋಜನೆಗೆ ಹೇಳಿದ್ದಾರೆಂಬ ಪ್ರಶ್ನೆ ಬರುತ್ತಿರಲಿಲ್ಲ. 50,000 ಕೋಟಿ ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಿಗೆ ಎಂದ ಮೇಲೆ ಹತ್ತು ಸಾವಿರ ಕೋಟಿ ರೂಪಾಯಿಗಳು ಖರ್ಚು ಮಾಡಿಲ್ಲ, ಈ ವರ್ಷ ಎಲ್ಲಾ ಮುಗಿದು ಹೋಗುವಂತಹದು. ಆ clarification ಕೂಡ ಇವತ್ತು ಏಕೆ ಇಂತಹ ಸಂದರ್ಭ ಬಂತು ಎಂದು ನಾನು ನೋಡುತ್ತೇನೆ. ಇದರಲ್ಲಿ ರಾಜಕೀಯ ಬೆಳೆಸುವುದಕ್ಕೆ ನಾನು ಬಯಸುವುದಿಲ್ಲ. ಈಗ ಮಾನ್ಯ ಉಗ್ರಪ್ಪನವರು ಸಲಹೆಯನ್ನು ಕೊಟ್ಟಿದ್ದಾರೆ. ಇವತ್ತು ತೆಲಂಗಾಣದಲ್ಲಿ ಈ ತರಹ ಆಗಿದೆ. ನಾವು ಈಗ ಅದಕ್ಕೆ amendment ತರಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ. ಮಾನ್ಯ ಎಸ್.ಆರ್ ಪಾಟೀಲ್‌ರವರು quick ಆಗಿ amendment ಇದೆ ಎಂದು ಹೇಳಿದರು. ಏಕೆಂದರೆ ಅವರು Advocate, Land Acquisition deal ಮಾಡಿದಂತಹವರು ಮತ್ತು ವಕೀಲರು ಕೂಡ. ನಾನು ವಕೀಲನಲ್ಲ. ಅವರು ಹೇಳಿದರು ಇಲ್ಲ ಮಾನ್ಯ ಎಂ.ಬಿ. ಪಾಟೀಲ್ ಇದಕ್ಕೆ ಏನು amendment ತರಬೇಕಾಗಿಲ್ಲ. It is Supreme Court's decision and is binding on every State. It can be applicable. ಕಾನೂನು ಇಲಾಖೆ ಏನು ಹೇಳುತ್ತದೆ ನೋಡೋಣ. ಮಾನ್ಯ ಉಗ್ರಪ್ಪನವರೇ, you are competent and I am not competent on this. ನನ್ನ ಸಾಮಾನ್ಯ ಜ್ಞಾನ ಏನು ಹೇಳುತ್ತದೆ ಎಂದರೆ ನಾವು ಏನು four times ಇದೆ. ಯಾವ component ನಲ್ಲಿ ಸೇರಿದೆ. R & R component ಇರಬಹುದು, ತೆಲಂಗಾಣದ ಹೈಕೋರ್ಟ್‌ನಲ್ಲಿ quash ಆಗಿದೆ because of R & R component. ಎಲ್ಲಾ component ನ ಸಮಾನವಾಗಿ ಅಥವಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೆಚ್ಚಿನದಾಗಿ ಕಡಿಮೆ ಕೊಡುವುದಕ್ಕೆ ಬರುವುದಿಲ್ಲ. Whether it is a BDA (Bangalore Development Authority) Act or Highways Act or Railways Act or any of the Acts ಅದಕ್ಕಿಂತ ಸಮಾನವಾಗಿ ಏನು ಕೂಡ ಕಡಿಮೆ ಮಾಡಲಾರದೆ ನಾಲ್ಕು ಪಟ್ಟಿನಲ್ಲಿಯಾಗಲಿ ಅಥವಾ components ಮಾಡಿಕೊಡುವುದು ಇದ್ದರೆ ಬಹುಶಃ ಅದರಿಂದ consent ಮಾಡುವುದಕ್ಕೆ ಯಾವುದೇ ತೊಂದರೆ ಕೂಡ ಇಲ್ಲ ಎಂದು ನಾನು ವಾದವನ್ನು ಮೊದಲು ಮಾಡಿದ್ದೇನೆ. ಅದನ್ನು accept ಮಾಡಿಕೊಳ್ಳುವಂತಹ ಪರಿಸ್ಥಿತಿಯು ನಮ್ಮ High level Committee ಯಲ್ಲಿ ಕೂಡ ಇತ್ತು. It has helped us. The Telangana's issue has helped us. ಇವತ್ತು ನಾವು ಈಗ ಏಕ ರೂಪ ದರ ತರಬೇಕು ಅಥವಾ ಎರಡು ಚಿಂತನೆಗಳು ನಮ್ಮ ಮುಂದಿವೆ. ಒಂದು ಅತ್ಯಂತ ಹೆಚ್ಚಿನದಾಗಿ market value ಯಾರಿಗೆ ಸಿಗುತ್ತದೆ ಮತ್ತು ಅವರಿಗಂತ ಕಡಿಮೆ ಯಾರಿಗೆ ಸಿಗುತ್ತದೆ. ಇನ್ನು ಕಡಿಮೆಯಾಗಿರುವಂತಹದು ಬೀಳಗಿ, ಬಿಜಾಪುರವನ್ನು ತೆಗೆದುಕೊಳ್ಳಿ. ಮಾನ್ಯ ಎಸ್.ಆರ್.ಪಾಟೀಲ್‌ರ ಕ್ಷೇತ್ರದಲ್ಲಿ ನಾಲ್ಕು ಪಟ್ಟು ಆದರೆ, ಅವರ ತಾಲ್ಲೂಕಿನ ಮೇಲೆ ಇವತ್ತಿನ ದಿವಸ ಅವರಿಗೆ ಸಿಗುತ್ತದೆ. ಅವರಿಗೆ 25 ಲಕ್ಷ ಸಿಕ್ಕರೆ, ನಮಗೆ 6-7 ಲಕ್ಷ ಸಿಗುತ್ತದೆ. ಇಲ್ಲಿರುವ ವ್ಯತ್ಯಾಸವನ್ನು ಹೇಳುತ್ತೇನೆ. ಈ ಆರು-ಏಳು ಲಕ್ಷ ಜನರನ್ನು ಎಷ್ಟು ಮೇಲಕ್ಕೆ ಒಯ್ಯಬೇಕು. This is very important for us ಅಥವಾ ಏಕ ರೂಪ ದರ ತರುವುದಕ್ಕೆ ಸಾಧ್ಯವೇನು? ಇದೆಲ್ಲವನ್ನು ಕೂಡಿ ನಾನು ಇವತ್ತಿನ ದಿವಸ ಹೇಳುವುದಕ್ಕೆ ಆಗುವುದಿಲ್ಲ. Because this matter is seized before the High Power Committee. ಸಬ್ ಕಮಿಟೀಸ್ ಕೂಡ ಇವೆ. ಹೀಗಾಗಿ ಒಂದೇ ಒಂದು ಯೋಜನೆಯಡಿಯಲ್ಲಿ ಇವೆಲ್ಲವೂ ಕೂಡ ಬರುತ್ತಿರುವುದರಿಂದ, vicinity ಎನ್ನುವ ಪದ ಕೂಡ ಇದೆ. Land around the vicinity ಎನ್ನುವುದು ಇದೆ. Market value and sales statistics ಬಗ್ಗೆ ಹೇಳಿಲ್ಲ. ಮಾನ್ಯ ಉಗ್ರಪ್ಪನವರೇ, in the same vicinity ಎನ್ನುವಂತಹದ್ದು ಇದೆ. It is one of the factors. ಇವೆಲ್ಲದರ ಬಗ್ಗೆ High Power Committee ಮತ್ತು Sub-Committees ಮುಂದೆ ಚಿಂತನೆ ನಡೆಯುತ್ತಿದೆ. ನಾವು ಒಂದೆರೆಡು ತಿಂಗಳುಗಳಲ್ಲಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಯಾರು ಭೂಮಿಯನ್ನು ಕಳೆದುಕೊಂಡಿದ್ದಾರೋ, ಅವರಿಗೆ ಮಾರುಕಟ್ಟೆ ಬೆಲೆಯಾದರೂ ಸಿಗಬೇಕು. ಅವರು ಬೇರೆ ಕಡೆ ಜಮೀನು ಖರೀದಿ ಮಾಡುವ ಶಕ್ತಿಯನ್ನು ಹೊಂದಿರಬೇಕು. ಇದು ನಮ್ಮ ಧ್ಯೇಯೋದ್ದೇಶವಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು..)

(632) 08.06.17, 5.10, TCH/AK(KS) **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):- (ಮುಂದು)**

ಶ್ರೀಮತಿ ಜಯಮಾಲ ಮತ್ತು ಶ್ರೀಮತಿ ತಾರಾ ಅನೂರಾಧರವರು ಹಾಗೂ ಇನ್ನಿತರರೆಲ್ಲರೂ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದಂತೆ, ಅವರಿಗೆ ಒಳ್ಳೆಯ ರೀತಿಯಲ್ಲಿ ಪುನರ್ ವಸತಿ ಕಲ್ಪಿಸಬೇಕೆಂಬುದು Act ನಲ್ಲಿಯೂ ಕೂಡ ಇದೆ. ಆ Act ಇರುವುದಕ್ಕಿಂತ ನಮ್ಮ ಸರ್ಕಾರದವರು ಆ ರೀತಿಯ ಬದ್ಧತೆಯನ್ನು ಹೊಂದಿದ್ದೇವೆ. ಆ ಕೆಲಸವನ್ನು ಇವತ್ತಿನ ದಿವಸ ಮಾಡುತ್ತೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಈಗ ನಾನು ಇವಿಷ್ಟನ್ನೂ ಹೇಳಿದ್ದೇನೆ. ಇವತ್ತಿನ ದಿವಸ ನಾವು ಒಂದೆರಡು ತಿಂಗಳಿನಲ್ಲಿ ಅಂತಿಮವಾದಂತಹ ನಿರ್ಣವನ್ನು ತೆಗೆದುಕೊಳ್ಳುತ್ತೇವೆ. ಸದನದ ಎಲ್ಲಾ ಸದಸ್ಯರ ಭಾವನೆಗಳನ್ನು ಮತ್ತು ಸಲಹೆಗಳೆಲ್ಲವನ್ನೂ ಕ್ರೋಢೀಕರಿಸಿ ಅಂತಿಮ ನಿರ್ಧಾರವನ್ನು ನಾವು ತೆಗೆದುಕೊಳ್ಳುತ್ತೇವೆ.

**ಉಪ ಸಭಾಪತಿಯವರು:-** ಧನ್ಯವಾದಗಳು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಆ ನಿಟ್ಟಿನಲ್ಲಿ ಕನಿಷ್ಟ ಎರಡು ತಿಂಗಳಿನಲ್ಲಾದರೂ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆ ದಿಕ್ಕಿನಲ್ಲಿ ಸ್ವಲ್ಪ ಒತ್ತು ಕೊಟ್ಟು, ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ High power committee ಮುಂದೆ ಮಾತನಾಡಿ, ಎರಡು ತಿಂಗಳಿನಲ್ಲಾದರೂ ಸಹ ಅವರಿಗೆ ನ್ಯಾಯಬದ್ಧವಾಗಿ ಸಿಗಬೇಕಾದಂತಹ ಪ್ರಯತ್ನವನ್ನು ದಯವಿಟ್ಟು ಮಾಡಬೇಕು. ಈ ದಿಕ್ಕಿನಲ್ಲಿ ಇದಕ್ಕೆ ನಾವು ಸಹ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ.

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪರವರೇ, ಈಗ ತಾವು ಮಾತನಾಡುವುದು ಬೇಡ ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ, one sentence ಹೇಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪರವರೇ, ದಯವಿಟ್ಟು ತಾವು ಮಾತನಾಡುವುದು ಬೇಡ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಹತ್ತು ದಿನಗಳ ಹಿಂದೆ Telangana Act ಗೆ President assent ತೆಗೆದುಕೊಂಡಿದ್ದಾರೆ. ಹಾಗಾಗಿ, ಮಾನ್ಯ ಸುಪ್ರೀಂ ಕೋರ್ಟ್‌ನಲ್ಲಿ ಅದರ Constitutional validityಯನ್ನು challenge ಮಾಡಿದ್ದಾರೆ. ಅದರ ನಿರ್ಣಯ ಇನ್ನೂ ಬಂದಿರುವುದಿಲ್ಲ. General Law lay down ಮಾಡಿದರೆ Article 141 ನಮಗೂ ಅನ್ವಯವಾಗುತ್ತದೆ. ಬಹುಶಃ in the given circumstance ನನಗೆ ಅನಿಸುವಂಥದ್ದು, immediate ಆಗಿ ಸರ್ಕಾರ ಒಂದು ಹೊಸ State Amendment ತರುವುದು ಸೂಕ್ತ. ಮಾನ್ಯ ಈಶ್ವರಪ್ಪನವರು ಹೇಳಿದ ಹಾಗೆ, ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿದರೂ ಅದಕ್ಕೆ Amendment ಅನ್ನು ತರದೇ ಕೊಡುವುದಕ್ಕೆ ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಅದಕ್ಕೆ Amendment ಅನ್ನು ತಂದು consent ಗೆ ಅವಕಾಶ ಮಾಡಿಕೊಂಡು ಆಗ Cabinet, ಮುಖ್ಯಮಂತ್ರಿಗಳು ಹಾಗೂ ಮಂತ್ರಿಗಳು ತೀರ್ಮಾನ ಮಾಡುವುಕ್ಕೆ ಅವಕಾಶವಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅದು ಸರಿಯಾಗಿದೆ.

**ಶ್ರೀ ಎಂ.ಬಿ.ಪಾಟೀಲ:–** ಮಾನ್ಯ ಸಭಾಪತಿಯವರೇ, ಕಾನೂನು ಇಲಾಖೆಯ ಸಲಹೆ ಪಡೆದುಕೊಂಡು, ಕಾನೂನು ಪ್ರಕಾರ ಏನು ಹೇಳುತ್ತದೆಯೋ ಅಂತಿಮವಾಗಿ ಏನೆಲ್ಲವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಅದನ್ನು ಮಾಡೇ ಮಾಡುತ್ತೇವೆ. ಕಾನೂನು ಪ್ರಕಾರ ಏನು ಮಾಡಬೇಕು ಅದನ್ನು ಮಾಡಲೇ ಬೇಕಾಗುತ್ತದೆ.

**ಉಪ ಸಭಾಪತಿಯವರು:–** ತುಂಬಾ ಧನ್ಯವಾದಗಳು. ಈಗ ನಿಯಮ 330ರಡಿಯಲ್ಲಿ ಚರ್ಚೆ ಮುಕ್ತಾಯಗೊಂಡಿದೆ. ಈಗ ಬರಪರಿಹಾರದ ಬಗ್ಗೆ ಚರ್ಚೆ ಪ್ರಾರಂಭವಾಗುತ್ತದೆ. ಈಗ ಸುಮಾರು 40 ಮಂದಿ ಸದಸ್ಯರು ಈ ವಿಷಯದ ಬಗ್ಗೆ ಮಾತನಾಡಬೇಕೆಂದು ಪತ್ರ ಕಳುಹಿಸಿದ್ದಾರೆ. ಈಗ 40 ಮಂದಿ ಸದಸ್ಯರು ಮಾತನಾಡಬೇಕೆಂದರೆ ಎಷ್ಟು ಕಾಲಾವಕಾಶ ಬೇಕಾಗುತ್ತದೆ ಎಂಬುದನ್ನು ತಾವುಗಳೇ ನಿರ್ಧಾರ ಮಾಡಬೇಕು. ಇಂದೇ ಈ ಚರ್ಚೆ ಮುಕ್ತಾಯಗೊಂಡರೆ ಬಹಳ ಒಳ್ಳೆಯದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಯಾವಾಗ ಚರ್ಚೆ ಮುಕ್ತಾಯಗೊಂಡರೆ ಒಳ್ಳೆಯದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ಈಶ್ವರಪ್ಪನವರೇ, ಇಂದೇ ಚರ್ಚೆ ಮುಕ್ತಾಯಗೊಂಡರೆ ಒಳ್ಳೆಯದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾವು ಒಂದು ಕೆಲಸ ಮಾಡುತ್ತೇವೆ. ಮಾತನಾಡುತ್ತೇವೆಂದು ಎದ್ದು ಕುಳಿತುಕೊಳ್ಳುತ್ತೇವೆ. ಇನ್ನೊಬ್ಬರು ಸದಸ್ಯರು ಎದ್ದು ಕುಳಿತುಕೊಳ್ಳುತ್ತಾರೆ. 40 ಜನಕ್ಕೆ ಸುಮಾರು 6 ಗಂಟೆ ಆಗುತ್ತದೆ. ಅಷ್ಟು ಹೇಳುವುದಕ್ಕೂ ಕೂಡ ಒಬ್ಬೊಬ್ಬರಿಗೆ ಒಂಬತ್ತು ನಿಮಿಷವಾದರೂ ಬೇಕು.

**ಉಪ ಸಭಾಪತಿಯವರು:–** ರಾತ್ರಿ 10 ಗಂಟೆಯವರೆಗೂ ಚರ್ಚೆ ಮಾಡೋಣವೇ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ರಾತ್ರಿ ಎಲ್ಲಾ ಚರ್ಚೆ ಮಾಡಲಿ ಯಾರು ಬೇಡ ಎನ್ನುತ್ತಾರೆ. ಈ ನೀವು ಕೊಡುವ ಸಲಹೆ...

**ಉಪ ಸಭಾಪತಿಯವರು:–** ಮಾನ್ಯ ಈಶ್ವರಪ್ಪರವರೇ, ರೈತರ ಬಗ್ಗೆ, ಜನರ ಬಗ್ಗೆ ಮಾನ್ಯ ಸದಸ್ಯರುಗಳು ಐದೈದು ನಿಮಿಷಕ್ಕೆ ತಮ್ಮ ಚರ್ಚೆಯನ್ನು ಸೀಮಿತಗೊಳಿಸಿದರೆ, ನೀವು ಆ ರೀತಿ ಸಹಕಾರ ಮಾಡಿದರೆ ಅನುಕೂಲವಾಗುತ್ತದೆ. ಆದಕಾರಣ ದಯಮಾಡಿ ವಿರೋಧಪಕ್ಷದ ನಾಯಕರು ಹೊರತುಪಡಿಸಿ, ಉಳಿದೆಲ್ಲಾ ಸದಸ್ಯರು ಐದೈದು ನಿಮಿಷಕ್ಕೆ ತಮ್ಮ ಚರ್ಚೆ ಸೀಮಿತ ಮಾಡಿಕೊಳ್ಳಬೇಕೆಂದು ತಮ್ಮೆಲ್ಲರಲ್ಲೂ ನಾನು ವಿನಂತಿ ಮಾಡುತ್ತೇನೆ. ಈಗ ಚರ್ಚೆ ಪ್ರಾರಂಭ ಮಾಡೋಣ. ಈಗ ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈಗ ಆ ಸದಸ್ಯರು ಮಾತನಾಡುತ್ತಾರೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡುವುದು ಇಲ್ಲವಲ್ಲ.

**ಉಪ ಸಭಾಪತಿಯವರು:–** ಯಾವುದರ ಬಗ್ಗೆ ಚರ್ಚೆ. ತಾವು ಬೆಳಿಗ್ಗೆ ಸದನಕ್ಕೆ ಬಂದಿರಲಿಲ್ಲ ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ನಾನು ಸದನಕ್ಕೆ ಬೆಳಿಗ್ಗೆ ಬಂದಿದ್ದೆ. ಆದರೆ ಆ ವಿಷಯವನ್ನು ನಾನು ಇದ್ದಾಗ ಅದನ್ನು ಪ್ರಕಟಿಸಿರಲಿಲ್ಲ.

**ಉಪ ಸಭಾಪತಿಯವರು:–** ಮಧ್ಯಾಹ್ನದ ನಂತರ ಆ ವಿಷಯನ್ನು ತೆಗೆದುಕೊಳ್ಳಲಾಗುವುದೆಂದು ಮಾಡಿರುತ್ತಾರೆ. ಈಗ ತಾವು ದಯವಿಟ್ಟು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅಡ್ಜರ್ನ್‌ಮೆಂಟ್ ಮಟ್ಟಿಗೆ ಅದು ಪರಿವರ್ತನೆಯಾಗಿದೆ.

**ಶ್ರೀ ಐವನ್ ಡಿಸೋಜ:-** ಮಾನ್ಯ ಸಭಾಪತಿಯವರೇ, ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಒಂದು ಹೇಳಿಕೆಯನ್ನು ಮಂಡಿಸುತ್ತಾರೆ.

## 7. ಸಚಿವರ ಹೇಳಿಕೆ

**ವಿಷಯ:-** ಬೆಂಗಳೂರು ನಗರದ ನಮ್ಮ ಮೆಟ್ರೋ 1ನೇ ಹಂತದ ಲೋಕಾರ್ಪಣೆ ಕುರಿತು.

**ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದ ನಮ್ಮ ಮೆಟ್ರೋ ಒಂದನೇ ಹಂತದ ಕಾಮಗಾರಿ ಪೂರ್ಣಗೊಂಡಿದೆ ಎಂಬುದನ್ನು ಈ ಸದನಕ್ಕೆ ನಾನು ತಿಳಿಸಬಯಸುತ್ತೇನೆ. ಭಾರತ ಸರ್ಕಾರದ ಮೆಟ್ರೋ ರೈಲುಗಳಿಗಾಗಿ ಇರುವ ರೈಲ್ವೆ ಸುರಕ್ಷಾ ಆಯುಕ್ತರು, ಈ ಕಾಮಗಾರಿಯ ಸುರಕ್ಷತೆ ಬಗ್ಗೆ ಆಳವಾಗಿ ಪರಿವೀಕ್ಷಣೆ/ಅಧ್ಯಯನ ಕೈಗೊಂಡು ಈ ಮಾರ್ಗವು ರೈಲು ಪ್ರಯಾಣಕ್ಕೆ ಯೋಗ್ಯವಾಗಿದೆ ಎಂದು ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಗೌರವಾನ್ವಿತ ರಾಷ್ಟ್ರಪತಿಗಳು ಮೆಟ್ರೋ ರೈಲು ಒಂದನೇ ಹಂತದ ರೈಲು ಪ್ರಯಾಣವನ್ನು ದಿನಾಂಕ:17.06.2017ರಂದು ಬೆಂಗಳೂರು ನಗರದ ಜನರಿಗೆ ಲೋಕಾರ್ಪಣೆ ಮಾಡಲು ಒಪ್ಪಿಕೊಂಡಿರುತ್ತಾರೆ ಎಂಬುದನ್ನು ಈ ಸದನಕ್ಕೆ ತಿಳಿಸಲು ನಾನು ಇಚ್ಛಿಸುತ್ತೇನೆ. ಅದರಂತೆ, ದಿನಾಂಕ:18.06.2017ರಿಂದ ಈ ರೈಲು ಮಾರ್ಗದಲ್ಲಿ ಸಾರ್ವಜನಿಕ ಸಂಚಾರ ಸೇವೆಯನ್ನು ಪ್ರಾರಂಭಿಸಲಾಗುವುದು ಎಂಬುದನ್ನು ತಿಳಿಸಲು ನಾನು ಹರ್ಷಿಸುತ್ತೇನೆ.

**ಉಪ ಸಭಾಪತಿಯವರು:-** ಧನ್ಯವಾದಗಳು.

**(ಈ ಹಂತದಲ್ಲಿ ಸದನದಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಚಪ್ಪಾಳೆ ತಟ್ಟಿ ಹರ್ಷವನ್ನು ವ್ಯಕ್ತಪಡಿಸಿದರು.)**

## 8. ನಿಯಮ 68ರ ಮೇರೆಗೆ ಚರ್ಚೆ

**ವಿಷಯ:-** ರಾಜ್ಯದಲ್ಲಿ ಸತತ ಬರಗಾಲದಿಂದ ಉಂಟಾಗಿರುವ ಪರಿಸ್ಥಿತಿ ಮೇಲಿನ
ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.

----

**ಶ್ರೀ ಸೋಮಣ್ಣ ಮ.ಬೇವಿನಮರದ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಭೀಕರ ಬರಗಾಲದ ಬಗ್ಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಂತಹ ತಮಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ರಾಜ್ಯದಲ್ಲಿ ಸುಮಾರು 6–7 ವರ್ಷಗಳಿಂದೀಚೆಗೆ ನಾವು ಭೀಕರ ಬರಗಾಲದಲ್ಲಿ ತೊಳಲಾಡುತ್ತಿದ್ದೇವೆ. ಈಗಾಗಲೇ ರಾಜ್ಯದಲ್ಲಿ ಅನೇಕ ಬಾರಿ ಅಂದರೆ, 1976ರಲ್ಲಿ ಇರಬಹದು, 1985ರಲ್ಲಿ ಇರಬಹುದು, 1988ರಲ್ಲಿ ಇರಬಹದು ಮತ್ತು 1989ರಲ್ಲಿ ಇದೇ ರೀತಿಯ ಭೀಕರ ಬರಗಾಲ ಬಂದಿದ್ದು ನಮಗೆಲ್ಲರಿಗೂ ಗೊತ್ತಿದೆ. ಸುಮಾರು 50–60 ವರ್ಷಗಳ ಹಿಂದೆ ಕೂಡ ಈ ರೀತಿಯಾದ ಭೀಕರ ಬರಗಾಲ ಬಂದಿತ್ತು ಎಂದು ಹಳ್ಳಿಗಳಲ್ಲಿ ರೈತರು ಮತ್ತು ಹಿರಿಯರು ಮಾತನಾಡಿದ್ದು ನಮಗೆಲ್ಲರಿಗೂ ನೆನಪಿಗೆ ಬರುತ್ತಿದೆ. ಬಹಳಷ್ಟು ಮಳೆ ಕಡಿಮೆ ಬಂದಿದೆ. ದನ–ಕರುಗಳಿಗೆ ಮೇವು ಇಲ್ಲ. ದನ–ಕರುಗಳಿಗೆ ಅಡವಿಯಲ್ಲಿ ಕೆರೆ–ಕಟ್ಟೆಗಳಲ್ಲಿ ಕುಡಿಯಲು ನೀರು ಇಲ್ಲ. ಊರುಗಳಲ್ಲಿ ಮನುಷ್ಯರಿಗೆ ಕುಡಿಯಲು ನೀರು ಇಲ್ಲ ಮತ್ತು ತಿನ್ನುವುದಕ್ಕೆ ಆಹಾರದ ಕೊರತೆ ಬಹಳಷ್ಟು ಆಗಿದೆ ಎನ್ನುವಂತಹ ಮಾತನ್ನು ಅವರು ಆವೊತ್ತಿನ ಪರಿಸ್ಥಿತಿಯಲ್ಲಿ ಮಾತನಾಡುತ್ತಿದ್ದರು. ನಾವು ಅದನ್ನು ಕೇಳುತ್ತಿದ್ದೇವೆ. ಈ ವರ್ಷ ರಾಜ್ಯದಲ್ಲಿ ಶೇ.71ರಷ್ಟು ಮಳೆ ಕೊರತೆಯಾಗಿದೆ. ಅದೇ ರೀತಿ ಈ ವರ್ಷ ಶೇ.78ರಷ್ಟು ಮಾತ್ರ ಮಳೆ ಬಿದ್ದಿದೆ. ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಶೇ.90ರಷ್ಟು ಮಳೆ ಕೊರತೆ ಆಗಿದೆ. ಶೇ.10ರಷ್ಟು ಮಾತ್ರ ಮಳೆಯಾಗಿರುತ್ತದೆ. ಸುಮಾರು 30 ವರ್ಷದ ಹಿಂದೆ ಶೇ.10 ರಷ್ಟು ಮಳೆ ಕೊರತೆಯಾಗಿತ್ತು. ಅದೇ ದೊಡ್ಡ ಪ್ರಮಾಣದ ಬರಗಾಲವೆಂದು ನಾವೆಲ್ಲಾ ಮಾತನಾಡುತ್ತಿದ್ದೆವು. ಇವತ್ತಿನ ದಿವಸ ಕಂದಾಯ ಇಲಾಖೆಯ ಪ್ರಕಾರ ಈ ಬಾರಿ ಶೇ.28ರಷ್ಟು ಮಳೆಯಾಗಿದೆ ಎಂದು ನಾವೆಲ್ಲಾ ತಿಳಿದುಕೊಂಡಿದ್ದೇವೆ. ನಾವು ಕಳೆದ 50 ವರ್ಷಗಳನ್ನು ಗಮನಿಸಿದರೆ, ರಾಜ್ಯದಲ್ಲಿ 1976ರಲ್ಲಿ ಶೇ.21ರಷ್ಟು ಮಳೆ ಕೊರತೆಯಾಗಿತ್ತು. 1985ರಲ್ಲಿ ಶೇ.25ರಷ್ಟು ಮಳೆ ಕೊರತೆಯಾಗಿತ್ತು. ನಾವು ಇವೆರಡನ್ನೂ ಗಮನಿಸಿದರೆ, ಈ ವರ್ಷ ಮಳೆ ಶೇ.28ಕ್ಕೆ ಕುಸಿದಿದೆ. ಹಿಂಗಾರು ಮಳೆ ಸುಮಾರು 45–50 ವರ್ಷಗಳಿಂದೀಚೆಗೆ ಗಮನಿಸಿದರೆ, ಈ ಬಾರಿ ಅತ್ಯಂತ ಭೀಕರ ಬರಗಾಲವನ್ನು ನಾವೆಲ್ಲಾ ಕಂಡಿದ್ದೇವೆ. 1988ರಲ್ಲಿ ಶೇ.67ರಷ್ಟು ಮಳೆ ಕೊರತೆಯಾಗಿತ್ತು. ಈ ಸಂದರ್ಭದಲ್ಲಿ ಇದೇ ಬಹಳವೆಂದು ನಾವು ತಿಳಿದುಕೊಂಡಿದ್ದೆವು. ತದನಂತರ 1989ರಲ್ಲಿ ಶೇ.46ಕ್ಕೆ ಮಳೆ ಕೊರತೆ ಆಯಿತು. ಅಂದರೆ ಇವೆರಡನ್ನೂ ಗಮನಿಸಿದರೆ, ಈ ವರ್ಷ ಶೇ.71ರಷ್ಟು ಮಳೆ ಕಡಿಮೆಯಾಗಿದೆ. ಶೇ.60–70ರಷ್ಟು ಮಳೆ ಕುಸಿತದಿಂದ, ಈ ಬಾರಿ ರಾಜ್ಯದಲ್ಲಿ ಏನು ಬೆಳೆ ಬಿತ್ತಬೇಕಾಗಿತ್ತು ಅದಕ್ಕಿಂತ ಸುಮಾರು 16–20 ಲಕ್ಷ hectares ಭೂಮಿಯಲ್ಲಿ ಬೆಳೆ ಬಿತ್ತಿಲ್ಲ.

(ಮುಂದು...)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(633) 8.6.2017 5.20 ಪಿಕೆ:ಜಿಆರ್

**ಶ್ರೀ ಸೋಮಣ್ಣ ಮ.ಬೇವಿನಮರದ**(ಮುಂದುವರೆದಿದೆ)

ಬಿತ್ತಿದ್ದರಲ್ಲಿಯೂ ಸಹ ಬೆಳೆ ನಿರೀಕ್ಷಿಸಿದಷ್ಟು ಬಂದಿಲ್ಲ. ಕರ್ನಾಟಕ ರಾಜ್ಯದ ಮಲೆನಾಡು ಪ್ರದೇಶಗಳಲ್ಲೂ ಸಹ ಬರ ಇದೆ. ಅಲ್ಲೂ ಕೂಡ ಶೇಕಡ 82ರಷ್ಟು ಮಳೆ ಕೊರತೆಯಾಗಿದೆ. ಮುಂಗಾರಿನ ವಾಡಿಕೆ ಮಳೆ 494 ಮಿಲಿಮೀಟರ್ ಇದ್ದರೆ, ಮುಂಗಾರಿನ ವಾಸ್ತವ ಮಳೆ ಆಗಿರುವುದು ಕೇವಲ 463 ಮಿಲಿಮೀಟರ್ ಶೇಕಡ 113ರಷ್ಟು ಮಳೆ ಕೊರತೆಯಾಗಿದೆ ಎಂದು ಬರಗಾಲದ ಅಧ್ಯಯನದಿಂದ ಗೊತ್ತಾಗಿದೆ. ಹಿಂಗಾರಿನಲ್ಲಿ ವಾಡಿಕೆ ಮಳೆ 147 ಮಿಲಿಮೀಟರ್ ಬರಬೇಕಾಗಿತ್ತು. ಆದರೆ ವಾಸ್ತವ ಮಳೆ ಕೇವಲ 26 ಮಿಲಿಮೀಟರ್ ಬಂದಿದೆ. ಇದರಿಂದ ರಾಜ್ಯದಲ್ಲಿ ಶೇಕಡ 82ರಷ್ಟು ಮಳೆ ಕಡಿಮೆಯಾಗಿದೆ ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ದಕ್ಷಿಣ ಒಳನಾಡಿನಲ್ಲಿ ಶೇಕಡ 68ರಷ್ಟು ಮಳೆ ಕೊರತೆಯಾಗಿದೆ. ಬೆಂಗಳೂರು, ಹಳೆ ಮೈಸೂರು ಭಾಗದ ಈ ಜಿಲ್ಲೆಗಳಲ್ಲಿ ಮುಂಗಾರು ವಾಡಿಕೆ ಮಳೆ ಶೇಕಡ 359 ಮೀಮೀ ಇದ್ದರೆ, ವಾಸ್ತವ ಮಳೆ 313 ಮಿಲಿಮೀಟರ್ ಮಾತ್ರ ಆಗಿದೆ. ಅಂದರೆ ಶೇಕಡ 113ರಷ್ಟು ಮಳೆ ಕೊರತೆಯಾಗಿದೆ ಎಂದು ಇಲಾಖೆಯ ವರದಿ ಇದೆ. ಹಿಂಗಾರು ವಾಡಿಕೆ ಮಳೆ 210 ಮೀಮೀ ಇದ್ದರೆ, ವಾಸ್ತವದ ಮಳೆ 57 ಮಿಲಿಮೀಟರ್ ಮಾತ್ರ ಇದೆ. ಅಂದರೆ ಶೇಕಡ 68ರಷ್ಟು ರಾಜ್ಯಕ್ಕೆ ಕೊರತೆಯಾಗಿದೆ. ಆದ್ದರಿಂದ ನಾವು ಇವತ್ತು ಭೀಕರ ಬರಗಾಲ ಅನುಭವಿಸುತ್ತಿದ್ದೇವೆ. ನಮ್ಮ ಜಿಲ್ಲೆಯ ಒಂದು ವರದಿಯನ್ನು ನೋಡುವುದಾದರೆ, ಹಾವೇರಿ ಜಿಲ್ಲೆಯಲ್ಲಿ ವರದಾ, ತುಂಗಭದ್ರಾ, ಕುಮುದ್ವತಿ ಹಾಗೂ ಧರ್ಮ ನದಿಗಳು ಇವೆ. ನಾಲ್ಕು ನದಿಗಳು ಈ ವರ್ಷ ಸಂಪೂರ್ಣವಾಗಿ ಬರಿದಾಗಿವೆ. ಪೂರ್ತಿ ವರ್ಷ ಜನರಿಗೆ ಕುಡಿಯುವುದಕ್ಕೆ ನೀರಾಗಲಿ, ದನ-ಕರುಗಳಿಗೆ ಕುಡಿಯುವ ನೀರಾಗಲಿ ಅಥವಾ ಗದ್ದೆಗಳಿಗೆ ನೀರು ಹಾಯಿಸುವಂತಹ ನೀರಾವರಿಯಾಗಲಿ ಇಂತಹದ್ದರಿಂದ ಇವತ್ತಿನವರೆಗೂ ವಂಚಿತರಾಗಿದ್ದೇವೆ. ಕುಡಿಯುವ ನೀರಿಗೂ ಸಹ ಇವತ್ತು ಹಾಹಾಕಾರ ಎದ್ದಿದೆ. ನಾನಿಲ್ಲಿ ಒಂದು ಅಂಶವನ್ನು ನೆನಪು ಮಾಡಬಯಸುತ್ತಿದ್ದೇನೆ. ತಾಲ್ಲೂಕು ಕೇಂದ್ರಗಳಲ್ಲಿ ಹೊರಗಿನಿಂದ ಟ್ಯಾಂಕರ್ ಮುಖಾಂತರ ತಂದಂಥ ನೀರನ್ನು ಕೊಡ ಒಂದಕ್ಕೆ ರೂ. 4 ರಿಂದ 8ಕ್ಕೆ ತೆಗೆದುಕೊಳ್ಳುವ ಪರಿಸ್ಥಿತಿ ಒದಗಿಬಂದಿದೆ. ನಮ್ಮ ಜಿಲ್ಲೆಯಲ್ಲಿ ಒಟ್ಟು 1664 ಕೊಳವೆಬಾವಿಗಳಿವೆ. ಇದರಲ್ಲಿ 11ನೇ ತಿಂಗಳಿಗೆ, ಅಂದರೆ 2016ರ ವರ್ಷದ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ 375 ಕೊಳವೆಬಾವಿಗಳು ದುರಸ್ತಿಯಲ್ಲಿತ್ತು. ಆಗಿನ್ನು ಭೀಕರ ಬರಗಾಲ ಇರಲಿಲ್ಲ. ಅದರ ಮುಂಚೆಯೇ ಇಂತಹ ಸ್ಥಿತಿ ಇತ್ತು. 1648 ಹ್ಯಾಂಡ್‌ಪಂಪ್‌ಗಳಿತ್ತು. ಇದರಲ್ಲಿ 1318 ಹ್ಯಾಂಡ್‌ಪಂಪ್‌ಗಳು ದುರಸ್ತಿಯಲ್ಲಿತ್ತು. ಮಿನಿವಾಟರ್ ಟ್ಯಾಂಕ್‌ಗಳು 1283 ಇತ್ತು. ದುರಸ್ತಿಯಲ್ಲಿ ಇದ್ದದ್ದು 325. ಇದು ನವೆಂಬರ್-ಡಿಸೆಂಬರ್‌ನ ಚಿತ್ರಣ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಟ್ಟು ನೀರು ಪೂರೈಕೆ ಮಾಡುವ ಮಾರ್ಗ 4595ರಲ್ಲಿ 2218 ಮಾರ್ಗಗಳು 5 ತಿಂಗಳ ಹಿಂದೆಯೇ ಸಂಪೂರ್ಣವಾಗಿ ಹಾಳಾಗಿ ಹೋಗಿವೆ. ಇನ್ನುಳಿದಂಥ ಸುಮಾರು 2377 ರಲ್ಲಿ ಶೇಕಡ 20ರಷ್ಟು ನೀರು ಇರಬಹುದು. ಇವತ್ತಿನ ಸಂದರ್ಭದಲ್ಲಿ ಕೆರೆಗಳಲ್ಲಾಗಲಿ, ಬಾವಿಗಳಲ್ಲಾಗಲಿ, ಹಳ್ಳಗಳಲ್ಲಾಗಲಿ, 4 ನದಿಗಳಲ್ಲಾಗಲಿ ಮತ್ತು ಹೊಳೆಗಳಲ್ಲಾಗಲಿ ಒಂದು ಹನಿ ನೀರು ಕುಡಿಯುವುದಕ್ಕೆ ಇಲ್ಲ. ನಮ್ಮ ಜಿಲ್ಲೆಯ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಕೆರೆಗಳು 1153. ಅದರಲ್ಲಿ 1038 ಕೆರೆಗಳಲ್ಲಿ 6 ತಿಂಗಳು ಹಿಂದೆಯೇ ನೀರು ಇಲ್ಲ. ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ 263 ಕೆರೆಗಳಲ್ಲಿ 93 ಕೆರೆಗಳಲ್ಲಿ ನೀರಿಲ್ಲ. ಶೇಕಡ 10-20ರಷ್ಟು ನೀರು ಹಿಂದೆ ಏನಿತ್ತು ಈಗ ಅದೂ ಕೂಡ ಇಲ್ಲ. ಹೀಗಾಗಿ ಇಡೀ ಜಿಲ್ಲೆಯ 7 ತಾಲ್ಲೂಕುಗಳಲ್ಲಿ 743 ಗ್ರಾಮಗಳು ಜನ ವಸತಿ ಗ್ರಾಮಗಳು. ಇದರಲ್ಲಿ ಶೇಕಡ 68 ಹಳ್ಳಿಗಳಿಗೆ ಕೊಳವೆಬಾವಿಗಳ ಮುಖಾಂತರ ನೀರು ತೆಗೆದುಕೊಂಡು ಹೋಗುವಂತಹ ಅನುಕೂಲ ಇದೆ. ಶೇಕಡ 32ರಷ್ಟು ಹಳ್ಳಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಿಂದ ನೀರು ಕೊಡುತ್ತಿದ್ದಾರೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಲ್ಲಿ ಹಳ್ಳ, ಹೊಳೆ, ಕೆರೆ, ನದಿಗಳು ತುಂಬಿದಾಗ ನೀರಿನ ವ್ಯವಸ್ಥೆ ಇರುತ್ತದೆ. ಈಗ ಜಿಲ್ಲೆಯಲ್ಲಿ ದನ-ಕರುಗಳ ಪರಿಸ್ಥಿತಿ ಗಂಭೀರವಾಗಿದೆ. ಅದೇರೀತಿ ಹಳ್ಳಿಗಳಲ್ಲಿಯೂ ಸಹ ಬಹಳಷ್ಟು ತೊಂದರಗಳಿವೆ. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಮಾನ್ಯ ರುದ್ರಪ್ಪ ಲಮಾಣಿಯವರು ಸದನದಲ್ಲಿದ್ದಾರೆ. ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕಿನಲ್ಲಿ 19 ಹಳ್ಳಿಗಳಿಗೆ ನೀರಿಲ್ಲದೆ ತೊಂದರೆಯಾಗಿದೆ. ದಿಡುಗುರು, ಹೊಸಹಳ್ಳಿ, ಹಾವನೂರು, ದೇವಿಹೊಸೂರು, ಸಂಗೂರು, ಕರ್ಜಗೆ, ನೆಲಗಲ್ಲು, ದೇವಗಿರಿ, ಗೋಳೂರು, ಹಾಲಗಿ, ಕೆರೆಕೊಪ್ಪ, ನೆಗಳೂರು, ಕೂಳೇನೂರು, ಕುರುಬುಗೊಂಡ, ಕನಕಾಪುರ, ತಿಮ್ಮಾಪುರ ಮತ್ತು ಕಬ್ಬೂರು ಹಳ್ಳಿಗಳಲ್ಲಿ ಭೀಕರ ಬರಗಾಲ ಇದೆ. ಸವಣೂರು ತಾಲ್ಲೂಕಿನಲ್ಲಿರುವ ಕಾರಡಗಿ ಗ್ರಾಮ ದೊಡ್ಡ ಗ್ರಾಮವಾಗಿದ್ದು ಜಿಲ್ಲಾ ಪಂಚಾಯಿತಿಯನ್ನು ಹೊಂದಿದೆ. ಸಿರಬಡಗಿ, ಚಿಲ್ಲೂರು, ಮಂತ್ರೊಡಿ, ಸೇವಲಾಪುರ, ಗೋನಾಳ, ಚೌಡಾಳ, ದೇವನಹಳ್ಳಿ, ಚಿಲ್ಲೂರು ಬಡ್ನಿ, ಹಲಸೂರು, ತವರಮಲ್ಲನ ಹಳ್ಳಿ, ಮನ್ನಂಗಿ, ಹೇನಳ್ಳಿ, ಹಳೆ ಹಲಸೂರು, ಹೊಸ ಹಲಸೂರು, ಮಳ್ಳಾಗಟ್ಟಿ, ಎಲುಗಿ ಈ ಪ್ರದೇಶಗಳಲ್ಲೂ ಅದೇ ಪರಿಸ್ಥಿತಿ ಇದೆ. 1962ರ ಮಹಾಪೂರ ಬಂದಾಗ ಹಳೆಮನ್ನಂಗಿ, ಮನ್ನಂಗಿ, ತವರುಮಳ್ಳಳ್ಳಿ, ಕೋಣಿಮಳ್ಳಳ್ಳಿ, ಹಲಸೂರು ಮತ್ತು ನದಿನೀರಲಗಿ ಗ್ರಾಮಗಳನ್ನು ಆ ಹೊಳೆ ದಂಡೆಯಿಂದ ಸ್ಥಳಾಂತರ ಮಾಡಿದರು. ಸ್ಥಳಾಂತರ ಮಾಡಿದಂತಹ ಆ ಗ್ರಾಮಗಳವರು ಇವತ್ತಿಗೂ ಸಹ ವಸತಿಗೆ ಅರ್ಹವಿಲ್ಲದಂಥ ಭೂಮಿಯಲ್ಲಿ ಇದ್ದಾರೆ. ಸಂಪೂರ್ಣವಾದ ಮೂಲಭೂತ ಸೌಕರ್ಯಗಳು ಅಲ್ಲಿ ಇಲ್ಲ. 15 ರಿಂದ 20 ಅಡಿ ಬುನಾದಿ ತೆಗೆದು, ಮನೆ ಕಟ್ಟಿ ಇರಬೇಕು ಎನ್ನುವ ಪರಿಸ್ಥಿತಿಯಲ್ಲಿ ಇದ್ದರೂ ಸಹ, ಒಂದು ದೊಡ್ಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಳೆ ಬಂದರೆ ಆ ಮನೆಗಳು ಜಖಂ ಆಗುವಂತಹ ಸ್ಥಿತಿ ಇದೆ ಎನ್ನುವುದನ್ನು ನಾನು ಈಗಾಗಲೇ ಸದನದ ಮತ್ತು ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಇಂತಹ ಅನೇಕ ಗ್ರಾಮಗಳಲ್ಲಿ ಇವತ್ತಿಗೂ ಸಹ. ಎಲ್ಲೋ ಒಂದು ಕಡೆ ಭಿಕ್ಷಾಟನೆ ಮಾಡಿ ಜೀವನ ಸಾಗಿಸುವಂತಹ ಪರಿಸ್ಥಿತಿ ನಮ್ಮ ಕಣ್ಣೆದುರಿಗೆ ದಿನಂಪ್ರತಿ ನೋಡುವ ಸ್ಥಿತಿ ಬಂದಿದೆ. ಶಿಗ್ಗಾಂವ್ ತಾಲ್ಲೂಕಿನಲ್ಲಿರುವ ಹಿರೇಮಲ್ಲೂರು, ಚಿಕ್ಕಮಲ್ಲೂರು, ಗುಡ್ಡದ ಚೆನ್ನಾಪುರ, ಹುಲುಗೂರು, ಹತ್ತಿಗೆರೆ, ಹೊಸನಾಳ, ಪಾಣಿಗಟ್ಟಿ, ಚಂದಾಪುರ, ಹುನುಗುಂದ, ಕುಂದೂರು, ಮಣ್ಣಿಕೊಪ್ಪ ಇತ್ಯಾದಿ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಈ ವಿಚಾರವನ್ನು ನಾವು ಮಂತ್ರಿಗಳ ಗಮನಕ್ಕೆ ಕೆಡಿಪಿ ಸಭೆಯಲ್ಲಿ ಮತ್ತು ಜಿಲ್ಲಾಪಂಚಾಯಿತಿಯ ಸಭೆಯಲ್ಲಿ ಅನೇಕ ಬಾರಿ ಹೇಳಿದ್ದೇವೆ. ಬ್ಯಾಡಗಿ ತಾಲ್ಲೂಕಿನ ಸುಮಾರು 9–10 ಹಳ್ಳಿಗಳಿಗೆ, ರಾಣೇಬೆನ್ನೂರು ಮತ್ತು ಹಿರೇಕೆರೂರು ತಾಲ್ಲೂಕುಗಳ ಅನೇಕ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲದೆ ಪರಿಸ್ಥಿತಿ ಬಂದಿದೆ. ಜನರಿಗೆ ಈ ರೀತಿಯ ಸ್ಥಿತಿ ಬರುವುದಾದರೆ ಇನ್ನು ಧನ–ಕರುಗಳ ಪರಿಸ್ಥಿತಿ ಏನಾಗಬಹುದು ಎಂದು ಊಹೆ ಮಾಡಿಕೊಳ್ಳುವ ಪ್ರಸಂಗ ಬಂದೊದಗಿದೆ. ಆ ನಿಟ್ಟಿನಲ್ಲಿ ಸರ್ಕಾರ ಈಗಾಗಲೇ ಅನೇಕ ಕ್ರಮಗಳನ್ನು ಕೈಗೊಂಡಿದೆ. 600–800 ಅಡಿ ಬೋರ್ ಹೊಡೆದರೂ ನೀರು ಸಿಗುತ್ತಿಲ್ಲ. ಒಂದು–ಒಂದೂವರೆ ಇಂಚು ನೀರು ಸಿಕ್ಕಿದರೂ ಎಲ್ಲೋ 8 ಕಿಮೀ ದೂರದಿಂದ ಅದನ್ನು ಪೈಪ್‌ಲೈನ್ ಮುಖಾಂತರ ತರುವ ನಿಟ್ಟಿನಲ್ಲಿ ಸರ್ಕಾರದಿಂದ ಸರಿಯಾದ ಸಂದರ್ಭಕ್ಕೆ ಹಣ ಬಿಡುಗಡೆ ಆಗುತ್ತಿಲ್ಲ. ನಾವು ಇದನ್ನು ಅನೇಕ ಬಾರಿ ಹೇಳಿದ್ದೇವೆ. ನಿನ್ನೆಯ ಒಂದು ಸಭೆಯಲ್ಲಿ ನಮ್ಮ ಅನೇಕ ಜನ ಶಾಸಕರು ಈ ಕುರಿತು ಚರ್ಚೆ ಮಾಡಿದ್ದಾರೆ.

(ಮುಂದು . . .)

**(634)08-06-2017 MM-GR 5.30**

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭಾ ಕ್ಷೇತ್ರ) (ಮುಂದು):–**

ಇಂದಿನ ಬರಗಾಲದ ಪರಿಸ್ಥಿತಿಯಲ್ಲಿ ಶಾಸಕರು ಹಳ್ಳಿಗಳಿಗೆ ಹೋಗಲಾರದ ಪರಿಸ್ಥಿತಿ ಬಂದಿದೆ. ನೀರಿಲ್ಲವೆಂದು ಜನರು ಒತ್ತಾಯವನ್ನು ಮಾಡಿದಾಗ, ದನಕರುಗಳಿಗೆ ನೀರಿಲ್ಲವೆಂದು ರೈತರು ಒತ್ತಾಯ ಮಾಡಿದಾಗ ತುರ್ತಾಗಿ ಕೊಳವೆಬಾವಿಯನ್ನು ಕೊರೆಸಿದರೆ ಇವತ್ತಿನವರೆಗೆ ಅವರಿಗೆ ಪೇಮೆಂಟ್ ಆಗಿಲ್ಲ ಎಂದು ಶಾಸಕರು ತಮ್ಮ ಗೋಳನ್ನು ಹೇಳಿಕೊಳ್ಳಲಾರದಂತಹ ಪರಿಸ್ಥಿತಿ ಬಂದೊದಗಿದೆ. ಹೀಗಾದರೆ ಇದಕ್ಕೆ ಪರಿಹಾರವೇನು? ಹಣವನ್ನು ಕೊಟ್ಟರೆ ಆಗಬಹುದು. ನಮ್ಮ ಜಿಲ್ಲೆಯೊಳಗೆ ನಾಲ್ಕು ನದಿಗಳು ಹರಿಯುತ್ತವೆ. ಯಾವುದೇ ಸರ್ಕಾರ ಅಥವಾ ಆ ಚುನಾಯಿತ ಪ್ರತಿನಿಧಿಗಳು ಅಥವಾ ಈ ಚುನಾಯಿತ ಪ್ರತಿನಿಧಿಗಳು ಎಂದು ನಾನು ಮಾತನಾಡುತ್ತಿಲ್ಲ. ಮೂಲಭೂತವಾದಂತಹ ಸೌಕರ್ಯಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಒದಗಿಸುವುದಕ್ಕೆ ಎಲ್ಲಿ ಎಡವಿದ್ದೇವೆ ಎನ್ನುವುದನ್ನು ಸರ್ಕಾರ, ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಕುಳಿತುಕೊಂಡು ಚರ್ಚೆ ಮಾಡಬೇಕಾಗಿದೆ. ಇಂತಹ ಭೀಕರ ಬರಗಾಲ ಬಂದಾಗ ತುಂಬಿ ಹರಿಯುವ ಹೊಳೆಗಳ ಉಪಯೋಗವನ್ನು ತೆಗೆದುಕೊಂಡು ಕೆರೆಕಟ್ಟೆಗಳನ್ನು ತುಂಬಿಸಿ ಕೊಳವೆ ಬಾವಿಗಳ ಮುಖಾಂತರ ಅಂತರ್ಜಲವನ್ನು ಹೆಚ್ಚಿಸಿ ನೀರನ್ನು ಕೊಡುವ ವ್ಯವಸ್ಥೆಯನ್ನು ಏನಾದರೂ ಮಾಡಿದ್ದೇವೆಯೇ ಎನ್ನುವುದನ್ನು ಮನಃಪೂರ್ವಕವಾಗಿ ಎಲ್ಲಾ ಚುನಾಯಿತ ಪ್ರತಿನಿಧಿಗಳು, ಅಧಿಕಾರಿ ವರ್ಗದವರು ಕುಳಿತುಕೊಂಡು ವಿಚಾರ ಮಾಡುವ ಸಂದರ್ಭ ಒದಗಿ ಬಂದಿದೆ.

**ಉಪಸಭಾಪತಿಯವರು:–** ಮಾನ್ಯ ಸೋಮಣ್ಣರವರೆ . .

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ಕರ್ನಾಟಕದ 30 ಜಿಲ್ಲೆಗಳಲ್ಲಿ ಇವತ್ತಿನ ದಿವಸ ಭೀಕರ ಬರಗಾಲದ ಪರಿಸ್ಥಿತಿ ಬಂದಿರುವಾಗ ಇದರ ಬಗ್ಗೆ ಮಾತನಾಡದೇ ಮತ್ತಾವುದರ ಬಗ್ಗೆ ಮಾತನಾಡಬೇಕು? ದಯಮಾಡಿ ನನಗೆ ಮಾತನಾಡಲು ಒಂದು ತಾಸು ಸಮಯವನ್ನು ಕೊಡಬೇಕೆಂದು ಕೈ ಮುಗಿದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕಡಿಮೆ ಅವಧಿಯೊಳಗೆ ಮುಗಿಸುತ್ತೇನೆ.

**ಉಪಸಭಾಪತಿಯವರು:–** ಮಾನ್ಯ ಸೋಮಣ್ಣರವರೆ . .

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ನಾವು ದಿನಂಪ್ರತಿ ಹಳ್ಳಿಯಲ್ಲಿ ಓಡಾಡುವಾಗ ಜನರು ಎದೆಯ ಮೇಲಿನ ಅಂಗಿಯನ್ನು ಹಿಡಿದು ಕೇಳುವುದೊಂದು ಬಾಕಿ ಉಳಿದಿದೆ. ಮಾನ್ಯ ಮಂತ್ರಿಯವರ ಕ್ಷೇತ್ರ ಮತ್ತು ನನ್ನ ಕ್ಷೇತ್ರ ಆಜುಬಾಜು ಇರುವುದರಿಂದ ಅವರ ಅನೇಕ ಹಳ್ಳಿಗಳು ನಮ್ಮ ಕ್ಷೇತ್ರಕ್ಕೆ, ನಮ್ಮ ಹಳ್ಳಿಗಳು ಅವರ ಕ್ಷೇತ್ರಕ್ಕೆ ಹೋಗುವುದರಿಂದ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ದಯಮಾಡಿ ತಾವು ಅನುಕೂಲ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಉಪಸಭಾಪತಿರವರು:–** ಮಾನ್ಯ ಸೋಮಣ್ಣಯವರೆ, ಬೇಕಾದರೆ ವಿರೋಧಪಕ್ಷದ ನಾಯಕರ ಸಮಯವನ್ನೆಲ್ಲಾ ತಾವೇ ತೆಗೆದುಕೊಳ್ಳಿ. ಆದರೆ . .

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ದೊಡ್ಡವರಾದ ಅವರಿಗೆ ನಮ್ಮಂತಹವರಿಗೆ ಅನುಕೂಲ ಮಾಡಿಕೊಡಬೇಕೆಂದು ತಾವು ಹೇಳಿ. ದಿನಂಪ್ರತಿ ಹಳ್ಳಿಗಳೊಳಗೆ, ಜನರ ಮಧ್ಯದೊಳಗೆ ಓಡಾಟ ಮಾಡತಕ್ಕಂತಹವರಿಗೆ ಒಂದರ್ಧ ತಾಸು ಸಮಯವನ್ನು ಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿರವರು:-** ಆ ರೀತಿ ಆಗುವುದಿಲ್ಲ. ತಾವು ಮಾತನಾಡಿ ಈಗಾಗಲೇ 15 ನಿಮಿಷದ ಮೇಲಾಯಿತು.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ಆಗಲಿ, ನಾಳೆ ಬೇಕಾದರೆ ಒಂದರ್ಧ ತಾಸು ಕಡಿಮೆ ಮಾತನಾಡುತ್ತೇನೆ. ಸುಮ್ಮನೆ ಕುಳಿತುಕೊಳ್ಳುತ್ತೇನೆ.

**ಉಪಸಭಾಪತಿರವರು:-** ಮಾನ್ಯ ಸೋಮಣ್ಣರವರೆ, ನಾಳೆ ಎನ್ನುವ ಪ್ರಶ್ನೆ ಇಲ್ಲ. ಬೇಗ ಇವತ್ತೇ ಮುಕ್ತಾಯ ಮಾಡಿ. ಮಾನ್ಯ ಕವಟಗಿಮಠರವರೆ ಬೇಡಿ . . ಕುಳಿತುಕೊಳ್ಳಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ದಯವಿಟ್ಟು ಅಧಿಕಾರಿಗಳ ಗ್ಯಾಲರಿಯಲ್ಲಿ ನೋಡಿ. ಯಾರಾದರು ಕೃಷಿ ಇಲಾಖೆಯ ಕಾರ್ಯದರ್ಶಿಗಳಿದ್ದಾರಾ? ಅಥವಾ ಸಂಬಂಧಪಟ್ಟಂತಹ ಕಂದಾಯ ಇಲಾಖೆಯ ಕಾರ್ಯದರ್ಶಿಗಳಿದ್ದಾರೆಯೇ? ಅಥವಾ ಯಾರಿದ್ದಾರೆ ಎನ್ನುವುದನ್ನು ದಯವಿಟ್ಟು ಹೇಳಿ. ನಮ್ಮ ಅಹವಾಲನ್ನು ನಾವು ಯಾರಿಗೆ ಹೇಳಬೇಕು ಎನ್ನುವುದನ್ನು ತಾವು ಹೇಳಿ. ಮಾನ್ಯ ಸಭಾನಾಯಕರು ಇದ್ದಾರೆ. With due respect to the Hon'ble Minister and the Leader of House, I regret to say, ಅಲ್ಲಿ (ಅಧಿಕಾರಿಗಳ ಗ್ಯಾಲರಿಯಲ್ಲಿ) ಯಾರೂ ಒಬ್ಬ ಜವಾಬ್ದಾರಿಯುತ ಅಧಿಕಾರಿಗಳು ಇಲ್ಲ. ನಾವು ಯಾರ ಮುಂದೆ ನಮ್ಮ ಅಹವಾಲನ್ನು ಹೇಳಬೇಕು? ನಾವು ಭಾಷಣ ಮಾಡುವುದಕ್ಕೆ ಸದನದಲ್ಲಿ ಇದ್ದೇವೆಯೇ? ಅಥವಾ ಈ ಸದನ ಬರಗಾಲದ ಮೇಲೆ ಚರ್ಚೆ ಮಾಡಿ ಅದಕ್ಕೊಂದು ತಾರ್ಕಿಕ ಅಂತ್ಯವನ್ನು ಕೊಡುವ ವಿಚಾರದಲ್ಲಿ ಸದನದಲ್ಲಿ ಚರ್ಚೆಯಾಗುತ್ತಿದೆಯೇ ಅಥವಾ ನಮ್ಮಷ್ಟಕ್ಕೆ ನಾವು ಮಾತನಾಡಿಕೊಂಡು ಹೋಗುವುದಕ್ಕೆ ಇಲ್ಲಿಗೆ ಬಂದಿದ್ದೇವೆಯೇ? ಇದನ್ನು ಮೊದಲು ದಯವಿಟ್ಟು ಹೇಳಿ ಆಮೇಲೆ ಮಾತನಾಡುತ್ತೇವೆ. ಹೀಗಾದರೆ ಇಲ್ಲಿ ಏಕೆ ನಾವು ಮಾತನಾಡಬೇಕು? ಯಾವ ಅಧಿಕಾರಿಗಳು ಇದ್ದಾರೆ ಅದನ್ನು you please mention. ಗೃಹ ಇಲಾಖೆಯ ಕಾರ್ಯದರ್ಶಿಗಳಿದ್ದಾರೆ, ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆಯ ಒಬ್ಬ ಅಧಿಕಾರಿಯೂ ಇಲ್ಲ.

**ಡಾ. ಜಿ. ಪರಮೇಶ್ವರ್ (ಸಭಾನಾಯಕರು):-** ಮಾನ್ಯ ಕವಟಗಿಮಠರವರೆ, ಗೃಹ ಇಲಾಖೆಯ ಕಾರ್ಯದರ್ಶಿಯವರಿದ್ದಾರೆ, ತಮ್ಮ ಮಾತನ್ನು ಕೇಳುವುದಕ್ಕೆ ನಾನು ಇದ್ದೇನೆ, ತಮ್ಮ ಸಲಹೆಗಳನ್ನು ತೆಗೆದುಕೊಳ್ಳುವುದಕ್ಕೆ ಇಲ್ಲಿಯೇ ಕುಳಿತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾನಾಯಕರೆ, ನೀವು ಇದ್ದೀರಿ, ತಮ್ಮ ಮೇಲೆ ನಮಗೆ ಅತ್ಯಂತ ಗೌರವವಿದೆ.

**ಡಾ. ಜಿ. ಪರಮೇಶ್ವರ್ (ಸಭಾನಾಯಕರು):-** ಮಾನ್ಯ ಕವಟಗಿಮಠರವರೆ, ತಮ್ಮ ಮುಂದಿನ ಸಾಲನ್ನು ನೋಡಿ ಯಾರೂ ಇಲ್ಲ. ತಮ್ಮ ನಾಯಕರು ಯಾರೂ ಇಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾನಾಯಕರೆ, ತಾವು ಆಡಳಿತ ಪಕ್ಷದಲ್ಲಿದ್ದೀರಿ. ತಾವು ಸರ್ಕಾರವನ್ನು ನಡೆಸುತ್ತಿದ್ದೀರಿ. ತಾವು ಸರ್ಕಾರದ ನೇತೃತ್ವವನ್ನು ಮಾಡುತ್ತಿದ್ದೀರಿ.

**ಡಾ. ಜಿ. ಪರಮೇಶ್ವರ್ (ಸಭಾನಾಯಕರು):-** ಮಾನ್ಯ ಕವಟಗಿಮಠರವರೆ, ಅದಕ್ಕೇ ಇಲ್ಲಿ ಕುಳಿತಿದ್ದೇನೆ. ಮಾನ್ಯ ಸದಸ್ಯರುಗಳು ಹೇಳುವುದನ್ನೆಲ್ಲಾ ಕೇಳುತ್ತಿದ್ದೇನೆ. ಎ.ಸಿ.ಎಸ್. ಇದ್ದಾರೆ . . .

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಮಾತನಾಡುವುದೇ ಬೇಡ ಬಿಡಿ. ನನ್ನ ಅಭಿಪ್ರಾಯವೇನೆಂದರೆ, ಯಾರನ್ನೂ ಪ್ಲೀಜ್ ಮಾಡುವುದಕ್ಕೆ ಮಾತನಾಡಬಾರದು. . .

**ಡಾ. ಜಿ. ಪರಮೇಶ್ವರ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಅವರು ಮಾತನಾಡಲಿ ಬಿಡಿ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ಇದರಿಂದ ಹಾವೇರಿ ಜಿಲ್ಲೆಯಲ್ಲಿ ನಮ್ಮ 2016-17ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಕ್ಷೇತ್ರದ ಗುರಿ ಎಷ್ಟಿತ್ತು ಎಂದರೆ, ರೂ. 3,36,933 ಹೆಕ್ಟೇರ್. ಅದರಂತೆ ಬಿತ್ತನೆಯಾದಂತಹ ಕ್ಷೇತ್ರ 3,26,154 ಹೆಕ್ಟೇರ್. ಅಂದರೆ ಶೇ.33 ರಷ್ಟು ಹೆಚ್ಚು ಹಾನಿಯಾದಂತಹ ಕ್ಷೇತ್ರವೆಂದರೆ 2,64,203 ಹೆಕ್ಟೇರ್. ಒಟ್ಟು ಹಿಂಗಾರು ಮತ್ತು ಮುಂಗಾರು ಕೂಡಿ 3,96,262 ಹೆಕ್ಟೇರ್ ಬಿತ್ತಿದ್ದರಲ್ಲಿ 3,47,638 ಹೆಕ್ಟೇರ್ ಹಾಳಾಗಿವೆ. ಅಂದರೆ ನಷ್ಟವಾಗಿದ್ದು 2,80,678 ಹೆಕ್ಟೇರ್‌ಗಳಷ್ಟು, ಬಿತ್ತನೆಯಾದ ಕ್ಷೇತ್ರ ಸುಮಾರು ಶೇ.81 ಈ ಸಲ ಮಳೆ ಇಲ್ಲದೇ ನಮ್ಮ ಬೆಳೆ ಹಾನಿಯಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅಂದರೆ, ಸಂಪೂರ್ಣವಾಗಿ ಕುಡಿಯುವುದಕ್ಕೆ ನೀರಿಲ್ಲ. ದನಕರುಗಳು ಮೇಯಲು ಅಡವಿಯಲ್ಲಿ ಮೇವಿಲ್ಲ, ಕುಡಿಯುವುದಕ್ಕೆ ನೀರಿಲ್ಲ, ಹಳ್ಳ ಕೊಳ್ಳಗಳು ಬತ್ತಿ ಹೋಗಿವೆ, ನಾಲ್ಕು ನದಿಗಳಲ್ಲಿ ಒಂದು ಹನಿಯೂ ನೀರಿಲ್ಲದಂತಾಗಿದೆ, ಕೊಳವೆಬಾವಿಗಳು ಸಂಪೂರ್ಣ ದುರಸ್ತಿಗೊಳಗಾಗಿವೆ, ಮಿನಿ ವಾಟರ್ ಟ್ಯಾಂಕ್‌ಗಳು ಹಾಳಾಗಿವೆ, ಹ್ಯಾಂಡ್ ಪಂಪುಗಳು ಹೋಗಿವೆ ಅಂದರೆ ಸಂಪೂರ್ಣವಾದಂತಹ, ರೈತರು ಬಿತ್ತಿದಂತಹ ಪೀಕು ಹಾಳಾಗಿವೆ ಅಂದರೆ ಭೀಕರ ಬರಗಾಲ ಎಷ್ಟಿರಬಹುದು ಎನ್ನುವುದನ್ನು ತಾವು ಊಹಿಸಿಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳುತ್ತಿದ್ದೇನೆ. ನಾವು ಈ ಸದನಕ್ಕೆ ಬರುವಾಗ ಬಹಳಷ್ಟು ಹುಮ್ಮಸ್ಸಿನಿಂದ ಬಂದಿದ್ದೇವೆ. ಏನಾದರೂ ಒಂದು ಪರ್ಸೆಂಟ್‌ನಷ್ಟಾದರೂ; ನಾವು ಅಲ್ಲಿ ನೂರಕ್ಕೆ ನೂರರಷ್ಟು ಹೇಳಿದರೆ ಶೇ.10–20 ರಷ್ಟಾದರೂ ಚಲಾವಣೆಯಾಗಿ ನಮ್ಮ ಮಾತು ನಡೆಯುತ್ತವೆ, ಅದು ಸಂದರ್ಭಕ್ಕನುಸಾರವಾಗಿ ಆಗುತ್ತದೆ ಎಂದು ಬಹಳ ವಿಶ್ವಾಸದಿಂದ ಬಂದಿದ್ದೇವೆ.

ನಾನು ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ, ಸರ್ಕಾರವು ಆಯವ್ಯಯದಲ್ಲಿ ಸಹಕಾರಿ ಇಲಾಖೆಯಿಂದ ಶೇ.3 ರಲ್ಲಿ ಮತ್ತು ಶೂನ್ಯ ಬಡ್ಡಿದರದಲ್ಲಿ ರೂ. 03 ಲಕ್ಷದವರೆಗೆ ಸಾಲವನ್ನು ಕೊಡುತ್ತೇವೆ ಎಂದು ಹೇಳಿದ್ದರು. ಅವರ ಉತ್ತರದ ಪ್ರಕಾರ ನಾನು ಅಂಕಿಅಂಶಗಳನ್ನು ಇವತ್ತು ತಮ್ಮ ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇನೆ. ರೂ. 03 ಲಕ್ಷದವರೆಗಿನ ಅಲ್ಪಾವಧಿ ಸಾಲವನ್ನು ಶೂನ್ಯ ಬಡ್ಡಿದರದಲ್ಲಿ ಹಾಗೂ ರೂ. 10 ಲಕ್ಷವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಶೇ.3ರ ಬಡ್ಡಿದರದಲ್ಲಿ ವಿತರಿಸುವ ಯೋಜನೆಯನ್ನು ಮುಂದುವರೆಸಲಾಗಿದೆ ಎಂದು ಹೇಳಿದ್ದಾರೆ. ಆದರೆ ರಾಜ್ಯದಲ್ಲಿ ಒಟ್ಟು ರೈತರ ಸಂಖ್ಯೆ ಎಂದರೆ 78,32,189 ಇದೆ. ಇದರಲ್ಲಿ ದೊಡ್ಡ ರೈತರು 67,573 ಇದ್ದಾರೆ, ಮಧ್ಯಮ ವರ್ಗದ ರೈತರು 17,77,574, ಸಣ್ಣ ರೈತರು 21,38,208, ಅತಿ ಸಣ್ಣ ರೈತರು 38,48,834 ಇದ್ದು, ಒಟ್ಟು 78,32,181 ರೈತರು ಇದ್ದಾರೆ. 2015–16ರಲ್ಲಿ ರೈತರಿಗೆ ಸಹಕಾರಿ ಸಂಘದಲ್ಲಿ ಸಾಲ ಕೊಟ್ಟಿರುವುದು ಎಷ್ಟು ಎಂದರೆ ರೂ.10235 ಕೋಟಿ. ಹಾವೇರಿ ಜಿಲ್ಲೆಯಲ್ಲಿ ಒಟ್ಟು ರೈತರ ಸಂಖ್ಯೆ 37,117 ಇದೆ. ಅಂದರೆ ಸಹಕಾರಿ ಸಂಘದಲ್ಲಿ ಒಟ್ಟು ಸಾಲವನ್ನು ತೆಗೆದುಕೊಂಡಂತಹವರು 37,017. ಅದರಲ್ಲಿ 111,92,08,000 ಸಹಕಾರಿ ಸಂಘದಿಂದ ಸಾಲವನ್ನುಕೊಟ್ಟಿದ್ದಾರೆ. ಅಂದರೆ ಇದರಲ್ಲಿ ರೂ. 10,000 ದಿಂದ 50,000 ವರೆಗೆ ಶೂನ್ಯಬಡ್ಡಿಯಲ್ಲಿ ಸಹಕಾರ ಸಂಘದಲ್ಲಿ ಸಾಲ ಪಡೆದಂತಹ ರೈತರ ಸಂಖ್ಯೆ ಎಂದರೆ 34,483. ಅಂದರೆ ಇದಕ್ಕೆ ತಗುಲಿದಂತಹ ಮೊತ್ತವೆಂದರೆ, 93.61ಲಕ್ಷ ರೂಪಾಯಿಗಳು. ಆದರು ರೂ. 50,000 ದಿಂದ ಒಂದು ಲಕ್ಷದವರೆಗೆ ಸಾಲ ಪಡೆದ ರೈತರು 23,089. ಇದಕ್ಕೆ 16.32 ಲಕ್ಷ ರೂಪಾಯಿಗಳು. ಇನ್ನು ಒಂದು ಲಕ್ಷದಿಂದ ಎರಡು ಲಕ್ಷದವರೆಗೆ ಸಾಲವನ್ನು ಪಡೆದಂತಹ ರೈತರು 140 ಇದ್ದಾರೆ. ಅಂದರೆ ಒಂದು ಲಕ್ಷದ ಐದು ಸಾವಿರ ಇರಬಹುದು, ಒಂದು ಲಕ್ಷದ ಹತ್ತು ಸಾವಿರ ಇರಬಹುದು, ಒಂದು ಲಕ್ಷದ ಐವತ್ತು ಸಾವಿರ ಇರಬಹುದು. 140 ಜನ 184 ಕೋಟಿ. ಇನ್ನು ಎರಡು ಲಕ್ಷದಿಂದ ಮೂರು ಲಕ್ಷದವರೆಗೆ ಸಹಕಾರಿ ಸಂಘದಲ್ಲಿ ಸಾಲ ಪಡೆದವರ ಸಂಖ್ಯೆ ಕೇವಲ 03. ಸರ್ಕಾರ ಮೂರು ಲಕ್ಷದವರೆಗೆ 0% ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತೇವೆಂದು ಹೇಳಿದ್ದಾರೆ.

(ಮುಂದು . . .

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(635) 08.06.2017/ 5.40/ ಕೆಹೆಚ್/ಎಂಡಿ (ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಸೋಮಣ್ಣ ಮ. ಬೇವಿನಮರದ (ಮುಂದು):-** ಮಾನ್ಯ ಸಭಾಪತಿಯವರೆ, ಹಾವೇರಿ ಜಿಲ್ಲೆಯಲ್ಲಿ ಎರಡು ಲಕ್ಷದಿಂದ ಮೂರು ಲಕ್ಷದವರೆಗೆ ಸಹಕಾರಿ ಸಂಘದಿಂದ ಸಾಲವನ್ನು ತೆಗೆದುಕೊಂಡಂತಹವರ ಸಂಖ್ಯೆ ಬರೀ ಮೂರು ಜನ ಮಾತ್ರ. ಇದು ನ್ಯಾಯವೇ ಎನ್ನುವಂತಹ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ಕಳೆದ ಬಾರಿ ಹಾವೇರಿ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದೇನೆ. ಸನ್ಮಾನ್ಯ ಉಸ್ತುವಾರಿ ಮಂತ್ರಿಗಳು ಈ ಸದನದಲ್ಲಿದ್ದಾರೆ. ಅವರ ಮೂಲ ತಾಲ್ಲೂಕು ರಾಣಿಬೆನ್ನೂರು. ರಾಣಿಬೆನ್ನೂರಿನಲ್ಲಿ ರೈತರಿಗೆ ಎಷ್ಟು ತೊಂದರೆಯಾಗಿದೆ ಎಂಬ ವಿಷಯವನ್ನು ನಾನು ಅನೇಕ ಬಾರಿ ಈ ಸದನದ ಮೂಲಕ ಸರ್ಕಾರಕ್ಕೆ ಮತ್ತು ಮಾನ್ಯ ಮಂತ್ರಿಗಳ ಗಮನಕ್ಕೂ ತಂದಿದ್ದೇನೆ. 2015-16 ನೇ ಸಾಲಿನ ಆಯವ್ಯಯದಲ್ಲಿ ವನ್ಯ ಪ್ರಾಣಿಗಳಿಂದ ಉಂಟಾಗುವ ಬೆಳೆ ಹಾನಿಗೆ ಮತ್ತು ಪ್ರಕರಣಗಳಿಗೆ ಪರಿಹಾರಧನದ ಗರಿಷ್ಠ ಮಿತಿಯನ್ನು ಒಂದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ ಎಂದು ಹೇಳಿದ್ದಾರೆ. ಜಿಂಕೆಗಳ ಹಾವಳಿ ಎಷ್ಟು ಪ್ರಮಾಣದಲ್ಲಿದೆ ಎಂಬುದು ತಮಗೆ ಗೊತ್ತಿರುವ ವಿಚಾರ. ರಾಣಿಬೆನ್ನೂರು ಮತ್ತು ಬ್ಯಾಡಗಿ ತಾಲ್ಲೂಕಿನಲ್ಲಿ ಭಯಂಕರ ಜಿಂಕೆಗಳ ಹಾವಳಿಯಾಗಿದ್ದು, ಹಾವೇರಿ ತಾಲ್ಲೂಕು, ಶಿಗ್ಗಾಂವ ತಾಲ್ಲೂಕು, ಸವಣೂರು ತಾಲ್ಲೂಕು, ಕೊಪ್ಪಳ ಜಿಲ್ಲೆ, ಗದಗ ಜಿಲ್ಲೆಗಳಿಗೆ ಜಿಂಕೆಗಳ ಹಾವಳಿ ಹೆಚ್ಚಾಗಿರುವ ಬಗ್ಗೆ ಅನೇಕ ಬಾರಿ ಸದನದಲ್ಲಿ ಚರ್ಚೆ ಮಾಡಿದ್ದೇವೆ. ವನ್ಯ ಪ್ರಾಣಿಗಳಿಂದ ಹಾನಿಯಾಗಿರುವಂತಹ ರೈತರಿಗೆ ಮೂರು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆಂದು ತಿಳಿಸಿದ್ದಾರೆ. ಆದರೆ ಎಷ್ಟು ರೈತರಿಗೆ ಪರಿಹಾರವನ್ನು ಕೊಟ್ಟಿದ್ದಾರೆ ಎಂದರೆ, ಕೇವಲ ಬೆರಳಣಿಕೆಯಷ್ಟು ರೈತರಿಗೆ ಪರಿಹಾರವನ್ನು ಕೊಟ್ಟಿದ್ದಾರೆ. ಬಹುತೇಕ ರೈತರು ಬೆಳೆ ಹಾನಿಯ ಸಲುವಾಗಿ ಕೊಟ್ಟಿರುವುದಂತಹ ಅರ್ಜಿಗಳು ಇನ್ನೂ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೊಳೆಯುತ್ತಿವೆ. 2015-16ನೇ ಸಾಲಿನಲ್ಲಿ ಆಕಸ್ಮಿಕವಾಗಿ ಕುರಿಗಳು ಮತ್ತು ಮೇಕೆಗಳು ಮೃತಪಟ್ಟರೆ ಕುರಿ ಸಾಕಾಣಿಕೆ ಮಾಡುವಂತಹ ರೈತ ಇರಬಹುದು, ಕುರಿಗಾರ ಇರಬಹುದು, ಪ್ರತಿ ಕುರಿ ಮತ್ತು ಪ್ರತಿ ಮೇಕೆಗೆ 5 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ನನ್ನ ಹತ್ತಿರ ಇಡೀ ಜಿಲ್ಲೆಯ ಪಟ್ಟಿಯಿದ್ದು, ಅದರ ಒಂದು ಉದಾಹರಣೆಯನ್ನು ಮಾತ್ರ ಹೇಳುತ್ತಿದ್ದೇನೆ. ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ಅತ್ತಿಗೇರಿ ಗ್ರಾಮದ ದೇವಪ್ಪ ಹನುಮಂತಪ್ಪ ಇಮ್ಮಡಿ ಇವರ ಕುರಿಗಳು ಮತ್ತು ಎರಡು ನಾಯಿಗಳು ದಿನಾಂಕ:07-04-2016 ರಲ್ಲಿ ಮೃತಪಟ್ಟರೆ ಇವತ್ತಿನವರೆಗೂ ಸರ್ಕಾರದಿಂದ ಒಂದು ರೂಪಾಯಿಗಳ ಪರಿಹಾರ ಕೂಡ ಬಂದಿಲ್ಲ. ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕು ಚಾಕಾಪುರ ಗ್ರಾಮದ ಕುರಿಗಾಯುವವನ ನಲವತ್ತೂ‌ರು ಕುರಿಗಳು ಒಂದು ವರ್ಷ ಮೂರು ತಿಂಗಳ ಹಿಂದೆ ಸತ್ತರೆ ಇವತ್ತಿನವರೆಗೂ ಅವರಿಗೆ ಒಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಯ ಪರಿಹಾರ ಕೂಡ ಬಂದಿಲ್ಲ. ಸರ್ಕಾರದ ನಿಲುವನ್ನು ಕೇಳುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇನೆ. ಸರ್ಕಾರವು ಘೋಷಣೆ ಮಾಡಿರುವುದನ್ನು ಪರಿಹಾರದ ಮುಖಾಂತರ ಕೊಡುವುದಿಲ್ಲ. ದಯಮಾಡಿ ಈ ವಿಚಾರದ ಬಗ್ಗೆ ಇಡೀ ಜಿಲ್ಲೆಗೆ ಕೊಡಬೇಕಾಗಿರುವಂತಹ ಸುಮಾರು ಎರಡು ಕೋಟಿ ರೂಪಾಯಿಗಳ ಪರಿಹಾರವನ್ನು ಕುರಿ ಮತ್ತು ಮೇಕೆ ಸತ್ತಿರುವುದಕ್ಕೆ ಯಾವಾಗ ಕೊಡುತ್ತಾರೆಂಬುದನ್ನು ತಿಳಿಸಬೇಕು. ಮಾನ್ಯ ಸಭಾಪತಿಯವರೆ, ದಯಮಾಡಿ ಕೈಮುಗಿಯುತ್ತೇನೆ. ಇದರಲ್ಲಿ ನ್ಯಾಯಾಲಯಕ್ಕೆ ಹೋಗಿರುವಂಥ ಪ್ರಕರಣಗಳು ಸಹ ಇವೆ.

**ಉಪಸಭಾಪತಿಯವರು:–** ಶ್ರೀ ಸೋಮಣ್ಣ ಮ. ಬೇವಿನಮರದ ರವರೆ, ಇನ್ನು ಎಷ್ಟು ಹೊತ್ತು ಮಾತನಾಡುತ್ತೀರಿ? ಈಗ ಅರ್ಧ ತಾಸು ಆಯಿತು.

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸಮಸ್ಯೆ ಬಹಳ ಇರುವುದರಿಂದ, ಇನ್ನು ಅರ್ಧ ತಾಸು ಕಾಲಾವಕಾಶವನ್ನು ಕೊಡಬೇಕು.

**ಉಪಸಭಾಪತಿಯವರು:–** ಶ್ರೀ ಸೋಮಣ್ಣ ಮ. ಬೇವಿನಮರದ ರವರೆ, ನೀವು ಅರ್ಧ ತಾಸು, ಅರ್ಧ ತಾಸು ಎಂದರೆ ಅಷ್ಟೊಂದು ಸಮಯ ಕೊಡುವುದಕ್ಕೆ ಸಾಧ್ಯವಿಲ್ಲ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ಬಹಳಷ್ಟು ಸಮಸ್ಯೆಯಿದೆ ಎಂದು ಹೇಳುತ್ತಿದ್ದೇನೆ. ಜಿಲ್ಲಾ ಮಂತ್ರಿಗಳು ನನ್ನ ಸಹಾಯಕ್ಕೆ ಬರಬೇಕು. ದಯಮಾಡಿ, ಏನು ಮಾಡಬೇಕೆಂದು ಹೇಳಿ.

**ಉಪಸಭಾಪತಿಯವರು:–** ಶ್ರೀ ಸೋಮಣ್ಣ ಮ. ಬೇವಿನಮರದ ರವರೆ, ಇನ್ನು ಐದು ನಿಮಿಷದಲ್ಲಿ ಮುಗಿಸಬೇಕು.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ಆಯಿತು. ಆದಷ್ಟು ಬೇಗ ನನ್ನ ಮಾತನ್ನು ಮುಗಿಸುತ್ತೇನೆ.

**ಉಪಸಭಾಪತಿಯವರು:** ಶ್ರೀ ಸೋಮಣ್ಣ ಮ. ಬೇವಿನಮರದ ರವರೆ, ಅರ್ಧ ತಾಸು ಆಯಿತು. ಎಲ್ಲ ವಿಷಯಗಳ ಬಗ್ಗೆ ಕೂಡ ಮಾತನಾಡಿದ್ದೀರಿ. ಈಗ conclude ಮಾಡಿ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ಆಯಿತು. ಕಂದಾಯ ಇಲಾಖೆಯ ಬಗ್ಗೆ ಒಂದೆರಡು ಉದಾಹರಣೆಗಳನ್ನು ಹೇಳುತ್ತೇನೆ. 2000ನೇ ಇಸವಿಯಲ್ಲಿ ಸವಣೂರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾಲ್ಲೂಕಿನಲ್ಲಿ ನೀರಿಗಾಗಿ ಬಡಿದಾಟವಾಯಿತು. ಇದು ಬಹಳಷ್ಟು ಗಂಭೀರವಾದಂತಹ ವಿಷಯ. ಈ ವಿಷಯ ಮಾನ್ಯ ಮಂತ್ರಿಯವರಿಗೂ ಸಹ ಗೊತ್ತಿದೆ. 2000ನೇ ಇಸವಿಯಲ್ಲಿ ನೀರಿಗಾಗಿ ಬಡಿದಾಟವಾದಂತಹ ಸಂದರ್ಭದಲ್ಲಿ ತಹಸೀಲ್ದಾರ್ ಕಚೇರಿಗೆ ಬೆಂಕಿ ಬಿತ್ತು. ಬೆಂಕಿ ಬಿದ್ದಾಗ ಅನೇಕ ಪ್ರಕರಣಗಳು ಸುಟ್ಟು ಹೋದವು. 2000ನೇ ಇಸವಿಯಿಂದ 2017 ನೇ ಇಸವಿಯವರೆಗೆ ಸವಣೂರು ತಾಲ್ಲೂಕಿನಲ್ಲಿರುವಂತಹ ಸುತ್ತಮುತ್ತಲ ರೈತರಿಗೆ ಹಳಸೆತ್ ಮಾಡುವುದಕ್ಕಾಗಲಿ ಡ–ಉತಾರಾಗಲಿ, ಸರಿಯಾದಂತಹ ಉತಾರಗಳಾಗಿ ಯಾವುದೇ ತರಹದ ಸರ್ಕಾರಿ ಕೆಲಸಕ್ಕೆ ಮತ್ತು ತಮ್ಮ ಸ್ವಂತ ಕೆಲಸಕ್ಕೆ ಖರೀದಿ ಕಾಗದ ಪತ್ರಗಳಿಗೆ ಇವತ್ತಿನ ದಿವಸ ಯಾವುದೇ ರೀತಿಯ ದಾಖಲೆಗಳು ಸಿಗುತ್ತಿಲ್ಲ. ಕಾರಣವೇನೆಂದರೆ ಅರ್ಜಿಯನ್ನು ಕೊಟ್ಟರೆ ಸುಟ್ಟು ಹೋಗಿವೆ. ಲಭ್ಯವಿಲ್ಲವೆನ್ನುವಂತಹ ಮಾತು ಸವಣೂರು ತಾಲ್ಲೂಕಿನ ಸವಣೂರು ತಹಸೀಲ್ದಾರ್ ಕಚೇರಿಯ ಉತ್ತರವಾಗಿದೆ. ಹಾಗಾದರೆ ರೈತನು ಸರ್ಕಾರದಿಂದ ಸಾಲವನ್ನು ಯಾವ ರೀತಿ ತೆಗೆದುಕೊಳ್ಳಬೇಕು. ತಂದೆ ಸತ್ತರೆ ವಾರಸಾ ಪ್ರಕರ ಎಂಟ್ರಿ ಯಾವ ರೀತಿ ಮಾಡಿಸಬೇಕು. ರೈತನು ಬ್ಯಾಂಕಿನಲ್ಲಿ ಸಾಲವನ್ನು ಯಾವ ರೀತಿ ತೆಗೆದುಕೊಳ್ಳಬೇಕು. ಖರೀದಿ ವ್ಯವಹಾರಗಳನ್ನು ಮಾಡುವುದು ಹೇಗೆ? ನನ್ನ ಹಿಂದಿನ ಇತಿಹಾಸದ ವಿವರವನ್ನು ಕೇಳಿದರೆ ಕೊಡುವುದು ಹೇಗೆ? ಅದನ್ನು ಸರ್ಕಾರ ಸೂಕ್ತ ರೀತಿಯಲ್ಲಿ ವಿಚಾರಿಸಿ ಸವಣೂರಿನ ತಹಸೀಲ್ದಾರ್ ಕಚೇರಿಗೆ ಒಂದು ಸೂಕ್ತವಾದ ಮಾರ್ಗದರ್ಶನವನ್ನು ನೀಡಬೇಕೆಂಬ ವಿನಂತಿಯನ್ನು ಈ ಸದನದ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಕಳೆದ ಬಾರಿ ಹಾವೇರಿ ಜಿಲ್ಲೆಯಲ್ಲಿಯೇ ಅತಿ ಹೆಚ್ಚಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು. ಇವತ್ತಿನ ದಿವಸ ಇನ್ನು ಅನೇಕ ಜನರಿಗೆ ಪರಿಹಾರ ಸಿಕ್ಕಿಲ್ಲ. ಸರ್ವೆ ಇಲಾಖೆಗೆ ಸಂಬಂಧಪಟ್ಟಂತೆ, ಸಮಯಕ್ಕೆ ಸರಿಯಾಗಿ ಹಿರಿಯರಾದಂತಹ ಕಂದಾಯ ಮಂತ್ರಿಯವರು ಬಂದರು. ಅವರನ್ನು ಭೇಟಿಯಾಗಿ ಹೇಳಬೇಕೆಂದು ಅಂದುಕೊಂಡಿದ್ದೆ. ಸರ್ವೆ ಇಲಾಖೆಯ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ತಮಗೆ ಎರಡು ವರ್ಷದ ನಂತರ ಮತ್ತು ಮೂರು ವರ್ಷದ ನಂತರ ಅಳತೆ ಮಾಡಿರುವಂತಹ ಸರ್ವೆಯರ್ ವರದಿಯನ್ನು ಕೊಡುತ್ತಿದ್ದೇನೆ. ವರದಿಯ ಬಗ್ಗೆ ನನ್ನ ಕಡೆ ದಾಖಲೆಗಳಿವೆ. 2013 ರಲ್ಲಿ ಶಿಗ್ಗಾಂವ ತಾಲ್ಲೂಕಿನ ಸರ್ವೆಯರ್‌ಗೆ ಎಂ.ಎಂ.ಅಲ್ಲೂರು ಇವರ ಸರ್ವೆ ನಂಬರ್ 341 ಕ್ಕೆ P.T (Plane Table) Sheets ನ ಸಲುವಾಗಿ ಒಂದು ಅರ್ಜಿಯನ್ನು ಕೊಡುತ್ತಾರೆ. 2013 ರಲ್ಲಿ P.T Sheet ಗೆ ಒಂದು ಮ್ಯಾಪ್ ಅನ್ನು ಅಧಿಕಾರಿಗಳು ಕೊಡುತ್ತಾರೆ. ಈ ರೀತಿ ಅಳತೆ ಮಾಡಿರುವ P.T Sheet ಅನ್ನು ಕೊಡುತ್ತಾರೆ. ಅದೇ ಹೊಲಕ್ಕೆ ಸಂಬಂಧಪಟ್ಟ ಇನ್ನೊಬ್ಬ ವ್ಯಕ್ತಿ ಹೋದರೆ ಅವನಿಗೆ ಒಂದು ರೀತಿಯಲ್ಲಿ P.T Sheet ಅನ್ನು ಕೊಡುತ್ತಾರೆ. ಅದೇ ಸರ್ವೆ ನಂಬರ್‌ಗೆ ತಮ್ಮನಿಗೆ ಒಂದು ರೀತಿಯಲ್ಲಿ ಮತ್ತು ಅಣ್ಣನಿಗೆ ಒಂದು ರೀತಿಯಲ್ಲಿ P.T Sheet ಅನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತಾರೆ. ಇದನ್ನು DLR (Director Land Records) ಕಡೆಯಿಂದ ಹೋದರೆ ಅವರಿಬ್ಬರನ್ನು ಕರೆಯಿಸಿ ಮಾಡಿಯೆಂದು ನಾನು ಒಂದು ನೂರು ಬಾರಿ ದೂರವಾಣಿಯನ್ನು ಮಾಡಿದ್ದೇನೆ. ಅಣ್ಣ–ತಮ್ಮ ಇಬ್ಬರು ಮುಸಲ್ಮಾನರು. ಅಲ್ಪಸಂಖ್ಯಾತರು. ಬಸ್ ಸ್ಟ್ಯಾಂಡ್ ಹತ್ತಿರ ನಮ್ಮ ಮನೆ ಇರುವುದರಿಂದ ಪ್ರತಿ ದಿನ ಅಣ್ಣ–ತಮ್ಮ ಇಬ್ಬರು ಬರುತ್ತಿದ್ದರು. ಈ ರೀತಿಯಿದೆ ಮಾಡಿಯೆಂದು DLR ಗೆ ವರದಿ ಮಾಡಿದೆ. ಅವರು ಸರ್ವೆಯರ್‌ನ್ನು ಕರೆಸಿದರೆ ಮತ್ತೆ ಆರು ತಿಂಗಳು ಬಿಟ್ಟು, 2013 ರಿಂದ 2017 ಕ್ಕೆ ನಾನು ಹೇಳುತ್ತಿರುವುದು. 2010 ರಲ್ಲಿ ಇದರ ಬಗ್ಗೆ ಅರ್ಜಿಯನ್ನು ಕೊಟ್ಟಿರುವುದು. ಅರ್ಜಿ ಕೊಟ್ಟು 7 ವರ್ಷವಾಯಿತು. ಬಂದಿರುವವರು ಸರಿಯಾಗಿ ಅಳತೆ ಮಾಡುತ್ತಾರಾ? ಮೂರು ವರ್ಷಕ್ಕೆ ಒಂದೊಂದು ರೀತಿಯಲ್ಲಿ ಅಳತೆಯನ್ನು ಕೊಡುತ್ತಾರೆ. ಮೂರು ವರ್ಷಕ್ಕೆ ಒಂದೊಂದು ರೀತಿ. P.T Sheet ಏನಾದರೂ ಬದಲಾವಣೆಯಾಗುತ್ತದೆಯೇ? ಹಳೆಯ P.T Sheet ಮೇಲೆ ಕೊಡುತ್ತಾರೋ ಎಂಬ ಅಂಶವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಶ್ರೀ ಸೋಮಣ್ಣ ಮ. ಬೇವಿನಮರದ ರವರೆ ಅವರು ತಪ್ಪು ಮಾಡಿದ್ದಾರೆ. ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು *DDLR* (Deputy Director of *Land Records)* ರವರು ಹೇಳಿದರು. ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಒಂದು ಹಿಂಬರಹವನ್ನು ಸಹಾ ಕೊಟ್ಟರು. ಹಿಂದೆ ಅಳತೆ ಮಾಡಿದ್ದು ತಪ್ಪು. ಈಗ ಅಳತೆ ಮಾಡಿದ್ದು ಸರಿ ಎಂದು ಹೇಳಿದರು. ಅಣ್ಣ–ತಮ್ಮ ಹೊಡೆದಾಡಿ ಈಗಾಗಲೇ ಜಿಲ್ಲಾ ನ್ಯಾಯಾಲಯದಲ್ಲಿ ಪ್ರಕರಣವಿದೆ. ಇದು ಮೂರು ವರ್ಷಕ್ಕೊಮ್ಮೆ ಪಾಳಿ ಹಚ್ಚಿ ಅಳತೆ ಮಾಡುವಂತಹದ್ದು. ಇದು ಈಗ ಇರುವಂತಹ ಪರಿಸ್ಥಿತಿ. ಈ ರೀತಿಯಿದ್ದಾಗ ರೈತನು ಯಾವ ರೀತಿಯಲ್ಲಿ ಬದುಕಬೇಕು. ರೈತನ ಪರಿಸ್ಥಿತಿ ಈ ರೀತಿಯಲ್ಲಿದೆ. ರೈತನು ಬದುಕಬೇಕೋ? ಸರ್ಕಾರದ ಸವಲತ್ತುಗಳನ್ನು ಪಡೆಯಬೇಕೋ? ಇದು ಇರುವಂತಹ ಒಂದು ಪರಿಸ್ಥಿತಿಯಾಗಿದೆ.

**Mr. CHAIRMAN:-** Conclude ಮಾಡಿ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ಇನ್ನು 5 ನಿಮಿಷದೊಳಗೆ ಮಾತನಾಡುವುದನ್ನು ಮುಗಿಸುತ್ತೇನೆ.

**ಉಪಸಭಾಪತಿಯವರು:–** ಶ್ರೀ ಸೋಮಣ್ಣ ಮ. ಬೇವಿನಮರದ ರವರೆ, ಈಗಾಗಲೇ 40 ನಿಮಿಷ ಅವಕಾಶ ಕೊಟ್ಟಿದ್ದೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ಇನ್ನು 5 ನಿಮಿಷ ಕಾಲಾವಕಾಶವನ್ನು ಕೊಡಿ.

**ಉಪಸಭಾಪತಿಯವರು:-** ಶ್ರೀ ಸೋಮಣ್ಣ ಮ. ಬೇವಿನಮರದ ರವರೆ, ನೀವು ಚೆನ್ನಾಗಿ ಮಾತನಾಡುತ್ತೀರಿ ಎಂಬುದು ಗೊತ್ತಿದೆ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ಮಾಹಿತಿಗಳನ್ನು ಬಹಳ ಕಷ್ಟಪಟ್ಟು ತೆಗೆದುಕೊಂಡು ಬಂದಿದ್ದೇನೆ.

**ಉಪಸಭಾಪತಿಯವರು:-** ಶ್ರೀ ಸೋಮಣ್ಣ ಮ. ಬೇವಿನಮರದ ರವರೆ, ಮಾಹಿತಿಗಳನ್ನು ಬಹಳ ಕಷ್ಟಪಟ್ಟು ತಂದಿದ್ದೀರಿ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ನಮ್ಮ ಪಕ್ಷದವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡದಿದ್ದರೂ ಪರವಾಗಿಲ್ಲ. ನನಗೆ ಅವಕಾಶವನ್ನು ಕೊಡಿ. ಇವತ್ತಿನ ದಿವಸ ಬೇರೆ ಜಿಲ್ಲೆಗಳ ಮಾಹಿತಿಯನ್ನು ಸಹ ತಂದಿದ್ದೇನೆ.

**ಉಪಸಭಾಪತಿಯವರು:-** ಶ್ರೀ ಸೋಮಣ್ಣ ಮ. ಬೇವಿನಮರದ ರವರೆ, ನಿಮ್ಮ ವಿರೋಧ ಪಕ್ಷದ ನಾಯಕರು ತಮ್ಮ ಸಮಯವನ್ನು ನಿಮಗೆ ಕೊಟ್ಟರೆ ನೀವು ಮಾತನಾಡಬಹುದು. ದಯಮಾಡಿ conclude ಮಾಡಿ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ರೈತನಿಗೆ ತೊಂದರೆಯಾಗುವುದಕ್ಕೆ ಅನೇಕ ಕಾರಣಗಳಲ್ಲಿ ಇದು ಒಂದು. ಹಿರಿಯ ಸಚಿವರೆ, ನೀವು ಹೇಳಿರುವುದನ್ನು ಶೇಕಡಾ 100 ರಷ್ಟು ಒಪ್ಪಿದ್ದೇನೆ. ಸರ್ವೆಯರ್ ಇಲ್ಲ. ಅದಕ್ಕೆ ಸಮಸ್ಯೆಯಿದೆ. ಪಾಳಿ ಪ್ರಕಾರ ಬರಬೇಕು. ಪಾಳಿ ಪ್ರಕಾರ ಬರಲಿ ಅದಕ್ಕೆ ನನ್ನ ತಕರಾರು ಇಲ್ಲ. ಏಳು ವರ್ಷಗಳ ನಂತರ ಈ ರೀತಿ ಕೊಟ್ಟಾಗ ಏನು ಮಾಡಬೇಕು? ಶಿಗ್ಗಾಂವ ತಾಲ್ಲೂಕು ಪಾಣಿಗಟ್ಟಿಯಲ್ಲಿ ಶ್ರೀ ಲಿಂಗನಗೌಡ ಪಾಟೀಲ್ ಎಂಬುವವರು ಮೂರು ವರ್ಷಕ್ಕೆ ಸಂಬಂಧಪಟ್ಟಂತೆ ಸರ್ವೆಯರ್‌ಗೆ ಪಾಳಿ ಕೆಲಸವನ್ನು ಕೊಟ್ಟಿದ್ದಾನೆ. ನಿಮ್ಮ ಜಮೀನಿಗೆ ಸರ್ವೇ ಮಾಡಲು ಬರುತ್ತೇವೆಂದು ನೋಟಿಸ್ ಅನ್ನು ಕೊಟ್ಟಿದ್ದಾರೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

636/8-6-2017 /5-50/bkp-md

**ಶ್ರೀ ಸೋಮಣ್ಣ ಮ ಬೇವಿನಮರದ(ಮುಂದು. . .)**

ಅವರು ರೈತನಿಗೆ 5–6 ಆಳುಗಳನ್ನು ವ್ಯವಸ್ಥೆ ಮಾಡಿ, ದೊಡ್ಡ ದೊಡ್ಡ ಕೋಲು, ಸುಣ್ಣ, ಒಂದಿಷ್ಟು ಕಲ್ಲುಗಳನ್ನು ಸಹ ತಂದಿಡು ಎಂದು ಹೇಳಿದ್ದಾರೆ. ಒಂದು ಡ್ರಮ್ ನೀರು ಸಹ ತಂದಿಟ್ಟಿದ್ದಾರೆ. ಸುಣ್ಣದ ಪಾಕೆಟ್ ಸಹ ತಂದಿಟ್ಟಿದ್ದಾರೆ. ಸರ್ವೆಯರ್ ಸುಮಾರು 3–00 ಗಂಟೆಗೆ ಅಡ್ಡಾಡಿಕೊಂಡು ಬಂದವನು ಮತ್ತೆ ನಾಳೆ ಬರುತ್ತೇನೆಂದು ಹೋಗಿದ್ದಾನೆ. ಅವನು ಹೇಳಿದಂತಹ ಸಾಮಾನುಗಳೆಲ್ಲಾ 3 ದಿವಸಗಳ ಕಾಲ ಹೊಲದಲ್ಲಿಯೇ ಬಿದ್ದಿವೆ. ಊಟಕ್ಕೆ ತೆಗೆದುಕೊಂಡು ಹೋಗುವುದು, ಅಲ್ಲಿ ಊಟ ಮಾಡುವುದು, ಹೊಲದಲ್ಲಿ ಕುಳಿತುಕೊಳ್ಳುವುದು, ಊಟ ತೆಗೆದುಕೊಂಡು ಹೋಗುವುದು, ಊಟ ಮಾಡುವುದು, ಹೊಲದಲ್ಲಿ ಕುಳಿತುಕೊಳ್ಳುವುದು. ಹಾಗಾದರೆ, ಅಳತೆ ಮಾಡುವುದು ಯಾವಾಗ ಎಂದು ಕೇಳಿದರೆ ಇಲ್ಲಾ, ನನಗೆ ಬೇರೆ ಪಾಳಿ ಇದೆ ಎಂದು ಹೇಳುತ್ತಾನೆ. ಮೊನ್ನೆ ನಾನು ತಹಶೀಲ್ದಾರ್‌ಗೆ ಪೋನ್ ಮಾಡಿ ಈ ರೀತಿಯಾಗಿದೆ ಎಂದು ಹೇಳಿದಾಗ ಇನ್ನೊಮ್ಮೆ ಅವನಿಗೆ ನೋಟೀಸ್ ಕೊಡುತ್ತೇವೆ ಸೋಮಣ್ಣನವರೆ ಎಂದು ಅವರು ನನಗೆ ಹೇಳಿದರು. ಮೂರು ವರ್ಷಗಳು ಕಾದರೂ ಸಹ ಆ ಕೆಲಸವಾಗಲಿಲ್ಲ. ಅಲ್ಲಿ ತಹಶೀಲ್ದಾರ್ ರಾಣೆ ಎಂದು ಇದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಆ ಸರ್ವೆಯರ್ ಹೆಸರು ಏನೆಂದು ಹೇಳಿ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಸನ್ಮಾನ್ಯ ಸಚಿವರಿಗೆ ಅವರ ಹೆಸರನ್ನು ತೆಗೆದುಕೊಂಡು ಕೊಡುತ್ತೇನೆ. ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ದೊಡ್ಡ ರದ್ಧಾಂತ ಇದೆ. ರಾಣೆಬೆನ್ನೂರು ತಾಲ್ಲೂಕಿನ ತಂಡಾದ್ದು ಪರಿಸ್ಥಿತಿ ನೋಡಿದರೆ ಗೊತ್ತಾಗುತ್ತದೆ. ಸ್ವತ: ನಾನು ಮತ್ತು ಶ್ರೀಮಾನ್ ಜಗದೀಶ್ ಶೆಟ್ಟರ್‌ರವರು ಅಲ್ಲಿಗೆ ಹೋಗಿದ್ದೆವು. ಅಲ್ಲಿಗೆ ಹೋಗಿ ತಪಾಸಣೆ ಮಾಡಿದರೆ ನಾಲ್ಕೈದು ನೂರು ಹೆಣ್ಣು ಮಕ್ಕಳು ನಮ್ಮಲ್ಲಿ ಇರತಕ್ಕಂತಹ ಅಂಗಾಂಗಳಲ್ಲಿ ಕಿಡ್ನಿ ತೆಗೆದಿದ್ದಾರೇನೋ ಗೊತ್ತಿಲ್ಲವೆನ್ನುವ ಪರಿಸ್ಥಿತಿಯ ಬಗ್ಗೆ ತಾಂಡಾದವರು ಹೇಳಿದ್ದಾರೆ. ನಾನು ಅದರ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಕೆಳಮನೆಯಲ್ಲಿ ಮಾತನಾಡಿರಬೇಕೆಂದು ಭಾವಿಸಿದ್ದೆ. ಅದರ ಬಗ್ಗೆ ತಮಗೂ ಗೊತ್ತಿದೆ. ಈ ಬಾರಿ ಬೀಜ–ಗೊಬ್ಬರ ಸರಿಯಾದ ಸಮಯಕ್ಕೆ ಬಂದಿದೆ. ಈ ಸಂದರ್ಭದಲ್ಲಿ ಮಾನ್ಯ ಕೃಷಿ ಸಚಿವರು ಈ ಸದನದಿಂದ ಎದ್ದು ಹೋದರೆಂದು ಭಾವಿಸಿದ್ದೇನೆ. ಸರಿಯಾದ ಸಮಯಕ್ಕೆ ಜಿಲ್ಲೆಯೊಳಗೆ ಎಲ್ಲಾ ಕೃಷಿ ಕೇಂದ್ರಗಳಲ್ಲಿ ಕೃಷಿ ಇಲಾಖೆಯವರು ಬೀಜ–ಗೊಬ್ಬರವನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಸೊಸೈಟಿಯ ಮುಖಾಂತರ ರೈತರಿಗೆ ತೊಂದರೆಯಾಗಬಾರದು ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿ ಬೀಜ-ಗೊಬ್ಬರಗಳನ್ನಿಟ್ಟಿದ್ದಾರೆ. ನಾವು ಸಹ ಕೆಲವು ಕಡೆ ಹೋಗಿ ಈ ವಿಚಾರವಾಗಿ ಉದ್ಘಾಟನೆಯನ್ನು ಮಾಡಿ ಬಂದಿದ್ದೇವೆ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರಿ ಮುಖ್ಯ ಸಚೇತಕರು):-** ಮತ್ತೆ, ಕೃಷಿ ಸಚಿವರಿಗೆ ಅಭಿನಂದನೆ ಹೇಳಬೇಕಲ್ಲವೇ?

**ಶ್ರೀ ಸೋಮಣ್ಣ ಮ. ಬೇವಿನಮರದ:-** ನಾನು ಅ ರೀತಿಯಲ್ಲಿಯೇ ಹೇಳಿದೆ. ಹೀಗೆ ಏತಕ್ಕೆ ಹೇಳುತ್ತೀರಿ. ನಾನು ಅವರಿಗೆ ಹೇಳಿದೆ. ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸರಿಯಾದ ಸಮಯಕ್ಕೆ ಬೀಜ-ಗೊಬ್ಬರ ಬಂದಿದೆ. ಮಳೆ ಸರಿಯಾದ ಸಮಯಕ್ಕೆ ಬರಲೆಂದು ಪರಮಾತ್ಮನಿಗೆ ನಾವು-ನೀವುಗಳೆಲ್ಲರೂ ಮತ್ತೊಮ್ಮೆ ಪೂಜೆ ಮಾಡೋಣ.

(ಗೊಂದಲ)

ಮಾನ್ಯ ಸಭಾಪತಿಯವರೇ, ಬೀಜ-ಗೊಬ್ಬರ ಸರಿಯಾದ ಸಮಯಕ್ಕೆ ಬಂದಿದೆ. ಸರ್ಕಾರಕ್ಕೆ ತಮ್ಮ ಮೂಲಕ ಮತ್ತೊಂದು ವಿನಂತಿ ಮಾಡಿಕೊಳ್ಳುವುದೇನೆಂದರೆ ನಮ್ಮ ಭಾಗದಲ್ಲಿ ಶೇಂಗಾ ಬೀಜ ಬಿತ್ತನೆ ಜಾಸ್ತಿ ಇದೆ, ಹತ್ತಿ ಬೀಜ ಜಾಸ್ತಿ, ಸೊಯಾಬೀನ್ ಜಾಸ್ತಿ, ಮತ್ತೆ ಗೋವಿನ ಜೋಳ ಜಾಸ್ತಿ. ಆದರೆ, ಈ ಬಾರಿ ಏನಾಗಿದೆ ಎಂದರೆ, ಇದು ಯಾರ ತಪ್ಪಿನಿಂದಲೋ ಗೊತ್ತಿಲ್ಲ. ಎಲ್ಲಾ ಕೇಂದ್ರಗಳಲ್ಲಿ ಕಳಪೆ ಶೇಂಗಾ ಬೀಜ ಬಂದಿದೆ. ಶೇಂಗಾ ಕಾಯಿ ಬಂದಿದೆ. ಹೋದ ಕಡೆಗಳಲ್ಲೆಲ್ಲಾ ಆ ಕಳಪೆ ಬೀಜಗಳನ್ನು ಕೃಷಿ ಕೇಂದ್ರಗಳಿಗೆ ವಾಪಸ್ಸು ಕಳುಹಿಸಿ, ಒಳ್ಳೆಯ ಬೀಜವನ್ನು ಕಳುಹಿಸಿ ಎಂದು ಹೇಳಿ ವಿನಂತಿಯನ್ನು ನಾವು ಮಾಡಿಕೊಂಡಿದ್ದೇವೆಂದು ಡಿ.ಡಿ., ಎ.ಡಿ., ಗಳು ಹೇಳಿದ್ದಾರೆ. ಅದನ್ನು ಆ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ. ಆದರೆ, ಮುಂದೆ ಏನಾಯಿತು ಎಂದು ಗೊತ್ತಾಗಲಿಲ್ಲ. ಅದನ್ನು ಗಮನಕ್ಕೆ ತರಬೇಕೆಂದು ತಮಗೆ ಹೇಳಲಿಕ್ಕೆ ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೆ, ಇದೆಲ್ಲದರ ಮಧ್ಯದಲ್ಲಿ ನಮ್ಮ ಜಿಲ್ಲೆಯೊಳಗೆ ಏಕೋ ಏನೋ ಅಧಿಕಾರಿಗಳದ್ದು ಸ್ವಲ್ಪ ತೊಂದರೆ ಇದೆ. ಕೇಂದ್ರದಿಂದ ಬಂದಂತಹ ರೊಕ್ಕ ಇರಬಹುದು, ರಾಜ್ಯದಿಂದ ಬಂದಂತಹ ರೊಕ್ಕ ಇರಬಹುದು, ಅದನ್ನು ಕೊಡಲಿಕ್ಕೆ ಏಕೋ, ಏನೋ ಅವರ ಮನೆಯಿಂದ ಕೊಡುತ್ತಾರೋನೋ ಎನ್ನುವಂತಹ ಸಂಶಯ ಬರುತ್ತದೆ. ಈಗಾಗಲೇ ಬೆಳೆ ಹಾನಿಯಾಗಿದ್ದು ರಾಜ್ಯ ಸರ್ಕಾರದ ಪಾಲು ಎಷ್ಟು, ಕೇಂದ್ರ ಸರ್ಕಾರದ ಪಾಲು ಎಷ್ಟೋ ಗೊತ್ತಿಲ್ಲ. ಆದರೆ, ಜಿಲ್ಲೆಗೆ ರೊಕ್ಕ ಬಂದಿದೆ. ರೈತರ ಅಕೌಂಟ್‌ಗೆ ರೊಕ್ಕ ಜಮಾ ಆಗಿದೆ. ಏಕೋ ಏನೋ ಇನ್ನು ಸುಮಾರು 8-10 ಸಾವಿರ ಜನ ರೈತರಿಗೆ ಹಣ ಕೊಡಬೇಕೇನೋ ಗೊತ್ತಿಲ್ಲ. 3-4 ಸಾವಿರ ಜನ ಇರಬಹುದು. ಆ 3-4

ಸಾವಿರ ಜನರು ಪಾಪಿಗಳೇನು? ಅವರು ರೈತರು ಹೌದೋ ಅಲ್ಲವೋ? ಅವರು ಸತ್ತ ಮೇಲೆ ಅವರಿಗೆ ಮಾಲೆ ಹಾಕಿ ರೊಕ್ಕ ಕೊಡುತ್ತೀರಾ? ದಯಮಾಡಿ ನೀವು ಅರ್ಥ ಮಾಡಿಕೊಳ್ಳಬೇಕು. ನೀವೇ ಕಳುಹಿಸಿದ ರೊಕ್ಕ. ಅದನ್ನು ನೀವು ಕೊಟ್ಟಿದ್ದೀರೋ, ಕೇಂದ್ರದವರು ಕೊಟ್ಟಿದ್ದಾರೋ ಗೊತ್ತಿಲ್ಲ. ರೈತರು ಸತ್ತ ಮೇಲೆ ಹಾರ ಹಾಕಿ ಹಣವನ್ನು ಕೊಟ್ಟು ಬರುತ್ತೀರೇನು? ಸ್ವಾಫ್ಟ್‌ವೇರ್ ನಿಮ್ಮನ್ನು ಬಿಟ್ಟಿದೆಯೋ, ಸರ್ಕಾರವನ್ನು ಬಿಟ್ಟಿದೆಯೋ, ಯಾರನ್ನು ಅದು ಬಿಟ್ಟಿದೆ? ದಯಮಾಡಿ ನಾನು ತಮಗೆ ಕೈಮುಗಿಯುತ್ತೇನೆ. ಅದನ್ನು ಎಷ್ಟು ದಿವಸದೊಳಗೆ ಕೊಡುತ್ತೀರಿ ಎನ್ನುವುದನ್ನು ಹೇಳಿ ಬಿಡಿ. ಹಣ ಬಂದಿದೆ, ಅದಕ್ಕೆ ಧನ್ಯವಾದಗಳು. ಅದು ಯಾರ ರೊಕ್ಕ ಎಂದು ಗೊತ್ತಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ:-** ಆ ರೀತಿಯಲ್ಲಿ ಏತಕ್ಕೆ ಆಗಿದೆ ಎಂದರೆ ಅರ್ಜಿಯೊಳಗೆ ಅವನ ಹೆಸರಿನ style ಬೇರೆ ಇರುತ್ತದೆ. ಮತ್ತೆ ಆಧಾರ ಕಾರ್ಡ್‌ನೊಳಗೆ ಒಂದು ರೀತಿಯ style ಇರುತ್ತದೆ. ಬ್ಯಾಂಕ್ ಅಕೌಂಟ್‌ನೊಳಗೆ ಒಂದು style ಇರುತ್ತದೆ. ಈ ರೀತಿಯ ಗೊಂದಲದಿಂದ ಈ ರೀತಿ ಆಗಿದೆ. ನಾನು ಈಗ ಅದರ ಮಾಹಿತಿಯನ್ನು ನೋಡಿಕೊಂಡು ಬಂದೆ. ಹೆಚ್ಚು ಕಡಿಮೆ 21-22 ಲಕ್ಷ ಜನರಿಗೆ ಹಣವನ್ನು ಕೊಟ್ಟಿದ್ದೇವೆ. ಇನ್ನು 3-4 ಲಕ್ಷ ಜನರಿಗೆ ಹಣ ಕೊಡಬೇಕಾಗಿದೆ. ಅದಕ್ಕೆ ಅಲ್ಲಿನ ಜಿಲ್ಲಾಧಿಕಾರಿಗಳಿಗೆ . .

**ಶ್ರೀ ಸೋಮಣ್ಣ ಮ.ಬೇವಿನಮರದ:-** ಸಂಪೂರ್ಣವಾಗಿ ದುಡ್ಡನ್ನು ಕೊಟ್ಟಿದ್ದಕ್ಕೆ ಅಭಿನಂದನೆಗಳು. ಕೇಂದ್ರ ಸರ್ಕಾರದಿಂದ ಬಂದಂತಹ ದುಡ್ಡಿಗೆ, ರಾಜ್ಯ ಸರ್ಕಾರದ ಪಾಲಿಗೆ ರೈತರ ಪರವಾಗಿ ಅಭಿನಂದನೆಗಳು. ಆದರೆ, ಇನ್ನುಳಿದ 3-4 ಲಕ್ಷ ಜನ ರೈತರು ಪಾಪಿಗಳಾ? ಅವರಿಗೆ ಏತಕ್ಕೆ ದುಡ್ಡು ಕೊಟ್ಟಿಲ್ಲ, ಎಷ್ಟು ದಿವಸಗಳಲ್ಲಿ ದುಡ್ಡನ್ನು ಕೊಡುತ್ತೀರಿ ಎನ್ನುವುದು ನನ್ನ ಪ್ರಶ್ನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಶ್ರೀಯುತ ಸೋಮಣ್ಣನವರೆ, ಇಲ್ಲಿ ಗಮನಿಸಿ. Village develop Accountant and Revenue Inspector ಬ್ಯಾಂಕಿಗೆ ಹೋಗಿ, ಅವರ ಜೊತೆ ಕುಳಿತುಕೊಂಡು ಅಕೌಂಟ್ ತೆಗೆದಿಟ್ಟುಕೊಂಡು, ಅನೇಕ ಬಾರಿ ರಾತ್ರಿ-ಹಗಲೆಲ್ಲಾ ಕುಳಿತುಕೊಂಡು ಈ ಒಂದು ಕೆಲಸವನ್ನು ಮಾಡಿದ್ದಾರೆ. ಈ ರೀತಿಯಲ್ಲಿ ಮಾಡಿದರೆ ನೇರವಾಗಿ ರೈತರ ಅಕೌಂಟ್‌ಗೆ ಹೋಗುತ್ತದೆ ಎನ್ನುವ ರೀತಿಯಲ್ಲಿ ಒಂದು ಟೆಕ್ನಾಲಜಿ develop ಆಗಿತ್ತು. ಅದು ಯಶಸ್ವಿ ಕೂಡ ಆಯಿತು. ಏಕೆಂದರೆ, ಕಳೆದ ಬಾರಿ ಏನಾಯಿತು ಎಂದರೆ ಈ ವ್ಯವಸ್ಥೆ ಇಲ್ಲದೆ, ಜಿಲ್ಲಾಧಿಕಾರಿಗಳಿಗೆ ಕಳುಹಿಸುತ್ತಿದ್ದೆವು. ಆ ಜಿಲ್ಲಾಧಿಕಾರಿಗಳು ತಹಶೀಲ್ದಾರ್‌ಗಳಿಗೆ ಕಳುಹಿಸಿ, ಅವರು ಚೆಕ್ ಮುಖಾಂತರ ಕೊಡುತ್ತಿದ್ದರು. ಅಲ್ಲಿ ಚೆಕ್ ಕೊಡಲಿಕ್ಕೆ ಹೋದರೆ ಸರ್ವೆಯರ್ ಒಂದು ವ್ಯವಹಾರ. ತಾಲ್ಲೂಕು ಆಫೀಸ್‌ನಲ್ಲಿ ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವ್ಯವಹಾರ. ಹೀಗಾಗಿ, ಸುಮಾರು ದುಡ್ಡು ಹಂಚಲಿಕ್ಕೆ ಆಗದೇ ಉಳಿದುಕೊಂಡಿತ್ತು. ಅದನ್ನು ತಪ್ಪಿಸಲಿಕ್ಕೆ ಈ ರೀತಿಯಲ್ಲಿ ಮಾಡಿದೆವು. ಇನ್ನು ಮೂರ್‍ನಾಲ್ಕು ಲಕ್ಷ ಜನರಿಗೆ ಹಣ ಕೊಡುವುದಿದೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮೂರ್‍ನಾಲ್ಕು ಸಾವಿರ ಜನ ನಮ್ಮ ಜಿಲ್ಲೆಯಲ್ಲಿ ಇದ್ದಾರೆ. ಮೂರ್‍ನಾಲ್ಕು ಲಕ್ಷ ರಾಜ್ಯದೊಳಗೆ ಇರಬಹುದು. ಆದಷ್ಟು ಬೇಗ ಆ ಹಣವನ್ನು ಕೊಡಿ ಸರ್.

**ಶ್ರೀ ಕಾಗೋಡು ತಿಮ್ಮಪ್ಪ:-** ಖಂಡಿತವಾಗಿ ಕೊಡುತ್ತೇವೆ.

**ಉಪ ಸಭಾಪತಿಯವರು:-** ಶ್ರೀಯುತ ಸೋಮಣ್ಣನವರೆ, ತಮ್ಮ ಭಾಷಣವನ್ನು ಮುಗಿಸಿ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮುಗಿಸಿಬಿಡುತ್ತೇನೆ ಸರ್. ಇನ್ನು ನಮ್ಮ ಜಿಲ್ಲೆ ಅನೇಕ ಜನರು ಗುಳೆ ಹೊರಟಿದ್ದಾರೆ. ಅವರು ರೈತ ಕೂಲಿಕಾರರು ಇರಬಹುದು, ಕಾರ್ಮಿಕ ಕೂಲಿಕಾರರು ಇರಬಹುದು, ಗೌಂಡಿಗಳು ಇರಬಹುದು, ಮೇಸ್ತ್ರಿಗಳು ಇರಬಹುದು, ಕೆಲಸ ಕಾರ್ಯಗಳನ್ನು ಮಾಡುವಂತಹವರು ಇರಬಹುದು. ಶೌಚಾಲಯ ಕಟ್ಟಡಗಳನ್ನು ಕಟ್ಟುವಂತಹ ಕಾರ್ಮಿಕರು ಇರಬಹುದು. ಕಟ್ಟಲಿಕ್ಕೆ ಉಸುಕು ಸಿಕ್ಕುತ್ತಿಲ್ಲ. ಅದರ ಬಗ್ಗೆ ನಾವು ಅನೇಕ ಬಾರಿ ಚರ್ಚೆಯನ್ನು ಮಾಡುತ್ತಿದ್ದೇವೆ. ಚರ್ಚೆಯನ್ನು ಮಾಡಿದ್ದೇವೆ. ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು, ಹಿರಿಯರಾದ ಸನ್ಮಾನ್ಯ ಶ್ರೀ ರುದ್ರಪ್ಪಣ್ಣನವರು ಅದರ ಬಗ್ಗೆ ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಆದರೆ, ಇವತ್ತಿನವರೆಗೂ ಅದು ಕಾರ್ಯರೂಪಕ್ಕೆ ಬರುತ್ತಿಲ್ಲ. ನಾನು ಈ ಬಗ್ಗೆ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಾನು ಹೇಳುವಂತಹದ್ದು ಅಕ್ಷರಶ: ಸತ್ಯ. ಸುಳ್ಳು ಎನ್ನುವುದಾದರೆ ಅಣ್ಣನವರು ನಾನು ಹೋದ ಮೇಲೆ ಅದರೂ ಪರವಾಗಿಲ್ಲ, ಇರುವಾಗಾದರೂ ಪರವಾಗಿಲ್ಲ, ಹೇಳಲಿ. ಆದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ನನ್ನ ಮಾಹಿತಿ ಸರಿಯೋ ತಪ್ಪೋ ಗೊತ್ತಿಲ್ಲ. ತುಂಗಾಭದ್ರ ನದಿಯಿಂದ, ವರದಾ ನದಿಯಿಂದ ಕಡಿಮೆ ಎಂದರೂ ಸಹ ದಿನಕ್ಕೆ 200 ರಿಂದ 300 ಟ್ರಕ್‌ಗಳು ಉಸುಕನ್ನು ತುಂಬಿಕೊಂಡು ಬೆಂಗಳೂರಿಗೆ ಬರುತ್ತವೆ. ಆದರೆ, ಹಾವೇರಿಯ 10 ಕಿ.ಮೀ ರಾಣೆಬೆನ್ನೂರು, 30.ಕಿ.ಮೀ ಹಾವೇರಿ. 40-50 ಕಿ.ಮೀ ಶಿಗ್ಗಾಂವ್, 70 ಕಿ.ಮೀ ಹಾನಗಲ್‌ಗೆ ರೊಕ್ಕ ಕೊಡುತ್ತೇವೆಂದರೂ ಸಹ ಉಸುಕು ಏತಕ್ಕೆ ಸಿಕ್ಕುತ್ತಿಲ್ಲ? ನನ್ನ ವಿನಂತಿ ಏನೆಂದರೆ ಏತಕ್ಕೆ ಗುಳೆ ಹೋಗುತ್ತಾರೆಂದರೆ ಬರಗಾಲದಿಂದ ರೈತರು ಮತ್ತು ಕೂಲಿಕಾರರು ಗುಳೆ ಹೋದರೆ ಮತ್ತೆ ಕಾರ್ಮಿಕರು ಸಹ ಇದೇ ರೀತಿಯಲ್ಲಿ ಗುಳೆ ಹೋಗುತ್ತಾರೆನ್ನುವ ಪರಿಸ್ಥಿತಿ ಬಂದಿದೆ ಎಂದರೆ ಇದಕ್ಕೆ ಏನಾದರೂ ಮಾಡಿ, ಸರ್ಕಾರದ ಯೋಜನೆಗಳಾದ ಶೌಚಾಲಯ ಮುಕ್ತ ಗ್ರಾಮ ಮಾಡಬೇಕೆಂದು ನಾವೇನು ಬಡಬಡಾಯಿಸುತ್ತಿದ್ದೇವೆ, ಅದಕ್ಕೆ ಉಸುಕನ್ನು ಕೊಡಿ. ಕಬ್ಬಿಣ ಸಿಕ್ಕುತ್ತದೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಲ್ಲಿ ಸಿಕ್ಕುತ್ತದೆ. ಆದರೆ, ನಮ್ಮಲ್ಲಿ ಉಸುಕು ಸಿಕ್ಕುತ್ತಿಲ್ಲ. ಇದರ ಅನುಕೂಲತೆಯನ್ನು ತಾವು ಮಾಡಿ ಕೊಡಬೇಕು.

**ಶ್ರೀ ರುದ್ರಪ್ಪ ಲಮಾಣಿ(ಮುಜರಾಯಿ ಸಚಿವರು):–** ಸನ್ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಈಗ ಅಲ್ಲಿ ನೀರಾವರಿ ಇಲಾಖೆಯ ಕಾರ್ಯದರ್ಶಿಗಳು ಯಾರೋ ಒಬ್ಬರು ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದರಿಂದ, ನಮಗೂ ಗೊತ್ತಿಲ್ಲದೆ, ಅದನ್ನು ಜಾರಿಗೆ ತಂದಿದ್ದರು. ಅದನ್ನು ಈಗ ತಕ್ಷಣ ತೆಗೆದು ಈಗಾಗಲೇ ಎಲ್ಲಾ ಟೆಂಡರ್‌ಗಳನ್ನು ತೆರೆದು ಬಿಡ್‌ದಾರರಿಗೆ ಈಗಾಗಲೇ ಕೊಟ್ಟಿದ್ದೇವೆ. ಈಗ ಅವರಿಗೆ work order ಕೊಡುವುದಿದೆ. ತಕ್ಷಣದಿಂದಲೇ ಉಸುಕನ್ನು ಸರಬರಾಜು ಮಾಡುತ್ತೇವೆ. ಎರಡು–ಮೂರು ಕಡೆ ನಿರ್ಮಿತಿ ಕೇಂದ್ರದಿಂದ ಪ್ರಾರಂಭ ಮಾಡಲಿಕ್ಕೆ ಈಗಾಗಲೇ ಹೇಳಿದ್ದೇವೆ. ಈ ತಿಂಗಳಿನಿಂದ ಬಹುತೇಕವಾಗಿ ಉಸುಕಿನ ಸಮಸ್ಯೆ ಬಗೆಹರಿಯುತ್ತದೆ.

**ಶ್ರೀ ಸೋಮಣ್ಣ ಮ ಬೇವಿನಮರದ:–** ನಾಲ್ಕು ವರ್ಷದಲ್ಲಿ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ, ಸರ್ಕಾರ ಕೆಲಸ ಮಾಡದ ಕಾರಣ, ಜನ ಸಾಮಾನ್ಯರು ಇವತ್ತು ಟ್ರ್ಯಾಕ್ಟರ್ ಮೂಲಕ 6 ಸಾವಿರ, 7 ಸಾವಿರ ರೂಪಾಯಿಗಳಿಗೆ ಉಸುಕು ತಂದು ಜೀವನ ಸಾಗಿಸುವ ಪರಿಸ್ಥಿತಿ ಬಂದಿದೆ.

(637) 08.06.2017 SPR-AK 6.00 **(ಉಪಸಭಾಪತಿಯವರ ಉಪಸ್ಥಿತಿ)**

ಶ್ರೀ ಸೋಮಣ್ಣ ಮ.ಬೇವಿನವರದ(ಮುಂದು):–

ಯಾವುದೇ ಒಬ್ಬ ರೈತ ಹಟ್ಟಿಗೆ ತೆಗೆದುಕೊಂಡು ಹೋಗಲು ತನ್ನ ಸ್ವಂತ ಟ್ರ್ಯಾಕ್ಟರ್‌ನಲ್ಲಿ ಅಂದರೆ ಬಾಡಿಗೆಗೆ ಬಳಸದೇ ಇರುವಂತಹ ಟ್ರ್ಯಾಕ್ಟರ್‌ನಲ್ಲಿ ಮರಳನ್ನು ತಂದರೆ ಸರ್ಕಾರಿ ಅಧಿಕಾರಿಗಳಾದ ತಹಸೀಲ್ದಾರ್ ಹಾಗೂ ಪೊಲೀಸರು ಅಂತಹ ಟ್ರ್ಯಾಕ್ಟರ್‌ನ್ನು ವಶಪಡಿಸಿಕೊಂಡು ಕೃಷಿಕನನ್ನು ಬಂಧಿಸಿ, ಅವನಿಗೆ ದಂಡವನ್ನು ವಿಧಿಸುತ್ತಾರೆ. 15 ದಿನಗಳ ನಂತರ ಅಂತಹ ಕೃಷಿಕನನ್ನು ಜಾಮೀನಿನ ಮೇಲೆ ಬಿಡಿಸಿಕೊಂಡು ಬರುವಂತಹ ಪರಿಸ್ಥಿತಿ ಇವತ್ತಿನ ದಿವಸ ಬಂದೊದಗಿದೆ. ಉದಾಹರಣೆಗೆ ಹೇಳುವುದಾದರೆ ಶಿಗ್ಗಾಂವ ತಾಲ್ಲೂಕಿನ ಗೋಟಗೋಡಿ ಗ್ರಾಮದ ಜುಂಜು ಉಪಾಧ್ಯ ಎನ್ನುವ ಹೆಸರಿನ ಕೃಷಿಕನ ಟ್ರ್ಯಾಕ್ಟರ್‌ನ್ನು ಸವಣೂರು ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರು 15 ದಿನಗಳವರೆಗೆ ವಶಪಡಿಸಿಕೊಂಡಿದ್ದರು. ಇಂತಹ ಘಟನೆಗಳಿಗೆ ನೀವು ಏನು ಹೇಳಲಿಚ್ಛಿಸುತ್ತೀರಿ? ನಮ್ಮ ತಾಲ್ಲೂಕಿನಲ್ಲಿ ಮರಳು ಸಿಗುವುದೇ ಇಲ್ಲ ಎನ್ನುವಂತಹ ಪರಿಸ್ಥಿತಿ ಇಲ್ಲ. ಆದ್ದರಿಂದ ಅಕ್ರಮ ಮರಳು ಎಂಬ ಪ್ರಶ್ನೆ ನಮ್ಮಲ್ಲಿ ಉದ್ಭವಿಸುವುದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಜವಳಿ ಮತ್ತು ಮುಜರಾಯಿ ಸಚಿವರು):-** ಮಾನ್ಯ ಸಭಾಪತಿಯವರೆ, ನಮ್ಮ ತಾಲ್ಲೂಕಿನ ಹಂದಿಗನೂರು ಗ್ರಾಮದಲ್ಲಿ ಮರಳು ಸಿಗುವ ವ್ಯವಸ್ಥೆಯನ್ನು ಮಾಡಿದ್ದೇವೆ. ಹಾನಗಲ್ ತಾಲ್ಲೂಕಿನಲ್ಲಿಯೂ ಸಹ ಈಗಾಗಲೇ ಮರಳನ್ನು ತೆಗೆಯುವ ವ್ಯವಸ್ಥೆಯನ್ನು ಮಾಡಿದ್ದೇವೆ. ಒಂದು ಸಾವಿರ ರೂಪಾಯಿಗಳಿಗೆ ಒಂದು ಟ್ರಿಪ್ ಮರಳನ್ನು ನೀಡಲಾಗುತ್ತಿದೆ. ಪರವಾನಿಗೆಯನ್ನು ನೀಡಿ ಮರಳನ್ನು ತೆಗೆಯಲು ಹೇಳಿದ್ದೇವೆ.

**ಶ್ರೀ ಸೋಮಣ್ಣ ಮ.ಬೇವಿನಮರದ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪರವಾನಿಗೆಯನ್ನು ಯಾರು ನೀಡುತ್ತಾರೆ?

**ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:-** ಮಾನ್ಯ ಸಭಾಪತಿಯವರೆ, ಲೋಕೋಪಯೋಗಿ ಇಲಾಖೆಯವರು ಪರವಾನಿಗೆಯನ್ನು ನೀಡುತ್ತಾರೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೆ, ರಾಣೆಬೆನ್ನೂರಿನಲ್ಲಿರುವ ಕಾರ್ಯಪಾಲಕ ಇಂಜನಿಯರ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನಾನು ಹೇಳುವುದನ್ನು ದಯಮಾಡಿ ಕೇಳಿ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮರಳಿಗೆ ಸಂಬಂಧಿತ ಸಮಸ್ಯೆಯು ಕೇವಲ ಹಾವೇರಿ ಜಿಲ್ಲೆಗೆ ಮಾತ್ರವೇ ಸೀಮಿತವಾಗಿಲ್ಲ. ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ ರವರು ಹಾವೇರಿ ಜಲ್ಲೆಯ ಉಸ್ತುವಾರಿ ಮಂತ್ರಿಗಳಾಗಿರುವ ಕಾರಣ ಹಾವೇರಿ ಜಿಲ್ಲೆಗೆ ಸಿಮೀತವಾಗಿ ಮಾತ್ರವೇ ಮಾತನಾಡುತ್ತಿದ್ದಾರೆ. ಆದರೆ ಮರಳು ಸಮಸ್ಯೆಯು ಇಡೀ ರಾಜ್ಯದಲ್ಲಿಯೇ ಇದೆ. ಸಭಾನಾಯಕರು ಸದನದಲ್ಲಿದ್ದಾರೆ. ಈ ಸರ್ಕಾರವು ಅಧಿಕಾರಕ್ಕೆ ಬಂದಾಗಿನಿಂದ ಇಂದಿನವರೆಗೂ ಈ ಸಮಸ್ಯೆಯನ್ನು ಸರಿಪಡಿಸುವಂತಹ ವ್ಯವಸ್ಥೆ ಇನ್ನೂ ಆಗಿಲ್ಲ. ನಮ್ಮ ಸ್ನೇಹಿತರಾದ ಶ್ರೀ ಸೋಮಣ್ಣನವರು ವಾಸ್ತವದ ಸಂಗತಿಯನ್ನು ಹೇಳುತ್ತಿದ್ದಾರೆ. ರೈತರು ತಮ್ಮ ಸ್ವಂತ ಮನೆಗಳಿಗೆ, ಶಾಲಾ-ಕಾಲೇಜು ಕಟ್ಟಡಗಳ ಕಾಮಗಾರಿಗಳಿಗೂ ಸಹ ಮರಳು ಅನಿವಾರ್ಯವಾಗಿ ಬೇಕಾಗಿದ್ದು ಇದು ದೊರೆಯಲು ಬಹಳ ತೊಂದರೆಯಾಗುತ್ತಿದೆ. ರೈತರ ಅನಿವಾರ್ಯ ಕಾರ್ಯಗಳಾದ ಸ್ವಂತ ಮನೆ, ತೋಟದ ಮನೆ, ಶೆಡ್ ಹಾಗೂ ಇನ್ನಿತರೆ ಕಟ್ಟಡಗಳ ನಿರ್ಮಾಣಕ್ಕಾಗಿಯೂ ಸಹ ಮರಳು ದೊರೆಯದಂತಹ ಪರಿಸ್ಥಿತಿ ಇವತ್ತಿನ ದಿವಸ ನಿರ್ಮಾಣವಾಗಿದೆ. ಕೇವಲ ಹಾವೇರಿ ಜಿಲ್ಲೆಗೆ ಸೀಮಿತವಾಗಿ ಚರ್ಚೆ ಮಾಡುವುದು ಬೇಡ. ಸಭಾನಾಯಕರು ಸದನದಲ್ಲಿದ್ದಾರೆ. ಮರಳು ಸಮಸ್ಯೆ ಕುರಿತಾಗಿ ಸರ್ಕಾರದ ನೀತಿ ಏನು ಈ ಬಗ್ಗೆ ದಯಮಾಡಿ ಹೇಳಬೇಕು. ಸರ್ಕಾರವು ಗಣಿಗಾರಿಕೆ ನೀತಿಯನ್ನು ಜಾರಿಗೆ ತರುವುದಾಗಿ ಹೇಳುತ್ತಲೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದಾರೆ. ಮರಳು ಒಂದು ದಂಧೆಯಾಗಿದೆ ಹೊರತು ಜನಸಾಮಾನ್ಯರಿಗೆ ತಮ್ಮ ಸ್ವಂತ ಮನೆ, ತೋಟದ ಮನೆಗಳನ್ನು ಕಟ್ಟುವುದಕ್ಕೆ ಅಥವಾ ಯಾವುದೇ ಒಂದು ಶಾಲಾ ಕಟ್ಟಡಗಳಿಗೆ ಕಾಂಪೌಂಡ್ ನಿರ್ಮಾಣ ಮಾಡುವುದಕ್ಕೂ ಸಹ ಸಾಧ್ಯವಾಗುತ್ತಿಲ್ಲ. ಅಲ್ಲಿರುವ ಪೊಲೀಸ್ ಹಾಗೂ ಸ್ಥಳೀಯರ nexus ಇದೆ. ಯಾರು ಮರಳು ದಂಧೆಯನ್ನು ಮಾಡುತ್ತಾರೆ ಅವರನ್ನು ಹಿಡಿಯದೇ ಬಿಟ್ಟು ಬಿಡುತ್ತಾರೆ. ಬೆಂಗಳೂರಿನ ನಾಲ್ಕು ಹೊರವಲಯಗಳನ್ನು ನೋಡಿದಾಗ ಅಲ್ಲಿ ಮರಳು ಲಾರಿಗಳು ನಿಂತುಕೊಂಡಿರುತ್ತವೆ.

**ಸಭಾಪತಿಯವರು:-** ಶ್ರೀ ರಮೇಶ್ ಬಾಬುರವರೇ ತಾವು ಮರಳು ಸಮಸ್ಯೆ ಕುರಿತಾಗಿ ಮಾತನಾಡುವುದಾದರೆ ತಮ್ಮ ಮನವಿಯನ್ನು ಕಳುಹಿಸಿ ಕೊಡಿ, ಅದಕ್ಕೆ ಅವಕಾಶ ನೀಡಲಾಗುವುದು. ಈಗ ಅದರ ಬಗ್ಗೆ ಚರ್ಚೆ ಮಾಡಬೇಡಿ. ದಯಮಾಡಿ ಕುಳಿತುಕೊಳ್ಳಿ. ಸೋಮಣ್ಣನವರೇ ಆದಷ್ಟು ಬೇಗ ಮುಗಿಸಿ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ನಾನು ಇನ್ನು ಎರಡು-ಮೂರು ನಿಮಿಷದಲ್ಲಿ ಮುಕ್ತಾಯ ಮಾಡುತ್ತೇನೆ. ನಾನು ಈ ಸಂದರ್ಭದಲ್ಲಿ ಹೆಸರನ್ನು ಪ್ರಸ್ತಾಪ ಮಾಡಬೇಕೋ ಅಥವಾ ಬೇಡವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಜಿಲ್ಲೆಯವರಾದ ಮಾನ್ಯ ಸಭಾಧ್ಯಕ್ಷರು ಚಕ್ಕಡಿ ಗಾಡಿಯ ಮೂಲಕ ಮರಳನ್ನು ತೆಗೆದುಕೊಂಡು ಬನ್ನಿ ಎಂಬ ಹೇಳಿಕೆಯನ್ನು ನೀಡಿದರು. ನಾನು ಕೈಮುಗಿದು ನಿಮ್ಮನ್ನು ಕೇಳುವುದೇನೆಂದರೆ, ಚಕ್ಕಡಿ ಗಾಡಿಯ ಮೂಲಕ 75 ಕಿಲೋ ಮೀಟರ್ ದೂರದ ಹೊಳೆಯಿಂದ ಮರಳನ್ನು ಸಾಗಿಸುವುದಕ್ಕೆ ಸಾಧ್ಯವಿದೆಯೇ? ಈ ಅಂಶವನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಮರಳೇ ಇಲ್ಲ. ಮಾನ್ಯ ಸಚಿವರಾದ ರುದ್ರಪ್ಪ ಮಾನಪ್ಪ ಲಮಾಣಿರವರು ಈ ರೀತಿಯಾಗಿ ಹೇಳಿದ್ದಾರೆ ಎಂಬುದಾಗಿ ನಾನು ನಾಳೆಯ ದಿವಸವೇ ಹಾವೇರಿ ಜಿಲ್ಲೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟುಬಿಡುತ್ತೇನೆ. ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ 75 ಕಿಲೋ ಮೀಟರ್ ದೂರದ ಪ್ರದೇಶದಿಂದ ಚಕ್ಕಡಿ ಗಾಡಿಯೊಳಗೆ ಮರಳನ್ನು ಸಾಗಿಸುವುದಕ್ಕೆ ಸಾಧ್ಯವೇ? ಈ ಬಗ್ಗೆ ತಾವು ಉತ್ತರವನ್ನು ಹೇಳಿ. ಇನ್ನು ಒಂದು ವರ್ಷದ ಅವಧಿಯಲ್ಲಿ ಅವರಿಗೆ ತಿಳಿದ ಹಾಗೆ ಯಾವಾಗ ಕೊಡುತ್ತಾರೋ ಕೊಡಲಿ. ರೈತರ ಪರವಾಗಿ ನನ್ನ ಒಂದೇ ಒಂದು ವಿನಂತಿ ಏನೆಂದರೆ ಈಗಾಗಲೇ ಅನೇಕ ರೈತರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಇಂತಹ ಪರಿಸ್ಥಿತಿ ಎಲ್ಲಾ ಜಿಲ್ಲೆಯ ಎಲ್ಲಾ ರೈತರುಗಳಿಗೆ ಬಂದೊದಗಿದೆ. ಈ ದೇಶಕ್ಕೆ ಅನ್ನವನ್ನು ಉಣಿಸುವವನು ರೈತ. ಸಿಮೆಂಟ್, ಮರಳು, ಕಬ್ಬಿಣ, ಜಲ್ಲಿ ಕಲ್ಲು, ಡಾಂಬರು ಇಂತಹ ವಸ್ತುಗಳನ್ನು ಯಾರೂ ತಿನ್ನುವುದಕ್ಕಾಗುವುದಿಲ್ಲ. ಜಗತ್ತಿನ ಮೇಲಿರುವ ಎಲ್ಲಾ ಜೀವರಾಶಿ ನಮ್ಮನ್ನೂ ನಿಮ್ಮನ್ನೂ ಒಳಗೊಂಡಂತೆ ಯಾರೂ ವಸ್ತುಗಳನ್ನು ತಿನ್ನುವುದಿಲ್ಲ. ಎಲ್ಲರೂ ಜೋಳ, ಅಕ್ಕಿ, ಗೋಧಿ, ಕಡಲೆ, ನವಣೆ, ಸಾಮಿ ಎಂಬಿತ್ಯಾದಿ ಆಹಾರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪದಾರ್ಥಗಳನ್ನು ತಿನ್ನುತ್ತಾರೆ. ಇತ್ತೀಚಿನ ದಿನಗಳಲ್ಲಿ ಸಾಮಿ, ನವಣೆಗಳಿಗೆ ಹೆಚ್ಚಿನ ಬೆಲೆ ಬಂದಿದೆ ಎಂದರೆ ಅರ್ಧ ಕಿಲೋಗ್ರಾಂಗಳಿಗೆ 70 ರೂಪಾಯಿಗಳಾಗಿದೆ. ನಾನು ಈ ಮಾತನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ ನಮ್ಮೆಲ್ಲರ ಬದುಕನ್ನು ಸಾಗಿಸಿಕೊಡುವಂತಹ ರೈತನಿಗೆ ಇವತ್ತಿನ ದಿವಸ ಎಲ್ಲಾ ಕಡೆಗಳಿಂದಲೂ ಹಾಗೂ ಎಲ್ಲಾ ರೀತಿಯಿಂದಲೂ ಅನ್ಯಾಯವಾಗುತ್ತಿದೆ. ಆದ್ದರಿಂದ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಕೇಂದ್ರ ಸರ್ಕಾರವನ್ನು ದೂಷಿಸಬೇಡಿ. ಅದರ ಬದಲಾಗಿ ರಾಜ್ಯ ಸರ್ಕಾರಕ್ಕೆ ಇರುವ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಿ. ಬೇರೆ ರಾಜ್ಯಗಳ ಪ್ರಕಾರ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿರುವ ರೈತರ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಿ ಅವರಿಗೆ ಮತ್ತೊಮ್ಮೆ ಮರು ಜೀವನವನ್ನು ಕೊಡಬೇಕೆಂಬ ವಿನಂತಿಯನ್ನು ನಾನು ಇವತ್ತಿನ ದಿವಸ ನಿಮ್ಮ ಮುಖಾಂತರ ಸರ್ಕಾರಕ್ಕೆ ಮಾಡುತ್ತಿದ್ದೇನೆ. ಈಗಾಗಲೇ ಕೇಂದ್ರ ಸರ್ಕಾರದಿಂದ ಈ ವಿಚಾರದಲ್ಲಿ ಅನೇಕ ಅನುದಾನಗಳು ಬಿಡುಗಡೆಯಾಗಿ ಹಣ ಬಂದಿದೆ. ಆ ವಿವರಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಈ ಸಂಬಂಧದಲ್ಲಿ ಎರಡು–ಮೂರು ಉಲ್ಲೇಖವನ್ನು ಮಾಡಬಯಸುತ್ತೇನೆ. ಎರಡು–ಮೂರು ನಿಮಿಷದಲ್ಲಿ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ.

**ಸಭಾಪತಿಯವರು:–**ಮಾನ್ಯ ಸದಸ್ಯರೆ, ದಯಮಾಡಿ ಇನ್ನು ಹೆಚ್ಚಿನ ಅವಕಾಶವನ್ನು ಕೊಡುವುದಿಲ್ಲ. ನೀವು ಒಂದು ನಿಮಿಷದಲ್ಲಿ ಮುಕ್ತಾಯ ಮಾಡಬೇಕು.

**ಶ್ರೀ ಸೋಮಣ್ಣ ಮ.ಬೇವಿನಮರದ:–** ಮಾನ್ಯ ಸಭಾಪತಿಯವರೆ, ನಾನು ಮಾತನಾಡಲು ನೀವು ಇಷ್ಟು ಸಮಯವನ್ನು ಕೊಟ್ಟಿದ್ದೀರಿ ಅದಕ್ಕಾಗಿ ನನ್ನ ಅಭಿನಂದನೆಗಳು. ಸುಮಾರು ಎಂಟು ವರ್ಷಗಳಿಂದ ಇತ್ತೀಚಿನ ಅಂಕಿ ಅಂಶಗಳನ್ನು ನಾವು ಪರಿಶೀಲನೆ ಮಾಡಿದಾಗ ಕೇಂದ್ರದಲ್ಲಿ ಈ ಹಿಂದೆ ಯು.ಪಿ.ಎ. ಸರ್ಕಾರ ಅಧಿಕಾರದಲ್ಲಿದ್ದಾಗ ಅನೇಕ ಹಣ ಬಂದಿದೆ. ಇವತ್ತಿನ ದಿವಸ ಮಾನ್ಯ ನರೇಂದ್ರ ಮೋದಿಯವರ ನೇತೃತ್ವದಲ್ಲಿನ ನಮ್ಮ ಬಿ.ಜೆ.ಪಿ. ಸರ್ಕಾರ ಅಧಿಕಾರದಲ್ಲಿರುವಾಗ ಅನೇಕ ಅನುದಾನಗಳ ಮೂಲಕ ಹಣ ಬರುತ್ತಿದೆ. ಒಂದೇ ಅಂಶವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ 2009–10 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರವು ಮುಂಗಾರು ಬರ ಪರಿಹಾರ ಯೋಜನೆಯಡಿ ರೂಪಾಯಿ 317 ಕೋಟಿಗಳಷ್ಟು ಅನುದಾನವನ್ನು ಕೇಳಿತ್ತು. ಇದಕ್ಕೆ ಪ್ರತಿಯಾಗಿ 53 ಕೋಟಿ ರೂಪಾಯಿಗಳಷ್ಟು ಅನುದಾನವು ಸ್ವೀಕೃತಗೊಂಡಿತ್ತು. 2011–12 ನೇ ಸಾಲಿನಲ್ಲಿ 2605 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಕೇಳಿದಾಗ 70 ಕೋಟಿ ರೂಪಾಯಿಗಳು ಸ್ವೀಕೃತಗೊಂಡಿದ್ದವು. ಅದೇ ರೀತಿಯಾಗಿ 2011–12 ನೇ ಸಾಲುಗಳಲ್ಲಿ 3609 ಕೋಟಿ ರೂಪಾಯಿಗಳ ಬೇಡಿಕೆಯನ್ನಿಟ್ಟಾಗ 282 ಕೋಟಿ ರೂಪಾಯಿಗಳು ಸ್ವೀಕೃತವಾಗಿದ್ದವು. 2013–14 ನೇ ಸಾಲಿನಲ್ಲಿ 1,014 ಕೋಟಿ ರೂಪಾಯಿಗಳ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೇಡಿಕೆಯನ್ನಿಟ್ಟಾಗ 169 ಕೋಟಿ ರೂಪಾಯಿಗಳು ಸ್ವೀಕೃತವಾಗಿದೆ. 2014-15 ನೇ ಸಾಲಿನಲ್ಲಿ ಬರ ಪರಿಹಾರ ಮತ್ತು ಮುಂಗಾರು ಬೆಳೆಯ ಹಾನಿಗೆ 779 ಕೋಟಿ ರೂಪಾಯಿಗಳನ್ನು ಕೇಳಿದಾಗ 139 ಕೋಟಿ ರೂಪಾಯಿಗಳು ಸ್ವೀಕೃತಗೊಂಡಿದೆ. 2015-16 ನೇ ಸಾಲಿನಲ್ಲಿ 3830 ಕೋಟಿ ರೂಪಾಯಿಗಳು ಮುಂಗಾರು ಬೆಳೆಗೆ ಹಾಗೂ 1470 ಕೋಟಿ ರೂಪಾಯಿಗಳು ಹಿಂಗಾರು ಬೆಳೆಗೆ ಬೇಡಿಕೆಯನ್ನಿಟ್ಟಾಗ 1540 ಕೋಟಿ ರೂಪಾಯಿಗಳು ಮುಂಗಾರು ಬೆಳೆಗೆ ಹಾಗೂ 606 ಕೋಟಿ ರೂಪಾಯಿಗಳು ಹಿಂಗಾರು ಬೆಳೆಗೆ ಒದಗಿಸಲಾಗಿದೆ. ಒಟ್ಟಿನಲ್ಲಿ 2147 ಕೋಟಿ ರೂಪಾಯಿಗಳಷ್ಟು ಅನುದಾನಗಳು ಬಿಡುಗಡೆಗೊಂಡಿವೆ. 2016-17 ನೇ ಸಾಲಿನಲ್ಲಿ ಸ್ವೀಕೃತವಾಗಿರುವ 1782 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿದೆ ಬಂದಿದೆ. ಈ ಹಣವು ರೈತರ ಸಲುವಾಗಿ ಬಂದಿದೆ. ಇದರೊಂದಿಗೆ ರಾಜ್ಯ ಸರ್ಕಾರದ ಪಾಲನ್ನು ಸೇರಿಸಿ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಖಾತೆಗೆ ರೈತರಿಗೆ ಹಂಚುವುದಕ್ಕಾಗಿಯೇ ಹೋಗಬೇಕು. ಆದರೆ ಜಿಲ್ಲಾಧಿಕಾರಿಗಳು ಸದರಿ ಹಣವನ್ನು ತಮ್ಮ ತಮ್ಮ ಖಾತೆಯಲ್ಲಿಟ್ಟುಕೊಂಡಿದ್ದಾರೆ. ಆದರೆ ಸದರಿ ಹಣವನ್ನು ರೈತರ ಖಾತೆಗಳಿಗೆ ವರ್ಗಾಯಿಸಿ ರೈತರನ್ನು ರಕ್ಷಿಸುವಲ್ಲಿ ಸರ್ಕಾರವು ಮುಂದಾಗಬೇಕು ಎನ್ನುವಂತಹ ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ. ರಾಜ್ಯ ಸರ್ಕಾರವು ತನಗಿರುವ ಜವಾಬ್ದಾರಿಯನ್ನು ಮರೆಯಬಾರದು. ಸರ್ಕಾರವು ತನ್ನ ಜವಾಬ್ದಾರಿಯನ್ನು ಮತ್ತೊಮ್ಮೆ ಹೆಚ್ಚಿಸಿಕೊಳ್ಳುವುದಕ್ಕಾಗಿ ರಾಜ್ಯದ ರೈತನ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಿ ರೈತರಿಗೆ ಉಪಯೋಗವಾಗುವಂತಹ ಕೆಲಸಗಳನ್ನು ಶೀಘ್ರವಾಗಿ ಮಾಡಬೇಕೆಂಬ ಮಾತನ್ನು ತಮ್ಮ ಮುಖಾಂತರ ಮಾಡಿಕೊಳ್ಳುತ್ತೇನೆ. ಶೀಘ್ರವಾಗಿ ಅಂದರೆ ಪ್ರಸ್ತುತ ಅಧಿವೇಶನ ಮುಕ್ತಾಯವಾಗುವುದರೊಳಗಾಗಿ ರೈತರ ಸಾಲವನ್ನು ಮನ್ನಾ ಮಾಡುವಂತೆ ನಾನು ಸರ್ಕಾರವನ್ನು ವಿನಂತಿಸುತ್ತೇನೆ. ಈ ಸಂದರ್ಭದಲ್ಲಿ ನಾನು ಮೂರ್‍ನಾಲ್ಕು ವಿಷಯಗಳನ್ನು ಪ್ರಸ್ತಾಪಿಸಿದ್ದೇನೆ. ಮೇಲ್ಮನೆ ಹಾಗೂ ಕೆಳಮನೆಗಳಲ್ಲಿಯೂ ಸಹ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಎರಡು ವಿಷಯಗಳ ಬಗ್ಗೆ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸವಣೂರು ತಾಲ್ಲೂಕಿನ ಕಂದಾಯ ಇಲಾಖೆ ಹಾಗೂ ಶಿಗ್ಗಾಂವ ತಾಲ್ಲೂಕಿನ ಸರ್ವೆ ಇಲಾಖೆಗಳಲ್ಲಿ ಆಗುವಂತಹ ಅವ್ಯವಹಾರ ಬಗ್ಗೆ, ತಪ್ಪು ಕಲ್ಪನೆಗಳ ಬಗ್ಗೆ, ನ್ಯಾಯಾಲಯಕ್ಕೆ ಕಳುಹಿಸುವ ವಿಚಾರಗಳ ಬಗ್ಗೆ ಮತ್ತು ಚಕ್ಕಡಿ ಗಾಡಿಗಳಲ್ಲಿ ಮರಳನ್ನು ಸಾಗಿಸುವುದನ್ನು ನಿಲ್ಲಿಸುವುದರ ಬಗ್ಗೆ ತಾವು ಗಮನವನ್ನು ಹರಿಸುವಿರಿ ಎನ್ನುವಂತಹ ಮಾತನ್ನು ಹೇಳುತ್ತಾ, ಸಮಯಾವಕಾಶವನ್ನು ನೀಡಿದ್ದಕ್ಕಾಗಿ ಸಭಾಪತಿಯವರಿಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದಲ್ಲಿ ಬರ ಪರಿಸ್ಥಿತಿಯು ಗಂಭೀರವಾದಂತಹ ವಿಚಾರವಾಗಿರುವುದರಿಂದ ಅದರ ಕುರಿತಾಗಿ ಚರ್ಚೆಯನ್ನು ತೆಗೆದುಕೊಳ್ಳಲಾಗಿದೆ. ನಮ್ಮ ಸುಮಾರು 13-14 ಹಿರಿಯ ಸದಸ್ಯರುಗಳು ನಿಯಮ-59 ರಡಿ ಈ ಚರ್ಚೆಯನ್ನು ತೆಗೆದುಕೊಳ್ಳಬೇಕೆಂಬುದಾಗಿ ರುಜುವನ್ನು ಮಾಡಿ ಮನವಿಯನ್ನು ಸಲ್ಲಿಸಿರುತ್ತಾರೆ. ಈ ಮನವಿಯಲ್ಲಿ ರಾಜ್ಯ ಸರ್ಕಾರವು ಬರಗಾಲ ಪರಿಸ್ಥಿತಿಯನ್ನು ಎದುರಿಸುವಲ್ಲಿ ವಿಫಲವಾಗಿದೆ ಎಂಬಂತಹ ಗಂಭೀರ ಆರೋಪವನ್ನು ಮಾಡಿದ್ದಾರೆ. ಮುಂದುವರೆದು ಗ್ರಾಮೀಣ ಭಾಗದ ರೈತರು, ಕೃಷಿ ಕಾರ್ಮಿಕರು ಉದ್ಯೋಗವಿಲ್ಲದೆ ಗುಳೆ ಹೋಗುವ ಪರಿಸ್ಥಿತಿ ಎದುರಾಗಿದೆ, ತೆಂಗು, ಅಡಿಕೆ, ತರಕಾರಿ, ನಿಂಬೆ ಮುಂತಾದ ಬೆಳೆಗಳು ಸಂಪೂರ್ಣವಾಗಿ ನಾಶವಾಗಿದೆ, ಕುಡಿಯುವ ನೀರಿಗೆ ಹಾಹಾಕಾರವುಂಟಾಗಿದೆ, ಇಂತಹ ಪರಿಸ್ಥಿತಿ ರಾಜ್ಯದಲ್ಲಿದೆ ಎಂಬುದು ಸದಸ್ಯರು ಮಾಡಿರುವ ಗಂಭೀರವಾದ ಆರೋಪವಾಗಿದೆ. ಆದರೆ ಸದಸ್ಯರು ಎಲ್ಲಿಯೂ ಕೂಡ ಆಹಾರದ ಕೊರತೆಯ ಬಗ್ಗೆ ಪ್ರಸ್ತಾಪವನ್ನು ಮಾಡಿಲ್ಲ. ಅದರರ್ಥ ಇಡೀ ರಾಜ್ಯದಲ್ಲಿ ಆಹಾರವಿಲ್ಲದೆ ಯಾರೂ ಕೂಡ ಗುಳೆ ಹೋಗುವಂತಹ ಪರಿಸ್ಥಿತಿ ಎದುರಾಗಿಲ್ಲ ಎನ್ನುವ ಅಂಶವು ಬಹಳ ಸ್ಪಷ್ಟವಾಗಿ ಕಾಣುತ್ತದೆ.

(ಮುಂದು)

**(638) 08.06.2017 MSS-AK 6.10**

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು)(ಮುಂದು):-**

ಮತ್ತು ಅದೇ ರೀತಿಯಲ್ಲಿ ಇವತ್ತು ರಾಜ್ಯ ಸರ್ಕಾರದ ಕೆಲವು ಕಾರ್ಯಕ್ರಮಗಳು ಇವತ್ತಿನ ಬರಗಾಲದ ಛಾಯೆಯನ್ನು ಮೋಡಗಳನ್ನು ಅವರಿಸಿಕೊಂಡು ಒಂದು ಉತ್ತಮ ಜೀವನವನ್ನು ನಡೆಸುವುದಕ್ಕೆ ಅನುವು ಆಗಿರತಕ್ಕಂಥದ್ದು ಗೋಚರವಾಗುತ್ತದೆ. ಹಾಗಾಗಿ ಈ ವರ್ಷ ಏಕೆ ಈ ರೀತಿಯಾಗಿದೆ ಎಂದರೆ, ಎರಡು ಮೂರು ವರ್ಷಗಳಿಂದ ರಾಜ್ಯ ಸರ್ಕಾರ ಈ ಬರಗಾಲವನ್ನು ಎದುರಿಸುವಂತಹ ಎಲ್ಲಾ ರೀತಿಯ ಒಂದು ಗಾಂಭೀರ್ಯತನವನ್ನು ತೆಗೆದುಕೊಂಡು ಏರ್ಪಾಡು ಮಾಡಿಕೊಂಡು ಅದಕ್ಕೆ ಬೇಕಾದಂತಹ ಆಡಳಿತಾತ್ಮಕವಾದಂತಹ ಒಂದು ಸಲಕರಣೆಗಳನ್ನು ತಯಾರು ಮಾಡಿಕೊಂಡು ಎದುರಿಸಿರುವುದಕ್ಕೆ ಇವತ್ತಿನ ದಿವಸ ಜನಗಳಲ್ಲಿ ತೊಂದರೆಯಾಗುತ್ತಿಲ್ಲ. ಉದಾಹರಣೆಗೆ ಇವತ್ತಿನ ದಿವಸ ಕೆಳಮನೆ ಏನು ವಿಧಾನಸಭೆ ಇದೆ ಅಲ್ಲಿ ಬರಗಾಲದ ಬಗ್ಗೆ 224 ವಿಧಾನಸಭಾ ಮತ ಕ್ಷೇತ್ರಗಳಲ್ಲಿ ಸುಮಾರು 170ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳು ಗ್ರಾಮೀಣ ಪ್ರದೇಶಗಳಲ್ಲಿ ಬರುತ್ತದೆ. ಅಲ್ಲಿಂದ ಬರುವಂತಹ ಗ್ರಾಮೀಣ ಪ್ರದೇಶದ ಶಾಸಕರುಗಳಾಗಿದ್ದಾರೆ. ಅವರುಗಳು ಯಾವುದೇ ಒಂದು ಚಕಾರ ಎತ್ತದೇ ಒಂದು ರೀತಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಾಂಭೀರ್ಯವನ್ನು ಆ ಸಭೆಗಳಲ್ಲಿ ಮೂಡಿಸಿಕೊಂಡು ಬಂದಿದ್ದಾರೆ. ಮೇಲ್ಮನೆಯಲ್ಲಿ ಬರಗಾಲದ ಬಗ್ಗೆ ಬಹಳ ಗಂಭೀರವಾಗಿ ಚರ್ಚೆಯನ್ನು ಮಾಡುತ್ತಿದ್ದೇವೆ. ನಾನು ಇದರ ಬಗ್ಗೆ ಚರ್ಚೆಯನ್ನು ಮಾಡಬಾರದೆಂದು ಹೇಳುತ್ತಿಲ್ಲ. ಆದರೆ ಈ ಒಂದು ವಿಷಯ ಮಾನ್ಯ ಸದಸ್ಯರು ಮಾತನಾಡುವಾಗ ನಮ್ಮ ರಾಜ್ಯದಲ್ಲಿ ಬಿತ್ತನೆ ಬೀಜದ ಕೊರತೆ ಈ ವರ್ಷ ಇಲ್ಲ, ಉತ್ತಮವಾದಂತಹ ಬಿತ್ತನೆಯ ಬೀಜವನ್ನು ಸರಿಯಾದ ಸಮಯಕ್ಕೆ ಕೊಟ್ಟಿದ್ದಾರೆಂದು ಹೇಳಿದರು. ಅಂದರೆ ಎಲ್ಲರಿಗೂ ಉತ್ತಮ ಮಟ್ಟದ ಬಿತ್ತನೆ ಬೀಜ ಸಿಕ್ಕಿದೆ ಎಂದು ಮಾನ್ಯ ಸದಸ್ಯರು ಒಪ್ಪಿಕೊಂಡ ಹಾಗಾಯಿತು. ಅಲ್ಲಿಗೆ ಜನ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆಂದು ಅರ್ಥ.

**ಶ್ರೀ ಸೋಮಣ್ಣ ಮ.ಬೇವಿನ ಮರದ:–** ಮಾನ್ಯ ಸಭಾಪತಿಯವರೆ, ನಾನು ಆ ರೀತಿಯಾಗಿ ಹೇಳಿಲ್ಲ. ನಾನು ಮಾತನಾಡುವಾಗ 2014, 2015 ಹಾಗೂ 2016ನೇ ಇಸವಿಯ ಬರಗಾಲದ ಪರಿಸ್ಥಿತಿ ಯಾವ ರೀತಿಯಾಗಿತ್ತು ಎನ್ನುವುದನ್ನು ಹೇಳುವುದರ ಜೊತೆಗೆ 2017ನೇ ಸಾಲಿನ ಬಗ್ಗೆಯೂ ಹೇಳಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಅವರ ವಾದವನ್ನು ಮಂಡನೆ ಮಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೆ, 2010, 2011 ಹಾಗೂ 2012ನೇ ಇಸವಿಯಲ್ಲಿ ಈ ರಾಜ್ಯದ ಪ್ರಮುಖ ಉತ್ತರ ಕರ್ನಾಟಕದಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶದಿಂದ ಅನಾಹುತವಾಗುತ್ತಿರುವ ಬಗ್ಗೆ ಬಹಳಷ್ಟು ದೊಡ್ಡ ಗಂಭೀರವಾದಂತಹ ಚರ್ಚೆಗಳು ಸದನಗಳಲ್ಲಿ ಚರ್ಚೆಯಾಗುತ್ತಿತ್ತು. ಆದರೆ ನೀರಿನಲ್ಲಿ ಫ್ಲೋರೈಡ್ ಕಡಿಮೆ ಮಾಡುವಂಥದ್ದು ಮತ್ತು ಶುದ್ಧ ಕುಡಿಯುವ ನೀರನ್ನು ಕೊಡತಕ್ಕಂಥದ್ದು ಗ್ರಾಮೀಣಾಭಿವೃದ್ಧಿ ಇಲಾಖೆಯ ಜವಾಬ್ದಾರಿ. ಅವರು ಏನಿದೆ ಮಾಡಿರತಕ್ಕಂತಹ ಒಂದು ಉತ್ತಮವಾದಂತಹ ಕೆಲಸದಿಂದ ಇವತ್ತಿನ ದಿವಸ ಫ್ಲೋರೈಡ್ ಅಂಶ ಜನಗಳ ದೇಹಕ್ಕೆ ಸೇರದೇ ಅವರ ಅಂಗಾಂಗಗಳನ್ನು ಯಾವುದೇ ರೀತಿಯಲ್ಲಿ ಕೆಟ್ಟದಾಗಿ ಮಾಡದೇ ಇರುವಂತಹ ರೀತಿಯಲ್ಲಿ ನೋಡಿಕೊಂಡಿದ್ದಾರೆ. ಅದು ನಿಜವಾಗಿಯೂ ರಾಜ್ಯಕ್ಕೆ ಮಾಡಿದ ಒಳ್ಳೆಯ ಕೆಲಸ ಹಾಗೂ ಅದನ್ನು ಪ್ರಶಂಸೆ ಮಾಡತಕ್ಕಂಥದ್ದು ಬಹಳ ಮುಖ್ಯವಾಗುತ್ತದೆ. ಕಾರಣವೇನೆಂದರೆ, ಫ್ಲೋರೈಡ್ ಅಂಶದ ಬಗ್ಗೆ ದೊಡ್ಡ ಪ್ರಮಾಣದಲ್ಲಿ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಬಿಬಿಸಿ ಯಲ್ಲಿಯೂ ಕೂಡ ಚರ್ಚೆಯಾಗಿತ್ತು. ಇಡೀ ರಾಜ್ಯದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಈ ರೀತಿಯಾಗಿರುವುದರ ಬಗ್ಗೆ ಚರ್ಚೆಯಾಗಿತ್ತು. ಇಂತಹ ದೊಡ್ಡ ಸಮಸ್ಯೆಯನ್ನು ನಮ್ಮ ಸರ್ಕಾರ ಮೂರ್ನಾಲ್ಕು ವರ್ಷಗಳಲ್ಲಿ ನೀಗಿಸಿರುವಂಥದ್ದು ಪ್ರಶಂಸನೀಯವಾದಂತಹ ವಿಷಯವಾಗಿದೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಗೋಶಾಲೆಗಳನ್ನು ಬಹಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸ್ಥಿತವಾದಂತಹ ರೀತಿಯಲ್ಲಿ ಮಾಡಿರತಕ್ಕಂಥದ್ದು ಪ್ರತಿಯೊಬ್ಬರಿಗೂ ಕೂಡ ಅರಿವು ಆಗಿದೆ. ಇವತ್ತು ಯಾವ್ಯಾವ ವಿಧಾನಸಭಾ ಕ್ಷೇತ್ರಗಳು, ಆ ಕ್ಷೇತ್ರದ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಅಲ್ಲಿ ದನ-ಕರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇರಬಹದು, ಗೋಶಾಲೆಯ ವ್ಯವಸ್ಥೆ ಇರಬಹುದು ಇದೆಲ್ಲವನ್ನೂ ಅವರವರ ಸುಪರ್ದಿಗೆ ಬಿಟ್ಟಿರತಕ್ಕಂಥದ್ದಾಗಿದೆ. ಇವತ್ತಿನ ದಿವಸ ಯಾವುದೇ ಒಬ್ಬ ಸದಸ್ಯರು ಕೂಡ ಇದರ ಬಗ್ಗೆ ಒಂದು ಚಕಾರವನ್ನು ಕೂಡ ಎತ್ತದೆ ಇರತಕ್ಕಂಥದ್ದು, 224 ವಿಧಾನಸಭಾ ಕ್ಷೇತ್ರಗಳಲ್ಲಿ ಸುಮಾರು 179 ವಿಧಾನಸಭಾ ಕ್ಷೇತ್ರಗಳು ಗ್ರಾಮೀಣ ಪ್ರದೇಶದಲ್ಲಿ ಬರತಕ್ಕಂಥದ್ದು ಇದೆ, ಇಲ್ಲಿ ಯಾವುದೇ ರೀತಿಯಲ್ಲಿ ಒಂದು ಸಮಸ್ಯೆಯೂ ಕೂಡ ಇಲ್ಲದೇ ಇರತಕ್ಕಂಥದ್ದನ್ನು ಒಟ್ಟಾರೆ ನಾವು ನೋಡುತ್ತಿದ್ದೇವೆ. ಹಾಗಾಗಿ ಇವತ್ತಿನ ದಿವಸ ಬೋರ್‌ವೆಲ್‌ಗಳ ಬಗ್ಗೆ ತಮಗೂ ಕೂಡ ಗೊತ್ತಿದೆ. ಮಳೆ ಬರಲಿಲ್ಲ ಎಂದರೆ ನಮಗೆ ಸಾಕಷ್ಟು ಅಂತರ್ಜಲ ಬತ್ತಿ ಹೋಗಿ 1,000 ಅಡಿಗಳಷ್ಟು ಆಳಕ್ಕೆ ಹೋಗಿರುವಂಥದ್ದು ಆಗಿದೆ. ಈ ನೀರನ್ನು ತೆಗೆದರೂ ಕೂಡ ಬಹಳ ಗಡುಸಾದ ನೀರು ಸಿಗುವಂಥದ್ದಾಗಿದೆ. ಅದನ್ನು ಶುದ್ಧೀಕರಿಸಿ ಆ ನೀರನ್ನು ಕುಡಿಯಬೇಕಾಗಿದೆ. ಇವತ್ತಿನ ದಿವಸ ಮಳೆಬಾರದೆ ಬರದೆ ಇದ್ದರೆ ಇನ್ನೂ ಗಂಭೀರವಾದಂತಹ ಪರಿಸ್ಥಿತಿ ಉದ್ಭವವಾಗುತ್ತದೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಮುಂಗಾರು ಮಳೆ ಪ್ರಾರಂಭವಾಗಿರತಕ್ಕಂಥದ್ದು ನಮಗೆ ಸಂತೋಷ ತರತಕ್ಕಂತಹ ವಿಷಯವಾಗಿದೆ. ಇವತ್ತಿನ ದಿವಸ ಗ್ರಾಮೀಣ ಪ್ರದೇಶ ಇರಬಹುದು ಮತ್ತು ನಗರ ಪ್ರದೇಶವಿರಬಹುದು ಎಲ್ಲರಿಗೂ ಕೂಡ ಕುಡಿಯುವ ನೀರಿನ ಅವಶ್ಯಕತೆ ಇದ್ದೇ ಇದೆ. ಇದನ್ನು ಸರ್ಕಾರ ಅರ್ಥ ಮಾಡಿಕೊಂಡು ಸಾಕಷ್ಟು ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಯಾವುದೇ ರೀತಿಯ ನೀರಿನ ಸಮಸ್ಯೆ ಇಲ್ಲ. ಇವತ್ತು ನೂರಾರು ಕೋಟಿ ರೂಪಾಯಿಗಳು ನೀರಿಗಾಗಿ ವ್ಯಯವಾಗಿರತಕ್ಕಂಥದ್ದು ಆಗಿದೆ. ಅದೆಲ್ಲಾ ಬಳಕೆಯಾಗುವಂಥದ್ದನ್ನು ನೋಡಿದ್ದೇವೆ. ನಮ್ಮ ನಾಗರಿಕರಿಗೆ ಆರೋಗ್ಯ ಕೊಡುವಂಥದ್ದು ಬಹಳ ಮುಖ್ಯವಾಗಿದೆ. ಅದೇ ರೀತಿಯಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಲು ಉತ್ತೇಜನವನ್ನು ನೀಡಲು ಮಧ್ಯಾಹ್ನದ ಊಟವನ್ನು ಕೊಡತಕ್ಕಂಥದ್ದು ಆಗಿದೆ. ಇನ್ನೊಂದು ಜನರು ಗುಳೆ ಹೋಗದೆ ಇರಲಿ ಎನ್ನುವ ಕಾರಣ. ಮಕ್ಕಳು ಶಾಲೆಗೆ ಹೋಗುತ್ತಿದ್ದರೆ ತಂದೆ-ತಾಯಿ ಆ ಊರಿನಲ್ಲಿಯೇ ಇರುತ್ತಾರೆ. ಮಕ್ಕಳ ಭವಿಷ್ಯವನ್ನು ನೋಡುವಂಥದ್ದಾಗಿರುತ್ತದೆ. ಶಾಲೆಗಳಲ್ಲಿ ಮಕ್ಕಳಿಗೆ ಮಧ್ಯಾಹ್ನ ಊಟದ ಜೊತೆಗೆ ಹಾಲನ್ನು ಕೂಡ ಕೊಡಲಾಗುತ್ತಿದೆ ಹಾಗೂ ಎಲ್ಲಾ ರೀತಿಯ ಸವಲತ್ತುಗಳನ್ನು ಕೂಡ ಮಕ್ಕಳಿಗೆ ಕೊಡಲಾಗುತ್ತಿದೆ. ಮತ್ತೆ ಅನ್ನ ಭಾಗ್ಯ ಯೋಜನೆಯಲ್ಲಿ ಸರ್ಕಾರ ಬಿಪಿಎಲ್ ಕಾರ್ಡ್‌ದಾರರಿಗೆ ಅಕ್ಕಿ ಕೊಡಲಾಗುತ್ತಿದೆ. ಹಾಗಾಗಿ ಬರಗಾಲದ ಛಾಯೆ ಗಂಭೀರತನ ಬಹಳ ಕ್ಷೀಣವಾಗಿದೆ. ಹಾಗಾಗಿ ಈ ಬರಗಾಲ ಕರ್ನಾಟಕ ರಾಜ್ಯದಲ್ಲಿ 2010, 2011, 2012, 2013ನೇ ಇಸವಿಯಲ್ಲಿಯೂ ಕೂಡ ಬರಗಾಲ ಇತ್ತು. 2011ನೇ ಇಸವಿಯಲ್ಲಿ 123 ತಾಲ್ಲೂಕುಗಳಲ್ಲಿ, 2012ನೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಸವಿಯಲ್ಲಿ 157 ತಾಲ್ಲೂಕುಗಳಲ್ಲಿ, 2013ನೇ ಇಸವಿಯಲ್ಲಿ 125 ತಾಲ್ಲೂಕುಗಳಲ್ಲಿ, 2014ನೇ ಇಸವಿಯಲ್ಲಿ 35 ತಾಲ್ಲೂಕುಗಳಲ್ಲಿ, 2015ನೇ ಇಸವಿಯಲ್ಲಿ 136 ತಾಲ್ಲೂಕುಗಳಲ್ಲಿ ಮತ್ತು ಈ ವರ್ಷ ಸುಮಾರು 160 ತಾಲ್ಲೂಕುಗಳಲ್ಲಿ ಬರಗಾಲ ಇದೆ. ಹಾಗಾಗಿ ಮಳೆ ಪ್ರಮಾಣ ಕಡಿಮೆ ಇದೆ. ದೇವರ ಕೃಪೆಯಿಂದ ಒಳ್ಳೆಯ ಮಳೆಯಾದರೆ ಒಳ್ಳೆಯದು. ಪ್ರತಿವರ್ಷ ಮುಂಗಾರು ಸರಾಸರಿ 839 ಮಿಲಿ ಮೀಟರ್‌ನಷ್ಟು ಮಳೆ ಬರಲೇಬೇಕಾಗುತ್ತದೆ. ಅದು ಪ್ರತಿವರ್ಷ ಸರಾಸರಿ ಇರತಕ್ಕಂಥದ್ದು. ನಮಗೆ 2016ನೇ ಇಸವಿಯಲ್ಲಿ 688 ಮಿಲಿ ಮೀಟರ್ ಮಳೆ ಬಂದಿದೆ. ಅದೇ ರೀತಿಯಲ್ಲಿ ಹಿಂಗಾರು ಮಳೆ ಪ್ರತಿವರ್ಷ ನಮಗೆ ಸಿಗಬೇಕಾಗಿರುವಂಥದ್ದು 180 ರಿಂದ 200 ಮಿಲಿ ಮೀಟರ್‌ನಷ್ಟು ಆದರೆ 2016ನೇ ಇಸವಿಯಲ್ಲಿ 50 ಮಿಲಿ ಮೀಟರ್‌ನಷ್ಟು ಮಳೆಯಾಗಿದೆ. ಹಾಗಾಗಿ ಈ ಒಂದು ಕೊರತೆಯಿಂದ ಬರಗಾಲವಾಗಿದೆ. ಅತಿವೃಷ್ಟಿ ಮತ್ತು ಅನಾವೃಷ್ಟಿಯಾಗಿದೆ. ಏಕೆಂದರೆ ನಮ್ಮ ರಾಜ್ಯದ ಹಲವಾರು ಪ್ರದೇಶದಲ್ಲಿ ನೀರು ಜಾಸ್ತಿಯಾಗಿ ಪ್ರಳಯವಾಗಿದೆ. ಈ ಒಂದು ವಿಷಯವನ್ನು ಕೂಡ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು 3,598 ಕೆರೆಗಳಿವೆ. 2016–17ನೇ ಸಾಲಿನಲ್ಲಿ ಕೆರೆಯಲ್ಲಿ ನೀರು ತುಂಬಿರತಕ್ಕಂಥದ್ದು ಕೇವಲ 5 ಕೆರೆಗಳು ಮಾತ್ರ. ಅಂದರೆ 0.1% ಅಥವಾ 0.2% ಒಳಗಡೆ ಕೆರೆಗಳು ತುಂಬಿದೆ. ನಮ್ಮಲ್ಲಿರುವಂತಹ ಹಲವಾರು ಕೆರೆಗಳು ಇವತ್ತು 50% ಗಿಂತಲೂ ತುಂಬದೇ ಇರುವಂತಹ ಕೆರೆಗಳಾಗಿದೆ. ತಮಗೆ ಚೆನ್ನಾಗಿ ಗೊತ್ತಿರುವಂತೆ ಈ ರೈತರಿಗೆ ಮತ್ತು ಕಾರ್ಮಿಕರಿಗೆ ಹಣದ ಕೊರತೆಯಿಂದ ಲೇವಾದೇವಿಯನ್ನು ಮಾಡುವಂಥವರು ಹಣವನ್ನು ಕೊಟ್ಟು ಸಾಕಷ್ಟು ತೊಂದರೆ ಮಾಡುವಂಥದ್ದನ್ನು ತಾವು ಕೇಳಿದ್ದೀರಿ ಮತ್ತು ನೋಡಿದ್ದೀರಿ.

ಮುಂದು..

(639) 08.06.2017 06.20 SV-RN **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಆರ್.ರಮೇಶ್ (ಮುಂದು):–**

ಕರ್ನಾಟಕ ಲೇವಾದೇವಿ ಅಧಿನಿಯಮವನ್ನು ತರುವ ಮುಖಾಂತರ ಅವರಿಗೆ ಸಂಪೂರ್ಣವಾಗಿ ಸಾಮಾಜಿಕವಾದಂತಹ ಭದ್ರತೆಯನ್ನು ನೀಡಬಹುದಾಗಿದೆ. ಅದು ಕಾರ್ಮಿಕರಿಗೆ ಇರಬಹುದು ಅಥವಾ ರೈತರಿಗೆ ಇರಬಹುದು. ಇದರಿಂದ ಜನರು ಸಂಕಷ್ಟದಿಂದ ಪಾರಾಗಿರುವುದನ್ನು ನಾವು ನೋಡಿದ್ದೇವೆ ಮತ್ತು ಕೇಳಿದ್ದೇವೆ.

ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿರುವ ಕಬ್ಬು ಬೆಳೆಗಾರರಿಗೆ ಎಷ್ಟು ತೊಂದರೆಯಾಗಿದೆ ಎನ್ನುವುದು ತಮಗೆ ತಿಳಿದಿರುವಂತಹ ವಿಚಾರವಾಗಿದೆ. ಹಿಂದೆ ಉಭಯ ಸದನಗಳ ಅಧಿವೇಶನವು ನಡೆಯುವಂತಹ ಸಂದರ್ಭದಲ್ಲಿ ಕಬ್ಬು ಬೆಳೆಗಾರರು ಬಂದು ಅವರ ಸಮಸ್ಯೆಗಳನ್ನು ತಿಳಿಸಿ ತಮ್ಮ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಡಿಕೆಯನ್ನು ಇಡುತ್ತಿದ್ದರು. ಇವತ್ತು ಈ ಕಬ್ಬು ಬೆಳೆಗಾರರಿಗೆ ಸಲ್ಲಬೇಕಾದಂತಹ ಹಣವನ್ನು ಸಂಪೂರ್ಣವಾಗಿ ಕೊಡತಕ್ಕಂತಹ ಕೆಲಸವನ್ನು ಸರ್ಕಾರ ಮಾಡಿದೆ. ಇದಕ್ಕಾಗಿ ರೈತರ ಪರವಾಗಿ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಹೇಳಬಯಸುತ್ತೇನೆ. ಖರೀದಿ ತೆರಿಗೆ ಮತ್ತು ರಸ್ತೆ ಕರಗಳಿಂದಲೂ ವಿನಾಯ್ತಿಯನ್ನು ಕೊಟ್ಟಿರುವುದು ತಮಗೆ ತಿಳಿದಿರುವ ವಿಚಾರವಾಗಿದೆ. ಗ್ರಾಮೀಣ ಪ್ರದೇಶದ ರೈತರಿಗೆ ಏನೆಲ್ಲಾ ದೊರಕಬೇಕಾಗಿದೆಯೋ ಅದನ್ನು ನೀಡತಕ್ಕಂತಹ ಒಂದು ಕೆಲಸವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಕೆಲವು ಮಾನ್ಯ ಸದಸ್ಯರು ಸಾಲ ಮನ್ನಾ ವಿಚಾರದ ಕುರಿತು ಮಾತನಾಡಿದರು. ಸಾಲದ ಬಗ್ಗೆ ರಾಷ್ಟ್ರೀಯ ಬ್ಯಾಂಕುಗಳಿರಬಹುದು ಅಥವಾ ಸಹಕಾರ ಬ್ಯಾಂಕುಗಳಿರಬಹುದು. ರಾಜ್ಯದ ಸಹಕಾರ ಬ್ಯಾಂಕುಗಳಲ್ಲಿ ಸುಮಾರು ರೂ.10,500 ಕೋಟಿಯಿಂದ ರೂ.11,000 ಕೋಟಿಗಳ ಮೊತ್ತವಿದ್ದು, ಮಿಕ್ಕ ರೂ.52,000 ಕೋಟಿ ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಡುವಂತಹ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇರುವಂತಹದ್ದಾಗಿದೆ. ಪಾರ್ಲಿಮೆಂಟ್‌ನಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಇದರ ಬಗ್ಗೆ ಸುಮಾರು ಅರ್ಧ ಗಂಟೆಗಳ ಕಾಲ ಚರ್ಚೆ ನಡೆಸಿ ಗಂಭೀರವಾದ ಪ್ರಸ್ತಾಪವನ್ನು ಮಾಡಿದರು. ಆದರೆ ಪಾರ್ಲಿಮೆಂಟ್‌ನಲ್ಲಿ ಅದಕ್ಕೆ ತಡೆಯೊಡ್ಡುವ ಕೆಲಸವನ್ನು ಕೇಂದ್ರ ಸರ್ಕಾರವು ಮಾಡಿತು. ಕೇಂದ್ರ ಸರ್ಕಾರ ಏನಾದರೂ ಕ್ರಮವನ್ನು ಕೈಗೊಳ್ಳಲಿ, ಆದರೆ [XXX] ರಾಜ್ಯದಲ್ಲಿರುವ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪ ಮಾಡದಿರುವುದು ಗಂಭೀರವಾದಂತಹ ಒಂದು ವಿಷಯವಾಗಿದೆ. ಒಬ್ಬ ಜನಪ್ರತಿನಿಧಿಯ ಜವಾಬ್ದಾರಿಯಾಗಿ ರಾಜ್ಯದ ರೈತರ ಪರಿಸ್ಥಿತಿಯನ್ನು, ಅವರ ಕೂಗನ್ನು ಕೇಂದ್ರ ಸರ್ಕಾರಕ್ಕೆ ಮುಟ್ಟಿಸಿದ್ದರೆ ಖಂಡಿತವಾಗಿಯೂ ಅದಕ್ಕೆ ಒಂದು ಪ್ರಶಂಸೆ ಸಿಗುತ್ತಿತ್ತು. ಕಾಂಗ್ರೆಸ್ ಸದಸ್ಯರು ಮಾತ್ರ ಸಾಲ ಮನ್ನಾ ಕುರಿತು ಅಲ್ಲಿ ಪ್ರಸ್ತಾಪ ಮಾಡಿದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ರಮೇಶ್ ಅವರು ಹೊಸ ಸದಸ್ಯರು. ಅವರಿಗೆ ಗೌರವ ಕೊಟ್ಟು ನಾವು ಬಹಳ ತಾಳ್ಮೆಯಿಂದ ಕೇಳುತ್ತಿದ್ದೇವೆ. ಆದರೆ ಪಾರ್ಲಿಮೆಂಟ್ ಸದಸ್ಯರ ಬಗ್ಗೆ ಈ ರೀತಿ ಆರೋಪಗಳನ್ನು ಮಾಡಬಾರದು. ಈ ರೀತಿ ಮಾತನಾಡಿದರೆ ಅದಕ್ಕೆ ನಾವು ಉತ್ತರ ಕೊಡುತ್ತೇವೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೆ, ನಾನು ಈ ವಿಷಯವನ್ನು ಏಕೆ ಹೇಳಿದೆನೆಂದರೆ ಸಾಲ ಮನ್ನಾ ಮಾಡಬೇಕೆಂದಾಗ ....

**ಉಪ ಸಭಾಪತಿಯವರು:–** ಮಾನ್ಯ ಶ್ರೀ ರಮೇಶ್‌ರವರೆ, ತಾವು ಹೊಸದಾಗಿ ಈ ಸದನಕ್ಕೆ ಬಂದಿದ್ದೀರಿ. ತಮಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇವೆ. ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ಆದರೆ ಈ ಸದನದಲ್ಲಿ ಲೋಕಸಭಾ ಸದಸ್ಯರ ವಿಚಾರಧಾರೆಗಳ ಬಗ್ಗೆ, ಅವರ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕಾರ್ಯಕ್ರಮಗಳ ಬಗ್ಗೆ ಮತ್ತು ಅವರು ಭಾಗವಹಿಸಬೇಕಾಗಿತ್ತು ಎನ್ನುವ ವಿಷಯಗಳ ಬಗ್ಗೆ ಮಾತನಾಡಬಾರದು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಯಾವ ನಿಯಮಾವಳಿಗಳ ಅಡಿಯಲ್ಲಿ ಮಾತನಾಡಬಾರದು ಎಂದು ಇದೆ? ಅವರು ಅವರ ಅಭಿಪ್ರಾಯವನ್ನು ವ್ಯಕ್ತ ಪಡಿಸಲಿ.

**ಉಪ ಸಭಾಪತಿಯವರು:–** ಮಾನ್ಯ ಶ್ರೀ ಉಗ್ರಪ್ಪನವರೆ, ಅವರು [XXX] ಎಂದು ಹೇಳಿದರು. ಅದನ್ನು ಕಡತದಿಂದ ತೆಗೆದುಹಾಕಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅವರಿಗೂ ಜವಾಬ್ದಾರಿಗಳಿದೆ ಅಲ್ಲವೇ?

**(ಗೊಂದಲ)**

**ಉಪ ಸಭಾಪತಿಯವರು:–** ಅವರು ಹೊಸ ಸದಸ್ಯರಾಗಿದ್ದಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಶ್ರೀ ರಮೇಶ್‌ರವರೆ, ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೆ, 2016ನೇ ಸಾಲಿನ ಮುಂಗಾರು ಬರದಿಂದ ಉಂಟಾದ ನಷ್ಟಗಳು 17,197 ಕೋಟಿ ಎಂದು ಅಂದಾಜು ಮಾಡಿ ಕೇಂದ್ರ ಸರ್ಕಾರಕ್ಕೆ ಒಂದು ಮನವಿಯನ್ನು ಮಾಡಲಾಗಿತ್ತು. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 4,702 ಕೋಟಿಗಳ ನೆರವನ್ನು ನೀಡುವುದಕ್ಕೆ ಕೇಂದ್ರ ಸರ್ಕಾರವನ್ನು ಕೋರಿ ಮನವಿಯನ್ನು ಸಲ್ಲಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರದಿಂದ ಇವತ್ತು ಬಂದಿರುವುದು ಕೇವಲ ರೂ.1,782 ಕೋಟಿ ಮಾತ್ರ. ಅದರಲ್ಲಿ ಕೇವಲ ರೂ.450 ಕೋಟಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಆಗಿರುವಂತಹ ಮೊತ್ತವಾಗಿದೆ. ಹಿಂಗಾರು ಬರದಿಂದ ಉಂಟಾಗಿರುವ ನಷ್ಟ ರೂ.7,097 ಕೋಟಿ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರೂ.3,310 ಕೋಟಿ ನೆರವು ಕೋರಿ ಮನವಿಯನ್ನು ನೀಡಲಾಗಿದೆ. ಇಂದಿನವರೆಗೂ ಅನುದಾನ ಹಿಂಗಾರಿಗೆ ಬಂದಿರುವುದಿಲ್ಲ. ಇಂದು ಹಿಂಗಾರು ಮುಗಿದು ಹೊಸ ಮುಂಗಾರು ಹುಟ್ಟಿದೆ. ಇವತ್ತಿನವರೆಗೂ ಕೇಂದ್ರ ಸರ್ಕಾರದಿಂದ ಯಾವುದೇ ನೆರವು ಬಂದಿರುವುದಿಲ್ಲ. ಹಾಗಾಗಿ ರೈತರಿಗೆ ಬಹಳಷ್ಟು ಕಷ್ಟವಾಗುತ್ತದೆ. ಸೆಪ್ಟೆಂಬರ್ ತಿಂಗಳಿನಲ್ಲಿ ಬೀದರ್, ಗುಲ್ಬರ್ಗಾ, ಬೆಳಗಾವಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಪ್ರವಾಹವಾಗಿರುವುದು ತಮಗೆ ಗೊತ್ತಿರುವ ವಿಚಾರವೇ ಆಗಿದೆ. ಇದರಿಂದ ಉಂಟಾದ ನಷ್ಟವನ್ನು ರೂ.2,486 ಕೋಟಿ ಎಂದು ಅಂದಾಜಿಸಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರೂ.386 ಕೋಟಿ ನೆರವು ಕೋರಿದ್ದು, ಕೇಂದ್ರದಿಂದ ಪರಿಹಾರದ ಮೊತ್ತ

---

[XXX] ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಿಡುಗಡೆಯಾಗಬೇಕಾಗಿದೆ. ಅದು ಇನ್ನೂ ಬಂದಿರುವುದಿಲ್ಲ. ಪ್ರವಾಹದ ಪರಿಹಾರ ಹಣವೂ ಬಂದಿಲ್ಲ; ಹಿಂಗಾರಿಗೆ ಕೊಡಬೇಕಾಗಿದ್ದು ಬಂದಿಲ್ಲ. ಹಾಗಾಗಿ ಇದೆರಡೂ ಕೊರತೆ ಆಗಿದೆ. ಇಲ್ಲಿ ಯಾರು ರೈತರು ಕಷ್ಟಕ್ಕೆ ಇರುತ್ತಾರೆಯೋ ಅವರಿಗೆ ರಾಜ್ಯ ಸರ್ಕಾರದಿಂದ ನೆರವು ಕೊಡುವಂತಹ ಪರಿಸ್ಥಿತಿ ಉಂಟಾಗಿದೆ. ಮುಂಗಾರು ಪರಿಹಾರ ನಮ್ಮ ರಾಜ್ಯದಲ್ಲಿ ಹೊಸದಾಗಿ ಪ್ರಸ್ತಾವನೆಯಾಗಿದೆ. ಅದನ್ನು ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಿರುವುದು ಬಹಳ ವಿಶೇಷವಾಗಿದೆ. ಇಡೀ ದೇಶದಲ್ಲಿ ಪ್ರಥಮ ಬಾರಿಗೆ ಈ ರೀತಿಯಾಗಿ ರಾಜ್ಯ ಸರ್ಕಾರದವರು ನೀಡಿರುವಂತಹದ್ದಾಗಿದೆ. ಹೀಗಾಗಿ 26 ಜಿಲ್ಲೆಗಳಲ್ಲಿ 9,38,464 ಬರಪೀಡಿತ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣವನ್ನು ಜಮಾ ಮಾಡಲಾಗಿದೆ.

**(...ಮುಂದು)**

(640) 8.6.2017 6.30 ಆರ್‌ಸಿ(ಪಿಕೆ) : ಆರ್‌ಎನ್

186

ಶ್ರೀ ಪಿ.ಆರ್.ರಮೇಶ್(ಮುಂದುವರೆದಿದೆ)

ಮಾನ್ಯ ಮುಖ್ಯಮಂತ್ರಿಗಳು ರೈತರ ಜೊತೆ ಮಾತನಾಡಿ ಸ್ಪಂದಿಸುತ್ತಿರುವುದು ಪ್ರಶಂಸನೀಯವಾದುದು. ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮುಖಾಂತರ ಜಿಲ್ಲೆಯ ಆಡಳಿತಕ್ಕೆ ಸಂಬಂಧಪಟ್ಟಂತೆ ವಿಡಿಯೋ ಕಾನ್ಫರೆನ್ಸ್ ಮಾಡಿದ್ದಾರೆ. 4 ರೆವಿನ್ಯೂ ಡಿವಿಷನ್‌ಗಳೇನಿವೆ, ಇಲ್ಲಿ ಸರ್ಕಾರದ ಮಂತ್ರಿಗಳು ಸಭೆಗಳನ್ನು ಮಾಡಿ, ಬರದ ಪೂರ್ಣವಾದ ಚಿತ್ರಣವನ್ನು ತೆಗೆದುಕೊಂಡು, ಅಲ್ಲಿನ ಆಡಳಿತಯ ಯಂತ್ರದ ಮೂಲಕ ಸಂತ್ರಸ್ತರಿಗೆ ಸವಲತ್ತುಗಳನ್ನು ಮತ್ತು ಹಣದ ಸಹಾಯ ಮಾಡಿದ್ದಾರೆ. ಬರಪೀಡಿತ ಪ್ರದೇಶಗಳಿಗೆ ಈ ರೀತಿ ಸ್ಪಂದಿಸುತ್ತಿರುವಂಥದ್ದು ಪ್ರಶಂಸನೀಯವಾದುದು ಎಂದು ಹೇಳಬೇಕಾಗುತ್ತದೆ.

ತುರ್ತು ಕುಡಿಯುವ ನೀರು ಸರಬರಾಜು, ಗೋಶಾಲೆ ನಿರ್ವಹಣೆಗೆ ರೂ. 340 ಕೋಟಿ, ಜಾನುವಾರುಗಳ ಔಷಧಿಗೆ ರೂ. 15 ಕೋಟಿ, ಕೆರೆ ಹೂಳೆತ್ತುವ ಕಾರ್ಯಕ್ರಮಕ್ಕೆ ರೂ. 35 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ರಾಜ್ಯಾದ್ಯಂತ 981 ಗ್ರಾಮಗಳಿಗೆ 1592 ಟ್ಯಾಂಕರ್‌ಗಳ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡಲಾಗಿದೆ. ಹಾಗಾಗಿ, ಕುಡಿಯುವ ನೀರಿಗೆ ಏನೆಲ್ಲ ಬೇಕೋ ಅದನ್ನು ಆದ್ಯತೆಯ ಮೇಲೆ ಸರ್ಕಾರ . . . ರೈತರಿರಬಹುದು, ಕಾರ್ಮಿಕರಿರಬಹುದು, ನಾಗರಿಕರಿಗೆ ಇರಬಹುದು, ಇವರಿಗೆ ನೀಡಬೇಕಾದ ಸೌಕರ್ಯಗಳು ವ್ಯವಸ್ಥಿತವಾಗಿ ಕಾರ್ಯಗತವಾಗಿರುವುದು ಪ್ರಶಂಸನೀಯವಾದುದು. ಯೋಜನೆ ಮತ್ತು ವಿಪತ್ತು ನಿರ್ವಹಣೆ SDRF (State Disaster Response Fund) ಇದರ ಅಡಿಯಲ್ಲಿ, ಮೇವು ಬೀಜದ ಕಿಟ್‌ಗಳನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಚಿತವಾಗಿ ರೈತರಿಗೆ ಕೊಟ್ಟಿದ್ದಾರೆ. ಇಡೀ ರಾಜ್ಯದಲ್ಲಿ ನಮಗೆ ಮೇವಿನ ಕೊರತೆ ಇತ್ತು. ಆ ಮೇವಿನ ಕೊರತೆಯನ್ನು ನೀಗಿಸಲು ಮೇವು ಬ್ಯಾಂಕ್‌ಗಳಲ್ಲಿ ಮೇವನ್ನು ಸಂಗ್ರಹಿಸಿ ಇಡಲಾಗಿದೆ. ಇನ್ನೂ 11 ವಾರಕ್ಕೆ ಬೇಕಾದಂಥ ಮೇವು ರಾಜ್ಯದಲ್ಲಿ ಇದೆ. ಹಾಗಾಗಿ ಮೇವಿನ ಕೊರತೆ ಇಲ್ಲ. ಮೇವು ಕೊಡುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ದೂರುಗಳು ಬರಬಾರದು ಎನ್ನುವ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳುತ್ತಿದೆ. ಕುಡಿಯುವ ನೀರು ಸರಬರಾಜಿಗೆ ಒಟ್ಟು ಇವತ್ತಿನವರೆಗೆ ಬಿಡುಗಡೆ ಮಾಡಿರುವುದು ರೂ.878.43 ಕೋಟಿ. ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ತೆಗೆದುಕೊಳ್ಳುವಂಥದ್ದಾಗಿದೆ. ಬಹಳಷ್ಟು ಬೋರ್‌ವೆಲ್‌ಗಳಲ್ಲಿ ಇವತ್ತು ನೀರಿನ ಸೆಲೆ ಇಲ್ಲದಂತಾಗಿದೆ. ಮಳೆ ನೀರು ಬಂದರೆ ಮಾತ್ರ ಇದು ತುಂಬುತ್ತದೆ. ನರೇಗಾ ಕಾರ್ಯಕ್ರಮ ಇರುವುದರಿಂದ ನಮ್ಮ ಕಾರ್ಮಿಕರಿಗೆ ಇರಬಹುದು, ರೈತರಿಗೆ ಇರಬಹುದು ಅವರಲ್ಲಿ ಚೇತರಿಕೆ ಕಂಡಿದೆ. ಅವರ ಕೈಗೆ ಸಾಕಷ್ಟು ಹಣ ಬರುವ ನಿಟ್ಟಿನಲ್ಲಿ ಸಹಾಯವಾಗಿದೆ. ಅನ್ನದಾತನ ನೋವು ನಮ್ಮೆಲ್ಲರ ನೋವಾಗುತ್ತದೆ. ಇಂತಹ ಪರಿಸ್ಥಿತಿಯನ್ನು ನಾವು ರಾಜಕೀಯಕ್ಕೆ ಬಳಸಿಕೊಳ್ಳಬಾರದು, ಯಾವುದೇ ರೀತಿಯಲ್ಲೂ ಬಳಸಿಕೊಳ್ಳಲೇಬಾರದು. ಆದರೆ ಇವತ್ತು ನಾವು ಏನು ಮಾಡುತ್ತಿದ್ದೇವೆ ಎಂದರೆ, ರೈತರನ್ನು ನಮ್ಮ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದೇವೆ. ಇದರಿಂದ ನಾವು ಜನಗಳ ಮಾತಿಗೆ ಸಿಕ್ಕಿಹಾಕಿಕೊಳ್ಳುವಂಥದ್ದಾಗಿದೆ. ಸರ್ಕಾರ ಹಾಕಿಕೊಂಡಿರುವ ಹಲವಾರು ಯೋಜನೆಗಳು ಈ ಬರಗಾಲ ಪರಿಸ್ಥಿತಿಯನ್ನು ನೀಗಿಸುವುದಕ್ಕೆ ಅನುವಾಗಿದೆ. ಆದ್ದರಿಂದ ಇವತ್ತು ಯಾವ ಒಬ್ಬ ಸದಸ್ಯ ಕೂಡ ವಿಧಾನಸಭೆಯಲ್ಲಿ ಮಾತನಾಡದೇ ಇರುವಂಥದ್ದನ್ನು ನೋಡುತ್ತಿದ್ದೇವೆ. ನಿಯಮ 59ರ ಪ್ರಕಾರ ನೀಡಿರುವ ಸೂಚನೆ ಏನಿದೆ, ಇದನ್ನು ನೋಡಿದಾಗ, ಏನೋ ಇದರ ಬಗ್ಗೆ ಒಂದು ಚರ್ಚೆ ಆಗಬೇಕು, ಅದನ್ನು ಜನರಿಗೆ ಮುಟ್ಟಿಸುವಂಥದ್ದಾಗಬೇಕು ಎನ್ನುವ ಉದ್ದೇಶಕ್ಕೆ ಸದನದಲ್ಲಿ ತಂದಿದ್ದಾರೆ ಎಂದೆನಿಸುತ್ತದೆ. ರಾಜ್ಯದ ತಳಪಾಯದಲ್ಲಿ ಇರುವ ಬಹಳಷ್ಟು ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಬಗೆಹರಿಸಿರುವಂಥದ್ದು ಜನರಿಗೆ ಗೊತ್ತಿದೆ. ಜನರು ಸ್ಪಂದಿಸುತ್ತಿದ್ದಾರೆ. ಅವರಿಗೆ ಸಲ್ಲಬೇಕಾದ ಸೌಲಭ್ಯಗಳು ಸಲ್ಲುತ್ತಿದೆ. ಅವರಿಗೆ ಇವತ್ತು ಏನೆಲ್ಲಾ ಅವಶ್ಯಕತೆ ಇದೆಯೋ ಅವು ಸಿಗುತ್ತಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಿಗಬೇಕಾದುದೆಲ್ಲವೂ ಅವರಿಗೆ ಸಿಗುತ್ತಿದ್ದು, ಅವರು ನೆಮ್ಮದಿ ಜೀವನ ಮಾಡುವುದಕ್ಕೆ ಸಂಬಂಧಪಟ್ಟಂತೆ ನಾವೆಲ್ಲರೂ ಸಹಾಯ ಮಾಡಬೇಕೇ ಹೊರತು ರಾಜಕೀಯ ಮಾಡುವಂಥದ್ದು ಒಳ್ಳೆಯದಲ್ಲ.

**ಉಪ ಸಭಾಪತಿಯವರು:–** ಮಾನ್ಯ ಮಹಂತೇಶ ಕವಟಗಿಮಠ ಅವರು ಮಾತನಾಡಬೇಕು.

**ಶ್ರೀ ಐವನ್ ಡಿ'ಸೋಜ:–**ಮಾನ್ಯ ಸಭಾಪತಿಗಳೆ, ಈಗ 6.30 ಗಂಟೆಗೆ ಇಫ್ತಾರ್ ಕೂಟ ಇದೆ, ನಾವೆಲ್ಲರೂ ಹೋಗಬೇಕು. ಈಗಾಗಲೇ ಎಲ್ಲರೂ ಹೋಗಿದ್ದಾರೆ. ಕೆಳಮನೆ ಕೂಡ ಅಡ್ಜರ್ನ್ ಆಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:–**ಮಾನ್ಯ ಸಭಾಪತಿಗಳೆ, ನಾನು ನಿನ್ನೆಯೂ ನನ್ನ ಗಮನಸೆಳೆಯುವ ಸೂಚನೆ ಕುರಿತಂತೆ ಅಪೀಲ್ ಮಾಡಿದೆ.

**ಉಪ ಸಭಾಪತಿಯವರು:–** ಆ ವಿಷಯದ ಬಗ್ಗೆ ಸಂಬಂಧಪಟ್ಟ ಸಚಿವರು ಉತ್ತರ ನೀಡುತ್ತೇವೆ ಎಂದು ಹೇಳಿದರೆ ಅದನ್ನು ಅಜೆಂಡಾದಲ್ಲಿ ಹಾಕುತ್ತೇವೆ. ಮಂತ್ರಿಗಳು ಉತ್ತರ ಕೊಡಲು ಒಪ್ಪಿದರೆ ನಾವು ಖಂಡಿತವಾಗಿ ಅಜೆಂಡಾದಲ್ಲಿ ಹಾಕುತ್ತೇವೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಈ ಕುರಿತು ನಾನು ಸಭಾಪತಿಗಳ ಹತ್ತಿರ ಮಾತನಾಡಿದ್ದೇನೆ. ಇಂತಹ ಇಶ್ಯೂ ಬಂದಾಗ ಮಾನ್ಯ ಮಂತ್ರಿಗಳು ಉತ್ತರ ಕೊಡಲೇಬೇಕಾಗುತ್ತದೆ, ಅದು ಅವರ ಜವಾಬ್ದಾರಿಯಾಗಿದೆ. ನಾವು ಅವರನ್ನು, ಉತ್ತರ ಕೊಡುತ್ತೀರಾ ಎಂದು ಕೇಳುವ ಅವಶ್ಯಕತೆ ಇಲ್ಲ.

**ಶ್ರೀ ಐವನ್ ಡಿ'ಸೋಜಾ:–**ಮಾನ್ಯ ಸಚಿವರು ಉತ್ತರ ಕೊಡಲು ಒಪ್ಪಿದ್ದಾರೆ. ಅದನ್ನು ಅಜೆಂಡಾದಲ್ಲಿ ಹಾಕಬಹುದು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–**ಮಾನ್ಯ ಸಭಾಪತಿಗಳೆ, ನಾನು ಗಮನಸೆಳೆಯುವ ಸೂಚನೆ ಅಡಿ ಒಂದು ನೋಟಿಸ್ ಕೊಟ್ಟಿದ್ದೆ. ಇದುವರೆಗೂ ಅದು ಬಂದಿಲ್ಲ. ನಮ್ಮದು ಒಂದೂ ಕೂಡ ಬರುವುದಿಲ್ಲ. ದಯವಿಟ್ಟು ಗಮನಿಸಬೇಕು.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ):–**ಮಾನ್ಯ ಸಭಾಪತಿಗಳೆ, ತಮ್ಮ ಆದೇಶದ ಪ್ರಕಾರ ಏನು ಸದನ ಸಮಿತಿಯವರು ನೇಕಾರರ ಸಮಸ್ಯೆ ಬಗ್ಗೆ ವರದಿಯನ್ನು ನೀಡಿದ್ದಾರೋ ಆ ಕುರಿತು ಚರ್ಚೆ ಮಾಡಬೇಕಿದೆ. ಆ ವರದಿಯನ್ನು ತಮಗೆ ತಲುಪಿಸಿದ್ದೇನೆ. ಇದರ ಬಗ್ಗೆ ಚರ್ಚೆ ಮಾಡಲು ನಾಳೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಉಪ ಸಭಾಪತಿಯವರು:–** ನಾಳೆ ಆಗುವುದಿಲ್ಲ. ಬರ ಪರಿಸ್ಥಿತಿ ಬಗ್ಗೆ ನಿಯಮ 68ರ ಅಡಿಯಲ್ಲಿ ಚರ್ಚೆ ಮುಂದುವರೆಯುತ್ತದೆ. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಆರ್.ವಿ.ದೇಶಪಾಂಡೆಯವರು ಒಂದು ಪತ್ರ ಕಳುಹಿಸಿಕೊಟ್ಟಿದ್ದಾರೆ. ಈ ದಿನ ನಮ್ಮ ಕಾರ್ಯಕಲಾಪಗಳ ಪಟ್ಟಿಯಲ್ಲಿ ಗಮನಸೆಳೆಯುವ ಸೂಚನೆ ಅಡಿ, ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು, ಮಾನ್ಯ ರೇವಣ್ಣನವರು, ಮಾನ್ಯ ರಘು ಆಚಾರ್‌ರವರು ಮತ್ತು ಮಾನ್ಯ ಪ್ರಸ್ನಕುಮಾರ್‌ರವರು, ಬಿ.ಇ.ಎಂ.ಎಲ್. ಕಾರ್ಖಾನೆಯ ಖಾಸಗೀಕರಣಗೊಳಿಸುವ ಸಂಬಂಧ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸಚಿವರು ಬರೆದಿರುವ ಪತ್ರದಲ್ಲಿ, ಈ ಕಾರ್ಖಾನೆ ಕೇಂದ್ರ ಸರ್ಕಾರದ ಅಧೀನದಲ್ಲಿದೆ, ಇದರ ಬಗ್ಗೆ ನಮ್ಮಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಹಿತಿ ಲಭ್ಯ ಇಲ್ಲ ಎಂದು ತಿಳಿಸಿದ್ದಾರೆ. ಆ ಕಾರಣದಿಂದ ಕಾರ್ಯಕಲಾಪಗಳ ಪಟ್ಟಿಯಿಂದ ಈ ವಿಷಯವನ್ನು ಕೈಬಿಡಲಾಗುತ್ತದೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 39 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 9ನೇ ಜೂನ್ ಮಾಹೆ 2017ರ ಶುಕ್ರವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"